सत्यमेव जयते

# ಭಾರತದ ಲೆಕ್ಕನಿಯಂತ್ರಕರು
# ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ
# ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ
# ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷ

भारतीय लेखापरीक्षा और लेखा विभाग ✦ INDIAN AUDIT AND ACCOUNTS DEPARTMENT

लोकहितार्थ सत्यनिष्ठा

Dedicated to Truth in Public Interest

सत्यमेव जयते

**ಕರ್ನಾಟಕ ಸರ್ಕಾರ**

**2020ರ ವರದಿ ಸಂಖ್ಯೆ – 1**

# ಭಾರತದ ಲೆಕ್ಕನಿಯಂತ್ರಕರು
# ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ
# ಹಣಕಾಸಿನ ವ್ಯವಹಾರಗಳ ಮೇಲಿನ ವರದಿ

## 31 ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷ

## ಕರ್ನಾಟಕ ಸರ್ಕಾರ

## 2020ರ ವರದಿ ಸಂಖ್ಯೆ – 1

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ಮುನ್ನುಡಿ** | | ix |
| **ಕಾರ್ಯನಿರ್ವಹಣಾ ಸಾರಾಂಶ** | | xi |
| **ಅಧ್ಯಾಯ–I** | | |
| **ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು** | | |
| ಪೀಠಿಕೆ | **1.1** | 1 |
| 2018–19ರಲ್ಲಿನ ವಿತ್ತ ವ್ಯವಹಾರಗಳ ಸಾರಾಂಶ | 1.1.1 | 1 |
| ವಿತ್ತೀಯ ಸ್ಥಿತಿಯ ಸಮೀಕ್ಷೆ | 1.1.2 | 3 |
| **ರಾಜ್ಯದ ವಿತ್ತೀಯ ಸ್ವಾಸ್ಥ್ಯ** | 1.1.3 | 4 |
| **ಕೇಂದ್ರ ಸರ್ಕಾರದಿಂದ ವ್ಯತ್ಯಯಗಳೊಡನೆ ವಿತ್ತೀಯ ವ್ಯತ್ಯಯಗಳ ಹೋಲಿಕೆ** | 1.1.4 | 4 |
| 2018**–19**ರಲ್ಲಿ ರಾಜಸ್ವ ಹೆಚ್ಚಳ ಮತ್ತು ವಿತ್ತೀಯ ಕೊರತೆಯ ಮೇಲೆ ಕೆಲವು ವಹಿವಾಟುಗಳ ಪ್ರಭಾವ | 1.1.5 | 5 |
| **2018–19ನೇ ಸಾಲಿನ ಆಯವ್ಯಯದ ವಿಶ್ಲೇಷಣೆ** | **1.2** | 6 |
| ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳು | 1.2.1 | 6 |
| ಮಹಿಳಾ ಉದ್ದೇಶಿತ ಆಯವ್ಯಯ | 1.2.2 | 7 |
| ಆಯವ್ಯಯದ ಪ್ರಮುಖ ಕಾರ್ಯನೀತಿ ಉಪಕ್ರಮಗಳು | 1.2.3 | 11 |
| ರಾಜ್ಯದಲ್ಲಿ ರಾಜಸ್ವದ ಮೂಲಗಳು | **1.3** | 12 |
| **ವಾರ್ಷಿಕ ಹಣಕಾಸು ಲೆಕ್ಕಗಳ ಅನ್ವಯ ರಾಜ್ಯದಲ್ಲಿ ರಾಜಸ್ವದ ಮೂಲಗಳು** | 1.3.1 | 12 |
| ರಾಜಸ್ವ ಸ್ವೀಕೃತಿಗಳು | **1.4** | 14 |
| ರಾಜ್ಯದ ಸ್ವಂತ ಸಂಪನ್ಮೂಲಗಳು | 1.4.1 | 16 |
| ತೆರಿಗೆ ಆದಾಯ | 1.4.1.1 | 16 |
| **ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ (ಜಿಎಸ್‌ಟಿ)** | 1.4.1.2 | 17 |
| ತೆರಿಗೆಯೇತರ ಆದಾಯ | 1.4.1.3 | 18 |
| ಕೇಂದ್ರ ತೆರಿಗೆ ವರ್ಗಾವಣೆಗಳು | 1.4.2 | 21 |
| ಸಹಾಯಾನುದಾನಗಳು ಮತ್ತು ಭಾರತ ಸರ್ಕಾರದ ವಂತಿಗೆಗಳು | 1.4.3 | 22 |
| 14ನೇ ಹಣಕಾಸು ಆಯೋಗದ ಅನುದಾನಗಳು | 1.4.3.1 | 22 |
| ವಿಪತ್ತು ಪರಿಹಾರದಡಿ ಬಿಡುಗಡೆಗಳು | 1.4.3.2 | 24 |
| ಬಂಡವಾಳ ಸ್ವೀಕೃತಿಗಳು | **1.5** | 24 |
| ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು | **1.6** | 24 |
| ಸಂಪನ್ಮೂಲಗಳ ಅನ್ವಯ | **1.7** | 25 |
| ವೆಚ್ಚದ ವೃದ್ಧಿ ಮತ್ತು ಸಂಯೋಜನೆ | 1.7.1 | 25 |
| ರಾಜಸ್ವ ವೆಚ್ಚ | 1.7.2 | 28 |

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಬದ್ಧ ವೆಚ್ಚಗಳು | 1.7.3 | 28 |
| ವೆಚ್ಚದ ಗುಣಮಟ್ಟ | **1.8** | 36 |
| ಸಾರ್ವಜನಿಕ ವೆಚ್ಚದ ಪರ್ಯಾಪ್ತತೆ | 1.8.1 | 36 |
| ವೆಚ್ಚದ ದಕ್ಷತೆ | 1.8.2 | 37 |
| ಸರ್ಕಾರದ ಬಂಡವಾಳ ವೆಚ್ಚ ಮತ್ತು ಹೂಡಿಕೆಗಳ ಆರ್ಥಿಕ ವಿಶ್ಲೇಷಣೆ | **1.9** | 39 |
| **ಬಂಡವಾಳ ವೆಚ್ಚ** | 1.9.1 | 39 |
| ಅಪೂರ್ಣ ಕಾಮಗಾರಿಗಳು | 1.9.2 | 40 |
| ಹೂಡಿಕೆಗಳು ಮತ್ತು ಪ್ರತಿಫಲಗಳು | 1.9.3 | 41 |
| ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು | 1.9.4 | 43 |
| ನಗದು ಶಿಲ್ಕುಗಳು ಮತ್ತು ನಗದು ಶಿಲ್ಕುಗಳ ಹೂಡಿಕೆ | 1.9.5 | 45 |
| ಆಸ್ತಿಗಳು ಮತ್ತು ಜವಾಬ್ದಾರಿಗಳು | **1.10** | 46 |
| ಆಸ್ತಿಗಳು ಮತ್ತು ಜವಾಬ್ದಾರಿಗಳ ವೃದ್ಧಿ ಮತ್ತು ಸಂಯೋಜನೆ | 1.10.1 | 46 |
| ವಿತ್ತೀಯ ಜವಾಬ್ದಾರಿಗಳು | 1.10.2 | 48 |
| ಆಂತರಿಕ ಋಣ | 1.10.2.1 | 49 |
| **ಭಾರತ** ಸರ್ಕಾರದ ಸಾಲಗಳು ಮತ್ತು ಮುಂಗಡಗಳು | 1.10.2.2 | 49 |
| ಆಯವ್ಯಯದ ಹೊರಗಿನ ಸಾಲಗಳು | 1.10.3 | 49 |
| ಸಾರ್ವಜನಿಕ ಲೆಕ್ಕಗಳ ವ್ಯವಹಾರಗಳು | 1.10.4 | 51 |
| ಮೀಸಲು ನಿಧಿಗಳು | 1.10.4.1 | 51 |
| ಸಾಂದರ್ಭಿಕ ಜವಾಬ್ದಾರಿಗಳು | 1.10.5 | 56 |
| ಖಾತರಿಗಳ ಸ್ಥಿತಿ | 1.10.5.1 | 56 |
| ಋಣ ನಿರ್ವಹಣೆ | **1.11** | 57 |
| ಋಣ ಚಿತ್ರಣ | 1.11.1 | 57 |
| ಋಣ ಸಹಿಷ್ಣುತೆ | 1.11.2 | 58 |
| ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ | 1.11.3 | 60 |
| ಋಣ ಸ್ಥಿರತೆ | 1.11.4 | 60 |
| ವೃದ್ಧಿತ ಋಣೇತರ ಸ್ವೀಕೃತಿಗಳ ಪರ್ಯಾಪ್ತತೆ | 1.11.5 | 61 |
| ಸಾಲಗಳ ಮೂಲಕ ಪಡೆದ ಮೊತ್ತಗಳ ನಿವ್ವಳ ಲಭ್ಯತೆ | 1.11.6 | 61 |
| ವಿತ್ತೀಯ ಮಾನದಂಡಗಳು/ಪ್ರಮಿತಿಗಳು | **1.12** | 62 |
| ಕೊರತೆಗಳ ಪ್ರವೃತ್ತಿ | 1.12.1 | 62 |
| ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ | 1.12.2 | 64 |
| ಅನುಸರಣೆ | **1.13** | 65 |
| ನಿರ್ಣಯಗಳು ಮತ್ತು ಶಿಫಾರಸುಗಳು | **1.14** | 65 |
| **ಅಧ್ಯಾಯ–II** | | |
| **ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ** | | |
| ಪೀಠಿಕೆ | **2.1** | 69 |
| ಧನವಿನಿಯೋಗ ಲೆಕ್ಕಗಳ ಸಾರಾಂಶ | **2.2** | 69 |
| ವೆಚ್ಚದ ಮೇಲಿನ ಟಿಪ್ಪಣಿಗಳು | **2.3** | 70 |

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ವೆಚ್ಚವನ್ನು ಅಧಿಕವಾಗಿ/ಕಡಿಮೆಯಾಗಿ ಹೇಳಿರುವುದು | 2.3.1 | 70 |
| ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತ | 2.3.2 | 71 |
| ಸಕ್ರಮೀಕರಣದ ಅಗತ್ಯವಿರುವ ಅಧಿಕ ವೆಚ್ಚಗಳು | 2.3.3 | 72 |
| ಹೊಸ ಸೇವೆ/ಹೊಸ ಸೇವೆಗಳ ಸಾಧನ | 2.3.4 | 72 |
| ಆಯವ್ಯಯದಲ್ಲಿ ದೋಷಗಳು | **2.4** | 73 |
| ಬಂಡವಾಳ ಮತ್ತು ರಾಜಸ್ವ ನಡುವಿನ ತಪ್ಪು ವರ್ಗೀಕರಣ | 2.4.1 | 74 |
| ಆಯವ್ಯಯ ತಯಾರಿಸುವಾಗ 'ಪುರಸ್ಕೃತ' ಮತ್ತು 'ಪ್ರಭೃತ' ವಿಭಾಗಗಳ ನಡುವೆ ತಪ್ಪು ವರ್ಗೀಕರಣ | 2.4.2 | 75 |
| ಪ್ರಧಾನ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮಾಡಿದ ತಪ್ಪು ಅವಕಾಶಗಳು | 2.4.3 | 75 |
| ಉದ್ದೇಶ ಲೆಕ್ಕಶೀರ್ಷಿಕೆಗಳಡಿಯಲ್ಲಿ ವರ್ಗೀಕರಣ ದೋಷಗಳು | 2.4.4 | 76 |
| ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಹಿಂದಿನ ವರ್ಷದ ವೆಚ್ಚಕ್ಕೆ ಅವಕಾಶ ಕಲ್ಪಿಸಿರುವುದು | 2.4.5 | 76 |
| ಬಹು ಉದ್ದೇಶ ಶೀರ್ಷಿಕೆ 059– ಇತರೆ ವೆಚ್ಚಗಳಡಿ ಅವಕಾಶ ಕಲ್ಪಿಸುವಲ್ಲಿ–ಆಯವ್ಯಯ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು | 2.4.6 | 77 |
| ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ | **2.5** | **78** |
| ಹಂಚಿಕೆಗೆ ಪ್ರತಿಯಾಗಿ ಬಳಕೆಯಾಗದ ಅವಕಾಶಗಳು | 2.5.1 | 78 |
| ಪೂರಕ ಅವಕಾಶಗಳು | 2.5.2 | 79 |
| ಮೊತ್ತಗಳ ಪುನರ್ವಿನಿಯೋಗಗಳು | 2.5.3 | 81 |
| ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ | 2.5.4 | 83 |
| ಸಾದಿಲ್ವಾರು ನಿಧಿ | **2.6** | 83 |
| ಆಯ್ದ ಅನುದಾನಗಳ ಸಮೀಕ್ಷೆಯ ಅಂಶಗಳು | **2.7** | 84 |
| ಅನುದಾನ ಸಂಖ್ಯೆ – 23ರ ಸಮೀಕ್ಷೆ – ಕಾರ್ಮಿಕ, ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ | 2.7.1 | 84 |
| ನಿರ್ಣಯ | **2.8** | 92 |
| ಶಿಫಾರಸುಗಳು | **2.9** | 93 |
| **ಅಧ್ಯಾಯ–III** | | |
| **ಆರ್ಥಿಕ ನಿರೂಪಣೆ** | | |
| ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವಿಕೆ | **3.1** | 95 |
| ಸರ್ಕಾರದಿಂದ ಗಣನೀಯ ಆರ್ಥಿಕ ಬೆಂಬಲ ಪಡೆದ ಸಂಸ್ಥೆಗಳಿಂದ ಸಂಬಂಧಿಸಿದ ಮಾಹಿತಿ ಬಾರದಿರುವಿಕೆ | **3.2** | 96 |
| ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆಯ ಮತ್ತು ರಾಜ್ಯ ಶಾಸಕಾಂಗದ ಮುಂದೆ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುವಿಕೆಯ ಸ್ಥಿತಿ | **3.3** | 97 |
| ಇಲಾಖಾ ವಾಣಿಜ್ಯ ಉದ್ದಿಮೆಗಳು | **3.4** | 97 |
| ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು ಸ್ವೀಕೃತಿಯಾಗದಿರುವುದು | **3.5** | 98 |
| ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು | **3.6** | 98 |
| ವೈಯಕ್ತಿಕ ಠೇವಣಿ ಲೆಕ್ಕಗಳು | **3.7** | 100 |
| ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಇಟ್ಟಿರುವ ಮೊತ್ತಗಳು | 3.7.1 | 100 |
| ವೈಯಕ್ತಿಕ ಠೇವಣಿ ಲೆಕ್ಕಗಳ ಹೊಂದಾಣಿಕೆ | 3.7.2 | 102 |

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಸ್ವೀಕೃತಿಗಳ ಮತ್ತು ವೆಚ್ಚಗಳ ಹೊಂದಾಣಿಕೆ | **3.8** | 102 |
| ಲೆಕ್ಕಪತ್ರಗಳ ಮೇಲಿನ ವ್ಯಾಖ್ಯಾನಗಳು | **3.9** | 103 |
| ಅರ್ಹ ಕೈಗಾರಿಕೆಗಳಿಗೆ ಮಾರಾಟ ತೆರಿಗೆಯ ಮರುಪಾವತಿಗಾಗಿ ಅಳವಡಿಸಿಕೊಂಡ ತಪ್ಪಾದ ಕಾರ್ಯವಿಧಾನ | 3.9.1 | 103 |
| ಸಾಲವನ್ನು ಅನುದಾನವನ್ನಾಗಿ ಪರಿವರ್ತಿಸಲು ಅನವಶ್ಯಕ ಅವಕಾಶ | 3.9.2 | 104 |
| ಬಳಕೆ ಮಾಡದಿದ್ದ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡದಿರುವುದು | 3.9.3 | 104 |
| ಲೆಕ್ಕಗಳ ನಿಖರತೆಯ ಮೇಲೆ ಪರಿಣಾಮ ಬೀರುವ ಮುಖ್ಯ ಅಂಶಗಳು | **3.10** | 105 |
| ನಿರ್ಣಯ | **3.11** | 108 |
| ಶಿಫಾರಸುಗಳು | **3.12** | 109 |

# ಪರಿವಿಡಿ


| ಅನುಬಂಧಗಳ ಪಟ್ಟಿ | ವಿಷಯ | ಪುಟ ಸಂಖ್ಯೆ |
|---|---|---|
| 1.1 | ರಾಜ್ಯ ಚಿತ್ರಣ | 111 |
| 1.2 | ಸರ್ಕಾರಿ ಲೆಕ್ಕಗಳ ಸ್ವರೂಪ | 113 |
| 1.3 | ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ | 114 |
| 1.3(ಎ) | ವಿವಿಧ ವಲಯ ಮತ್ತು ಉಪ ವಲಯದಲ್ಲಿನ ಬಂಡವಾಳ ವೆಚ್ಚ | 117 |
| 1.4 | ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು | 119 |
| 1.5 | ಆಯವ್ಯಯ ಭರವಸೆಗಳು ಮತ್ತು ಅವುಗಳ ಮೇಲಿನ ಲೆಕ್ಕ ಪರಿಶೋಧನಾ ವಿಶ್ಲೇಷಣೆ | 124 |
| 1.6 | ಸಂಗ್ರಹಣಾ ವೆಚ್ಚಗಳು | 127 |
| 1.7 | ವಿದ್ಯುತ್‌ಗೃಹ/ಠಾಣೆಗಳಲ್ಲಿ ಪ್ರತಿ ಕಿಲೋವ್ಯಾಟ್ ಅವರ್ (ಕೆಡಬ್ಲ್ಯುಎಚ್) ವಿದ್ಯುಚ್ಛಕ್ತಿ ಮಾರಾಟಕ್ಕೆ ನಿಗದಿಪಡಿಸಿರುವ ರಾಜಧನದ ದರ | 128 |
| 1.8 | ಇಲಾಖೆವಾರು ಸಹಾಯಧನಗಳ ಪಾಲು | 129 |
| 1.9 | ಪರೋಕ್ಷ ಸಹಾಯಧನಗಳು | 130 |
| 1.10 | ಮಹಾಲೇಖಾಪಾಲರ ಕಚೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ಸವಿವರ ಸಾಲ ಲೆಕ್ಕಗಳು | 131 |
| 1.11 | 31 ಮಾರ್ಚ್ 2019ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ | 132 |
| 1.12 | ವಿತ್ತೀಯ ಕೊರತೆಗಳ ಭಾಗಗಳು ಮತ್ತು ಅವುಗಳ ಪೂರೈಕೆಯ ವಿಧಾನಗಳು | 133 |
| 2.1 | ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ಕಾರ್ಯಕಾರಿ ಆದೇಶಗಳ ಮುಖಾಂತರ ಬಿಡುಗಡೆ ಮಾಡಲಾದ ಹೆಚ್ಚುವರಿ ಅವಕಾಶಗಳು | 134 |
| 2.2 | ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು | 135 |
| 2.3 | ಉದ್ದೇಶ ಶೀರ್ಷಿಕೆ '059 – ಇತರೆ ಖರ್ಚುಗಳು' ಅಡಿ ತಪ್ಪು ವರ್ಗೀಕರಣಗಳ ವಿವರಗಳು | 137 |
| 2.4 | ₹ 100 ಕೋಟಿಗಳಿಗೂ ಮತ್ತು ಅದಕ್ಕಿಂತ ಹೆಚ್ಚಾದ ಬಳಕೆಯಾಗದೆ ಉಳಿದ ಅವಕಾಶಗಳ ಅನುದಾನ/ವಿನಿಯೋಗಗಳು | 138 |
| 2.5 | ₹25 ಕೋಟಿಗೂ ಹೆಚ್ಚು ಮೊತ್ತ ಬಳಕೆಯಾಗದ ಅವಕಾಶಗಳು ಸಂಭವಿಸಿದ ಪ್ರಧಾನ ಲೆಕ್ಕಶೀರ್ಷಿಕೆಗಳು | 140 |
| 2.6 | ಅನಗತ್ಯ ಪೂರಕ ಅಂದಾಜುಗಳು | 144 |
| 2.7 | ಅಧಿಕವಾದ ಪೂರಕ ಅನುದಾನಗಳು | 145 |
| 2.8 | ಸಾಕಷ್ಟಿಲ್ಲದ ಪೂರಕ ಅನುದಾನಗಳು | 146 |
| 2.9 | ಅನವಶ್ಯಕ/ಅಧಿಕತಮ/ಅಸಮರ್ಪಕ ಪುನರ್ವಿನಿಯೋಗ | 147 |
| 2.10 | ದೋಷಪೂರಿತ ಪುನರ್ವಿನಿಯೋಗ ಆದೇಶಗಳು | 149 |
| 2.11 | ಅವಕಾಶಗಳು ಬಳಕೆಯಾಗದೆ ಉಳಿದು ಅದರ ಯಾವುದೇ ಭಾಗವನ್ನು ಅಧ್ಯರ್ಪಣೆ ಮಾಡದಿರುವ ವಿವಿಧ ಅನುದಾನಗಳು/ವಿನಿಯೋಗಗಳು | 152 |
| 2.12 | ಬಳಕೆಯಾಗದೆ ಉಳಿದ ಅವಕಾಶಗಳ ಭಾಗಶ: ಅಧ್ಯರ್ಪಣೆ | 153 |
| 2.13 | ಪ್ರಸಕ್ತ ವರ್ಷದಲ್ಲಿ ಗಣನೀಯ ಅಧ್ಯರ್ಪಣೆಗಳ ಸಮೀಕ್ಷೆಯ ಫಲಿತಾಂಶಗಳ | 155 |
| 2.14 | ಮಾರ್ಚ್ 30 ಮತ್ತು 31, 2019ರಂದು ಅಧ್ಯರ್ಪಣೆ ಮಾಡಲಾದ ₹ಐದು ಕೋಟಿಗೂ ಮೀರಿದ ಅವಕಾಶಗಳು | 158 |
| 3.1 | ಪ್ರಧಾನ ಶೀರ್ಷಿಕೆವಾರು ಇಲಾಖಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳು | 159 |
| 3.2 | ಸರ್ಕಾರದಿಂದ ಗಣನೀಯವಾಗಿ ಹಣ ಸಹಾಯ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವುದು | 160 |
| 3.3 | ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 161 |

# ಪರಿವಿಡಿ


| ಅನುಬಂಧಗಳ ಪಟ್ಟಿ | ವಿಷಯ | ಪುಟ ಸಂಖ್ಯೆ |
|---|---|---|
| 3.4 | ಬಾಕಿ ಇರುವ ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆ ವಾಣಿಜ್ಯ ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ವಿವರಗಳು | 162 |
| 3.5 | ಉಗ್ರಾಣ ಮತ್ತು ದಾಸ್ತಾನಿನ ಲೆಕ್ಕಪತ್ರಗಳನ್ನು ಸಲ್ಲಿಸದಿರುವ ಇಲಾಖಾವಾರು ವಿವರಗಳು | 164 |
| 3.6 | ನಿಷ್ಕ್ರಿಯ ಠೇವಣಿ ಲೆಕ್ಕಗಳಲ್ಲಿ ಉಳಿದಿರುವ ಶಿಲ್ಕುಗಳು | 173 |
| | ಪಾರಿಭಾಷಿಕ ಪದಗಳು | 174 |

# ಮುನ್ನುಡಿ

1. ಈ ವರದಿಯನ್ನು ಸಂವಿಧಾನದ ಅನುಚ್ಛೇದ 151ರ ಅನ್ವಯ ರಾಜ್ಯಪಾಲರಿಗೆ ಕರ್ನಾಟಕ ವಿಧಾನಮಂಡಲದಲ್ಲಿ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯ ಅಧ್ಯಾಯ–I ಮತ್ತು II ಕ್ರಮವಾಗಿ, ರಾಜ್ಯ ಸರ್ಕಾರದ 31 ಮಾರ್ಚ್ 2019ಕ್ಕೆ ಅಂತ್ಯಗೊಂಡ ವರ್ಷದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಹೊಂದಿವೆ. ಅಗತ್ಯವಿದ್ದ ಕಡೆ ರಾಜ್ಯ ಸರ್ಕಾರದಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

3. 'ಆರ್ಥಿಕ ನಿರೂಪಣೆ'ಗೆ ಸಂಬಂಧಿಸಿದ ಅಧ್ಯಾಯ–III, 2018–19ನೇ ವರ್ಷದಲ್ಲಿ ರಾಜ್ಯ ಸರ್ಕಾರದ ಹಣಕಾಸು ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳ ಸ್ಥೂಲ ಸಮೀಕ್ಷೆಯೊಂದಿಗೆ ಅನುಪಾಲನೆಯ ಸ್ಥಿತಿಯನ್ನು ನಿರೂಪಿಸುತ್ತದೆ.

4. 31.3.2010ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಗೆ, ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸಿನ ಮೇಲೆ (ಹದಿಮೂರನೇ ವರದಿ – ಡಿಸೆಂಬರ್ 2011) ಸರ್ಕಾರವು ತೆಗೆದುಕೊಂಡ ಕ್ರಮದ ವರದಿಯ ಮೇಲಿನ ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸುಗಳನ್ನು (ಐದನೇ ವರದಿ – ಜುಲೈ 2015) ಗಣನೆಗೆ ತೆಗೆದುಕೊಂಡು ವರದಿಯನ್ನು ತಯಾರಿಸಲಾಗಿದೆ.

5. ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆಯ ಮತ್ತು ವಿವಿಧ ಇಲಾಖೆಗಳ ವಹಿವಾಟುಗಳ ಲೆಕ್ಕಪರಿಶೋಧನಾ ಫಲಿತಾಂಶಗಳ, ಸರ್ಕಾರದ ಕಂಪನಿಗಳ, ಶಾಸನಬದ್ಧ ನಿಗಮಗಳ, ಮಂಡಳಿಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಭಿಪ್ರಾಯಗಳು ಮತ್ತು ರಾಜಸ್ವ ಸ್ವೀಕೃತಿಗಳ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಒಳಗೊಂಡ ವರದಿಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿದೆ.

6. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## ಹಿನ್ನೆಲೆ

ಕರ್ನಾಟಕದಲ್ಲಿ ಹನ್ನೊಂದನೆ ಹಣಕಾಸು ಆಯೋಗವು ರೂಪಿಸಿದ ಸ್ಥೂಲ ಪ್ರಮಿತಿಗಳನ್ನು ಆಧಾರವಾಗಿಟ್ಟುಕೊಂಡು ಸರ್ಕಾರವು 2000–2005ರ ಅವಧಿಯ ಮೊದಲ ಮಧ್ಯಂತರ ವಿತ್ತೀಯ ಯೋಜನೆ (ಎಂಟಿಎಫ್‌ಪಿ) ರೂಪಿಸುವುದರ ಮೂಲಕ ಹಣಕಾಸು ಸುಧಾರಣೆ ಮತ್ತು ಕ್ರೋಢೀಕರಣಗಳನ್ನು ಮುಂಚೂಣಿಗೆ ತರಲಾಯಿತು. ಮಧ್ಯಂತರ ವಿತ್ತೀಯ ಯೋಜನೆಯು ನಿರಂತರ ವಾರ್ಷಿಕ ದಾಖಲೆಯಾಗುವುದಲ್ಲದೆ, ಮಧ್ಯಂತರ ವಿತ್ತೀಯ ಯೋಜನೆಗಳಲ್ಲಿ ನಿಗದಿಪಡಿಸಿದ ವಿತ್ತೀಯ ಗುರಿಗಳು ಮತ್ತು ಕಾರ್ಯನೀತಿಗಳು ವಾರ್ಷಿಕ ಆಯವ್ಯಯ ತಯಾರಿಕೆಗೆ ಪೂರಕವಾಗುತ್ತವೆ. ಕರ್ನಾಟಕವು ಮಧ್ಯಂತರ ವಿತ್ತೀಯ ಯೋಜನೆಗೆ ಶಾಸನಬದ್ಧ ಆಧಾರವನ್ನು ಒದಗಿಸಲು ವಿತ್ತೀಯ ಜವಾಬ್ದಾರಿ ಕಾಯಿದೆಯನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ (ಸೆಪ್ಟೆಂಬರ್ 2002). ಈ ಕಾಯಿದೆಯು ರಾಜಸ್ವ ಹೆಚ್ಚಳ, ವಿತ್ತೀಯ ಕೊರತೆಯಲ್ಲಿ ಇಳಿಕೆ, ಹಣಕಾಸು ನೀತಿಯ ಪರಿಣಾಮಕಾರಿ ಜಾರಿಯಲ್ಲಿನ ಅಡಚಣೆಗಳ ನಿವಾರಣೆ, ಮತ್ತು ಸಾಲ, ಋಣ ಮತ್ತು ಕೊರತೆಗಳಲ್ಲಿ ಮಿತಿ ಸಾಧನೆಯ ಮೂಲಕ ವಿವೇಚನಾಯುಕ್ತ ಋಣ ನಿರ್ವಹಣೆ, ಮಧ್ಯಂತರ ವಿತ್ತೀಯ ಚೌಕಟ್ಟಿನ ಮೂಲಕ ಹಣಕಾಸು ನಿರ್ವಹಣೆಯಲ್ಲಿ ಅಧಿಕ ಪಾರದರ್ಶಕತ್ವವನ್ನು ಸಾಧಿಸಿ ವಿತ್ತೀಯ ಸ್ಥಿರತೆ ಮತ್ತು ಸಮರ್ಥತೆಗಳನ್ನು ಖಚಿತಪಡಿಸುವ, ಸಾಮಾಜಿಕ ಹಾಗೂ ಭೌತಿಕ ಮೂಲ ಸೌಕರ್ಯ ಮತ್ತು ಮಾನವ ಸಂಪನ್ಮೂಲಗಳ ವೃದ್ಧಿಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

## ವರದಿ

ಈ ವರದಿಯು ರಾಜ್ಯ ಸರ್ಕಾರದ 31 ಮಾರ್ಚ್ 2019ರ ಅಂತ್ಯದ ಪರಿಶೋಧಿತ ಲೆಕ್ಕಪತ್ರಗಳನ್ನು ಆಧರಿಸಿ ವಾರ್ಷಿಕ ಲೆಕ್ಕಗಳ ವಿಶ್ಲೇಷಣಾತ್ಮಕ ಸಮೀಕ್ಷೆಯನ್ನು ನೀಡುತ್ತದೆ. ರಾಜ್ಯದ ಹಣಕಾಸಿನ ನಿರ್ವಹಣೆಯನ್ನು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ, ಆಯವ್ಯಯ ದಾಖಲೆಗಳು, ಹದಿನಾಲ್ಕನೇ ಹಣಕಾಸು ಆಯೋಗದ ವರದಿ ಮತ್ತು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದುಕೊಂಡ ಹಣಕಾಸು ದತ್ತಾಂಶಗಳನ್ನು ಆಧರಿಸಿ ತುಲನೆ ಮಾಡಲಾಗಿದೆ. ಈ ವರದಿಯು ಮೂರು ಅಧ್ಯಾಯಗಳನ್ನು ಹೊಂದಿದೆ.

**ಅಧ್ಯಾಯ–I**: ಈ ಅಧ್ಯಾಯವು ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದ್ದು, 31 ಮಾರ್ಚ್ 2019ರಲ್ಲಿದ್ದಂತೆ ಕರ್ನಾಟಕ ರಾಜ್ಯಸರ್ಕಾರದ ವಿತ್ತ ಸ್ಥಿತಿಯನ್ನು ಮಾಪನ ಮಾಡುತ್ತದೆ. ಜೊತೆಗೆ ಈ ವರದಿಯು, ಬದ್ಧವೆಚ್ಚಗಳ ಪ್ರವೃತ್ತಿ, ಸಾಲವಿಧಾನಗಳು ಮತ್ತು ವಿತ್ತೀಯ ಪ್ರಮಿತಿಗಳ ಮೇಲೆ ಪರಿಣಾಮ ಬೀರುವ ಕೆಲವು ಲೆಕ್ಕ ಹೊಂದಾಣಿಕೆಗಳ ಒಳನೋಟವನ್ನು ನೀಡುತ್ತವೆ.

**ಅಧ್ಯಾಯ–II**: ಈ ಅಧ್ಯಾಯವು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದ್ದು, ಧನವಿನಿಯೋಗ ವಿವರಣೆ ಮತ್ತು ಸೇವೆಗಳನ್ನು ಒದಗಿಸುವ ಇಲಾಖೆಗಳು, ತಮಗೆ ಹಂಚಿಕೆಯಾದ ಸಂಪನ್ಮೂಲಗಳನ್ನು ಹೇಗೆ ನಿರ್ವಹಿಸಿವೆ ಎಂಬ ವಿವರಗಳನ್ನು ನೀಡುತ್ತದೆ. ವ್ಯವಹಾರಗಳ ಪಾರದರ್ಶಕತೆಯನ್ನು ಬಾಧಿಸುವ ಆಯವ್ಯಯದ ಅಂಶಗಳನ್ನೂ ಸಹ ಈ ಅಧ್ಯಾಯದಲ್ಲಿ ಸೇರಿಸಲಾಗಿದೆ.

**ಅಧ್ಯಾಯ–III**: ಈ ಅಧ್ಯಾಯವು ಕರ್ನಾಟಕ ಸರ್ಕಾರದ ವಿವಿಧ ವರದಿ ಸಲ್ಲಿಕಾ ಅಗತ್ಯಗಳು ಮತ್ತು ಹಣಕಾಸು ನಿಯಮಗಳ ಪಾಲನೆಯ ವಿವರಗಳನ್ನು ನೀಡುತ್ತದೆ.

ಈ ವರದಿಯು, ಲೆಕ್ಕಪರಿಶೋಧನಾ ಅಂಶಗಳ ಸಮರ್ಥನೆಗೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹೆಚ್ಚುವರಿ ದತ್ತಾಂಶಗಳ ಅನುಬಂಧಗಳನ್ನೂ ಸಹ ಒಳಗೊಂಡಿದೆ. ಆಯ್ದ ಪಾರಿಭಾಷಿಕ ಪದಗಳ ಪಟ್ಟಿಯನ್ನು ವರದಿಯ ಕೊನೆಯಲ್ಲಿ ನೀಡಲಾಗಿದೆ.

## ಲೆಕ್ಕಪರಿಶೋಧನೆಯ ಆವಿಷ್ಕಾರಗಳು ಮತ್ತು ಶಿಫಾರಸುಗಳು

### ಆರ್ಥಿಕ ಸ್ಥಿತಿ

2018–19ರಲ್ಲಿ ರಾಜಸ್ವ ವೆಚ್ಚವು ಹಿಂದಿನ ವರ್ಷಕ್ಕಿಂತ ಶೇಕಡ 15ರಷ್ಟು ಹೆಚ್ಚಾಗಿತ್ತು. ಈ ವರ್ಷದಲ್ಲಿ ರಾಜಸ್ವ ಸ್ವೀಕೃತಿಗಳು ಶೇಕಡ 12ರಷ್ಟು ಹೆಚ್ಚಾಗಿತ್ತು.

2018–19ರಲ್ಲಿ ರಾಜ್ಯವು ₹679 ಕೋಟಿಗಳ ರಾಜಸ್ವ ಹೆಚ್ಚಳವನ್ನು ಹೊಂದಿತ್ತು. ರಾಜಸ್ವ ವೆಚ್ಚಗಳಲ್ಲಿ ಕಳೆದ ವರ್ಷಕ್ಕಿಂತ ಶೇಕಡ 15ರಷ್ಟು ಹೆಚ್ಚಳ ಉಂಟಾಗಿದ್ದರೆ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವು ಸಹ ಶೇಕಡ 12ರಷ್ಟಿದೆ.

ವಿತ್ತೀಯ ಕೊರತೆಯು 2017–18ರಲ್ಲಿ ₹31,101 ಕೋಟಿಗಳಿದ್ದು ಈ ವರ್ಷದಲ್ಲಿ ₹38,442 ಕೋಟಿಗಳಾಗಿ ₹7,341 ಕೋಟಿಯಷ್ಟು (ಶೇಕಡಾ 24) ಹೆಚ್ಚಳವಾಗಿದೆ. ರಾಜ್ಯವು ರಾಜ್ಯಸ್ವ ಹೆಚ್ಚಳವನ್ನು ನಿರ್ವಹಿಸಿತ್ತು (₹679 ಕೋಟಿ). ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 2.73ರಷ್ಟಿದ್ದು ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಶೇಕಡಾ ಮೂರರ ಮಿತಿಗಿಂತ ಕಡಿಮೆಯಿದ್ದಿತು. 2018–19ಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ಸಂಬಂಧಿಸಿದ ₹279.20 ಕೋಟಿಗಳ ವೆಚ್ಚವು ವರ್ಗಾವಣೆಯಾಗದಿರುವುದು ಪಂಚಾಯತ್‌ರಾಜ್ ಸಂಸ್ಥೆಗಳ ₹1,369.12 ಕೋಟಿಗಳ ಅನುದಾನಗಳ ವಾಪಸಾತಿ ಮತ್ತು ರಾಜಸ್ವ ವೆಚ್ಚವನ್ನು ಬಂಡವಾಳ ಲೆಕ್ಕ ಮಾಡಿರುವುದು (₹28.06 ಕೋಟಿ) ಮತ್ತು ಮೀಸಲು ನಿಧಿ ಮತ್ತು ಬಡ್ಡಿ ಸಹಿತ ಠೇವಣಿಗಳ ಮೇಲಿನ ಬಡ್ಡಿಯನ್ನು ಹೊಂದಾಣಿಕೆ ಮಾಡದಿರುವುದು (₹28.20 ಕೋಟಿ) ರಾಜಸ್ವ ಹೆಚ್ಚಳ ಮತ್ತು ವಿತ್ತೀಯ ಕೊರತೆಯಂತಹ ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರಿದೆ. ಈ ವರ್ಷ ಪ್ರಾಥಮಿಕ ಕೊರತೆಯು ₹21,827 ಕೋಟಿಗಳಿದ್ದು ಕಳೆದ ಸಾಲಿಗಿಂತ ₹5,699 ಕೋಟಿಗಳಷ್ಟು ಹೆಚ್ಚಳವಾಗಿದೆ. ವೃದ್ಧಿತ ಋಣೇತರ ಸ್ವೀಕೃತಿಯು ₹17,863 ಕೋಟಿಗಳಿದ್ದು, ಇದು ವೃದ್ಧಿತ ಪ್ರಾಥಮಿಕ ವೆಚ್ಚ ₹23,563 ಕೋಟಿಗಿಂತ ಕಡಿಮೆ ಇದೆ.

### ರಾಜ್ಯದ ಸ್ವಂತ ಸಂಪನ್ಮೂಲಗಳು

2014–15ರಿಂದ 2018–19ರ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು ಶೇಕಡಾ 6.57 ರಿಂದ ಶೇಕಡ 7.68ರ ನಡುವೆಯಿದ್ದಿತು. ಇದು 2018–19ರಲ್ಲಿ ಹಿಂದಿನ ವರ್ಷಕ್ಕಿಂತ ಶೇಕಡ 0.31ರಷ್ಟು ಇಳಿದಿತ್ತು. ಇದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಪವರ್ ಕಂಪನಿ ಆಫ್ ಕರ್ನಾಟಕ ನಿಯಮಿತ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಗಳಿಂದ ಬರಬೇಕಾದ ಖಾತರಿ ಶುಲ್ಕ (₹54.19 ಕೋಟಿ) ಮತ್ತು ಸಾರಿಗೆ ನಿಗಮಗಳಿಂದ ಬಾಕಿಯಿದ್ದ ಮೋಟಾರು ವಾಹನ ತೆರಿಗೆ ಬಾಕಿಗಳನ್ನು ಸಹಾಯಧನವೆಂದು ಹೊಂದಾಣಿಕೆ ಮಾಡಿದ್ದು (₹306.60 ಕೋಟಿ) ಒಟ್ಟು ₹360.79 ಕೋಟಿಗಳ ಪುಸ್ತಕ ಹೊಂದಾಣಿಕೆಯಿಂದ ರಾಜಸ್ವ ಸ್ವೀಕೃತಿಗಳನ್ನು ಕೃತಕವಾಗಿ ಹೆಚ್ಚಿಸಿದವು.

ರಾಜಸ್ವ ಸ್ವೀಕೃತಿಗಳಿಗೆ ತೆರಿಗೆಯೇತರ ಆದಾಯದ ಅನುಪಾತವು 2014–15ರಲ್ಲಿದ್ದ, ಶೇಕಡ 4.50ರಿಂದ ಈ ವರ್ಷ ಶೇಕಡ 4.11ಕ್ಕೆ ಇಳಿದಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (₹14,08,112 ಕೋಟಿ) ತೆರಿಗೆಯೇತರ ಆದಾಯದ ಅನುಪಾತವು (2018–19ರಲ್ಲಿ ಶೇಕಡಾ 0.48) ನಗಣ್ಯವಾಗಿದ್ದು, ಮುಂಬರುವ ವರ್ಷಗಳಲ್ಲಿ ವೆಚ್ಚ ಸುಧಾರಣಾ ಸಮಿತಿಯು ಶಿಫಾರಸು ಮಾಡಿದಂತೆ ಬಳಕೆದಾರರ ಕರದ ಪರಿಷ್ಕರಣೆಯ ಮೂಲಕ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ಅಗತ್ಯವಿದೆ.

## ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸುಗಳ ಅನುಷ್ಠಾನ

2018–19ನೇ ಸಾಲಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೂಲ ಅನುದಾನದಡಿ ₹14.48 ಕೋಟಿಗಳಷ್ಟು ಕಡಿಮೆ ಬಿಡುಗಡೆಯಾಗಿತ್ತು. ವಿಪತ್ತು ಪರಿಹಾರದಡಿಯ ಅನುದಾನವು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ 90:10 ಅನುಪಾತದಲ್ಲಿದ್ದಿತು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ 2018–19ರ ಸಾಲಿನ ಕಾರ್ಯನಿರ್ವಹಣಾ ಅನುದಾನಗಳು ಮಾರ್ಚ್ 2019ರ ಅಂತ್ಯದವರೆಗೂ ಬಿಡುಗಡೆಯಾಗಿರಲಿಲ್ಲ.

## ರಾಜಸ್ವ ವೆಚ್ಚ

ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ವಿಭಾಗದಡಿ ವೆಚ್ಚವು ಹಿಂದಿನ ವರ್ಷಕ್ಕಿಂತ ಕ್ರಮವಾಗಿ ಶೇಕಡ 16 ಮತ್ತು ಶೇಕಡ 13ರಷ್ಟು ವೃದ್ಧಿಯಾಗಿದ್ದರೆ ಅದು ಸಾಮಾನ್ಯ ಸೇವೆಗಳಡಿ ಶೇಕಡ 24ರಷ್ಟು ವೃದ್ಧಿಯಾಗಿತ್ತು. ಶೇಕಡ 85ರಷ್ಟು ರಾಜಸ್ವ ವೆಚ್ಚವು ಸಂಬಳ, ನಿವೃತ್ತಿ ವೇತನ, ಬಡ್ಡಿ ಪಾವತಿ ಮತ್ತು ಸಹಾಯಧನಗಳು, ಆಡಳಿತ ವೆಚ್ಚ, ಸಹಾಯಾನುದಾನ ಮತ್ತು ಆರ್ಥಿಕ ಬೆಂಬಲ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಗಳ ಬದ್ಧ ವೆಚ್ಚಕ್ಕೆ ವಿನಿಯೋಗವಾಗಿದೆ. ಬದ್ಧ ವೆಚ್ಚಗಳು ರಾಜಸ್ವ ಸ್ವೀಕೃತಿಗಳ ಶೇಕಡ 84ರಷ್ಟಿದೆ. ಸಹಾಯಧನದ ವೆಚ್ಚವು 2017–18ರಲ್ಲಿ ₹14,148 ಕೋಟಿಯಿದ್ದು, 2018–19ರಲ್ಲಿ ₹15,400 ಕೋಟಿಗೆ ಏರಿದೆ. ಆರ್ಥಿಕ ಬೆಂಬಲ, ಉತ್ತೇಜನ ರೂಪದ ಸಹಾಯಧನ, ಇತ್ಯಾದಿಗಳು 2017–18ರಲ್ಲಿ ₹3,318 ಕೋಟಿಗಳಿದ್ದು, ಈ ವರ್ಷ ₹3,777 ಕೋಟಿಗೆ ಏರಿದೆ. ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸಿನಂತೆ, ಪಾರದರ್ಶಕತೆ ತರಲು ಪರೋಕ್ಷ ಸಹಾಯಧನಗಳ ವೆಚ್ಚಗಳನ್ನು ಹಣಕಾಸು ಲೆಕ್ಕಗಳಲ್ಲಿ ಸೇರಿಸಬೇಕಾಗಿದೆ. ಆದರೆ ಇದನ್ನು ಪಾಲಿಸಲಾಗಿಲ್ಲ.

## ವೆಚ್ಚದ ಗುಣಮಟ್ಟ

ಪ್ರಸಕ್ತ ವರ್ಷದಲ್ಲಿ ಬಂಡವಾಳ ವೆಚ್ಚದ ಪಾಲು ಒಟ್ಟು ವೆಚ್ಚದ ಶೇಕಡ 19ರಷ್ಟಿದ್ದು, (₹39,146 ಕೋಟಿ). ಇದು ಕಳೆದ ವರ್ಷದಲ್ಲಿ ಶೇಕಡ 20ರಷ್ಟಿತ್ತು (₹35,760 ಕೋಟಿ). 2018–19ರ ಅಂತ್ಯದಲ್ಲಿದ್ದಂತೆ ಅಪೂರ್ಣ ಕಾಮಗಾರಿಗಳಲ್ಲಿ ₹3,128 ಕೋಟಿಗಳನ್ನು ತೊಡಗಿಸಿದ್ದು, ಈ ಮೊತ್ತವು ನಿರ್ಬಂಧಿತವಾಗಿದೆ. 31 ಮಾರ್ಚ್ 2019ರ ಅಂತ್ಯಕ್ಕೆ ಕಂಪೆನಿಗಳಲ್ಲಿ/ನಿಗಮಗಳಲ್ಲಿ ಹೂಡಿರುವ ₹66,518 ಕೋಟಿಗಳಿಂದ ಬಂದ ಪ್ರತಿಫಲವು ನಗಣ್ಯವಾಗಿದೆ (₹38.30 ಕೋಟಿ). ಹೂಡಿಕೆಯು ನಷ್ಟದಲ್ಲಿರುವ ಕಂಪೆನಿಗಳು/ನಿಗಮಗಳಲ್ಲಿ ಹೂಡಿರುವ ₹38,949 ಕೋಟಿಗಳನ್ನು (ಶೇಕಡ 59) ಒಳಗೊಂಡಿದೆ.

## ನಿಧಿಗಳು ಮತ್ತು ಇತರ ಜವಾಬ್ದಾರಿಗಳು

2012–13ರಿಂದ 2018–19ರವರೆಗೆ ಸಂಚಿತ ಋಣ ಪರಿಹಾರ ನಿಧಿಯಿಂದ ಮಾಡಿದ್ದ ಹೂಡಿಕೆಯ ವ್ಯವಹಾರವು ಸರ್ಕಾರದ ಲೆಕ್ಕ ಪುಸ್ತಕಗಳ ಮೂಲಕ ಹಾದು ಹೋಗಿಲ್ಲವಾದ್ದರಿಂದ, ಅದರ ಮೇಲೆ ಸಂಚಯವಾದ ₹903.71 ಕೋಟಿಗಳಷ್ಟು ಬಡ್ಡಿಯು ರಾಜ್ಯ ಸರ್ಕಾರದ ಆಸ್ತಿಯ ಭಾಗವಾಗಿರಲಿಲ್ಲ. ಹಸಿರು ತೆರಿಗೆ ಉಪಕರದ ₹85.09 ಕೋಟಿಗಳನ್ನು ಹಾಗೂ ತತ್ಸಂಬಧವಾದ ವೆಚ್ಚವನ್ನು ಹಸಿರು ತೆರಿಗೆ ನಿಧಿಗೆ ವರ್ಗಾಯಿಸಿರಲಿಲ್ಲ. ಖಾತರಿ ವಿಮೋಚನಾ ನಿಧಿಯನ್ನು ಪುನಶ್ಚೇತನ ಗೊಳಿಸಿರಲಿಲ್ಲ.

## ಋಣ ಸಹಿಷ್ಣುತೆ

ರಾಜ್ಯದ ಒಟ್ಟು ವಿತ್ತೀಯ ಜವಾಬ್ದಾರಿಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳ ಪ್ರಮಾಣವು ಗಣನೀಯವಾಗಿತ್ತು (ಶೇಕಡಾ 55). 2018–19ಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಶತಾಂಶವು 20.26ರಷ್ಟಿತ್ತು. ಇದು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರಡಿ ನಿಗದಿತ ಶೇಕಡ 25 ಮಿತಿಯಲ್ಲಿದೆ. ರಾಜ್ಯಕ್ಕೆ ಲಭ್ಯವಿದ್ದ ನಿವ್ವಳ ಋಣವು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ 2018–19ರಲ್ಲಿ (₹17,766 ಕೋಟಿ) ಶೇಕಡ 255ರಷ್ಟು ಏರಿಕೆಯಾಗಿತ್ತು.

## ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

2018–19ರಲ್ಲಿ ಒಟ್ಟು ಆಯವ್ಯಯ ಅವಕಾಶ ₹2,45,673 ಕೋಟಿಗಳಿಗೆ ಪ್ರತಿಯಾಗಿ ವೆಚ್ಚವು ₹2,20,534 ಕೋಟಿಗಳಷ್ಟಿದ್ದು ₹25,139 ಕೋಟಿ ಬಳಕೆಯಾಗದೇ ಉಳಿದಿತ್ತು. (ಶೇಕಡ 10). ವೆಚ್ಚವನ್ನು ₹1,165.90 ಕೋಟಿಗಳಷ್ಟು ಅಧಿಕವಾಗಿ ತೋರಿಸಿದ್ದು, ಇದು ಪ್ರಮುಖವಾಗಿ, ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಿದ ಮೊತ್ತಗಳು ಬಳಕೆಯಾಗದಿರುವುದು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವೆಚ್ಚದ ವರ್ಗಾವಣೆಯಾಗದಿರುವುದು ಮುಂತಾದವುಗಳಿಂದ ಆಗಿತ್ತು. 20 ಪ್ರಕರಣಗಳಲ್ಲಿ ಪಡೆದ ಪೂರಕ ಅಂದಾಜುಗಳ ಮೊತ್ತ ₹1,319.88 ಕೋಟಿಗಳು ಅನಗತ್ಯವಾಗಿದ್ದು, 27 ಪ್ರಕರಣಗಳಲ್ಲಿ ಪುನರ್ವಿನಿಯೋಗವು ಅನುಚಿತವಾಗಿದ್ದು ಅವಕಾಶದ ಬಳಕೆಯಾಗಿಲ್ಲ ಅಥವಾ ಅವಕಾಶಕ್ಕಿಂತ ಹೆಚ್ಚು ವೆಚ್ಚವಾಗಿದೆ. 19 ಅನುದಾನಗಳಲ್ಲಿ ₹5 ಕೋಟಿಗಿಂತಲೂ ಹೆಚ್ಚಿನ ಉಳಿತಾಯವಾಗಿದ್ದ ಒಟ್ಟು ₹7,667.67 ಕೋಟಿಗಳ ಮೊತ್ತವು ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ಅಧ್ಯರ್ಪಣೆಯಾಗಿದೆ.

ಮೂರು ಅನುದಾನಗಳ ನಾಲ್ಕು ಪ್ರಕರಣಗಳಲ್ಲಿ, ₹686.82 ಕೋಟಿಗಳ ಹೆಚ್ಚುವರಿ ವೆಚ್ಚವು ಹೊಸ ಸೇವೆ/ಹೊಸ ಸೇವಾಸಾಧನ ಎಂದು ಪರಿಗಣಿಸಬೇಕಿದ್ದು, ಶಾಸಕಾಂಗದ ಅನುಮೋದನೆ ಇಲ್ಲದೇ ವೆಚ್ಚ ಮಾಡಲಾಗಿದೆ.

ಬಂಡವಾಳ/ರಾಜಸ್ವ ವೆಚ್ಚಗಳ ನಡುವೆ ₹108.40 ಕೋಟಿಗಳು ತಪ್ಪು ವರ್ಗೀಕರಣಗೊಂಡಿದ್ದು ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರಿದೆ. ಉದ್ದೇಶ ಶೀರ್ಷಿಕೆ 059–ಇತರೆ ವೆಚ್ಚಗಳಡಿ ₹2,901.92 ಕೋಟಿಗಳ ತಪ್ಪು ವರ್ಗೀಕರಣವಾಗಿದೆ.

ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದಲ್ಲಿ ಹೇಳಿರುವಂತೆ ಪ್ರಸಕ್ತ ವರ್ಷದ ಆಯವ್ಯಯ ಗುರಿಗಳಿಗೆ ಸಂಬಂಧಿಸಿದಂತೆ ಪೂರಕ ಅನುದಾನಗಳ ಪರಿಣಾಮವನ್ನು ಪೂರ್ತಿಯಾಗಿ ನಿವಾರಿಸಲು ವೆಚ್ಚಗಳ ಕಡಿತ/ಆದಾಯದ ಶೇಖರಣೆಯನ್ನು ಸೂಚಿಸುವ ವಿವರಣಾಪಟ್ಟಿಯೊಂದನ್ನು ನೀಡುವಲ್ಲಿ ವಿಫಲವಾದ್ದರಿಂದ ಪೂರಕ ಅನುದಾನಗಳನ್ನು ವಿತ್ತೀಯವಾಗಿ ತಟಸ್ಥವಾಗಿದ್ದವೆಂದು ನಿರ್ಧಾರಣೆ ಮಾಡಿರಲಿಲ್ಲ.

ಅನೇಕ ಅನುದಾನಗಳಲ್ಲಿ ಭಾರಿ ಪ್ರಮಾಣದ ಅವಕಾಶಗಳು ಬಳಕೆಯಾಗದೆ ಉಳಿದಿರುವುದು ಕಂಡುಬಂದಿದ್ದು, ಅವಕಾಶಗಳು ಬಳಕೆಯಾಗದೆ ಉಳಿದಿರುವುದನ್ನು ತಪ್ಪಿಸಲು ಎಲ್ಲಾ ಇಲಾಖೆಗಳಲ್ಲೂ ಆಯವ್ಯಯ ನಿಯಂತ್ರಣವನ್ನು ಬಲಪಡಿಸಬೇಕಾಗಿದೆ. ಸತತವಾಗಿ ಭಾರಿ ಪ್ರಮಾಣದ ಆಯವ್ಯಯ ಅವಕಾಶಗಳು ಬಳಕೆಯಾಗದಿರುವುದು, ಅಧಿಕ ವೆಚ್ಚವಾಗಿರುವುದು ಕಂಡು ಬಂದಿರುವುದರಿಂದ, ಆಯವ್ಯಯ ಕಸರತ್ತು ಹೆಚ್ಚು ವಾಸ್ತವಿಕವಾಗಿರಬೇಕು.

ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳ ಬಿಡುಗಡೆ ಮತ್ತು ಲೆಕ್ಕವಿಧಾನದಲ್ಲಿ ತಪ್ಪಾದ ಆಯವ್ಯಯ ಮಾರ್ಗಗಳನ್ನು ಅನುಸರಿಸಿರುವುದರಿಂದ ಆಯವ್ಯಯ ವೆಚ್ಚಗಳು ನ್ಯೂನತೆಗೊಳಗಾಗಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾಗುವ ಅನುದಾನಗಳು ರಾಜ್ಯ ವಲಯಕ್ಕಿಂತ ಭಿನ್ನವಾಗಿರುವುದನ್ನು ಖಚಿತಪಡಿಸಿಕೊಳ್ಳಲು ನಗರ ಸ್ಥಳೀಯ ಸಂಸ್ಥೆಗಳ ಪಿಂಚಣಿ ಮತ್ತು ಇತರ ನಿವೃತ್ತಿ ಸೌಲಭ್ಯಗಳು, ಸಂಬಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವಲಯಕ್ಕೆ ನಿಖರವಾದ ಶೀರ್ಷಿಕೆಗಳನ್ನು ತೆರೆಯಬೇಕು.

## ಆರ್ಥಿಕ ನಿರೂಪಣೆ

ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳು ಏರಿಕೆ ಪ್ರವೃತ್ತಿಯನ್ನು ತೋರಿದವು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಅದು ಶೇಕಡ 49ರಷ್ಟು ಏರಿಕೆಯಾಗಿದ್ದಿತು. ಸದರಿ ಖಾತೆಗಳ ಸಮೀಕ್ಷೆ, ಸಂಚಿತ ನಿಧಿಗೆ ನಿಧಿಗಳ ಹಿಂಬರೆಯುವಿಕೆಯನ್ನು ಚಾಲ್ತಿಯಲ್ಲಿರುವ ನಿಯಮಗಳಂತೆ ಆದ್ಯತೀಕರಿಸುವ ಅಗತ್ಯವಿದೆ. 73 ವೈಯಕ್ತಿಕ ಠೇವಣಿ ಖಾತೆಗಳಲ್ಲಿ 21 ವೈಯಕ್ತಿಕ ಠೇವಣಿ ಲೆಕ್ಕಗಳು ನಿಷ್ಕ್ರಿಯವಾಗಿದ್ದು ಅಂತಹ ನಿಷ್ಕ್ರಿಯ ಲೆಕ್ಕಗಳ ತೀರುವಳಿಗೆ ಕ್ರಮ ಕೈಗೊಳ್ಳುವ ಮುಂಚಿತವಾಗಿ ಮರುಹೊಂದಾಣಿಕೆಯ ಅಗತ್ಯವಿದೆ.

# ಅಧ್ಯಾಯ - I

# ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

# 1 ಅಧ್ಯಾಯ–I
## ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

### ರಾಜ್ಯದ ಚಿತ್ರಣ

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ ಭಾರತದ ಆರನೆಯ ಅತಿದೊಡ್ಡ ರಾಜ್ಯವಾಗಿದ್ದು (1,91,791 ಚ.ಕಿ.ಮೀ) ಜನಸಂಖ್ಯೆಯಲ್ಲಿ ಎಂಟನೆಯ ಸ್ಥಾನದಲ್ಲಿದೆ. ರಾಜ್ಯದ ಜನಸಂಖ್ಯೆಯು ದಶಕದಲ್ಲಿ (2001–11) ಶೇಕಡ 16ರಷ್ಟು ಹೆಚ್ಚಳವನ್ನು ದಾಖಲಿಸಿದೆ. 2011–12ರಲ್ಲಿ ಬಡತನ ರೇಖೆಯ ಕೆಳಗಿರುವ ಜನಸಂಖ್ಯೆಯು ಭಾರತದ ಸರಾಸರಿ 21.90 ಶತಾಂಶಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಇದು 20.90ರಷ್ಟಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ರಾಒಆಉ) 2018–19ರಲ್ಲಿ ಮಾರುಕಟ್ಟೆ ಬೆಲೆಗಳಲ್ಲಿ ₹14,08,112 ಕೋಟಿಗಳಷ್ಟಿದೆ. ರಾಜ್ಯದ ಸಾಕ್ಷರತೆಯ ದರವು 2001–11ರಲ್ಲಿ ಶೇಕಡ 66.64ರಿಂದ ಶೇಕಡ 75.40ಕ್ಕೆ ಹೆಚ್ಚಿದೆ. ರಾಜ್ಯದ ತಲಾದಾಯವು ₹2,07,062 ಗಳಷ್ಟಿದ್ದು, ರಾಷ್ಟ್ರದ ಸರಾಸರಿಯು ₹1,25,397 ರಷ್ಟಿದೆ (ಆರ್ಥಿಕ ಸಮೀಕ್ಷೆ 2018–19 ಮಾರ್ಚ್ 2019 ರಲ್ಲಿದ್ದಂತೆ). ರಾಜ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ದತ್ತಾಂಶಗಳನ್ನು **ಅನುಬಂಧ 1.1**(ಎ)ರಲ್ಲಿ ನೀಡಲಾಗಿದೆ.

### ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ರಾಒಆಉ)

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಒಂದು ನಿರ್ದಿಷ್ಟ ಅವಧಿಯಲ್ಲಿ ರಾಜ್ಯದ ಒಳಗೆ ಉತ್ಪಾದಿಸಲಾಗಿರುವ ಹಾಗೂ ಅಧಿಕೃತವಾಗಿ ಅಂಗೀಕರಿಸಲ್ಪಟ್ಟಿರುವ ಅಂತಿಮ ಸರಕುಗಳ ಮತ್ತು ಸೇವೆಗಳ ಮೌಲ್ಯವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯು ರಾಜ್ಯದ ಜನತೆಯ ಜೀವನ ಮಟ್ಟವನ್ನು ಸೂಚಿಸುವುದರಿಂದ ಅದು ರಾಜ್ಯದ ಆರ್ಥಿಕ ಸ್ಥಿತಿಯ ಪ್ರಮುಖ ಸೂಚಕವಾಗಿದೆ. ಪ್ರಸಕ್ತ ದರಗಳಲ್ಲಿ ಭಾರತದ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿನ ವೃದ್ಧಿಯ ಪ್ರವೃತ್ತಿಯನ್ನು ಅನುಬಂಧ **1.1**(ಬಿ) ರಲ್ಲಿ ತೋರಿಸಲಾಗಿದೆ. ಅನುಬಂಧದಲ್ಲಿ ಗಮನಿಸಿದಂತೆ, 2014–15ರಿಂದ 2018–19ರ ಸಾಲುಗಳಲ್ಲಿ 2016–17 ಮತ್ತು 2018–19ರ ಸಾಲುಗಳನ್ನು ಹೊರತುಪಡಿಸಿ ಕರ್ನಾಟಕದ ರಾಒಆಉದ ವೃದ್ಧಿದರವು ಪ್ರಸಕ್ತ ಬೆಲೆಗಳಲ್ಲಿ ಭಾರತದ ಸರಾಸರಿ ವೃದ್ಧಿ ದರಕ್ಕಿಂತ ಅಧಿಕವಾಗಿತ್ತು.

## 1.1 ಪೀಠಿಕೆ

ಈ ಅಧ್ಯಾಯವು ಕರ್ನಾಟಕ ರಾಜ್ಯ ಸರ್ಕಾರದ 2018–19ರಲ್ಲಿನ ಹಣಕಾಸಿನ ವ್ಯವಹಾರಗಳ ಯಥಾದೃಷ್ಟಿಯ ಸ್ಥೂಲ ಚಿತ್ರಣವನ್ನು ಒದಗಿಸುತ್ತದೆ. ಅದು, ಕಳೆದ ಐದು ವರ್ಷಗಳಲ್ಲಿನ ಒಟ್ಟಾರೆ ಪ್ರವೃತ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಹಣಕಾಸಿನ ಸೂಚಕಗಳಲ್ಲಿನ ಪ್ರಮುಖ ಬದಲಾವಣೆಗಳನ್ನು ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಯು ಹಣಕಾಸು ಲೆಕ್ಕಗಳು ಹಾಗೂ ರಾಜ್ಯಸರ್ಕಾರದಿಂದ ಪಡೆದ ಮಾಹಿತಿಗಳನ್ನು ಆಧರಿಸಿದೆ. ಸರ್ಕಾರದ ಲೆಕ್ಕಗಳ ವಿನ್ಯಾಸ ಹಾಗೂ ಹಣಕಾಸು ಲೆಕ್ಕಗಳ ರೂಪುರೇಖೆಗಳನ್ನು **ಅನುಬಂಧ 1.2**ರಲ್ಲಿ ವಿವರಿಸಲಾಗಿದೆ.

### 1.1.1 2018–19ರಲ್ಲಿನ ವಿತ್ತ ವ್ಯವಹಾರಗಳ ಸಾರಾಂಶ

**ಕೋಷ್ಟಕ 1.1** ಮತ್ತು **ಅನುಬಂಧ 1.3**ರಲ್ಲಿ ರಾಜ್ಯ ಸರ್ಕಾರದ ಪ್ರಸಕ್ತ ವರ್ಷದ (2018–19) ವಿತ್ತ ವ್ಯವಹಾರಗಳ ಸಂಕ್ಷಿಪ್ತ ಸಾರಾಂಶವನ್ನು ಹಿಂದಿನ ವರ್ಷಕ್ಕೆ (2017–18) ಹೋಲಿಸಿದಂತೆ ನೀಡಲಾಗಿದ್ದು, **ಅನುಬಂಧ 1.4**ರಲ್ಲಿ 2018–19ರಲ್ಲಿನ ಸ್ವೀಕೃತಿಗಳ ಮತ್ತು ಬಟವಾಡೆಗಳ ವಿವರಗಳೊಂದಿಗೆ ಕಳೆದ ನಾಲ್ಕು ವರ್ಷಗಳಲ್ಲಿನ ಒಟ್ಟಾರೆ ವಿತ್ತೀಯ ಸ್ಥಿತಿಯನ್ನು ಸೂಚಿಸಲಾಗಿದೆ.

## ಕೋಷ್ಟಕ 1.1: 2018–19ರಲ್ಲಿ ವಿತ್ತ ವ್ಯವಹಾರಗಳ ಸಾರಾಂಶ

(₹ ಕೋಟಿಗಳಲ್ಲಿ)

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| | 2017–18 | 2018–19 | | 2017–18 | 2018–19 |
| ಭಾಗ ಎ– ರಾಜಸ್ವ | | | | | |
| ರಾಜಸ್ವ ಸ್ವೀಕೃತಿಗಳು | **1,46,999.65** | **1,64,978.66** | **ರಾಜಸ್ವ ವೆಚ್ಚ** | **1,42,482.33** | **1,64,299.86** |
| ತೆರಿಗೆ ಆದಾಯ | 87,130.38 | 96,829.71* | ಸಾಮಾನ್ಯ ಸೇವೆಗಳು | 34,484.44 | 42,655.05 |
| ತೆರಿಗಯೇತರ ರಾಜಸ್ವ | 6,476.53 | 6,772.87 | ಸಾಮಾಜಿಕ ಸೇವೆಗಳು | 58,652.35 | 67,934.35 |
| ಕೇಂದ್ರ ತೆರಿಗೆಗಳು/ ಸುಂಕಗಳಲಿನ ಪಾಲು | 31,751.96 | 35,894.83^ | ಆರ್ಥಿಕ ಸೇವೆಗಳು | 42,855.78 | 48,285.15 |
| ಭಾರತ ಸರ್ಕಾರದಿಂದ ಪಡೆದ ಸಹಾಯಾನುದಾನಗಳು ಮತ್ತು ವಂತಿಗೆಗಳು | 21,640.78 | 25,481.25# | ಸಹಾಯಾನುದಾನಗಳು ಮತ್ತು ವಂತಿಗೆಗಳು | 6,489.76 | 5,425.31 |
| ಭಾಗ–ಬಿ: ಬಂಡವಾಳ ಮತ್ತು ಇತರೆ | | | | | |
| ಇತರೆ ಬಂಡವಾಳ ಸ್ವೀಕೃತಿಗಳು | **3.70** | **(–) 5.51** | **ಬಂಡವಾಳ ವೆಚ್ಚ** | **30,666.76** | **34,659.32** |
| | | | ಸಾಮಾನ್ಯ ಸೇವೆಗಳು | 977.45 | 827.41 |
| | | | ಸಾಮಾಜಿಕ ಸೇವೆಗಳು | 8,676.76 | 9,793.56 |
| | | | ಆರ್ಥಿಕ ಸೇವೆಗಳು | 21,012.55 | 24,038.35 |
| ಸಾಲಗಳ ಮತ್ತು ಮುಂಗಡಗಳ ವಸೂಲಿಗಳು | **136.93** | **31.23** | ಬಟವಾಡೆ ಮಾಡಿದ ಸಾಲಗಳು ಮತ್ತು ಮುಂಗಡಗಳು | **5,092.22** | **4,487.22** |
| ಸಾರ್ವಜನಿಕ ಋಣ ಸ್ವೀಕೃತಿಗಳು** | **25,121.86** | **41,914.06** | **ಸಾರ್ವಜನಿಕ ಋಣ ಮರುಪಾವತಿ**** | **8,269.16** | **11,082.62** |
| ಸಾದಿಲ್ವಾರು ನಿಧಿ | – | – | **ಸಾದಿಲ್ವಾರು ನಿಧಿ** | – | – |
| ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು | **2,00,615.43** | **2,37,759.99** | **ಸಾರ್ವಜನಿಕ ಲೆಕ್ಕ ಬಟವಾಡೆಗಳು** | **1,94,536.63** | **2,34,329.59** |
| ಪ್ರಾರಂಭಿಕ ನಗದು ಶಿಲ್ಕು | **34,353.58** | **26,184.05** | **ಅಂತಿಮ ನಗದು ಶಿಲ್ಕು** | **26,184.05** | **22,003.87** |
| ಒಟ್ಟು | **4,07,231.15** | **4,70,862.48** | **ಒಟ್ಟು** | **4,07,231.15** | **4,70,862.48** |

*ಆಕರ: ಹಣಕಾಸು ಲೆಕ್ಕಗಳು 2018–19.*

* ₹41,956.03 ಕೋಟಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಎಸ್‌ಜಿಎಸ್‌ಟಿ) ಯನ್ನೊಳಗೊಂಡಿದೆ.

^ ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) ₹8,858.76 ಕೋಟಿ ಮತ್ತು ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) ₹707 ಕೋಟಿಗಳನ್ನೊಳಗೊಂಡಿದೆ.

# ಜಿಎಸ್‌ಟಿಯ ಅನುಷ್ಠಾನದಿಂದ ಉಂಟಾದ ರಾಜಸ್ವ ನಷ್ಟದ ಪರಿಹಾರದೆಡೆಗಿನ ₹10,754 ಕೋಟಿಗಳನ್ನೊಳಗೊಂಡಿದೆ.

** ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳ ನಿವ್ವಳ ವ್ಯವಹಾರಗಳನ್ನು ಹೊರತುಪಡಿಸಿ.

ಹಿಂದಿನ ಸಾಲಿಗೆ ಹೋಲಿಸಿದಲ್ಲಿ 2018–19ರಲ್ಲಿನ ಗಮನಾರ್ಹ ಬದಲಾವಣೆಗಳು ಈ ಕೆಳಗಿನಂತಿವೆ:

- ರಾಜಸ್ವ ಸ್ವೀಕೃತಿಗಳು ₹17,979.01 ಕೋಟಿಗಳಷ್ಟು (ಶೇಕಡ 12) ಹೆಚ್ಚಾಗಿದೆ.
- ರಾಜಸ್ವ ವೆಚ್ಚವು ₹21,817.53 ಕೋಟಿಗಳಷ್ಟು (ಶೇಕಡ 15) ಹೆಚ್ಚಾಗಿದೆ.
- ಬಂಡವಾಳ ವೆಚ್ಚವು ₹3992.56 ಕೋಟಿಗಳಷ್ಟು ಅಧಿಕವಾಗಿತ್ತು (ಶೇಕಡ 13). ಹೆಚ್ಚಳವು ಪ್ರಮುಖವಾಗಿ ಆರ್ಥಿಕ ಸೇವೆಗಳ ವಲಯ (₹3,025.80 ಕೋಟಿ, ಶೇಕಡಾ 14) ಮತ್ತು ಸಾಮಾಜಿಕ ಸೇವೆಗಳ ವಲಯ (₹1,116.80 ಕೋಟಿ, ಶೇಕಡಾ 13) ಗಳಲ್ಲಿ ಆಗಿದ್ದು ಸಾಮಾನ್ಯ ಸೇವೆಗಳ ವಲಯದಲ್ಲಿನ ಇಳಿಕೆಯಿಂದ (₹150.04 ಕೋಟಿ, ಶೇಕಡಾ 15) ಉತ್ತಾರವಾಗಿದೆ.

- 2018–19ರಲ್ಲಿ ಪ್ರಮುಖವಾಗಿ 7615–200–ಇತರ ಸಾಲಗಳು ಇದರಡಿ ಕಡಿಮೆ ವಸೂಲಾತಿಯ ಕಾರಣದಿಂದ ಸಾಲ ಮತ್ತು ಮುಂಗಡಗಳಲ್ಲಿ ವಸೂಲಾತಿಯು ₹105.70 ಕೋಟಿಗಳಷ್ಟು ಇಳಿಕೆಯಾಯಿತು (ಶೇಕಡಾ 77). ಸಾಲ ಮತ್ತು ಮುಂಗಡಗಳ ಬಟವಾಡೆಯು ₹605 ಕೋಟಿಗಳಷ್ಟು ಇಳಿಕೆಯಾಯಿತು (ಶೇಕಡಾ 12).
- ಸಾರ್ವಜನಿಕ ಋಣ ಸ್ವೀಕೃತಿಗಳು (ಅರ್ಥೋಪಾಯ ಮುಂಗಡಗಳನ್ನು ಹೊರತುಪಡಿಸಿ) ₹16.792.20 ಕೋಟಿಗಳಷ್ಟು ಏರಿಕೆಯಾಗಿದ್ದು (ಶೇಕಡಾ 67) ಮರುಪಾವತಿಯು ₹2,813.46 ಕೋಟಿಗಳಷ್ಟು (ಶೇಕಡಾ 34) ಹೆಚ್ಚಾಗಿದೆ. ಸಾರ್ವಜನಿಕ ಋಣದಲ್ಲಿನ ಹೆಚ್ಚಳವು ರಾಜ್ಯದ ಆಂತರಿಕ ಋಣದಲ್ಲಿನ ಶೇಕಡ 75ರಷ್ಟು ಏರಿಕೆಯ ಕಾರಣದಿಂದ ಉಂಟಾಗಿದೆ.
- ಇತರೆ ಬಂಡವಾಳ ಸ್ವೀಕೃತಿಗಳು 2017–18ರಲ್ಲಿದ್ದ ₹3.70 ಕೋಟಿಗಳಿಂದ 2018–19ರಲ್ಲಿ (–) ₹5.51 ಕೋಟಿಗಳಿಗೆ ಇಳಿಕೆಯಾಗಿದೆ. ಇದು ಸಹಕಾರಿ ಸೊಸೈಟಿಗಳು/ ಬ್ಯಾಂಕುಗಳಲ್ಲಿನ ಬಂಡವಾಳ/ ಹೂಡಿಕೆಗಳ ಹಿಂಪಡೆತದಿಂದ (₹3.29 ಕೋಟಿ) ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ₹8.80 ಕೋಟಿಗಳ ಮುಂಗಡ ಹಣ ಠೇವಣಿಯ ಮರುಪಾವತಿಯಿಂದಾಗಿತ್ತು.
- ಸಾರ್ವಜನಿಕ ಲೆಕ್ಕಗಳ ಸ್ವೀಕೃತಿಗಳು ₹37,144.56 ಕೋಟಿ (ಶೇಕಡಾ 19) ಮತ್ತು ಬಟವಾಡೆಗಳು ₹39.792.96 ಕೋಟಿ (ಶೇಕಡಾ 20) ಗಳಷ್ಟು ಹೆಚ್ಚಳಗೊಂಡಿದ್ದವು.
- ರಾಜ್ಯಸರ್ಕಾರದ ನಗದು ಶಿಲ್ಕು ₹4,180.18 ಕೋಟಿಗಳಷ್ಟು ಇಳಿಕೆಯಾಗಿದೆ (ಶೇಕಡಾ 16). ಹಿಂದಿನ ವರ್ಷಕ್ಕಿಂತ ನಗದು ಶಿಲ್ಕಿನಲ್ಲಿ ಇಳಿಕೆಯಾಗಿದ್ದರೂ ಹೆಚ್ಚು ನಗದು ಶಿಲ್ಕು ಇರುವುದರಿಂದ ಸರ್ಕಾರವು ಹೊಸ ಸಾಲಗಳನ್ನು ಅವಲಂಬಿಸುವ ಮೊದಲು ಇರುವ ಶಿಲ್ಕನ್ನು ಬಳಸಿಕೊಳ್ಳುವುದನ್ನು ಪರಿಗಣಿಸಬಹುದು.

### 1.1.2 ವಿತ್ತೀಯ ಸ್ಥಿತಿಯ ಸಮೀಕ್ಷೆ

ವಿತ್ತೀಯ ನಿರ್ವಹಣೆಯಲ್ಲಿ ಅಂತರ ಪೀಳಿಗೆಯ ಸಮಾನತೆ ಹಾಗೂ ದೀರ್ಘಾವಧಿಯ ಸಂಪೂರ್ಣ ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ, 2002 (ಕೆಎಫ್ಆರ್ಎ) ರನ್ನು ಅಧಿಸೂಚಿಸಿ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿದೆ.

ಸಾಲಗಳು, ಋಣಗಳು ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ವಿವೇಚನಾಯುಕ್ತ ಋಣ ನಿರ್ವಹಣೆ ಮತ್ತು ಸಾಕಷ್ಟು ರಾಜಸ್ವ ಹೆಚ್ಚಳವನ್ನು ಕೆಎಫ್ಆರ್ಎಯು 2002 ಕಲ್ಪಿಸಿಕೊಂಡಿತ್ತು. ರಾಜ್ಯ ಸರ್ಕಾರವು ವಿತ್ತೀಯ ಕ್ರೋಢೀಕರಣ ಪಥದಲ್ಲಿದೆ ಮತ್ತು ಖಾತರಿಗಳನ್ನು ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಪರಿಮಿತಿ ಅಧಿನಿಯಮ, 1999ರಡಿ ವಿಧಿಸಿದ ಮಿತಿಯೊಳಗೆ[1] ನಿರ್ವಹಿಸಿದೆ.

ರಾಜ್ಯ ಸರ್ಕಾರವು 2004–05ರಿಂದಲೂ ರಾಜಸ್ವ ಹೆಚ್ಚಳವನ್ನು ದಾಖಲಿಸಿದೆ ಮತ್ತು ವಿತ್ತೀಯ ಕೊರತೆಯು ಅಧಿನಿಯಮದಲ್ಲಿ ನಿಗದಿಪಡಿಸಿರುವಂತೆ ರಾಒಆಂಉದ ಶೇಕಡ ಮೂರರ ಮಿತಿಯಲ್ಲಿದೆ. ರಾಜಸ್ವ ಮತ್ತು ವಿತ್ತೀಯ ಕೊರತೆಗಳ ಗುರಿಗಳು ಮತ್ತು ಅವುಗಳ ನೈಜ ಮಟ್ಟಗಳನ್ನು **ಕೋಷ್ಟಕ 1.2**ರಲ್ಲಿ ನೀಡಲಾಗಿದೆ.

[1] ಸರ್ಕಾರದಿಂದ ನೀಡಲ್ಪಟ್ಟ ಖಾತರಿಗಳ ಬಾಕಿಯು ಯಾವುದೇ ವರ್ಷದ 1ನೆ ಏಪ್ರಿಲ್‌ನಲ್ಲಿದ್ದಂತೆ ಎರಡು ವರ್ಷಗಳ ಹಿಂದಿನ ರಾಜ್ಯದ ರಾಜಸ್ವ ಸ್ವೀಕೃತಿಗಳ ಶೇಕಡಾ 80ರಷ್ಟನ್ನು ಮೀರದಂತಿರಬೇಕು.

**ಕೋಷ್ಟಕ 1.2: ಕೆಎಫ್ಆರ್ಎ ಅಡಿಯ ಗುರಿಗಳು ಮತ್ತು ಪರಿಣಾಮಗಳು**

| ಅವಧಿ | ರಾಜಸ್ವ ಹೆಚ್ಚಳ/ಕೊರತೆ | | ವಿತ್ತೀಯ ಕೊರತೆ/ರಾಒಆಂಉ (ಶೇಕಡಾವಾರು) | | ಋಣ/ರಾಒಆಂಉ ಅನುಪಾತ (ಶೇಕಡಾವಾರು) | |
|---|---|---|---|---|---|---|
| | ಕೆಎಫ್ಆರ್ಎ ಯಲ್ಲಿ ನಿಗದಿಪಡಿಸಿದ ಮಿತಿ | ಸಾಧನೆ | ಕೆಎಫ್ಆರ್ಎ ಯಲ್ಲಿ ನಿಗದಿಪಡಿಸಿದ ಮಿತಿ | ಸಾಧನೆ | ಕೆಎಫ್ಆರ್ಎ ಯಲ್ಲಿ ನಿಗದಿಪಡಿಸಿದ ಮಿತಿ | ಸಾಧನೆ |
| 2014–15 | ರಾಜಸ್ವ ಹೆಚ್ಚಳ ನಿರ್ವಹಣೆ | ಗುರಿ ಸಾಧಿಸಲಾಯಿತು | 3.00 | 2.14 | 25.20 | 18.00 |
| 2015–16 | | | 3.00 | 1.89 | 25.00 | 18.10 |
| 2016–17 | | | 3.00 | 2.53 | 25.00 | 19.54 |
| 2017–18 | | | 3.00 | 2.37 | 25.00 | 18.78 |
| 2018–19 | | | 3.00 | 2.73 | 25.00 | 20.26 |

ಫೆಬ್ರವರಿ 2014ರಲ್ಲಿ ಕೆಎಫ್ಆರ್ಎ 2002ರ ಕಾಯಿದೆಗೆ ತಿದ್ದುಪಡಿ ತರುವುದರ ಮೂಲಕ ಪರಿಚ್ಛೇದ 2(ಜಿ) ಅಡಿಯಲ್ಲಿ ಸೂಚಿಸಿರುವ ಸಾರ್ವಜನಿಕ ವಿಭಾಗದ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮತ್ತು ಇತರ ಸಮಾನ ಸಾಧನಗಳು ಮಾಡುವ ಸಾಲಗಳ ಅಸಲು ಮತ್ತು ಬಡ್ಡಿಗಳ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯನ್ನು ರಾಜ್ಯದ ಆಯವ್ಯಯದ ಮೂಲಕವೇ ಭರಿಸುವಂತೆ ಹಿಗ್ಗಿಸಲಾಯಿತು. ಉತ್ತರೋತ್ತರ ಹಣಕಾಸು ಆಯೋಗಗಳು ವಿಧಿಸಿರುವ ಪ್ರಮಿತಿಗಳನ್ನು ಗಮನದಲ್ಲಿರಿಸಿ ರಾಜ್ಯ ಸರ್ಕಾರವು ತನ್ನ ವಿತ್ತೀಯ ಜವಾಬ್ದಾರಿ ಅಧಿನಿಯಮವನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡುತ್ತಿದೆ.

### 1.1.3 ರಾಜ್ಯದ ವಿತ್ತೀಯ ಸ್ವಾಸ್ಥ್ಯ

ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರಲ್ಲಿ ನಿಗದಿಪಡಿಸಿದಂತೆ 2018–19ರಲ್ಲಿ ಸರಕಾರವು ರಾಜಸ್ವ ಹೆಚ್ಚಳವನ್ನು (₹679 ಕೋಟಿ) ನಿರ್ವಹಿಸಿದೆ. ರಾಒಆಂಉಕ್ಕೆ ವಿತ್ತೀಯ ಕೊರತೆಯ ಅನುಪಾತ (ಶೇಕಡ 2.73) ಮತ್ತು ರಾಒಆಂಉಕ್ಕೆ ಋಣದ ಅನುಪಾತ (ಶೇಕಡ 20.26) ಗಳಲ್ಲಿ ನಿಗದಿತ ಗುರಿಯನ್ನು ಸಾಧಿಸಿದೆ. ಇದು ವಿತ್ತೀಯ ನಿರ್ವಹಣೆಯಲ್ಲಿನ ದೂರದೃಷ್ಟಿಯನ್ನು ಸೂಚಿಸುತ್ತದೆ.

### 1.1.4 ಕೇಂದ್ರ ಸರ್ಕಾರದಿಂದ ವ್ಯತ್ಯಯಗಳೊಡನೆ ವಿತ್ತೀಯ ವ್ಯತ್ಯಯಗಳ ಹೋಲಿಕೆ

2018–19ರ ವರ್ಷದ ಕರ್ನಾಟಕದ ವಿತ್ತೀಯ ವ್ಯತ್ಯಯಗಳನ್ನು ಭಾರತ ಸರ್ಕಾರದ ವ್ಯತ್ಯಯಗಳೊಡನೆ ತುಲನೆಯನ್ನು **ಕೋಷ್ಟಕ 1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3: ವಿತ್ತೀಯ ವ್ಯತ್ಯಯಗಳ ತುಲನೆ**

| ಕ್ರಮ ಸಂಖ್ಯೆ | ವಿತ್ತೀಯ ವ್ಯತ್ಯಯ | ಕರ್ನಾಟಕ | ಭಾರತ ಸರ್ಕಾರ# |
|---|---|---|---|
| 1 | ವಿತ್ತೀಯ ಕೊರತೆ/ರಾ.ಒ.ಆಂ.ಉ (ಶೇಕಡಾವಾರು) | 2.73 | 3.40 |
| 2 | ರಾಒಆಂಉಗೆ ಸರ್ಕಾರದ ಒಟ್ಟು ಬಾಕಿಯಿರುವ ಋಣದ ಅನುಪಾತ (ಶೇಕಡಾವಾರು) | 20.26 | 44.50 |

*ಆಕರ: #ಆರ್ಥಿಕ ಸಮೀಕ್ಷೆ, ಭಾರತ ಸರ್ಕಾರ, 2018–19.*

ಮೇಲಿನ ಕೋಷ್ಟಕದಲ್ಲಿ ತೋರಿಸಿದಂತೆ ಕರ್ನಾಟಕದ ವಿತ್ತೀಯ ಕೊರತೆ/ರಾಒಆಂಉ ಮತ್ತು ಋಣ/ರಾಒಆಂಉದ ಅನುಪಾತವು ಕೇಂದ್ರ ಸರ್ಕಾರದ ಅನುಪಾತಕ್ಕಿಂತ ಕಡಿಮೆಯಿದ್ದಿತು.

### 1.1.5 2018–19ರಲ್ಲಿ ರಾಜಸ್ವ ಹೆಚ್ಚಳ ಮತ್ತು ವಿತ್ತೀಯ ಕೊರತೆಯ ಮೇಲೆ ಕೆಲವು ವಹಿವಾಟುಗಳ ಪ್ರಭಾವ

2018–19ರಲ್ಲಿ ಕೆಲವು ವಹಿವಾಟುಗಳ ಸೂಕ್ಷ್ಮ ಪರಿಶೀಲನೆಯು ಹಣಕಾಸು ಲೆಕ್ಕಗಳ ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳ ಕಂಡಿಕೆ xxiv ರಲ್ಲಿ ತೋರಿಸಿದಂತೆ ಕೆಲವು ಲೆಕ್ಕ ಹೊಂದಾಣಿಕೆಗಳು ರಾಜಸ್ವ ಹೆಚ್ಚಳ ಮತ್ತು ವಿತ್ತೀಯ ಕೊರತೆಯ ಮಟ್ಟವು ಬಂಧಿತವಾಗಿದ್ದು, ವಿವರಗಳನ್ನು **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.4: 2018–19ರಲ್ಲಿ ಕೆಲವು ವಹಿವಾಟುಗಳ ಪ್ರಭಾವ**

**(ಕೋಟಿ ₹ ಗಳಲ್ಲಿ)**

| ಕ್ರಮ ಸಂಖ್ಯೆ | ವಿಷಯ | ರಾಜಸ್ವ ಹೆಚ್ಚಳ | | ವಿತ್ತೀಯ ಕೊರತೆ | |
|---|---|---|---|---|---|
| | | ಅಧಿಕವಾಗಿ ಹೇಳಿರುವುದು | ಕಡಿಮೆಯಾಗಿ ಹೇಳಿರುವುದು | ಅಧಿಕವಾಗಿ ಹೇಳಿರುವುದು | ಕಡಿಮೆಯಾಗಿ ಹೇಳಿರುವುದು |
| 1 | ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚದಡಿ ಲೆಕ್ಕ ಹಾಕಿರುವುದು | 28.60 | 0.00 | 0.00 | 0.00 |
| 2 | ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚದಡಿ ಲೆಕ್ಕ ಹಾಕಿರುವುದು | 0.00 | 64.28 | 0.00 | 0.00 |
| 3 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವೆಚ್ಚವನ್ನು ವರ್ಗಾಯಿಸದಿರುವುದು | 0.00 | 299.20 | 299.20 | 0.00 |
| 4 | ಗ್ರಾಹಕ ಕಲ್ಯಾಣ ನಿಧಿಯ ಸ್ವೀಕೃತಿಗಳನ್ನು ವರ್ಗಾಯಿಸದಿರುವುದು | 0.41 | 0.00 | 0.00 | 0.41 |
| 5 | ಮೀಸಲು ನಿಧಿಗಳ ಮತ್ತು ಬಡ್ಡಿಸಹಿತ ಠೇವಣಿಗಳ ಮೇಲಿನ ಬಡ್ಡಿಯ ಹೊಂದಾಣಿಕೆ ಮಾಡದಿರುವುದು | 28.20 | 0.00 | 0.00 | 28.20 |
| 6 | ಪಂಚಾಯತ್ ರಾಜ್ ಸಂಸ್ಥೆಗಳ ಬಳಕೆಯಾಗದ ಅನುದಾನಗಳ ವಾಪಸು ಮಾಡದಿರುವುದು | 1,369.12 | 0.00 | 0.00 | 1,369.12 |
| | ಒಟ್ಟು | 1,425.79 | 363.48 | 299.20 | 1,397.73 |
| | ನಿವ್ವಳ ಪ್ರಭಾವ | 1,062.31 | 0.00 | 0.00 | 1,098.53 |

*ಆಕರ: ಲೆಕ್ಕಗಳ ಮೇಲಿನ ಟಿಪ್ಪಣಿಗಳು*

ಮೇಲಿನ ವಹಿವಾಟುಗಳನ್ನು ಕೆಳಗೆ ಚರ್ಚಿಸಲಾಗಿದೆ:

- ಕ್ರಮ ಸಂಖ್ಯೆ 1–4ಕ್ಕೆ ಸಂಬಂಧಿಸಿದಂತೆ ವಹಿವಾಟುಗಳನ್ನು ಕ್ರಮವಾಗಿ ಕಂಡಿಕೆ 2.4.1, 1.10.4.1(ಡಿ) ಮತ್ತು 1.10.4.1(ಇ)ಗಳಲ್ಲಿ ವಿವರಿಸಲಾಗಿದೆ.
- ಕ್ರಮ ಸಂಖ್ಯೆ 5ಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ಮೀಸಲು ನಿಧಿಗಳು ಮತ್ತು ಬಡ್ಡಿಸಹಿತ ಠೇವಣಿಗಳಡಿಯಲ್ಲಿ ಉಳಿದಿರುವ ಹೂಡಿಕೆಯಾಗದ ಶಿಲ್ಕುಗಳ ಮೇಲೆ ಬಡ್ಡಿಯನ್ನು ನೀಡಬೇಕಾಗಿರುತ್ತದೆ. ವರ್ಷದ ಆರಂಭದಲ್ಲಿ ಇವುಗಳಲ್ಲಿನ ಶಿಲ್ಕು ₹376.05 ಕೋಟಿಗಳಷ್ಟಿತ್ತು. ಇದರ ಮೇಲಿನ ಶೇಕಡ 7.5 ದರದಲ್ಲಿ ಬಡ್ಡಿಯ (ಮಾರ್ಗೋಪಾಯಗಳ ಮೇಲಿನ ಸರಾಸರಿ ಬಡ್ಡಿ ದರದಂತೆ) ಜವಾಬ್ದಾರಿಯು ₹28.20 ಕೋಟಿಯಷ್ಟಾಗುತ್ತದೆ, ಮತ್ತು
- ಕ್ರಮ ಸಂಖ್ಯೆ 6ಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಡಿಸೆಂಬರ್ 2016ರಲ್ಲಿ ಜಾರಿ ಮಾಡಿದ ಒಂದು ಆದೇಶದಲ್ಲಿ ಯಾವುದೇ ವರ್ಷದಲ್ಲಿ ಬಳಸದೇ ಉಳಿದ ಶಿಲ್ಕುಗಳನ್ನು ತಕ್ಷಣ ವರ್ಷದ ನಂತರ ವರ್ಷದ ಆಯವ್ಯಯದಲ್ಲಿ ಹೊಂದಾಣಿಕೆ ಮಾಡಬೇಕೆಂದು ನಿಗದಿಪಡಿಸಿದೆ. ಅದರಂತೆ, ರಾಜ್ಯ ಸರ್ಕಾರವು ಮಾರ್ಚ್ 2019ರಲ್ಲಿ 2016–17ನೇ ಸಾಲಿಗೆ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ₹468.88 ಕೋಟಿಗಳಷ್ಟು ಮತ್ತು ತಾಲ್ಲೂಕು ಪಂಚಾಯತ್‌ಗಳ ₹900.24 ಕೋಟಿಗಳಷ್ಟು ಬಳಕೆಯಾಗದೆ ಉಳಿದಿದ್ದ ಮೊತ್ತ ಸಾರ್ವಜನಿಕ ಲೆಕ್ಕ (ಪ್ರಧಾನ ಶೀರ್ಷಿಕೆ 8448)ದಿಂದ ವಾಪಸ್ಸು ಮಾಡಲು ಅನುಮೋದನೆಯನ್ನು ನೀಡಿದೆ. ಇದು ಪ್ರಸಕ್ತ ವರ್ಷದಲ್ಲಿನ ವೆಚ್ಚವನ್ನು ಮುಚ್ಚಿಟ್ಟಂತಾಗಿದೆ.

  ಹಣಕಾಸು ಇಲಾಖೆಯು (ಮಾರ್ಚ್ 2020) ಬಳಕೆಯಾಗದ ಪಂಚಾಯತ್‌ರಾಜ್ ಸಂಸ್ಥೆಗಳ ಅನುದಾನವನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶಗಳಂತೆ ವಾಪಸ್ಸು ಮಾಡಲು ಅವಕಾಶ ಒದಗಿಸಿರುವುದಾಗಿ ಮತ್ತು ಈ ವಾಪಸಾತಿಗೆ ವಿಧಾನಮಂಡಲದ ಅನುಮೋದನೆಯನ್ನು ಪಡೆದಿರುವುದಾಗಿ ಉತ್ತರಿಸಿದೆ.

  ಆದರೆ, ಕಳೆದ ವರ್ಷದಲ್ಲಿ ಬಳಕೆಯಾಗದೆ ಉಳಿದ ಶಿಲ್ಕುಗಳನ್ನು 2018–19ರಲ್ಲಿ ಸಂಚಿತ ನಿಧಿಗೆ ವಾಪಸ್ಸು ಮಾಡಿರುವುದು ₹1,369.12 ಕೋಟಿಗಳ ಮಟ್ಟಿಗೆ ಪ್ರಸಕ್ತ ವರ್ಷದ ರಾಜಸ್ವ ಹೆಚ್ಚಳವನ್ನು ಅಧಿಕವಾಗಿ ಮತ್ತು ವಿತ್ತೀಯ ಕೊರತೆಯನ್ನು ಕಡಿಮೆಯಾಗಿ ಹೇಳಿರುವುದು ವಾಸ್ತವವಾಗಿದೆ. ಆದರಿಂದ ಈ ಹೊಂದಾಣಿಕೆಯು ರಾಜ್ಯ ಪ್ರಸಕ್ತ ವರ್ಷದ ವಿತ್ತೀಯ ಸ್ಥಿತಿಯ ನೈಜ ಹಾಗೂ ಸ್ಪಷ್ಟ ಚಿತ್ರಣವನ್ನು ಬಿಂಬಿಸುವುದಿಲ್ಲ.

  **ಕೋಷ್ಟಕ 1.4**ರಲ್ಲಿನ ವಹಿವಾಟುಗಳಲ್ಲಿ ಕಾಣಿಸಿದಂತೆ ರಾಜಸ್ವ ಹೆಚ್ಚಳದ ನಿವ್ವಳ ಪ್ರಭಾವ ₹1,062.13 ಕೋಟಿಗಳಷ್ಟಿದೆ ಮತ್ತು ವಿತ್ತೀಯ ಕೊರತೆಯ ನಿವ್ವಳ ಪ್ರಭಾವ ₹1,098.53 ಕೋಟಿಗಳಷ್ಟಿದೆ.

## 1.2 2018–19ನೇ ಸಾಲಿನ ಆಯವ್ಯಯದ ವಿಶ್ಲೇಷಣೆ

### 1.2.1 ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳು

ರಾಜ್ಯ ಸರ್ಕಾರವು ಮಂಡಿಸುವ ಆಯವ್ಯಯವು ನಿರ್ದಿಷ್ಟ ವಿತ್ತ ವರ್ಷದ ಆದಾಯ ಮತ್ತು ವೆಚ್ಚಗಳ ಅಂದಾಜುಗಳನ್ನು ನಿರೂಪಿಸುತ್ತದೆ. ಆಯವ್ಯಯದ ಅಂದಾಜುಗಳಿಂದ ಆದಂತಹ ಮಾರ್ಗಪಲ್ಲಟಗಳು ಉದ್ದೇಶಿತ ವಿತ್ತೀಯ ಗುರಿಗಳನ್ನು ಸಾಧಿಸಲಾಗದಿರುವುದನ್ನು ಮತ್ತು ವಿತ್ತೀಯ ಭರವಸೆಗಳು ಈಡೇರದಿರುವುದನ್ನು ಸೂಚಿಸುತ್ತವೆ. ಇವು ಸರ್ಕಾರದ ನಿಯಂತ್ರಣದಲ್ಲಿರುವ ಮತ್ತು ನಿಯಂತ್ರಣ ಮೀರಿದ ಕೆಲವು ಅಂಶಗಳಿಂದ ಉಂಟಾಗುತ್ತವೆ.

2018–19ರಲ್ಲಿ ಕೆಲವು ಪ್ರಮುಖ ವಿತ್ತೀಯ ಪ್ರಮಿತಿಗಳ ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳನ್ನು **ನಕ್ಷೆ 1.1** ತೋರಿಸುತ್ತದೆ.

**ನಕ್ಷೆ 1.1: 2018–19ರ ಆಯವ್ಯಯ ಅಂದಾಜುಗಳಿಗೆ ಪ್ರತಿಯಾಗಿ ವಾಸ್ತವಗಳು**




*ಆಕರ: ವಾರ್ಷಿಕ ಹಣಕಾಸು ತಃಖ್ತೆಗಳು ಮತ್ತು ಹಣಕಾಸು ಲೆಕ್ಕಗಳು.*

# ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲನ್ನು ಒಳಗೊಂಡಿದೆ.

* ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಹೊರತುಪಡಿಸಿ.

2018–19ರಲ್ಲಿ ವಾಸ್ತವಿಕ ಸ್ವೀಕೃತಿಗಳು/ವೆಚ್ಚವು ಆಯವ್ಯ ಅಂದಾಜುಗಳಿಗೆ ಬಹಳ ಸನಿಹವಾಗಿದ್ದವು. ಪ್ರಾಥಮಿಕ ಕೊರತೆಯು ಆಯವ್ಯಯದ ಅಂದಾಜುಗಳಿಗಿಂತ ₹5,725 ಕೋಟಿಗಳಷ್ಟು, ಸುಮಾರು ಶೇಕಡಾ 36ರಷ್ಟು ಹೆಚ್ಚಾಗಿದ್ದು ವಿತ್ತೀಯ ಕೊರತೆಯು ಅಂದಾಜಿಸಿದ್ದಕ್ಕಿಂತಲೂ ಕಡಿಮೆಯಿದ್ದಿತು.

### 1.2.2 ಮಹಿಳಾ ಉದ್ದೇಶಿತ ಆಯವ್ಯಯ

ರಾಜ್ಯ ಸರ್ಕಾರವು ಮಹಿಳಾ ಉದ್ದೇಶಿತ ಆಯವ್ಯಯ ಕೋಶವನ್ನು ಸ್ಥಾಪಿಸಿದ್ದು (ಜನವರಿ 2007), 2007–08ರಿಂದ ಮಹಿಳಾ ಉದ್ದೇಶಿತ ಆಯವ್ಯಯವನ್ನು ಪ್ರಾರಂಭಿಸಿತು. ರಾಜ್ಯದ ಮಹಿಳಾ ಉದ್ದೇಶಿತ ಆಯವ್ಯಯವು ಒಟ್ಟಾರೆ ಆಯವ್ಯಯದೊಳಗೆ ಮಹಿಳೆಯರಿಗಾಗಿ ಪೂರ್ಣವಾದ ಅಥವಾ ಭಾಗಶಃ ಸೌಲಭ್ಯ ದೊರಕಿಸಿಕೊಡಲು ರೂಪಿಸಿದ ಕಾರ್ಯಕ್ರಮಗಳ ವೆಚ್ಚದ ಪ್ರಸ್ತಾವನೆಯನ್ನು ಸೂಚಿಸುತ್ತದೆ. 2014–15 ರಿಂದ 2018–19ರ ಅವಧಿಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಒಟ್ಟು ಹಂಚಿಕೆ ಮತ್ತು ಒಟ್ಟು ವೆಚ್ಚದಲ್ಲಿನ ಪ್ರವೃತ್ತಿಯನ್ನು **ನಕ್ಷೆ 1.2**ರಲ್ಲಿ ನೀಡಲಾಗಿದೆ.

**ನಕ್ಷೆ 1.2: ಒಟ್ಟು ಹಂಚಿಕೆಗೆ ಪ್ರತಿಯಾಗಿ ಒಟ್ಟು ವೆಚ್ಚದ ಪ್ರವೃತ್ತಿಗಳು**




*ಆಕರ: ಮಹಿಳಾ ಆಯವ್ಯಯ ದಾಖಲೆ*

*# 2018–19ರ ವೆಚ್ಚವು ಪರಿಷ್ಕೃತ ಅಂದಾಜಿನ ಅಂಕಿಗಳಾಗಿದ್ದು ವಾಸ್ತವವಲ್ಲ*

ಮೇಲಿನ ನಕ್ಷೆ 1.2ರಲ್ಲಿ ಗಮನಿಸಿದಂತೆ 2014–15 ಮತ್ತು 2017–18ರ ವರ್ಷಗಳನ್ನು ಹೊರತುಪಡಿಸಿ 2014–15ರಿಂದ 2018–19ರ ಸಾಲುಗಳಲ್ಲಿ ಒಟ್ಟು ವೆಚ್ಚವು ಹಂಚಿಕೆಗಿಂತ ಅಧಿಕವಾಗಿದ್ದಿತು. 2014–15ರಲ್ಲಿ ಒಟ್ಟು ಹಂಚಿಕೆಗೆ ಪ್ರತಿಯಾಗಿ ಹಂಚಿಕೆಯ ಇಳಿಕೆಯ ಅನುಪಾತವು ಶೇಕಡಾ 50ರಷ್ಟಿದ್ದದ್ದು, ಇದು 2018–19ರಲ್ಲಿ ಶೇಕಡಾ 39ಕ್ಕೆ ಇಳಿದಿದ್ದು, ಈ ಇಳಿಕೆಯ ಪ್ರವೃತ್ತಿಯು ಚಿಂತನೆಯ ವಿಷಯವಾಗಿದೆ.

2014–15ರಿಂದ 2018–19ರ ಅವಧಿಯಲ್ಲಿ 27 ಬೇಡಿಕೆಗಳಡಿಯಲ್ಲಿ ಬರುವ ಪ್ರವರ್ಗ ಎ[2] ಮತ್ತು ಬಿ[3] ಯೋಜನೆಗಳ ಒಟ್ಟು ಅವಕಾಶದಲ್ಲಿನ ಪ್ರವೃತ್ತಿಯನ್ನು **ನಕ್ಷೆ 1.3**ರಲ್ಲಿ ನೀಡಲಾಗಿದೆ.

**ನಕ್ಷೆ 1.3: ವರ್ಗ ಎ ಮತ್ತು ವರ್ಗ ಬಿ ಯೋಜನೆಗಳಲ್ಲಿ ಹಂಚಿಕೆ ಮತ್ತು ವೆಚ್ಚ ಪ್ರವೃತ್ತಿ**




* *2018–19ರ ವೆಚ್ಚದ ಅಂಕಿಗಳು ಪರಿಷ್ಕೃತ ಅಂದಾಜಿನ ಅಂಕಿಗಳಾಗಿದ್ದು ವಾಸ್ತವವಲ್ಲ.*

---

[2] **ಶೇಕಡಾ 100ರಷ್ಟು ಮಹಿಳಾ ಫಲಾನುಭವಿಗಳನ್ನೊಳಗೊಂಡ ಯೋಜನೆಗಳಿಗೆ ಆಯವ್ಯಯ ಹಂಚಿಕೆ.**

[3] **ಕನಿಷ್ಠ ಶೇಕಡಾ 30ರಷ್ಟು ಮಹಿಳಾ ಫಲಾನುಭವಿಗಳನ್ನೊಳಗೊಂಡ ಯೋಜನೆಗಳಿಗೆ ಆಯವ್ಯಯ ಹಂಚಿಕೆ.**

**ನಕ್ಷೆ 1.3**ರಲ್ಲಿ ಗಮನಸಿದಂತೆ ಎಲ್ಲ ನಾಲ್ಕು ವರ್ಷಗಳಲ್ಲಿ ವರ್ಗ 'ಎ' ಯೋಜನೆಗಳ ಹಂಚಿಕೆಯಲ್ಲಿ ಯಾವುದೇ ಬದಲಾವಣೆಯಿರಲಿಲ್ಲ. 2018–19ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಹಂಚಿಕೆಯಲ್ಲಿ ಶೇಕಡ 21ರಷ್ಟು ಇಳಿಕೆಯಾಗಿದ್ದು ಇದು ಆಶ್ರಯ ಬಸವ ವಸತಿ, ಸ್ತ್ರೀಶಕ್ತಿ, ಸಬಲ ಮುಂತಾದ ಯೋಜನೆಗಳಿಗೆ ಹಂಚಿಕೆಯಲ್ಲಿ ತೀವ್ರ ಇಳಿಕೆಯಿಂದಾಗಿತ್ತು. ಬಿ ವರ್ಗದಲ್ಲಿ ಹಂಚಿಕೆಯು ಹೆಚ್ಚಾಯಿತಾದರೂ ಏರಿಕೆಯು ಅಲ್ಪವಾಗಿದ್ದಿತು (ಶೇಕಡಾ ಎರಡು). 2017–18ರಲ್ಲಿ ವರ್ಗ ಎ ಮತ್ತು ವರ್ಗ ಬಿ ಗಳಡಿ ಯೋಜನೆಗಳ ಸಂಖ್ಯೆಯು ಕ್ರಮವಾಗಿ 58 ಮತ್ತು 666ರಷ್ಟಿದ್ದು, 2018–19ರಲ್ಲಿ 64 ಮತ್ತು 701ಕ್ಕೆ ಏರಿಕೆಯಾಯಿತು. ಮಹಿಳಾ ಆಯವ್ಯಯ ದಾಖಲೆಯು ಪ್ರತಿ ಯೋಜನೆಯ ಉದ್ದೇಶವನ್ನೊಳಗೊಂಡಂತೆ ವಿವರಣಾತ್ಮಕ ಟಿಪ್ಪಣಿಯನ್ನು ಸಹ ನೀಡುತ್ತದೆ.

'ಎ' ವರ್ಗಗಳಡಿಯ ಎರಡು ಯೋಜನೆಗಳ ವಿಶ್ಲೇಷಣೆಯನ್ನು ಕೆಳಗೆ ನೀಡಲಾಗಿದೆ.

### (ಎ) ವಿದ್ಯಾ ವಿಕಾಸ ಯೋಜನೆ (ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಶುಲ್ಕದ ಮರುಪಾವತಿ)

ಮಹಿಳೆಯರ ಸ್ಥಿತಿಗತಿಗಳನ್ನು ನಿರ್ಧರಣೆ ಮಾಡುವಲ್ಲಿ ವಿದ್ಯಾಭ್ಯಾಸವು ಒಂದು ಅಭಿವೃದ್ಧಿ ಸೂಚಕವಾಗಿದೆ. 2018–19ರಲ್ಲಿ ಶಿಕ್ಷಣದಡಿ ಹಂಚಿಕೆಯು ₹24.77 ಕೋಟಿಗಳಿದ್ದು ಇದು ಎ ವರ್ಗದಡಿಯ ಯೋಜನೆಗಳ ಒಟ್ಟು ಹಂಚಿಕೆಯ (₹4,402.02 ಕೋಟಿ) ಶೇಕಡ 0.56ರಷ್ಟಿತ್ತು. ಹಂಚಿಕೆಯು ಕೆಳಗಿನ ಯೋಜನೆಗಳಿಗೆ ಸಂಬಂಧಿಸಿತ್ತು.

- ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆ;
- ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ;
- ಮಹಿಳಾ ಮಹಾವಿದ್ಯಾಲಯ, ಮೈಸೂರು: ಮತ್ತು
- ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಶುಲ್ಕದ ಮರುಪಾವತಿ

ಸರ್ಕಾರಿ ಕಾಲೇಜುಗಳಲ್ಲಿ ಶುಲ್ಕದ ಮರುಪಾವತಿಯ ವಿವರವಾದ ಪರಿಶೀಲನೆಯು ಕೆಳಕಂಡ ಅಂಶಗಳನ್ನು ಪ್ರಕಟಪಡಿಸಿದೆ:

ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಪದವಿಪೂರ್ವ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ಬಾಲಕಿಯರನ್ನು ಪ್ರೋತ್ಸಾಹಿಸಲು ಅವರ ಬೋಧನಾ ಶುಲ್ಕವನ್ನು ಸರ್ಕಾರದಿಂದ ವಿದ್ಯಾವಿಕಾಸ ಯೋಜನೆಯಡಿ ಮರುಪಾವತಿಸಲಾಗುತ್ತದೆ. ಯೋಜನೆಯ ಆರ್ಥಿಕ ಹಾಗೂ ಭೌತಿಕ ಗುರಿಗಳು, ಸಾಧನೆ ಮತ್ತು ಕೊರತೆಯನ್ನು **ಕೋಷ್ಟಕ 1.5** ಮತ್ತು **ಕೋಷ್ಟಕ 1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5: ಆರ್ಥಿಕ ಗುರಿ**

**(₹ ಕೋಟಿಗಳಲ್ಲಿ)**

| ವರ್ಷ | ಆಯವ್ಯಯ | ಬಿಡುಗಡೆಗಳು | ವೆಚ್ಚ | ಉಳಿತಾಯ |
|---|---|---|---|---|
| 2014–15 | 1.99 | 1.99 | 1.28 | 0.71 |
| 2015–16 | 10.00 | 4.60 | 2.22 | 2.38 |
| 2016–17 | 5.00 | 5.00 | 4.52 | 0.48 |
| 2017–18 | 6.50 | 6.50 | 5.18 | 1.32 |
| 2018–19 | 6.50 | 5.60 | 5.12 | 0.48 |
| ಒಟ್ಟು | 29.99 | 23.69 | 18.32 | 5.37 |

**ಕೋಷ್ಟಕ 1.6: ನಿಗದಿಪಡಿಸಿದ್ದ ಮತ್ತು ಸಾಧಿಸಿದ ಭೌತಿಕ ಸಾಧನೆ**

| ವರ್ಷ | ಪ್ರಯೋಜನ ಪಡೆದ ವಿದ್ಯಾರ್ಥಿನಿಯರ ಸಂಖ್ಯೆ | | ಕೊರತೆ | ಕೊರತೆಯ ಶೇಕಡಾವಾರು |
|---|---|---|---|---|
| | ಗುರಿ | ಸಾಧನೆ | | |
| 2014–15 | 42,361 | 28,057 | 14,304 | 34 |
| 2015–16 | 56,727 | 48,768 | 7,959 | 14 |
| 2016–17 | 1,09,650 | 99,122 | 10,528 | 10 |
| 2017–18 | 1,15,779 | 1,13,596 | 2,183 | 2 |
| 2018–19 | 1,15,487 | 1,12,377 | 3,110 | 3 |

2014–15 ಮತ್ತು 2015–16ರಲ್ಲಿ ಆರ್ಥಿಕ ಮತ್ತು ಭೌತಿಕ ಪ್ರಗತಿಯಲ್ಲಿನ ಕೊರತೆಗೆ ಇಲಾಖೆಯು ವಿದ್ಯಾರ್ಥಿನಿಯರ ಕಡಿಮೆ ದಾಖಲಾತಿ ಹಾಗೂ ಪರಿಷ್ಕೃತ ಕ್ರಿಯಾ ಯೋಜನೆಯು ಅನುಮೋದನೆ ಯಾಗದಿದ್ದುದೇ ಕಾರಣವೆಂದು ಹೇಳಿತು. ಅದಲ್ಲದೇ 2016–17 ಮತ್ತು 2018–19ರಲ್ಲಿ ಖಜಾನೆ–2ರಲ್ಲಿನ ತಾಂತ್ರಿಕ ನ್ಯೂನತೆಗಳಿಂದ ಕೆಲವು ಶಾಲೆಗಳು ಅನುದಾನವನ್ನು ವೆಚ್ಚ ಮಾಡಲಾಗದಿದ್ದುದರಿಂದ ಗುರಿ ಸಾಧನೆಯಲ್ಲಿ ಕೊರತೆಯುಂಟಾಯಿತೆಂದೂ ಇಲಾಖೆಯು ಹೇಳಿತು. ಈ ಕೆಳಕಂಡ ಕಾರಣಗಳಿಂದ ಉತ್ತರವು ಒಪ್ಪಲರ್ಹವಲ್ಲ.

1. 2018–19ರಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಮೊದಲನೇ ಪಿಯುಸಿ ಹಾಗೂ ದ್ವಿತೀಯ ಪಿಯುಸಿ ತರಗತಿಗಳಲ್ಲಿ ಒಟ್ಟು 1.88 ಲಕ್ಷ ವಿದ್ಯಾರ್ಥಿನಿಯರಿದ್ದು, ಇದು ಯೋಜನೆಯಡಿಯಲ್ಲಿ ನಿಗದಿಪಡಿಸಿದ ಗುರಿಗಿಂತ ಸಾಕಷ್ಟು ಹೆಚ್ಚಾಗಿದ್ದಿತು.
2. ವಿದ್ಯಾರ್ಥಿನಿಯರಿಗೆ ಯೋಜನೆಯ ಲಾಭವನ್ನು ತಲುಪಿಸುವಲ್ಲಿನ ವಿಫಲತೆಗೆ ಸಮರ್ಥನೆಯಾಗಿ ಖಜಾನೆ–2ರಲ್ಲಿನ ತಾಂತ್ರಿಕ ನ್ಯೂನತೆಗಳನ್ನು ತೋರಿಸಲಾಗುವುದಿಲ್ಲ.

ಖಜಾನೆ–2ರ ಮೂಲಕ ಬೋಧನಾ ಶುಲ್ಕದ ಮರುಪಾವತಿಯನ್ನು ಪೂರ್ಣಗೊಳಿಸುವುದರೊಂದಿಗೆ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಶೇಕಡಾ ನೂರರಷ್ಟು ಸಾಧಿಸುವಲ್ಲಿನ ಅಡೆತಡೆಗಳನ್ನು ಮುಂಬರುವ ವರ್ಷಗಳಲ್ಲಿ ಸಂಪೂರ್ಣವಾಗಿ ನಿವಾರಿಸಲಾಗುವುದೆಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020).

### (ಬಿ) ಅಂಗವಿಕಲ ಮಹಿಳೆಯರ ವಸತಿನಿಲಯ

ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯು ಮಹಿಳಾ ಆಯವ್ಯಯದಡಿಯಿರುವ ಏಕಮಾತ್ರ ಯೋಜನೆಯಾದ 'ಅಂಗವಿಕಲ ಮಹಿಳೆಯರ ವಸತಿನಿಲಯ' ವನ್ನು ಅನುಷ್ಠಾನಗೊಳಿಸುತ್ತಿದೆ. ಅಂಗವಿಕಲ ಮಹಿಳಾ ಉದ್ಯೋಗಿಗಳು, ತರಬೇತಿಯ ಶಿಕ್ಷಾರ್ಥಿಗಳು ಮತ್ತು ವಿದ್ಯಾರ್ಥಿಗಳಿಗೆ ವಸತಿನಿಲಯದ ಸೌಲಭ್ಯಗಳನ್ನು ಒದಗಿಸುವ ಮೂಲಕ ಅಂಗವಿಕಲ ಮಹಿಳೆಯವರಿಗೆ ಶಿಕ್ಷಣ ಮತ್ತು ಉದ್ಯೋಗವನ್ನು ಮುಂದುವರೆಸಲು ಪ್ರೋತ್ಸಾಹಿಸುವುದೇ ಈ ಯೋಜನೆಯ ಉದ್ದೇಶವಾಗಿದೆ. ವಸತಿನಿಲಯದಲ್ಲಿ ಆರ್ಥಿಕವಾಗಿ ಹಿಂದುಳಿದ ಓದುತ್ತಿರುವ ಮತ್ತು ತರಬೇತಿ ಪಡೆಯುತ್ತಿರುವ ಅಂಗವಿಕಲ ವಿದ್ಯಾರ್ಥಿನಿಯರಿಗೆ ಉಚಿತ ಊಟ ಮತ್ತು ವಸತಿಯನ್ನು ಕಲ್ಪಿಸುತ್ತಿದ್ದು ಉದ್ಯೋಗಸ್ಥ ಮಹಿಳೆಯರು ವಸತಿ ನಿಲಯದಲ್ಲಿ ಪ್ರವೇಶ ಪಡೆದಲ್ಲಿ ಊಟದ ವೆಚ್ಚವನ್ನು ಪಾವತಿಸಬೇಕಾಗುತ್ತದೆ. ಪ್ರಸ್ತುತ ರಾಜ್ಯದ 23 ಜಿಲ್ಲೆಗಳಲ್ಲಿ ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುತ್ತಿರುವ 26 ವಸತಿನಿಲಯಗಳಿವೆ. ಯೋಜನೆಯ ಭೌತಿಕ ಮತ್ತು ಆರ್ಥಿಕ ಪ್ರಗತಿ, ಸಾಧನೆ ಮತ್ತು ಕೊರತೆಯನ್ನು **ಕೋಷ್ಟಕ 1.7** ಮತ್ತು **ಕೋಷ್ಟಕ 1.8**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.7: ನಿಗದಿಪಡಿಸಿದ ಭೌತಿಕ ಗುರಿಗಳು ಮತ್ತು ಸಾಧನೆ**

| ವರ್ಷ | ಒಳಗೊಳ್ಳಬೇಕಾದ ಮಹಿಳೆಯರ ಗುರಿ | ಒಳಗೊಂಡ ನೈಜ ಮಹಿಳಾ ಫಲಾನುಭವಿಗಳು | ಕೊರತೆ/ಹೆಚ್ಚಳ | ಕೊರತೆಯ ಶೇಕಡಾವಾರು |
|---|---|---|---|---|
| 2014–15 | 1,350 | 965 | 385 | 29 |
| 2015–16 | 1,350 | 1,140 | 210 | 16 |
| 2016–17 | 1,350 | 1,046 | 304 | 23 |
| 2017–18 | 1,350 | 886 | 464 | 34 |
| 2018–19 | 1,350 | 1,009 | 341 | 25 |

**ಕೋಷ್ಟಕ 1.8: ಆರ್ಥಿಕ ಗುರಿ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ | ಬಿಡುಗಡೆಗಳು | ವೆಚ್ಚ | ಉಳಿತಾಯ |
|---|---|---|---|---|
| 2014–15 | 300.00 | 298.84 | 298.84 | 0.00 |
| 2015–16 | 458.00 | 400.00 | 397.27 | 2.73 |
| 2016–17 | 458.00 | 321.54 | 321.54 | 0.00 |
| 2017–18 | 350.00 | 350.00 | 309.28 | 40.72 |
| 2018–19 | 350.00 | 350.00 | 313.32 | 36.68 |

ಮೇಲಿನ ಕೋಷ್ಟಕದಿಂದ, 2014–15ರಿಂದ 2018–19ರ ಅವಧಿಯಲ್ಲಿ ಒಳಗೊಳ್ಳಬೇಕಾಗಿರುವ ಅಂಗವಿಕಲ ಮಹಿಳೆಯರ ಗುರಿಯಲ್ಲಿ ಬದಲಾವಣೆಯಾಗದಿದ್ದರೂ, ಆಯವ್ಯಯ ಹಂಚಿಕೆಯನ್ನು ಕಡಿಮೆಗೊಳಿಸಲಾಗಿತ್ತು. ಭೌತಿಕ ಗುರಿಯ ಸಾಧನೆಯಲ್ಲಿನ ಕೊರತೆಗೆ, ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ಉಚಿತ ವಸತಿನಿಲಯಗಳ ಲಭ್ಯತೆ ಮತ್ತು ಅನೇಕ ಜಿಲ್ಲೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗಾವಕಾಶಗಳ ಮಿತಿಯೇ ಕಾರಣವೆಂದು ಇಲಾಖೆಯು ಹೇಳಿತು. ತಾರ್ಕಿಕವಲ್ಲದ ಗುರಿಗಳನ್ನು ನಿಗದಿಪಡಿಸಬಾರದಾದ್ದರಿಂದ ಉತ್ತರವು ಒಪ್ಪಲರ್ಹವಲ್ಲ.

### 1.2.3 ಆಯವ್ಯಯದ ಪ್ರಮುಖ ಕಾರ್ಯನೀತಿ ಉಪಕ್ರಮಗಳು

2018–19ರ ಆಯವ್ಯಯದಲ್ಲಿ ಸರ್ಕಾರವು ಪ್ರಮುಖ ಕಾರ್ಯನೀತಿ ಉಪಕ್ರಮಗಳನ್ನು ಘೋಷಿಸಿತು (ಫೆಬ್ರವರಿ 2018 ಮತ್ತು ಜುಲೈ 2018). 2019–20ರಲ್ಲಿ ಆಯವ್ಯಯ ದಾಖಲೆಗಳೊಂದಿಗೆ ಕ್ರಮ ಕೈಗೊಂಡ ವರದಿಯೊಂದನ್ನು ಮಂಡಿಸಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತು ಸಾರಿಗೆ ಇಲಾಖೆಗಳಲ್ಲಿ ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ ಲೆಕ್ಕಪರಿಶೋಧನೆಯು ಪರಿಶೀಲನೆಯನ್ನು ನಡೆಸಿತು. ಈ ಮೂರು ಇಲಾಖೆಗಳಲ್ಲಿ ಸರ್ಕಾರವು ಒಟ್ಟು 35 ಹೊಸ ಕಾರ್ಯನೀತಿಗಳನ್ನು ಆಲೋಚಿಸಿತು. ಪ್ರಮುಖ ಕಾರ್ಯನೀತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡ ಕ್ರಮಗಳ ಸಾರಾಂಶವನ್ನು **ಅನುಬಂಧ 1.5**ರಲ್ಲಿ ನೀಡಲಾಗಿದೆ.

35 ಉಪಕ್ರಮಗಳಲ್ಲಿ 22 ಇನ್ನೂ ಪ್ರಾರಂಭಿಕ ಹಂತದಲ್ಲಿದ್ದವು. ಮೂರು ಉಪಕ್ರಮಗಳನ್ನು ಕೈಬಿಡಲಾಗಿದ್ದು ಎರಡು ಉಪಕ್ರಮಗಳ ವ್ಯಾಪ್ತಿಯನ್ನು ಬದಲಾಯಿಸಲಾಗಿದ್ದು, ಐದರ ಬಗ್ಗೆ ಇನ್ನೂ ಕ್ರಮ ಕೈಗೊಳ್ಳಬೇಕಿದೆ. ಆದ್ದರಿಂದ ಕೇವಲ ಮೂರು ಉಪಕ್ರಮಗಳಲ್ಲಿ ಪ್ರಗತಿಯಾಗಿತ್ತು.

ಅವುಗಳ ಪ್ರಾಮುಖ್ಯತೆಯ ಆಧಾರದ ಮೇಲೆ ಅನುಷ್ಠಾನಗೊಳಿಸಬಹುದಾಗಿದ್ದ ಆದರೆ ಕೈಬಿಡಲಾದ ಅಥವಾ ಪ್ರಾರಂಭಿಕ ಹಂತದಲ್ಲಿರುವ ಉಪಕ್ರಮಗಳ ವಿವರಗಳನ್ನು ಕೆಳಗೆ ನೀಡಲಾಗಿದೆ:

- ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸಾರಿಗೆ ನಿಗಮಗಳು 13,000 ಯುವಜನರಿಗೆ ಚಾಲಕ/ ಮೆಕ್ಯಾನಿಕ್‌ಗಳ ತರಬೇತಿಯನ್ನು ನೀಡಬೇಕಿತ್ತು. ಆದರೆ, ಪ್ರಸ್ತಾವನೆಯು ಇನ್ನೂ ಕಾರ್ಯಗತಿಯಲ್ಲಿದೆ;
- ಕರ್ನಾಟಕ ರಾಜ್ಯ ಹಣಕಾಸು ನಿಗಮ ಮತ್ತು ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ಲಿಮಿಟೆಡ್ ಸಹಯೋಗದೊಂದಿಗೆ ಭಾರಿ ವಾಹನಗಳ ಚಾಲಕ ತರಬೇತಿ ಸಂಸ್ಥೆಗಳಿಂದ ಬೆಂಗಳೂರು ಮತ್ತು ಧಾರವಾಡಗಳಲ್ಲಿ 200 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಭಾರಿ ವಾಹನ ಚಾಲನೆಯಲ್ಲಿ ತರಬೇತಿ ನೀಡುವುದರೊಂದಿಗೆ, ವಾಹನಗಳನ್ನು ಖರೀದಿಸಲು ಸಾಲದ ಮೇಲೆ ಸಹಾಯಧನವನ್ನು ನೀಡುವ ಯೋಜನೆಯು ಅನುಷ್ಠಾನಗೊಳ್ಳಬೇಕಿತ್ತು. ಪ್ರಸ್ತಾವನೆಯು ಇನ್ನೂ ಕಾರ್ಯಗತಿಯಲ್ಲಿದೆ, ಮತ್ತು
- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಮಕ್ಕಳ ಸುರಕ್ಷತೆಯು ಸರ್ಕಾರದ ಆದ್ಯತೆಯಾಗಿದ್ದು ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲು ಪ್ರಸ್ತಾಪಿಸಿತ್ತು. ಆದಾಗ್ಯೂ ಸಿಸಿಟಿವಿಗಳ ಬದಲಾಗಿ ಮಕ್ಕಳಿಗೆ ಕಂಪ್ಯೂಟರ್ ಟ್ಯಾಬ್ಲೆಟ್‌ಗಳನ್ನೂ ಖರೀದಿಸಲಾಗಿತ್ತು.

## 1.3 ರಾಜ್ಯದಲ್ಲಿ ರಾಜಸ್ವದ ಮೂಲಗಳು

### 1.3.1 ವಾರ್ಷಿಕ ಹಣಕಾಸು ಲೆಕ್ಕಗಳ ಅನ್ವಯ ರಾಜ್ಯದಲ್ಲಿ ರಾಜಸ್ವದ ಮೂಲಗಳು

ರಾಜಸ್ವ ಸ್ವೀಕೃತಿಗಳು ತೆರಿಗೆ ಆದಾಯಗಳು, ತೆರಿಗೆಯೇತರ ಆದಾಯಗಳು, ಕೇಂದ್ರ ಸುಂಕ ತೆರಿಗೆಗಳಲ್ಲಿನ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ನೀಡುವ ಸಹಾಯಾನುದಾನ ಮತ್ತು ವಂತಿಗೆಗಳನ್ನು ಹೊಂದಿದೆ. ಬಂಡವಾಳ ಸ್ವೀಕೃತಿಯು ಹೂಡಿಕೆಗಳ ಹಿಂಪಡೆತ, ಸಾಲ ಮತ್ತು ಮುಂಗಡಗಳ ವಸೂಲಿ, ಆಂತರಿಕ ಮೂಲಗಳಿಂದ (ಮಾರುಕಟ್ಟೆ ಸಾಲಗಳು, ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕುಗಳಿಂದ) ಪಡೆದ ಸಮಾಲೋಚಿತ ಸಾಲಗಳು, ಋಣ ಸ್ವೀಕೃತಿಗಳು ಮತ್ತು ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮುಂಗಡಗಳು ಮುಂತಾದ ಇತರ ಬಂಡವಾಳ ಸ್ವೀಕೃತಿಗಳನ್ನು ಹೊಂದಿದೆ. ಜೊತೆಗೆ ಸಾರ್ವಜನಿಕ ಲೆಕ್ಕದಲ್ಲಿನ ನಿವ್ವಳ ಸ್ವೀಕೃತಿಗಳನ್ನೂ ಸಹ ಸರ್ಕಾರವು ತನ್ನ ಕೊರತೆಗಳನ್ನು ತುಂಬಿಕೊಳ್ಳಲು ಬಳಸಿಕೊಳ್ಳುತ್ತದೆ. ಮುಂದುವರಿದು, **ನಕ್ಷೆ 1.4**ರಲ್ಲಿ 2014–15ರಿಂದ 2018–19ರ ಅವಧಿಯಲ್ಲಿ ಸ್ವೀಕೃತಿಗಳ ವಿವಿಧ ಅಂಗಗಳ ಪ್ರವೃತ್ತಿಯನ್ನು ತೋರಿಸಲಾಗಿದೆ. **ನಕ್ಷೆ 1.5**ರಲ್ಲಿ 2018–19ನೇ ಸಾಲಿನಲ್ಲಿ ರಾಜ್ಯದ ಸಂಪನ್ಮೂಲಗಳ ವಿವಿಧ ಅಂಗಗಳ ಮತ್ತು ಉಪ ಅಂಗಗಳನ್ನು ತೋರಿಸಲಾಗಿದೆ.

**ನಕ್ಷೆ 1.4: 2014–15ರಿಂದ 2018–19ರವರೆಗೆ ಸ್ವೀಕೃತಿಗಳ ಪ್ರವೃತ್ತಿ**




*# ಸಾದಿಲ್ವಾರು ನಿಧಿ ಸ್ವೀಕೃತಿಗಳನ್ನು ಹೊರತುಪಡಿಸಿ.*

**ನಕ್ಷೆ 1.5: ಸಂಪನ್ಮೂಲಗಳ ಅಂಗಗಳು ಮತ್ತು ಉಪ ಅಂಗಗಳು**




*ಆಕರ: ಹಣಕಾಸು ಲೆಕ್ಕಗಳು*

ಒಟ್ಟಾರೆ ಸ್ವೀಕೃತಿಗಳು (ಸಾದಿಲ್ವಾರು ನಿಧಿ ಸ್ವೀಕೃತಿಗಳನ್ನು ಹೊರತುಪಡಿಸಿ) 2014–15ರಲ್ಲಿದ್ದ ₹1,36,765 ಕೋಟಿಯಿಂದ 2018–19ರಲ್ಲಿ ₹2,10,349 ಕೋಟಿಗೆ ಏರಿದ್ದು, ಹೆಚ್ಚಳವು ಶೇಕಡ 54ರಷ್ಟಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ (₹1,78,342 ಕೋಟಿ), 2018–19ರಲ್ಲಿ ಸ್ವೀಕೃತಿಗಳು ₹32,008 ಕೋಟಿಯಷ್ಟು ಹೆಚ್ಚಳಗೊಂಡಿತ್ತು (ಶೇಕಡ 18). 2018–19ರಲ್ಲಿ ಒಟ್ಟಾರೆ ಸ್ವೀಕೃತಿಗಳಲ್ಲಿ ರಾಜಸ್ವ ಸ್ವೀಕೃತಿಯ ಪಾಲು ಶೇಕಡ 78ರಷ್ಟಿದ್ದು, ಮುಂದಿನ ವಿವರಗಳನ್ನು **ಕಂಡಿಕೆ 1.4**ರಲ್ಲಿ ಒದಗಿಸಲಾಗಿದೆ.

ಬಂಡವಾಳ ಸ್ವೀಕೃತಿಗಳು 2014–15ರಲ್ಲಿನ ₹21,968 ಕೋಟಿಯಿಂದ 2018–19ರಲ್ಲಿ ₹41,939 ಕೋಟಿಗೆ ಏರಿ ಶೇಕಡ 91ರಷ್ಟು ಹೆಚ್ಚಳವಾಗಿದ್ದು ಇದು ಮುಖ್ಯವಾಗಿ ಸಾರ್ವಜನಿಕ ಋಣದಲ್ಲಿನ ಶೇಕಡ 92ರಷ್ಟು ಹೆಚ್ಚಳದಿಂದ ಉಂಟಾಗಿದೆ. 2018–19ರಲ್ಲಿ ಬಂಡವಾಳ ಸ್ವೀಕೃತಿಗಳು ಒಟ್ಟು ಸ್ವೀಕೃತಿಗಳ ಶೇಕಡ 20ರಷ್ಟಿದ್ದವು. ಬಂಡವಾಳ ಸ್ವೀಕೃತಿಗಳ ಮುಖ್ಯ ಅಂಗವಾದ ಸಾರ್ವಜನಿಕ ಋಣ ಸ್ವೀಕೃತಿಗಳು ಹಿಂದಿನ ವರ್ಷಕ್ಕಿಂತ ₹16,792 ಕೋಟಿಗಳಷ್ಟು ಏರಿಕೆಯಾಗಿತ್ತು (ಶೇಕಡ 67). ಆಂತರಿಕ ಋಣ ಸ್ವೀಕೃತಿಗಳ ವೃದ್ಧಿಯು ಶೇಕಡ 75ರಷ್ಟು ಏರಿಕೆಯಾಗಿತ್ತು. ಸಾಲಗಳು ಹಾಗೂ ಮುಂಗಡಗಳು ಹಿಂದಿನ ವರ್ಷಕ್ಕಿಂತ ಶೇಕಡ 26ರಷ್ಟು ಕಡಿಮೆಯಾಗಿತ್ತು. 2018–19ರಲ್ಲಿ ಸಾಲಗಳ ವಸೂಲಿ/ಆಸ್ತಿಗಳ ಮಾರಾಟದಲ್ಲಿ ಕಡಿಮೆಯಾದ್ದರಿಂದ ಋಣೇತರ ಬಂಡವಾಳ ಸ್ವೀಕೃತಿಗಳ ವೃದ್ಧಿಯಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಶೇಕಡ 82ರಷ್ಟು ಇಳಿಕೆಯನ್ನು ತೋರಿಸಿದ್ದವು.

ಸಾರ್ವಜನಿಕ ಹಣಕ್ಕೆ ಸರ್ಕಾರವು ಬ್ಯಾಂಕರ್/ಟ್ರಸ್ಟಿಯಾಗಿ ಕಾರ್ಯನಿರ್ವಹಿಸುವಂತಹ ಸ್ವೀಕೃತಿಗಳಿಗೆ ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು ಸಂಬಂಧಿಸಿವೆ. 2014–15 ರಿಂದ 2018–19ರ ಅವಧಿಯಲ್ಲಿ ಒಟ್ಟು ಸ್ವೀಕೃತಿಗಳಿಗೆ ಅದು ಸರಾಸರಿ ಶೇಕಡ ಐದರಷ್ಟಿತ್ತು. ನಿವ್ವಳ ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು 2014–15ರಲ್ಲಿ

₹10,655 ಕೋಟಿ ಇದ್ದುದು 2016–17ರಲ್ಲಿ ₹12,164 ಕೋಟಿಗೆ ಏರಿದ್ದು 2017–18 ಮತ್ತು 2018–19ರಲ್ಲಿ ಇಳಿಕೆಯ ಪ್ರವೃತ್ತಿಯನ್ನು ತೋರಿಸಿತು. 2018–19ರಲ್ಲಿ ₹3,431 ಕೊಟಿಗಳಿದ್ದು ಅತ್ಯಂತ ಕಡಿಮೆಯಿದ್ದಿತು.

## 1.4 ರಾಜಸ್ವ ಸ್ವೀಕೃತಿಗಳು

ಕರ್ನಾಟಕ ಸರ್ಕಾರದ ವಿತ್ತಪರಿಸ್ಥಿತಿಯು ಬಹುಪಾಲು ರಾಜಸ್ವದೆಡೆಯಿಂದ ಪ್ರಭಾವಿತವಾಗಿದೆ. 2014–15ರಿಂದ 2018–19ರ ಅವಧಿಯಲ್ಲಿ ಸರಾಸರಿ ಶೇಕಡ 67ರಷ್ಟು ಆದಾಯವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. ಉಳಿದ ಭಾಗ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಮತ್ತು ಸಹಾಯಾನುದಾನ ಮತ್ತು ವಂತಿಗೆಗಳ ರೂಪದಲ್ಲಿ ಕೇಂದ್ರ ಸರ್ಕಾರದಿಂದ ವರ್ಗಾವಣೆಯಾಗಿದೆ.

ತೆರಿಗೆಯ ವಿನ್ಯಾಸದ ಪುನರ್ವ್ಯವಸ್ಥೆ ಮತ್ತು ಸರಳೀಕರಣದ ಜೊತೆಗೆ ತೆರಿಗೆ ಸಲ್ಲಿಕೆಗಳ ಕ್ರಿಯೆಯನ್ನು ಸುಲಭಗೊಳಿಸಿರುವುದು, ವಿದ್ಯುನ್ಮಾನ ತೆರಿಗೆ ಪಾವತಿ ಮತ್ತು ಎಲ್ಲಿ ಬೇಕಾದರೂ ನೋಂದಣಿ ಯಂತಹವುಗಳಿಂದ ವಿವಿಧ ತೆರಿಗೆಗಳ ಸಂಪನ್ಮೂಲ ಸಂಗ್ರಹವು ಪರಿಣಾಮಕಾರಿಯಾಗಿ ತೆರಿಗೆ ವಸೂಲಿಯಲ್ಲಿ ಸತತವಾಗಿ ಉತ್ತಮ ಕಾರ್ಯವನ್ನು ಖಚಿತಪಡಿಸಿದೆ. ತೆರಿಗೆ ಆದಾಯವು ಸುಸಂಗತವಾಗಿ ಏರುತ್ತಿದ್ದರೂ ಅದು 2014–15ರಿಂದ 2018–19ರಲ್ಲಿ ರಾಜಸ್ವ ಸ್ವೀಕೃತಿಯ ಶತಾಂಶವಾಗಿ 67ರಿಂದ 59ಕ್ಕೆ ಇಳಿಸಿದೆ. ಇನ್ನೊಂದೆಡೆ ಕರ್ನಾಟಕ ಸರ್ಕಾರವು ತೆರಿಗೆಯೇತರ ಆದಾಯ ಸಂಗ್ರಹವನ್ನು ಉತ್ತಮ ಪಡಿಸಿಲ್ಲವಾದ್ದರಿಂದ ಅದು 2014–15 ರಿಂದ 2018–19ರ ಅವಧಿಯಲ್ಲಿ ಶೇಕಡ 4ರಿಂದ 5ರ ನಡುವೆಯೇ ಇದೆ. ಇದನ್ನು **ಕಂಡಿಕೆ 1.4.1.3**ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.

2014–15ರಿಂದ 2018–19ರ ಅವಧಿಯಲ್ಲಿ ರಾಒಆಂಉಕ್ಕೆ ಸಾಪೇಕ್ಷವಾಗಿ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಯನ್ನು **ಅನುಬಂಧ 1.4**ರಲ್ಲಿ ನೀಡಲಾಗಿದೆ.

ಅನುಬಂಧದಿಂದ ಗಮನಿಸಿದಂತೆ,

- ರಾಜಸ್ವ ಪ್ಲವನತೆಯು[4] ಕಳೆದ ಐದು ವರ್ಷಗಳಲ್ಲಿ 0.71 ಮತ್ತು 1.96ರ ನಡುವೆ ಇದ್ದಿತು.
- ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವು 2014–15ರಲ್ಲಿ ಶೇಕಡಾ 16.31 ಇದ್ದದ್ದು 2018–19ರಲ್ಲಿ 12.23ಕ್ಕೆ ಇಳಿಯಿತು. ಮತ್ತು
- ತೆರಿಗೆ ರಾಜಸ್ವದಲ್ಲಿನ ವೃದ್ಧಿಯಿಂದ ಮತ್ತು ರಾಒಆಂಉದ ಮೂಲ ಮತ್ತು ಕಾರ್ಯವಿಧಾನದಲ್ಲಿನ ಬದಲಾವಣೆಯಿಂದ ರಾಜ್ಯದ ಸ್ವಂತ ತೆರಿಗೆ ಹಾಗೂ ರಾಒಆಂಉದ ಪ್ಲವನತೆಯು 2018–19ರಲ್ಲಿ ದಿಢೀರ್ ಏರಿಕೆಯನ್ನು ತೋರಿಸಿತು (1.78) ಇದು 2014–15ರಲ್ಲಿ 1.03, 2015–16ರಲ್ಲಿ 0.53, 2016–17ರಲ್ಲಿ 0.93, 2017–18ರಲ್ಲಿ ಅತ್ಯಂತ ಕನಿಷ್ಠವಾಗಿ 0.34ರಷ್ಟಿತ್ತು.

**ನಕ್ಷೆ 1.6ರಲ್ಲಿ** ರಾಜಸ್ವ ಸ್ವೀಕೃತಿಗಳ ಸಂಯೋಜನೆಯನ್ನು ಮತ್ತು **ನಕ್ಷೆ 1.7** ರಾಒಆಂಉ ಮತ್ತು ಒಟ್ಟು ರಾಜಸ್ವ ಸ್ವೀಕೃತಿಗಳಿಗೆ ಹೋಲಿಸಿದಂತೆ ವೃದ್ಧಿಯ ದರವನ್ನು ತೋರಿಸುತ್ತದೆ ಮತ್ತು **ನಕ್ಷೆ 1.8** ಪ್ಲವನತೆಯ ಅನುಪಾತಗಳ ಪ್ರವೃತ್ತಿಯನ್ನು ಬಿಂಬಿಸುತ್ತದೆ.

---

[4] ಪ್ಲವನತೆಯ ಅನುಪಾತವು ಮೂಲ ಅಸ್ಥಿರತೆಯ ಬದಲಾವಣೆಗೆ ಸಂಬಂಧಿಸಿದಂತೆ ವಿತ್ತೀಯ ವ್ಯತ್ಯಯದ ಸ್ಥಿತಿಸ್ಥಾಪಕತ್ವವನ್ನು ಅಥವಾ ಪ್ರತಿಕ್ರಿಯೆ ನೀಡುವ ಮಟ್ಟವನ್ನು ಸೂಚಿಸುತ್ತದೆ. ಉದಾಹರಣೆಗೆ ರಾಜಸ್ವ ಪ್ಲವನತೆಯು 0.4ರಲ್ಲಿದೆ ಎಂದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇಕಡ ಒಂದರಷ್ಟು ಹೆಚ್ಚಾದಲ್ಲಿ ರಾಜಸ್ವ ಸ್ವೀಕೃತಿಗಳು ಶೇಕಡ 0.4 ಅಂಕಗಳಷ್ಟು ಹೆಚ್ಚುತ್ತವೆ ಎಂಬುದನ್ನು ಸೂಚಿಸುತ್ತದೆ.

**ನಕ್ಷೆ 1.6: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು*

**ನಕ್ಷೆ 1.7: ರಾಒಆಂಉಗೆ ಸಂಬಂಧಿಸಿದಂತೆ ರಾಜಸ್ವ ಸ್ವೀಕೃತಿಗಳ ವೃದ್ಧಿ**




*ಆಕರ: ಹಣಕಾಸು ಲೆಕ್ಕಗಳು ಮತ್ತು 2018–19ರ ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ ಮತ್ತು ಹಣಕಾಸು ಸಚಿವಾಲಯ, ಭಾರತ ಸರ್ಕಾರ ಪತ್ರ ದಿನಾಂಕ 20 ಮಾರ್ಚ್ 2018.*

** ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಗಳಲ್ಲಿ ಅಳವಡಿಸಿಕೊಂಡಿರುವ ರಾಒಆಂಉದ ಅಂಕಿಗಳಿಗೆ ಅನುಬಂಧ 1.4ನ್ನು ನೋಡಿ.*

**ನಕ್ಷೆ 1.8: ರಾಒಆಂಉದಕ್ಕೆ ಸಂಬಂಧಿಸಿದಂತೆ ರಾಜಸ್ವ ಪ್ಲವನತೆ ಪ್ರವೃತ್ತಿ**



ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜಸ್ವ ಪ್ಲವನತೆಯು 2014–15ರಲ್ಲಿನ 1.4ರಿಂದ ಅಂತರ ವರ್ಷಗಳ ವ್ಯತ್ಯಾಸದಿಂದ 2018–19ರಲ್ಲಿ 2.0ಕ್ಕೆ ಏರಿದೆ.

### 1.4.1 ರಾಜ್ಯದ ಸ್ವಂತ ಸಂಪನ್ಮೂಲಗಳು

#### 1.4.1.1 ತೆರಿಗೆ ಆದಾಯ

2018–19ರಲ್ಲಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಶೇಕಡಾ 43) ಮತ್ತು ರಾಜ್ಯ ಅಬಕಾರಿ (ಶೇಕಡ 21) ರಾಜ್ಯದ ತೆರಿಗೆ ಆದಾಯದ ಪ್ರಮುಖ ಮೂಲವಾಗಿದ್ದು ಮಾರಾಟ ಮತ್ತು ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ (ಶೇಕಡ 15), ಮುದ್ರಾಂಕ ಮತ್ತು ನೊಂದಣಿ ಶುಲ್ಕ (ಶೇಕಡ 11) ಮತ್ತು ವಾಹನಗಳ ಮೇಲಿನ ತೆರಿಗೆಗಳು (ಶೇಕಡ ಏಳು) ನಂತರದ ಸ್ಥಾನದಲ್ಲಿದ್ದವು. 2014–15ರಿಂದ 2018–19ರ ಅವಧಿಯಲ್ಲಿ ತೆರಿಗೆ ಆದಾಯದ ಪ್ರಮುಖ ಅಂಗಗಳು ಮತ್ತು ಪ್ರವೃತ್ತಿಯನ್ನು **ಅನುಬಂಧ 1.4** ಮತ್ತು **ನಕ್ಷೆ 1.9**ರಲ್ಲಿ ತೋರಿಸಲಾಗಿದೆ.

**ನಕ್ಷೆ 1.9: ಪ್ರಮುಖ ತೆರಿಗೆ ಆದಾಯಗಳ ವೃದ್ಧಿ ಪ್ರವೃತ್ತಿ**




ರಾಜ್ಯ ಸರಕು ಮತ್ತು ಸೇವಾ ತೆರಿಗೆಯ 2017–18ರಲ್ಲಿ ಇದ್ದ ₹24,182 ಕೋಟಿಗಳಿಂದ 2018–19ರಲ್ಲಿ ₹41,956 ಕೋಟಿಗಳಿಗೆ ಏರಿತ್ತು (ಶೇಕಡ 74). ಮಾರಾಟ ಮತ್ತು ವ್ಯಾಪಾರಗಳ ಮೇಲಿನ ತೆರಿಗೆಯು 2014–15ರಲ್ಲಿದ್ದ ₹38,286 ಕೋಟಿಗಳಿಂದ ₹14,003 ಕೋಟಿಗಳಿಗೆ ಇಳಿದು ಶೇಕಡ 63ರಷ್ಟು ಇಳಿದಿತ್ತು (ಮೊಬಲಗು ₹24,283). ರಾಜ್ಯ ಅಬಕಾರಿಯು ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ ಎರಡನೇ ಅತಿ ದೊಡ್ಡ ಕೊಡುಗೆ ನೀಡಿದ್ದು ಸದರಿ ಅವಧಿಯಲ್ಲಿ ಶೇಕಡಾ 45ರಷ್ಟು ಏರಿತು. 2014–15ರಿಂದ 2018–19ರ ಅವಧಿಯಲ್ಲಿ ಮುಂದ್ರಾಂಕ ಮತ್ತು ನೋಂದಣಿ ಶುಲ್ಕಗಳು ₹7,026 ಕೋಟಿಗಳಿಂದ ₹10,775 ಕೋಟಿಗಳಿಗೆ ಏರಿದ್ದು, ಏರಿಕೆಯು ಶೇಕಡ 53ರಷ್ಟಿದೆ. ವಾಹನಗಳ ಮೇಲಿನ ತೆರಿಗೆಯು ಸಹ ಸ್ವಂತ ತೆರಿಗೆ ಆದಾಯದ ಗಣನಾರ್ಹ ಕೊಡುಗೆ ಭಾಗವಾಗಿದೆ. ಇದು 2014–15ರಿಂದ 2018–19ರಲ್ಲಿ (₹2,027 ಕೋಟಿಗಳಷ್ಟು) ಶೇಕಡಾ 45ರಷ್ಟು ಏರಿದೆ.

#### ಸಂಗ್ರಹಣಾ ವೆಚ್ಚ

2014–19ರ ಅವಧಿಯಲ್ಲಿ ವಾಹನಗಳ ಮೇಲಿನ ತೆರಿಗೆ, ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ, ಮುದ್ರಾಂಕ ಮತ್ತು ನೋಂದಣಿ ಶುಲ್ಕ ಮತ್ತು ರಾಜ್ಯ ಅಬಕಾರಿ ಮೇಲಿನ ತೆರಿಗೆಯ ಒಟ್ಟು ಸಂಗ್ರಹಣೆ,

ಸಂಗ್ರಹಣೆಗಾಗಿ ಮಾಡಿದ ವೆಚ್ಚ ಮತ್ತು ಸಂಗ್ರಹಣೆಯ ಮೊತ್ತಕ್ಕೆ ಸಂಗ್ರಹಣಾ ವೆಚ್ಚದ ಶೇಕಡಾವಾರುಗಳನ್ನು, ಆಯಾ ವರ್ಷಗಳಿಗೆ ಹಿಂದಿನ ವರ್ಷದ ಅಖಿಲ ಭಾರತ ಸರಾಸರಿ ಸಂಗ್ರಹಣಾ ವೆಚ್ಚವನ್ನು **ಅನುಬಂಧ 1.6**ರಲ್ಲಿ ನೀಡಲಾಗಿದೆ. ಅನುಬಂಧದಲ್ಲಿ ಗಮನಿಸಿದಂತೆ, 2014-19ರ ಅವಧಿಯಲ್ಲಿ ಒಟ್ಟು ಸಂಗ್ರಹಣಾ ಮೊತ್ತಕ್ಕೆ ಹೋಲಿಸಿದಲ್ಲಿ ಶೇಕಡಾವಾರು ಸಂಗ್ರಹಣಾ ವೆಚ್ಚವು 2014-19ರ ಅವಧಿಯ ಅಖಿಲ ಭಾರತ ಸರಾಸರಿಗಿಂತ ಗಮನಾರ್ಹವಾಗಿ ಕಡಿಮೆ ಪ್ರಮಾಣದಲ್ಲಿತ್ತು.

### ರಾಒಆಂಉಗೆ ಸ್ವಂತ ತೆರಿಗೆ ಆದಾಯದ ಹೋಲಿಕೆ

2018-19ರಲ್ಲಿ ಕರ್ನಾಟಕದ ರಾಒಆಂಉಗೆ ರಾಜ್ಯದ ಸ್ವಂತ ತೆರಿಗೆಯನ್ನು ನೆರೆ ರಾಜ್ಯಗಳಿಗೆ ಹೋಲಿಸಿ **ಕೋಷ್ಟಕ 1.9**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.9: ನೆರೆ ರಾಜ್ಯಗಳಿಗೆ ರಾಒಆಂಉಕ್ಕೆ ಸ್ವಂತ ತೆರಿಗೆ ರಾಜಸ್ವದ ಹೋಲಿಕೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ರಾಜ್ಯದ ಹೆಸರು | ಸ್ವಂತ ತೆರಿಗೆ ರಾಜಸ್ವ | ರಾಒಆಂಉ | ಸ್ವಂತ ತೆರಿಗೆ/ರಾಒಆಂಉ (ಶೇಕಡಾವಾರಿನಲ್ಲಿ) |
|---|---|---|---|---|
| 1 | ಕರ್ನಾಟಕ | 96,830 | 14,08,112 | 6.88 |
| 2 | ಕೇರಳ | 50,654 | 7,81,653 | 6.48 |
| 3 | ತಮಿಳುನಾಡು | 1,05,534 | 16,64,159 | 6.34 |
| 4 | ಮಹಾರಾಷ್ಟ್ರ | 1,87,436 | 26,60,318 | 7.05 |
| 5 | ತೆಲಂಗಾಣ | 83,235 | 8,65,688 | 9.61 |
| 6 | ಆಂಧ್ರಪ್ರದೇಶ | 90,818 | 9,33,402 | 9.73 |

2018-19ರಲ್ಲಿ ರಾಒಆಂಉದ ಶೇಕಡಾವಾರಾಗಿ ಸ್ವಂತ ತೆರಿಗೆ ಆದಾಯವು ಕೇರಳ (ಶೇಕಡ 6.48), ತಮಿಳುನಾಡಿಗೆ ಹೋಲಿಸಿದಾಗ ಕರ್ನಾಟಕವು (ಶೇಕಡ 6.88) ಉತ್ತಮವಾಗಿತ್ತು. ಆದರೆ, ಆಂಧ್ರಪ್ರದೇಶ (ಶೇಕಡ 9.73), ತೆಲಂಗಾಣ (ಶೇಕಡ 9.61) ಮತ್ತು ಮಹಾರಾಷ್ಟ್ರಕ್ಕಿಂತ (ಶೇಕಡ 7.05) ಕಡಿಮೆಯಿದ್ದಿತು.

### 1.4.1.2 ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ (ಜಿಎಸ್‌ಟಿ)

ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ಸಂಗ್ರಹಣೆಯು ಇಲಾಖೆಯ ಗಣಕೀಕರಣದಿಂದ ಸ್ವಯಂಚಾಲನತ್ವವನ್ನು ಪಡೆದ ನಂತರ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಲೆಕ್ಕ ದೃಢೀಕರಣದ ಸಂವಿಧಾನತ್ಮಕ ನಿರೂಪದ ಪಾಲನೆಗೆ ಲೆಕ್ಕ ಪರಿಶೋಧನೆಯೂ ಸಹ ಪರೀಕ್ಷಾ ತನಿಖೆಯ ವಿಧಾನದಿಂದ ಎಲ್ಲಾ ವ್ಯವಹಾರಗಳ ವ್ಯಾಪಕ ತನಿಖಾ ವಿಧಾನಕ್ಕೆ ಬದಲಾವಣೆ ಹೊಂದುವ ಅಗತ್ಯವಿದೆ. ಇದಕ್ಕೆ ಅವಶ್ಯವಿರುವ ದತ್ತಾಂಶವನ್ನು ಪಡೆಯಲು ಅವಕಾಶವನ್ನು ಇನ್ನೂ ಒದಗಿಸಬೇಕಾಗಿದೆ. ಹಾಗಾಗಿ, 2018-19ರ ಲೆಕ್ಕಗಳನ್ನು ಈ ಒಂದು ಬಾರಿಗೆ ಹಿಂದಿನಂತೆಯೇ ದಾಖಲೆಗಳ ಪರೀಕ್ಷಾ ತನಿಖೆಯ ಆಧಾರದ ಮೇಲೆಯೇ ದೃಢೀಕರಣ ಮಾಡಲಾಗಿದೆ.

2018-19ರಲ್ಲಿ ಸರಕು ಮತ್ತು ಸೇವ ತೆರಿಗೆಯಡಿಯ ಒಟ್ಟು ಸಂಗ್ರಹಣೆಯು ₹51,521.79 ಕೋಟಿಗಳಷ್ಟಿತ್ತು[5]. ಭಾರತ ಸರ್ಕಾರ, ಆರ್ಥಿಕ ಮಂತ್ರಾಲಯವು ಜಾರಿ ಮಾಡಿದ ಮಂಜೂರಾತಿ ಆದೇಶಗಳನ್ವಯ ₹5,559.04 ಕೋಟಿಗಳನ್ನು ಸಮಗ್ರ ಸರಕು ಮತ್ತು ಸೇವಾ ತೆರಿಗೆಯ ಮುಂಗಡ ಭಾಗವಾಗಿ

[5] ಪ್ರಧಾನ ಶೀರ್ಷಿಕೆಗಳು 0005-ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ (₹8,858.56 ಕೋಟಿ)
0006-ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ (₹41,956.03 ಕೋಟಿ)
0007-ಸಮಗ್ರ ಸರಕು ಮತ್ತು ಸೇವಾ ತೆರಿಗೆ (₹707 ಕೋಟಿ)

ಸ್ವೀಕರಿಸಲಾಗಿತ್ತು ಮತ್ತು ಕೇಂದ್ರ ಸರಕು ಮತ್ತು ಸೇವಾ ತೆರಿಗೆ (₹8,858.76 ಕೋಟಿ) ಮತ್ತು ಸಮಗ್ರ ಸರಕು ಮತ್ತು ಸೇವಾ ತೆರಿಗೆ (₹707 ಕೋಟಿ) ಗಳನ್ನೊಳಗೊಂಡ ₹9,565.76 ಕೋಟಿಗಳನ್ನು ಕರ್ನಾಟಕ ಸರ್ಕಾರಕ್ಕೆ ಹಂಚಿಕೆ ಮಾಡಲಾಗಿತ್ತು. 2018–19ರಲ್ಲಿನ ರಾಜಸ್ವ ನಷ್ಟದೆಡೆಗಿನ ಪರಿಹಾರವಾದ ₹10,754 ಕೋಟಿಗಳು ಮೇ 2018ರಲ್ಲಿ ಬಿಡುಗಡೆಯಾದ 2017–18ನೇ ಸಾಲಿನ ₹1,289 ಕೋಟಿಗಳನ್ನೂ ಸಹ ಒಳಗೊಂಡಿದೆ.

2018–19ರ ಅವಧಿಗೆ ಪ್ರಕ್ಷೇಪಿತ ರಾಜಸ್ವವಾದ ₹53,549.16 ಕೋಟಿಗಳಿಗೆ ಪ್ರತಿಯಾಗಿ ರಾಜ್ಯ ಸಂಗ್ರಹಿಸಿದ ತೆರಿಗೆ (ಸರಕು ಮತ್ತು ಸೇವಾ ತೆರಿಗೆಯ ಪೂರ್ವದ ಹಾಗೂ ರಾಜ್ಯ ಸರಕು ಮತ್ತು ಸೇವಾ ತೆರಿಗೆ) ಕೇಂದ್ರ ಸರ್ಕಾರದಿಂದ ಸ್ವೀಕರಿಸಲಾದ ಸಮಗ್ರ ಭಾಗ (ಸಮಗ್ರ ಸರಕು ಮತ್ತು ಸೇವಾ ತೆರಿಗೆ ಹಂಗಾಮಿ/ಮುಂಗಡ ಪಾಲು) ಮತ್ತು ಸರಕು ಮತ್ತು ಸೇವಾ ತೆರಿಗೆಯ ಪರಿಹಾರವೂ ಸೇರಿ ಒಟ್ಟು ಸಂಗ್ರಹ ₹53,585 ಕೋಟಿಗಳಾಗಿತ್ತು. ಸ್ವೀಕರಿಸಿದ ಹೆಚ್ಚಿನ ಸರಕು ಮತ್ತು ಸೇವಾ ತೆರಿಗೆ ಪರಿಹಾರವು ₹35.84 ಕೋಟಿಗಳಷ್ಟಿತ್ತು.

### 1.4.1.3 ತೆರಿಗೆಯೇತರ ಆದಾಯ

ತೆರಿಗೆಯೇತರ ಆದಾಯವನ್ನು (ಶುಲ್ಕ, ಬಳಕೆದಾರರ ಕರ, ಬಡ್ಡಿ ಸ್ವೀಕೃತಿಗಳು, ಇತ್ಯಾದಿ) ಸಾಮಾನ್ಯವಾಗಿ ಶಾಸನಬದ್ಧವಲ್ಲದ ಅಧ್ಯಾದೇಶಗಳ ಮೂಲಕ ಸಂಗ್ರಹಿಸಲಾಗುತ್ತದೆ. ತೆರಿಗೆಯೇತರ ಸ್ವೀಕೃತಿಗಳ ಮೂಲಗಳು ಬಾಕಿ ಇರುವ ಮುಂಗಡಗಳ ಮೇಲಿನ ಬಡ್ಡಿ ಸ್ವೀಕೃತಿಗಳು, ಈಕ್ವಿಟಿ ಹೂಡಿಕೆಗಳ ಮೇಲಿನ ಡಿವಿಡೆಂಡುಗಳು ಮತ್ತು ಲಾಭಾಂಶಗಳು, ಖನಿಜಗಳು, ಅರಣ್ಯ ಮತ್ತು ವನ್ಯಜೀವಿ ಅಥವಾ ಇಂತಹ ಸೇವೆಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿದ್ದಕ್ಕೆ ಕೊಡಬೇಕಾದ ರಾಜಧನ ಶುಲ್ಕಗಳು ಮತ್ತು ಸರ್ಕಾರದ ಯಂತ್ರವು ಒದಗಿಸುವ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಬಳಕೆದಾರರು ನೀಡಬೇಕಾದ ಬೆಲೆಗಳು ಮುಂತಾದ ವಿತ್ತೀಯ ಸೇವೆಗಳನ್ನು ಒಳಗೊಂಡಿರುತ್ತವೆ.

ತೆರಿಗೆಯೇತರ ರಾಜಸ್ವ ಸಂಗ್ರಹಣೆಯ ಪ್ರವೃತ್ತಿಯನ್ನು **ಅನುಬಂಧ 1.4**ರಲ್ಲಿ ನೀಡಲಾಗಿದೆ. 2018–19ರಲ್ಲಿನ ತೆರಿಗೆಯೇತರ ರಾಜಸ್ವದ ಘಟಕಗಳನ್ನು **ನಕ್ಷೆ 1.10**ರಲ್ಲಿ ತೋರಿಸಲಾಗಿದೆ .

**ನಕ್ಷೆ 1.10: 2018–19ರಲ್ಲಿ ತೆರಿಗೆಯೇತರ ರಾಜಸ್ವದ ಘಟಕಗಳು** (₹ ಕೋಟಿಗಳಲ್ಲಿ ಮತ್ತು ಶೇಕಡಾವಾರಿನಲ್ಲಿ)



2014–15ರಿಂದ 2018–19ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿ ತೆರಿಗೆಯೇತರ ರಾಜಸ್ವದ ಪಾಲು ಶೇಕಡ ನಾಲ್ಕರಿಂದ ಐದರಷ್ಟಿದ್ದಿತು. 2014–15ರಿಂದ 2018–19ರ ಸಾಲುಗಳಲ್ಲಿ ಅದು ರಾಒಆಂಉದ ಶೇಕಡಾವಾರು ಒಂದಕ್ಕಿಂತ ಕಡಿಮೆಯಿದ್ದಿತು. ಬಳಕೆದಾರರ ಶುಲ್ಕವನ್ನು ನಿಯತಕಾಲಿಕವಾಗಿ ಪರಿಷ್ಕರಣೆ ಮಾಡದಿದ್ದದ್ದು ಸ್ಥಗಿತವಾಗಲು ಕಾರಣವಾಗಿತ್ತು.

ಹದಿಮೂರನೇ ಹಣಕಾಸು ಆಯೋಗದ ಅಭಿಪ್ರಾಯದಂತೆ ಮತ್ತು 2009–10ರಿಂದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ ಹೇಳಿರುವಂತೆ ತೆರಿಗಯೇತರ ರಾಜಸ್ವ ಸ್ವೀಕೃತಿಗಳನ್ನು ಹೆಚ್ಚಿಸಲು ಬಳಕೆದಾರರ ಶುಲ್ಕಗಳನ್ನು ಕ್ರಮಬದ್ಧವಾಗಿ ಪರಿಷ್ಕರಿಸುವ ಅಗತ್ಯವಿದೆ. ವೆಚ್ಚ ಸುಧಾರಣಾ ಆಯೋಗವು ತನ್ನ ನಾಲ್ಕನೆಯ ವರದಿಯಲ್ಲಿ (ಜೂನ್ 2011) ಸರ್ಕಾರವು ಬಳಕೆದಾರರ ಶುಲ್ಕದ ಬಗ್ಗೆ ಸ್ಪಷ್ಟವಾದ ಕಾರ್ಯನೀತಿಯೊಂದನ್ನು ರೂಪಿಸಬೇಕೆಂದು ಅಭಿಪ್ರಾಯಪಟ್ಟಿತು. ಆರ್ಥಿಕ ಇಲಾಖೆಯು ಎಲ್ಲ ತೆರಿಗೆಯೇತರ ರಾಜಸ್ವದ ಆಕರಗಳನ್ನು ಕೂಲಂಕುಶವಾಗಿ ಸಮೀಕ್ಷೆ ನಡೆಸಿ ತೆರಿಗೆಯೇತರ ರಾಜಸ್ವದ ದರಗಳನ್ನು ಪರಿಷ್ಕರಿಸಲು ಕೈಗೊಂಡ ಕ್ರಮಗಳನ್ನು ತಿಳಿಸಲು ಎಲ್ಲ ಆಡಳಿತಾತ್ಮಕ ಇಲಾಖೆಗಳಿಗೆ (ನವೆಂಬರ್ 2018)ರಲ್ಲಿ ಆದೇಶಿಸಿತು.

ರಾಜ್ಯದ ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯು ಅರಣ್ಯ ಅಭಿವೃದ್ಧಿ ಶುಲ್ಕ ಮತ್ತು ಬಡ್ಡಿ ಸ್ವೀಕೃತಿಗಳಿಂದ ತೆರಿಗೆಯೇತರ ರಾಜಸ್ವದಲ್ಲಿನ ಸಂಗ್ರಹಣೆಯಲ್ಲಿ ಕಡಿಮೆಯಾಗಿದ್ದನ್ನು ಗಮನಿಸಿತ್ತು (ಜನವರಿ 2019). ಅರಣ್ಯ ಅಭಿವೃದ್ಧಿ ಶುಲ್ಕದಲ್ಲಿನ ಕೊರತೆಗೆ ಕಾನೂನಿನ ಕಾರಣಗಳನ್ನು ಹೇಳಲಾಯಿತು. ಹೆಚ್ಚಿನ ವೆಚ್ಚ ಮತ್ತು ವರ್ಷದ ಪ್ರಾರಂಭದಲ್ಲಿದ್ದ ಕಡಿಮೆ ನಗದು ಶಿಲ್ಕಿನ ಕಾರಣಗಳಿಂದ ಬಡ್ಡಿ ಸ್ವೀಕೃತಿಯು ಪ್ರಕ್ಷೇಪಣೆಗಿಂತ ಕಡಿಮೆಯಿದ್ದಿತು.

ಮುಂದುವರೆದು, ಮುಂದಿನ ಆರ್ಥಿಕ ವರ್ಷಕ್ಕೆ ತೆರಿಗೆಯೇತರ ರಾಜಸ್ವಗಳಿಂದ ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳಿಗೆ ತೆರಿಗೆಯೇತರ ರಾಜಸ್ವದ ಬಗ್ಗೆ ಆಯವ್ಯಯದ ನಂತರ ಕ್ರಮಬದ್ಧವಾದ ಅನುಸರಣೆಯನ್ನು ನಡೆಸಬೇಕೆಂದು ಸಮಿತಿಯು ನಿರ್ದೇಶಿಸಿತು. ಹಿಂದಿನ ಕೆಲವು ವರ್ಷಗಳಲ್ಲಿ ಅಂತಹುದೇ ಶಿಫಾರಸುಗಳನ್ನು ಮಾಡಿದ್ದಾಗ್ಯೂ 2018–19ರಲ್ಲೂ ಸಹ ತೆರಿಗೆಯೇತರ ರಾಜಸ್ವವು ಅಲ್ಪವಾಗಿತ್ತು.

2018–19ರ ಆರ್ಥಿಕ ಸಮೀಕ್ಷೆಯಲ್ಲಿ ತೆರಿಗೆಯೇತರ ರಾಜಸ್ವಗಳು ರಾಜ್ಯವು ಎದುರಿಸುತ್ತಿರುವ ಮುಖ್ಯವಾದ ಒಂದು ವಿತ್ತೀಯ ತೊಡಕಾಗಿದೆಯೆಂದು ಮತ್ತು ಬಳಕೆದಾರರ ಶುಲ್ಕವನ್ನು ಉತ್ತಮ ಮಟ್ಟದಲ್ಲಿ ವಸೂಲಿ ಮಾಡಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಒಪ್ಪಲಾಗಿತ್ತು. ರಾಜ್ಯದ ರಾಒಆಂಉಕ್ಕೆ ತೆರಿಗೆಯೇತರ ರಾಜಸ್ವದ ಅನುಪಾತವು ದೇಶದಲ್ಲಿಯೇ ಅತ್ಯಂತ ಕಡಿಮೆಯಿರುವ ರಾಜ್ಯಗಳಲ್ಲಿ ಒಂದಾಗಿದೆ. ಅನೇಕ ಇಲಾಖೆಗಳಲ್ಲಿ ಬಳಕೆದಾರರ ಶುಲ್ಕಗಳು, ಶುಲ್ಕ ಮತ್ತು ದಂಡಗಳು ಹಾಗೂ ಮತ್ತಿತರ ತೆರಿಗೆಯೇತರ ರಾಜಸ್ವಗಳ ಪರಿಷ್ಕರಣೆಯು ಅನೇಕ ವರ್ಷಗಳಿಂದ ಮಾಡಲಾಗಿಲ್ಲ.

ತೆರಿಗೆಯೇತರ ರಾಜಸ್ವದ ಎರಡು ಆಕರಗಳ ವಿಶ್ಲೇಷಣೆಯನ್ನು ಕೆಳಗೆ ಚರ್ಚಿಸಲಾಗಿದೆ:

### ರಾಜಧನ ಶುಲ್ಕಗಳು

ಖನಿಜಗಳು, ಜಲ, ಅರಣ್ಯ ಮತ್ತು ವನ್ಯಜೀವಿಗಳಂತಹ ಸರ್ಕಾರಿ ಆಸ್ತಿಗಳ ಬಳಕೆಗೆ ಅನುಮತಿ ನೀಡಲು ರಾಜಧನವನ್ನು ವಿಧಿಸಲಾಗುತ್ತದೆ. 2018–19ರಲ್ಲಿ ಇಂಧನ ಮಾರಾಟದ ಮೇಲಿನ ಜಲಕ್ಕೆ ವಿಧಿಸಿದ ರಾಜಧನವು ₹44 ಕೋಟಿಗಳಷ್ಟಿತ್ತು. ರಾಜ್ಯದ ಉದ್ಯಮವಾಗಿರುವ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ನಿಯಮಿತವು ಏಳು ಜಲವಿದ್ಯುತ್ ಯೋಜನೆಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತದೆ. ಅದು ನಾಲ್ಕು ವಿದ್ಯುಚ್ಛಕ್ತಿ ಠಾಣೆಗಳು, ಮತ್ತು 17 ವಿದ್ಯುತ್ ಗೃಹಗಳನ್ನು ಹೊಂದಿದೆ. ವಿದ್ಯುತ್‌ಗೃಹ/ಠಾಣೆಗಳಲ್ಲಿ ಪ್ರತಿ ಕಿಲೋವ್ಯಾಟ್ ಅವರ್ (ಕೆಡಬ್ಲ್ಯುಎಚ್) ವಿದ್ಯುಚ್ಛಕ್ತಿ ಮಾರಾಟಕ್ಕೆ ನಿಗದಿಪಡಿಸಿರುವ ರಾಜಧನದ ದರಗಳನ್ನು

ಅನುಬಂಧ **1.7**ರಲ್ಲಿ ವಿವರಿಸಲಾಗಿದೆ. 2018–19ರಲ್ಲಿ ಒಟ್ಟು 11,842 ದಶಲಕ್ಷ ಯೂನಿಟ್‌ಗಳ ವಿದ್ಯುಚ್ಛಕ್ತಿಯನ್ನು ಪ್ರಸರಣ ಮಾಡಲಾಗಿದ್ದು ₹45 ಕೋಟಿಗಳಷ್ಟು ರಾಜಧನವನ್ನು ಸರ್ಕಾರಕ್ಕೆ ಪಾವತಿಸಲಾಯಿತು. ಪ್ರತಿ ಕೆಡಬ್ಲ್ಯುಎಚ್‌ನ ವಿದ್ಯುತ್ ಮಾರಾಟಕ್ಕೆ ಎಲ್ಲ ಠಾಣೆಗಳಲ್ಲೂ ನಾಲ್ಕು ಪೈಸೆಯಂತೆ ನಿಗದಿಪಡಿಸಲಾಗಿದ್ದು (ಸೆಪ್ಟಂಬರ್ 1983) ಮತ್ತು ಘಟಪ್ರಭ ಅಣೆಕಟ್ಟು ವಿದ್ಯುಚ್ಛಕ್ತಿ ಗೃಹ ಮತ್ತು ಆಲಮಟ್ಟಿ ವಿದ್ಯುಚ್ಛಕ್ತಿ ಗೃಹದಲ್ಲಿ 10 ಪೈಸೆಯಂತೆ ನಿಗದಿಪಡಿಸಲಾಯಿತು (ಏಪ್ರಿಲ್ 2010). ಆಲಮಟ್ಟಿ ಅಣೆಕಟ್ಟು ವಿದ್ಯುಚ್ಛಕ್ತಿ ಗೃಹದಲ್ಲಿ ಮಾರ್ಚ್ 2019ರಲ್ಲಿ ರಾಜಧನ ಶುಲ್ಕವನ್ನು ₹1.00ರಂತೆ ಪರಿಷ್ಕರಿಸಿದ್ದಾಗ್ಯೂ ಇನ್ನಿತರ ವಿದ್ಯುತ್‌ಠಾಣೆಗಳಲ್ಲಿ ಮತ್ತು ಘಟಪ್ರಭ ಅಣೆಕಟ್ಟು ವಿದ್ಯುತ್‌ಗೃಹದಲ್ಲಿ 36 ವರ್ಷಗಳಿಗಿಂತಲೂ ಅಧಿಕ ಸಮಯವಾದರೂ ರಾಜಧನ ದರಗಳು ಪರಿಷ್ಕರಣೆ ಹೊಂದಿರಲಿಲ್ಲ.

ಇದನ್ನು ಸರ್ಕಾರದ ಗಮನಕ್ಕೆ ತರಲಾಗಿ (ಡಿಸೆಂಬರ್ 2019) ಎಲ್ಲ ವಿದ್ಯುತ್‌ಠಾಣೆಗಳಲ್ಲಿ ಮತ್ತು ಘಟಪ್ರಭಾ ಅಣೆಕಟ್ಟು ವಿದ್ಯುತ್‌ಗೃಹದಲ್ಲಿ ಏಪ್ರಿಲ್ 2019ರಿಂದ ರಾಜಧನ ಶುಲ್ಕವನ್ನು 20 ಪೈಸೆಗೆ ಪರಿಷ್ಕರಿಸಲಾಯಿತು.

### ಬಡ್ಡಿ ಸ್ವೀಕೃತಿಗಳು, ಡಿವಿಡೆಂಡುಗಳು ಮತ್ತು ಲಾಭಾಂಶಗಳು

ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ಸ್ವೀಕೃತಿಯ ಜೊತೆಗೆ ಮತ್ತೊಂದು ಪ್ರಮುಖವಾದ ಬಡ್ಡಿ ಉತ್ಪನ್ನದ ಮೂಲವು ರಾಜ್ಯದ ಹೆಚ್ಚುವರಿ ನಗದು ಶಿಲ್ಕುಗಳ ಹೂಡಿಕೆಯಿಂದ ಬಂದದ್ದಾಗಿದೆ. 2018–19ರಲ್ಲಿ ಪಡೆದ ಬಡ್ಡಿ ಮತ್ತು ಡಿವೆಡೆಂಡುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

- ಭಾರತೀಯ ರಿಜರ್ವ್ ಬ್ಯಾಂಕಿನ ನಿಯಮಾವಳಿಯಂತೆ ರಾಜ್ಯ ಸರ್ಕಾರವು ನಿರ್ವಹಿಸುವ ನಗದು ಉಳಿಕೆಯನ್ನು 14 ದಿನಗಳ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡಲಾಗುವುದು. ನಗದು ನಿರ್ವಹಣೆಯನ್ನು ಉತ್ತಮಗೊಳಿಸಲು ರಾಜ್ಯಸರ್ಕಾರವು ಹೆಚ್ಚುವರಿ ನಗದನ್ನು (ತಕ್ಷಣದ ಅಗತ್ಯಕ್ಕಿಂತ ಹೆಚ್ಚಿನ) ಭಾಗಶ: ಸರಾಸರಿ ವಾರ್ಷಿಕ ಬಡ್ಡಿದರ ಶೇಕಡ 3.18ರಂತೆ 14 ದಿನಗಳ ಮಧ್ಯಂತರ ಖಜಾನೆ ಬಿಲ್ಲುಗಳಲ್ಲು ಮತ್ತು ಭಾಗಶ: ಸರಾಸರಿ ವಾರ್ಷಿಕ ಬಡ್ಡಿದರ ಶೇಕಡಾ 6.74ರಂತೆ 91 ದಿನಗಳ ಮಧ್ಯಂತರ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡುತ್ತಿದೆ. ಆದರೆ ಸಾಲಗಳನ್ನು ಸರಾಸರಿ ವಾರ್ಷಿಕ ಬಡ್ಡಿದರ ಶೇಕಡ 8.24ರಂತೆ ಮಾಡಲಾಗುತ್ತದೆ. 2018–19ರ ಆಯವ್ಯಯದಲ್ಲಿ ಅಂದಾಜು ಮಾಡಲಾಗಿದ್ದ ₹1,095 ಕೋಟಿಗೆ ಪ್ರತಿಯಾಗಿ ಸಂಗ್ರಹವಾದ ಆದಾಯವು ₹936.47 ಕೋಟಿಗಳಾಗಿದ್ದು, ಇದರಲ್ಲಿ 14 ದಿನದ ಖಜಾನೆ ಬಿಲ್ಲುಗಳಿಂದ ₹307.22 ಕೋಟಿಗಳು ಸಂಗ್ರಹವಾಗಿದ್ದರೆ, 91 ದಿನಗಳ ಖಜಾನೆ ಬಿಲ್ಲುಗಳು ₹629.25 ಕೋಟಿಗಳನ್ನು ಗಳಿಸಿದೆ;
- ಸರ್ಕಾರವು ತನ್ನ ಕಂಪೆನಿ/ನಿಗಮಗಳಿಗೆ ನೀಡಿದ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ಸಂಗ್ರಹಣೆಯು ₹107.61 ಕೋಟಿಗಳಷ್ಟಿದ್ದು, ಇದು ವರ್ಷದ ಕೊನೆಯಲ್ಲಿ ಉಳಿದಿರುವ ಸಾಲಗಳ ಬಾಕಿಯ ಶೇಕಡ ಒಂದಕ್ಕಿಂತ ಕಡಿಮೆಯಿದ್ದಿತು. ಸ್ವೀಕೃತಿಗಳು ಇಲಾಖಾ ವತಿಯ ವಾಣಿಜ್ಯ ಉದ್ದಿಮೆಯ ಬಂಡವಾಳದ ಮೇಲಿನ ಬಡ್ಡಿಯ ಮೊತ್ತವನ್ನೂ ಒಳಗೊಂಡಿದೆ[6];
- ಇಲಾಖಾ ಅಧಿಕಾರಿಗಳು ಉಳಿತಾಯ ಖಾತೆಗಳಲ್ಲಿ ಹಣವನ್ನು ಠೇವಣಿ ಇಡುವುದನ್ನು ಹಣಕಾಸು ನಿಯಮಗಳು ನಿರ್ಬಂಧಿಸುತ್ತದೆ. ಆದಾಗ್ಯೂ ಇಲಾಖಾ ಅಧಿಕಾರಿಗಳಿಂದ ದೊಡ್ಡ ಮೊತ್ತದ ಹಣವನ್ನು ಬ್ಯಾಂಕುಗಳಲ್ಲಿ ಇಡಲಾಗಿತ್ತು. ಇಲಾಖೆಗಳಿಗೆ ಹಿಂದಿನ ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿದ್ದ ಬಳಕೆಯಾಗದ ಅನುದಾನಗಳು ಬ್ಯಾಂಕುಗಳಲ್ಲಿ ಇಡಲಾಗುತ್ತದೆ. ಆರ್ಥಿಕ ಇಲಾಖೆಯು ಅಂತಹ ಶಿಲ್ಕುಗಳು/ಶಿಲ್ಕುಗಳ ಮೇಲಿನ ಬಡ್ಡಿಗಳನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲು ನಿರ್ದೇಶನಗಳನ್ನು ನೀಡುವ (ಮೇ 2018) ಮೂಲಕ ಕ್ರಮ ಕೈಗೊಂಡಿತ್ತು.

[6] ಸಿಲ್ಕ್ ಫಿಲೇಚರುಗಳಲ್ಲಿನ ಬಂಡವಾಳದ ಮೇಲಿನ ಬಡ್ಡಿ ₹0.72 ಕೋಟಿ–ಇದು ಪುಸ್ತಕ ವರ್ಗಾವಣೆಯ ಮೂಲಕ ಹೊಂದಾಣಿಕೆ ಮಾಡಲಾಗಿತ್ತು.

ಉಳಿತಾಯ ಖಾತೆಗಳ ಮೇಲಿನ ಬಡ್ಡಿಯಾದ ₹18.24 ಕೋಟಿಗಳನ್ನು 2018–19ರಲ್ಲಿ ಸ್ವೀಕರಿಸಲಾಯಿತು ಮತ್ತು

- 2018–19ನೇ ವರ್ಷದಲ್ಲಿ ಕಂಪನಿಗಳು/ನಿಗಮಗಳ ಹೂಡಿಕೆಯ ಮೇಲಿನ ಪ್ರತಿಫಲಗಳನ್ನು ಡಿವಿಡೆಂಡ್ ರೂಪದಲ್ಲಿ ಪ್ರಕಟಿಸಿ ಸರ್ಕಾರಿ ಲೆಕ್ಕಕ್ಕೆ ಜಮಾ ಮಾಡಿದ ಮೊತ್ತವು ₹38.30 ಕೋಟಿಗಳಷ್ಟಿತ್ತು. ಸರ್ಕಾರದ ಹೂಡಿಕೆಯ ಪ್ರಮಾಣವನ್ನು (₹66,518 ಕೋಟಿ) ಪರಿಗಣಿಸಿದಾಗ ಪ್ರತಿಫಲವು ನಗಣ್ಯವಾಗಿ ಶೇಕಡ 0.06ರಷ್ಟಿತ್ತು.

### 1.4.2 ಕೇಂದ್ರ ತೆರಿಗೆ ವರ್ಗಾವಣೆಗಳು

ಕೇಂದ್ರ ಸರ್ಕಾರವು ಕಾರ್ಪೋರೇಷನ್ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬಕಾರಿ ಸುಂಕಗಳು ಮುಂತಾದ ಕೇಂದ್ರ ತೆರಿಗೆ ಮತ್ತು ಸುಂಕಗಳ ರಾಜ್ಯ ಸರ್ಕಾರದ ಪಾಲನ್ನು ವರ್ಗಾಯಿಸುತ್ತದೆ. 2014–19ರಲ್ಲಿ ಈ ಕೇಂದ್ರ ತೆರಿಗೆ ವರ್ಗಾವಣೆಗಳ ಪ್ರವೃತ್ತಿಯನ್ನು **ಕೋಷ್ಟಕ 1.10**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.10: ಕೇಂದ್ರ ತೆರಿಗೆ ವರ್ಗಾವಣೆಗಳ ಪ್ರವೃತ್ತಿ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| 1 | ಕಾರ್ಪೋರೇಷನ್ ತೆರಿಗೆ | 5,117.21 | 7,547.57 | 9,211.05 | 9,721.29 | 12,481.94 |
| 2 | ಕಾರ್ಪೋರೇಷನ್ ತೆರಿಗೆ ಹೊರತು ಪಡಿಸಿ ಆದಾಯದ ಮೇಲಿನ ತೆರಿಗೆ | 3,654.18 | 5,252.47 | 6,401.72 | 8,208.94 | 9,192.40 |
| 3 | ಸಂಪತ್ತಿನ ಮೇಲೆ ತೆರಿಗೆ | 13.81 | 1.65 | 21.08 | (–) 0.29 | 4.58 |
| 4 | ಸೀಮಾಶುಲ್ಕ | 2,369.95 | 3,830.22 | 3,962.25 | 3,203.80 | 2,544.18 |
| 5 | ಕೇಂದ್ರ ಅಬಕಾರಿ ಸುಂಕ | 1,338.24 | 3,181.60 | 4,524.54 | 3,348.80 | 1,690.77 |
| 6 | ಸೇವಾ ತೆರಿಗೆ | 2,160.75 | 4,153.56 | 4,639.22 | 3,617.15 | 331.65 |
| 7 | ಆದಾಯ ಮತ್ತು ವೆಚ್ಚದ ಮೇಲಿನ ಇತರ ತೆರಿಗೆಗಳು | 0.12 | 0.15 | – | – | 65.01 |
| 8 | ಸರಕುಗಳು ಮತ್ತು ಸೇವೆಗಳ ಮೇಲಿನ ಇತರೆ ತೆರಿಗೆಗಳು ಮತ್ತು ಸುಂಕಗಳು | (–) 0.01 | 16.12 | 0.08 | (–) 0.01 | 18.54 |
| 9 | ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) | – | – | – | 3,204.72 | 707.00 |
| 10 | ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) | – | – | – | 447.56 | 8,858.76 |
| | **ಒಟ್ಟು** | **14,654.25** | **23,983.34** | **28,759.94** | **31,751.96** | **35,894.83** |

*ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು*

ಮುಂದುವರೆದು, ಕೇಂದ್ರ ತೆರಿಗೆಗಳ ನಿವ್ವಳ ಹುಟ್ಟುವಳಿಯಲ್ಲಿನ (ಸೇವಾ ತೆರಿಗೆಯನ್ನು ಹೊರತುಪಡಿಸಿ) ಮತ್ತು ಸೇವಾ ತೆರಿಗೆಯ ನಿವ್ವಳ ಹುಟ್ಟುವಳಿಯಲ್ಲಿನ ರಾಜ್ಯದ ಪಾಲನ್ನು ಕ್ರಮವಾಗಿ ಶೇಕಡ 4.713 ಮತ್ತು ಶೇಕಡ 4.822ರಷ್ಟಕ್ಕೆ ನಿಗದಿಪಡಿಸಬೇಕೆಂದು ಹದಿನಾಲ್ಕನೇ ಹಣಕಾಸು ಆಯೋಗವು ಶಿಫಾರಸು ಮಾಡಿತು. 2018–19ರಲ್ಲಿ ₹7,58,731.13 ಕೋಟಿಗಳ ಕೇಂದ್ರ ತೆರಿಗೆಗಳ ನಿವ್ವಳ ಸಂಗ್ರಹಣೆಯಲ್ಲಿ ರಾಜ್ಯ ಪಾಲಿನ ನಿವ್ವಳ ಹಂಚಿಕೆಯು ₹35,894.83 ಕೋಟಿಗಳಷ್ಟಿತ್ತು ಮತ್ತು ಕಾರ್ಪೋರೇಷನ್ ತೆರಿಗೆ, ಆದಾಯದ ಮೇಲಿನ ತೆರಿಗೆ, ಸೀಮಾ ಶುಲ್ಕ, ಕೇಂದ್ರ ಅಬಕಾರಿ ಶುಲ್ಕ ಮತ್ತು ಸಿಜಿಎಸ್‌ಟಿಯ ಪಾಲು ಶೇಕಡ 4.713ರಷ್ಟಿದ್ದು, ಐಜಿಎಸ್‌ಟಿಯು ಶೇಕಡ 5.177ರಷ್ಟು ಮತ್ತು ಸೇವಾ ತೆರಿಗೆಯು ಶೇಕಡ 4.822ರಷ್ಟಿತ್ತು.

### 1.4.3 ಸಹಾಯಾನುದಾನಗಳು ಮತ್ತು ಭಾರತ ಸರ್ಕಾರದ ವಂತಿಗೆಗಳು

ಅನುಬಂಧ **1.4**ರಲ್ಲಿ ತೋರಿಸಿರುವಂತೆ ಭಾರತ ಸರ್ಕಾರದಿಂದ ಸಹಾಯಾನುದಾನಗಳು ಮತ್ತು ವಂತಿಗೆಗಳು 2014–15ರಲ್ಲಿ ₹14,620 ಕೋಟಿ ಇದ್ದುದು 2018–19ರಲ್ಲಿ ₹25,481 ಕೋಟಿಗಳಿಗೆ ಏರಿಕೆಯಾಗಿದ್ದಿತು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ 2018–19ರಲ್ಲಿ ₹3,840 ಕೋಟಿಗಳಷ್ಟು ಏರಿಕೆಯಾಗಿದೆ. ಸ್ವೀಕೃತಿಗಳಲ್ಲಿನ ಹೆಚ್ಚಳವು ಇತರೆ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನಗಳು ಮತ್ತು ಹಣಕಾಸು ಆಯೋಗದ ಅನುದಾನಗಳಿಂದಾಗಿದ್ದು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳಲ್ಲಿ ಇಳಿಕೆಯಿಂದ ಉತ್ತಾರವಾಗಿದೆ. ಇತರೆ ವರ್ಗಾವಣೆಗಳು ರಾಜ್ಯಗಳಿಗೆ ಅನುದಾನಗಳು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿಗೆ ವಂತಿಗೆಯಡೆಗೆ ಅನುದಾನವನ್ನು ಹೊರತುಪಡಿಸಿ, ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದ ಉಂಟಾದ ರಾಜಸ್ವ ನಷ್ಟದ ಪರಿಹಾರ ₹10,754 ಕೋಟಿಗಳನ್ನು ಒಳಗೊಂಡಿದೆ.

#### 1.4.3.1 14ನೇ ಹಣಕಾಸು ಆಯೋಗದ ಅನುದಾನಗಳು

ಭಾರತ ಸಂವಿಧಾನದ ಅನುಚ್ಛೇದ 280ರಡಿ ರಾಷ್ಟ್ರಪತಿಗಳಿಂದ 2ನೇ ಜನವರಿ 2013ರಂದು ರಚಿಸಲ್ಪಟ್ಟ ಹದಿನಾಲ್ಕನೇ ಹಣಕಾಸು ಆಯೋಗದ ಉಲ್ಲೇಖಿತ ನಿಬಂಧನೆಗಳನುಸಾರ ರಾಜ್ಯದ ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳಿಗೆ ಪೂರಕವಾಗುವಂತೆ ರಾಜ್ಯದ ಸಂಚಿತ ನಿಧಿಯನ್ನು ಅಧಿಕಗೊಳಿಸುವ ಅಗತ್ಯವಿರುವ ಕ್ರಮಗಳ ಬಗ್ಗೆ ಆಯೋಗವು ಶಿಫಾರಸು ಮಾಡಬೇಕು.

- **ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು**

2018–19ರಲ್ಲಿ ಆಯೋಗವು **ಕೋಷ್ಟಕ 1.11**ರಲ್ಲಿ ಸೂಚಿಸಿರುವ ರಾಜ್ಯದಲ್ಲಿನ ಪ್ರದೇಶಗಳಿಗೆ ₹3,425.57 ಕೋಟಿಗಳನ್ನು ವರ್ಗಾವಣೆಗೆ ಶಿಫಾರಸು ಮಾಡಿತು.

**ಕೋಷ್ಟಕ 1.11: 2018–19ರಲ್ಲಿ ವರ್ಗಾವಣೆಗೆ ಶಿಫಾರಸು ಮಾಡಿದ ಮತ್ತು ವಾಸ್ತವವಾಗಿ ಬಿಡುಗಡೆಯಾದ ಅನುದಾನಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಗಾವಣೆಗಳು | ಶಿಫಾರಸು ಮಾಡಿದ ಮೊತ್ತ | ವಾಸ್ತವ ಬಿಡುಗಡೆಗಳು | ಕೊರತೆ |
|---|---|---|---|---|
| ಅ | ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮೂಲ ಅನುದಾನಗಳು | 1,856.02 | 1,841.54 | 14.48 |
| ಆ | ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳು (2018–19) | 234.08 | – | 234.08 |
| ಇ | ನಗರ ಸ್ಥಳೀಯ ಸಂಸ್ಥೆಗಳಿಗೆ ಮೂಲ ಅನುದಾನಗಳು | 1,040.27 | 1,040.27 | – |
| ಈ | ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯ ನಿರ್ವಹಣಾ ಅನುದಾನಗಳು | 295.20 | – | 295.20 |
| | **ಒಟ್ಟು** | **3,425.57** | **2,881.81** | **543.76** |

ಮಾರ್ಚ್ 2019ರಲ್ಲಿದ್ದಂತೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ಮೂಲ ಅನುದಾನ[7] ₹1,856.02 ಕೋಟಿಗಳಿಗೆದುರಾಗಿ ₹1,841.54 ಕೋಟಿಗಳನ್ನು ಮತ್ತು ರಾಜ್ಯ ಸ್ಥಳೀಯ ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ಮೂಲ ಅನುದಾನವಾದ ಸಂಪೂರ್ಣ ₹1,040.27 ಕೋಟಿಗಳನ್ನು ಸ್ವೀಕರಿಸಿತ್ತು.

ಹದಿನಾಲ್ಕನೆಯ ಹಣಕಾಸು ಆಯೋಗವು **ಕೋಷ್ಟಕ 1.12**ರಲ್ಲಿ ಸೂಚಿಸಿದಂತೆ ಗ್ರಾಮ ಪಂಚಾಯತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಕ್ಕೆ ಅರ್ಹರಾಗಲು ಕೆಳಕಂಡ ಷರತ್ತುಗಳನ್ನು ಶಿಫಾರಸು ಮಾಡಿತ್ತು.

**ಕೋಷ್ಟಕ 1.12: ಕಾರ್ಯನಿರ್ವಹಣಾ ಅನುದಾನಗಳ ಬಿಡುಗಡೆಗಾಗಿ ಷರತ್ತುಗಳು**

| ಗ್ರಾಮ ಪಂಚಾಯತಿಗಳು |
|---|
| ➢ ಗ್ರಾಮ ಪಂಚಾಯತಿಗಳು ಯಾವ ವರ್ಷಕ್ಕೆ ಕಾರ್ಯನಿರ್ವಾಹಕ ಅನುದಾನಕ್ಕೆ ಮನವಿ ಮಾಡುತ್ತವೋ ಆ ವರ್ಷದ ಹಿಂದಿನ ಎರಡು ವರ್ಷಕ್ಕಿಂತ ಹಳೆಯದಲ್ಲದ ವರ್ಷದ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಗಳನ್ನು ಸಲ್ಲಿಸಬೇಕಾಗುತ್ತದೆ.<br>➢ ವಾರ್ಷಿಕ ಲೆಕ್ಕಗಳಲ್ಲಿ ಬಿಂಬಿಸಿದಂತೆ ಸ್ಥಳೀಯ ಸಂಸ್ಥೆಯ ಸ್ವಂತ ಆದಾಯದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಳವನ್ನು ತೋರಿಸಬೇಕು. |
| **ನಗರ ಸ್ಥಳೀಯ ಸಂಸ್ಥೆಗಳು** |
| ➢ ನಗರ ಸ್ಥಳೀಯ ಸಂಸ್ಥೆಗಳು ಯಾವ ವರ್ಷಕ್ಕೆ ಕಾರ್ಯನಿರ್ವಾಹಕ ಅನುದಾನಕ್ಕೆ ಮನವಿ ಮಾಡುತ್ತವೋ ಆ ವರ್ಷದ ಹಿಂದಿನ ಎರಡು ವರ್ಷಕ್ಕಿಂತ ಹಳೆಯದಲ್ಲದ ವರ್ಷದ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಗಳನ್ನು ಸಲ್ಲಿಸಬೇಕಾಗುತ್ತದೆ. |
| ➢ ವಾರ್ಷಿಕ ಲೆಕ್ಕಗಳಲ್ಲಿ ಬಿಂಬಿಸಿದಂತೆ ಸ್ಥಳೀಯ ಸಂಸ್ಥೆಯ ಸ್ವಂತ ಆದಾಯದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಳವನ್ನು ತೋರಿಸಬೇಕು. |
| ➢ ಸ್ವಚ್ಛ ಭಾರತ್ ಅಭಿಯಾನ, ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕಗಳ ಸಂಗ್ರಹಣೆ ಮುಂತಾದವುಗಳಡಿ ಸಾಧಿಸಿದ ಗುರಿಗಳ ಪರಿಶೀಲನೆ |

2018-19ರ ಸಾಲಿನಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಾಹಕ ಅನುದಾನಗಳನ್ನು[8] ಮಾರ್ಚ್ 2019ರ ಅಂತ್ಯದವರೆಗೂ ಬಿಡುಗಡೆಗೊಳಿಸಿರಲಿಲ್ಲ.

2018-19ರ ಸಾಲಿನ ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯನಿರ್ವಾಹಕ ಅನುದಾನಗಳ ಬೇಡಿಕೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ತನ್ನ ಉತ್ತರದಲ್ಲಿ ಹೇಳಿತು (ಸೆಪ್ಟಂಬರ್ 2019). ಪೌರಾಡಳಿತ ನಿರ್ದೇಶನಾಲಯವು 2018-19ರ ಸಾಲಿನ ಕಾರ್ಯನಿರ್ವಹಣಾ ಅನುದಾನಗಳ ಕೆಲವು ಬೇಡಿಕೆಗಳನ್ನು ಸರ್ಕಾರದ ಸ್ಮಾರ್ಟ್‌ನೆಟ್ 2018-19ರ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ ಸಲ್ಲಿಸಲಾಗಿದೆ ಮತ್ತು ಡಿಸೆಂಬರ್ 2018ರಲ್ಲಿ ಪತ್ರವನ್ನೂ ಸಹ ಸಲ್ಲಿಸಲಾಗಿದೆ ಎಂದು ತನ್ನ ಉತ್ತರದಲ್ಲಿ ತಿಳಿಸಿತು (ನವೆಂಬರ್ 2019). ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು ರಾಜ್ಯದ ಬೇಡಿಕೆಯನ್ನು ಪರಿಶೀಲಿಸಿ ರಾಜ್ಯಕ್ಕೆ ಕಾರ್ಯನಿರ್ವಹಣಾ ಅನುದಾನವನ್ನು ಬಿಡುಗಡೆಗೊಳಿಸಲು ಆರ್ಥಿಕ ಮಂತ್ರಾಲಯಕ್ಕೆ ಶಿಫಾರಸು ಮಾಡಿತು. ಪ್ರಸ್ತಾವನೆಯು ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯದಲ್ಲಿದೆ.

[7] ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥಗಳಿಗೆ 2017-18ರ ಮೂಲ ಅನುದಾನಗಳು ಕ್ರಮವಾಗಿ ₹1,580.18 ಕೋಟಿ ಮತ್ತು ₹899.25 ಕೋಟಿಗಳಾಗಿವೆ.

[8] ಪಂಚಾಯತ್‌ರಾಜ್ ಸಂಸ್ಥೆಗಳಿಗೆ 2017-18ರಲ್ಲಿ ಕಾರ್ಯನಿರ್ವಾಹಕ ಅನುದಾನಗಳು ₹204.08 ಕೋಟಿಗಳಷ್ಟಿದ್ದವು.

#### 1.4.3.2 ವಿಪತ್ತು ಪರಿಹಾರದಡಿ ಬಿಡುಗಡೆಗಳು

ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯ ವಿಪತ್ತು ಪರಿಹಾರ ನಿಧಿಗೆ ವಂತಿಗೆಯು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ 90:10ರ ಅನುಪಾತದಲ್ಲಿರಬೇಕೆಂದು ಶಿಫಾರಸು ಮಾಡಿತ್ತು. ಶಿಫಾರಸು ಮಾಡಲಾದ ₹288 ಕೋಟಿಗಳ ಕೇಂದ್ರ ಸರ್ಕಾರದ ಪಾಲಿಗೆ ಪ್ರತಿಯಾಗಿ ರಾಜ್ಯ ಸರ್ಕಾರವು ಸಂಪೂರ್ಣ ₹288 ಕೋಟಿಗಳನ್ನು ಸ್ವೀಕರಿಸಿತು. ಕೇಂದ್ರ ಸರ್ಕಾರದ ವಂತಿಗೆಯನ್ನು (₹288 ಕೋಟಿ) ರಾಜ್ಯ ಸರ್ಕಾರದ ವಂತಿಗೆಯೊಂದಿಗೆ (₹32 ಕೋಟಿ) ಸಾರ್ವಜನಿಕ ಲೆಕ್ಕಗಳಲ್ಲಿರುವ ರಾಜ್ಯ ವಿಪತ್ತು ಪರಿಹಾರ ನಿಧಿಗೆ ವರ್ಗಾಯಿಸಲಾಗಿದೆ.

## 1.5 ಬಂಡವಾಳ ಸ್ವೀಕೃತಿಗಳು

2018–19ರಲ್ಲಿ ರಾಜ್ಯ ಸರ್ಕಾರದ ಬಂಡವಾಳ ಸ್ವೀಕೃತಿಗಳು ₹41,939 ಕೋಟಿಗಳಷ್ಟಿದ್ದು ಋಣ ಮತ್ತು ಋಣೇತರ (ಇತರೆ ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಿ) ಸ್ವೀಕೃತಿಗಳನ್ನು ಒಳಗೊಂಡಿದೆ. ಪ್ರಸಕ್ತ ವರ್ಷದಲ್ಲಿ ₹41,914 ಕೋಟಿಗಳ ಸಾರ್ವಜನಿಕ ಋಣ ಸ್ವೀಕೃತಿಯು ₹40,470 ಕೋಟಿಗಳ ಆಂತರಿಕ ಋಣ (ಶೇಕಡ 97) ಮತ್ತು ₹1,444 ಕೋಟಿಗಳಷ್ಟು ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳನ್ನು (ಶೇಕಡ ಮೂರು) ಒಳಗೊಂಡಿದೆ. ಆಂತರಿಕ ಋಣದಲ್ಲಿ ಮಾರುಕಟ್ಟೆ ಸಾಲಗಳು ಪ್ರಧಾನ ಪಾಲನ್ನು ಹೊಂದಿದ್ದು ಇದು ಶೇಕಡ 94ರಷ್ಟಿದ್ದರೆ, ನಂತರದ ಸ್ಥಾನಗಳು ಕೇಂದ್ರ ಸರ್ಕಾರದ ಸಾಲಗಳು (ಶೇಕಡ ನಾಲ್ಕು) ಮತ್ತು ಸಮಾಲೋಚಿತ ಸಾಲಗಳದ್ದಾಗಿವೆ (ಶೇಕಡ ಎರಡು). ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಇತರೆ ಸಾಲಗಳನ್ನು ಮಾತ್ರ ಒಳಗೊಂಡಿದೆ. 2014–15ರಿಂದ 2018–19ರ ಅವಧಿಯಲ್ಲಿ ಬಂಡವಾಳ ಸ್ವೀಕೃತಿಗಳ ಸಂಯೋಜನೆಯಲ್ಲಿನ ಪ್ರವೃತ್ತಿಯನ್ನು **ಅನುಬಂಧ 1.4**ರಲ್ಲಿ ನೀಡಿದೆ.

ಒಟ್ಟಾರೆ, 2014–15ರಲ್ಲಿ ₹21,968 ಕೋಟಿಗಳಿದ್ದ ಬಂಡವಾಳ ಸ್ವೀಕೃತಿಗಳು 2018–19ರಲ್ಲಿ ₹41,939 ಕೋಟಿಗಳಿಗೆ ಏರಿದೆ. 2014–15 ರಿಂದ 2018–19ರ ಅವಧಿಯಲ್ಲಿ ಋಣ ಸ್ವೀಕೃತಿಗಳು, ಬಂಡವಾಳ ಸ್ವೀಕೃತಿಗಳ ಪ್ರಧಾನ ಭಾಗವಾಗಿದ್ದು ಇದು ಶೇಕಡ 98 ಮತ್ತು 100ರ ನಡುವೆ ಇದ್ದಿತು. ಈ ಅವಧಿಯಲ್ಲಿ ಸಾಲ ಮತ್ತು ಮುಂಗಡಗಳ ವಸೂಲಿಯು ಅತ್ಯಲ್ಪವಾಗಿತ್ತು. 2018–19ರ ಅಂತ್ಯಕ್ಕೆ ವಸೂಲಿಯು ಬಾಕಿ ಇರುವ ಸಾಲ ಮತ್ತು ಮುಂಗಡಗಳ ಮೊತ್ತದ ಶೇಕಡ ಒಂದಕ್ಕಿಂತಲೂ ಕಡಿಮೆಯಿತ್ತು. ಇದು ಪುಸ್ತಕ ಹೊಂದಾಣಿಕೆಯ ಮೂಲಕ ವಿದ್ಯುಚ್ಛಕ್ತಿ ಸರಬರಾಜು ಸಂಸ್ಥೆಗಳ ಬಾಕಿ ಇದ್ದ ಸಾಲಗಳನ್ನು ರಾಜಸ್ವ ಲೆಕ್ಕದಲ್ಲಿ ಸಹಾಯಧನವಾಗಿ ಪರಿಗಣಿಸಿದ ₹14.74 ಕೋಟಿಗಳನ್ನು ಸಹ ಒಳಗೊಂಡಿದೆ.

## 1.6 ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು

ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿ, ಠೇವಣಿಗಳು, ಅಮಾನತ್ತು, ಇರಸಾಲುಗಳು ಮುಂತಾದ ಸಂಚಿತ ನಿಧಿಯ ಭಾಗವಲ್ಲದ ಕೆಲವು ವ್ಯವಹಾರಗಳ ಸ್ವೀಕೃತಿ ಮತ್ತು ಬಟವಾಡೆಗಳನ್ನು ಸಂವಿಧಾನದ ಅನುಚ್ಛೇದ 266(2) ರ ಅಡಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇಡಲಾಗುತ್ತದೆ ಮತ್ತು ಇದಕ್ಕೆ ಶಾಸನ ಸಭೆಯ ಅನುಮೋದನೆಯ ಅಗತ್ಯವಿರುವುದಿಲ್ಲ. ಈ ಸಂದರ್ಭಗಳಲ್ಲಿ ವಹಿವಾಟುಗಳು ಕೇವಲ ಲೆಕ್ಕಗಳ ಮುಖಾಂತರ ಹಾದುಹೋಗುತ್ತವೆ. ಸರ್ಕಾರವು ಸಾರ್ವಜನಿಕ ಹಣದ ಬ್ಯಾಂಕರ್/ ಟ್ರಸ್ಟಿಯಾಗಿ ಪಾತ್ರವಹಿಸುತ್ತದೆ. 2014–15ರಿಂದ 2018–19ರ ಅವಧಿಯಲ್ಲಿ ಸಾರ್ವಜನಿಕ ಲೆಕ್ಕದಡಿಯ ನಿವ್ವಳ ವ್ಯವಹಾರಗಳನ್ನು **ಕೋಷ್ಟಕ 1.13**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.13: ಸಾರ್ವಜನಿಕ ಲೆಕ್ಕದಡಿಯ ನಿವ್ವಳ ವಹಿವಾಟುಗಳು**

(₹ ಕೋಟಿಗಳಲ್ಲಿ)

| ಸಾರ್ವಜನಿಕ ಲೆಕ್ಕದ ವಿಭಾಗಗಳಲ್ಲಿನ ಸಂಪನ್ಮೂಲಗಳು (ನಿವ್ವಳ) | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಐ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ | 2,156 | 2,086 | 2,657 | 2,811 | 3,292 |
| ಜೆ. ಮೀಸಲು ನಿಧಿಗಳು | 1,547 | 2,081 | 6,013 | 3,019 | 3,197 |
| ಕೆ. ಠೇವಣಿಗಳು ಮತ್ತು ಮುಂಗಡಗಳು | 3,702 | 284 | 3,041 | 1,834 | 3,068 |
| ಎಲ್. ಅಮಾನತ್ತು ಮತ್ತು ಇತರೆ | 3,282 | 990 | 491 | (–) 1,509 | (–) 6,087 |
| ಎಮ್. ಇರಸಾಲುಗಳು | (–) 32 | (–) 17 | (–) 38 | (–) 76 | (–) 39 |
| ಒಟ್ಟು | **10,655** | **5,424** | **12,164** | **6,079** | **3,431** |

2014–15ರಲ್ಲಿ ₹10,655 ಕೋಟಿಗಳಷ್ಟಿದ್ದ ಸಾರ್ವಜನಿಕ ಲೆಕ್ಕದಲ್ಲಿನ ನಿವ್ವಳ ಸ್ವೀಕೃತಿಯು 2018–19ರಲ್ಲಿ ₹3,431 ಕೋಟಿಗಳಿಗೆ ಇಳಿದಿದೆ. ಇದು ರಾಜ್ಯದ ಸಾಮಾನ್ಯ ಆದಾಯಗಳಿಂದ ಸಾರ್ವಜನಿಕ ಲೆಕ್ಕಗಳಲ್ಲಿನ ಮೂಲಸೌಕರ್ಯ ನಿಧಿಗಳಿಗೆ ವರ್ಗವಾದ ₹1,144 ಕೋಟಿಗಳನ್ನು ಒಳಗೊಂಡಿದೆ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿಗಳು ಮತ್ತು ಠೇವಣಿಗಳು ಮತ್ತು ಮುಂಗಡಗಳಡಿಯ ನಿವ್ವಳ ಮೊತ್ತಗಳು ವಿತ್ತೀಯ ಕೊರತೆಯನ್ನು ತುಂಬುವಲ್ಲಿ ಪ್ರಧಾನ ಪಾಲು ಹೊಂದಿವೆ. ಠೇವಣಿಗಳು ಮತ್ತು ಮುಂಗಡಗಳಡಿಯ ಸ್ವೀಕೃತಿಗಳು ಪಂಚಾಯತ್ ಸಂಸ್ಥೆಗಳ ನಿಧಿಯಲ್ಲಿ ಮಾಡಿದ ₹639 ಕೋಟಿಗಳ ಠೇವಣಿಯನ್ನು ಒಳಗೊಂಡಿದೆ. 2018–19ರಲ್ಲಿ ಅಮಾನತ್ತು ಮತ್ತು ಇತರ ವಿಭಾಗದಡಿ ವ್ಯವಹಾರಗಳಲ್ಲಿ ಏರಿಕೆಯಾಗಿದ್ದು ಇದು ₹6,072 ಕೋಟಿಗಳಷ್ಟು ಮೊತ್ತದ ನಗದೀಕರಿಸಿಲ್ಲದ ಚೆಕ್ಕುಗಳಿಗೆ ಸಂಬಂಧಿಸಿದೆ.

## 1.7 ಸಂಪನ್ಮೂಲಗಳ ಅನ್ವಯ

ಪ್ರಧಾನವಾದ ವೆಚ್ಚ ಜವಾಬ್ದಾರಿಗಳು ಸರ್ಕಾರಕ್ಕೆ ವಹಿಸಲ್ಪಟ್ಟಿರುವುದರಿಂದ ರಾಜ್ಯ ಸರ್ಕಾರದ ಮಟ್ಟದಲ್ಲಿ ವೆಚ್ಚದ ಹಂಚಿಕೆಯ ವಿಶ್ಲೇಷಣೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ಹಣಕಾಸು ಹೊಣೆಗಾರಿಕೆಯ ಶಾಸನಗಳ ಚೌಕಟ್ಟಿನೊಳಗೆ ಸಾಲ ಅಥವಾ ಕೊರತೆಯ ಮೂಲಕ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು ಆಯವ್ಯಯದ ನಿರ್ಬಂಧಗಳಿವೆ. ಅದೇ ವೇಳೆಯಲ್ಲಿ, ರಾಜ್ಯ ಮಟ್ಟದಲ್ಲಿ ಚಾಲ್ತಿಯಲ್ಲಿರುವ ವಿತ್ತೀಯ ತಿದ್ದುಪಡಿ ಮತ್ತು ಕ್ರೋಢೀಕರಣ ಪ್ರಕ್ರಿಯೆಯು ವೆಚ್ಚದ ಬೆಲೆಯಲ್ಲಿ ಅದರಲ್ಲೂ ಸಾಮಾಜಿಕ ಮತ್ತು ಆರ್ಥಿಕ ವಲಯದ ಅಭಿವೃದ್ಧಿ ಗಮನದ ವೆಚ್ಚದಲ್ಲಿ ಅಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವುದು ಮುಖ್ಯವಾಗುತ್ತದೆ.

ವಿವೇಚನಾಯುಕ್ತ ಹಣಕಾಸು ನಿರ್ವಹಣೆಯು ರಾಜಸ್ವ ವೆಚ್ಚಕ್ಕಿಂತಲೂ ಹೆಚ್ಚಿನ ರಾಜಸ್ವ ಸ್ವೀಕೃತಿಗಳನ್ನು ಗಳಿಸಿ ಉಳಿತಾಯವನ್ನು ಸಾಧಿಸುವ ಗುರಿಯನ್ನು ಹೊಂದಿರಬೇಕು. ಸಾಲವಾಗಿ ಪಡೆದ ಮೊತ್ತಗಳನ್ನು ಆದಾಯ ಉತ್ಪತ್ತಿಮಾಡುವ ಚಟುವಟಿಕೆಗಳಿಗೆ ಅಥವಾ ಪರೋಕ್ಷವಾಗಿ ತೆರಿಗೆ ಅಥವಾ ತೆರಿಗೆಯೇತರ ಆದಾಯವನ್ನು ಸೃಷ್ಟಿಸುವ ಉತ್ಪಾದನೆಗೆ ಬಳಸಿದಲ್ಲಿ ಅವು ಋಣಸೇವೆಗೆ ಮತ್ತು ಸಾಲಗಳ ಮರುಪಾವತಿಗೆ ಬಳಕೆಯಾಗಬಹುದು.

### 1.7.1 ವೆಚ್ಚದ ವೃದ್ಧಿ ಮತ್ತು ಸಂಯೋಜನೆ

ಒಟ್ಟು ವೆಚ್ಚದ ಮೂಲ ಪ್ರಮಿತಿಗಳು, ವೃದ್ಧಿ ಮತ್ತು ರಾಒಆಂಉದ ಜೊತೆಗೆ ಹೋಲಿಕೆ ಮುಂತಾದವುಗಳನ್ನು ಅನುಬಂಧ **1.4**ರಲ್ಲಿ ನೀಡಿದೆ. ನಕ್ಷೆ **1.11** ಐದು ವರ್ಷಗಳ ಅವಧಿಯಲ್ಲಿ (2014–15ರಿಂದ 2018–19) ಒಟ್ಟು ವೆಚ್ಚದ ಪ್ರವೃತ್ತಿಯನ್ನು ಮತ್ತು ರಾಜಸ್ವ, ಬಂಡವಾಳ ಮತ್ತು ಸಾಲ ಹಾಗೂ ಮುಂಗಡಗಳಡಿ ಅದರ ಸಂಯೋಜನೆಯನ್ನೂ ತೋರಿಸುತ್ತದೆ.

2014–15ರಲ್ಲಿ ₹1,23,812 ಕೋಟಿಯಿದ್ದ ಒಟ್ಟು ವೆಚ್ಚವು 2018–19ರಲ್ಲಿ ₹2,03,446 ಕೋಟಿಗೆ ಏರಿ ಇದು ರಾಜಸ್ವ ವೆಚ್ಚದಲ್ಲಿನ (₹60,686 ಕೋಟಿ), ಬಂಡವಾಳ ವೆಚ್ಚದಲ್ಲಿನ (₹15,037 ಕೋಟಿ) ಮತ್ತು ಸಾಲಗಳು ಮತ್ತು ಮುಂಗಡಗಳ ವಿತರಣೆಯಲ್ಲಿನ (₹3,911 ಕೋಟಿ) ಏರಿಕೆಯಿಂದ ಶೇಕಡಾ 64ರಷ್ಟು ಹೆಚ್ಚಳವಾಗಿದೆ.

2014–15ರಿಂದ 2018–19ರ ಅವಧಿಯಲ್ಲಿ, ಒಟ್ಟಾರೆ ವೆಚ್ಚದ ಸರಾಸರಿ 82ರಷ್ಟು ರಾಜಸ್ವ ಲೆಕ್ಕದಲ್ಲಿ ಆಗಿತ್ತು. 2018–19ರಲ್ಲಿ ಇದು ಶೇಕಡ 81ರಷ್ಟಿದೆ. ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಶೇಕಡ 19ರಷ್ಟಿದೆ.

**ನಕ್ಷೆ 1.11: ಒಟ್ಟು ವೆಚ್ಚ ಪ್ರವೃತ್ತಿಗಳು ಮತ್ತು ಸಂಯೋಜನೆ**




2014–15ರಿಂದ 2018–19ರ ಅವಧಿಗೆ ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳು ಇವುಗಳ ಪಾಲನ್ನು **ನಕ್ಷೆ 1.12**ರಲ್ಲಿ ನೀಡಲಾಗಿದೆ.

**ನಕ್ಷೆ 1.12: ಒಟ್ಟು ವೆಚ್ಚ – ಸಂಯೋಜನೆಗಳ ಪ್ರವೃತ್ತಿ**

(ಪಾಲಿನ ಶೇಕಡಾವರು)



ಒಟ್ಟು ವೆಚ್ಚದಲ್ಲಿ ರಾಜಸ್ವ ವೆಚ್ಚವು ಬಹು ದೊಡ್ಡ ಪಾಲನ್ನು ಹೊಂದಿದ್ದು ಬಂಡವಾಳ ವೆಚ್ಚವನ್ನು ಹೆಚ್ಚಿಸಲು ಕಡಿಮೆ ಅವಕಾಶವಿತ್ತು. ಒಟ್ಟು ವೆಚ್ಚದಲ್ಲಿ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳು, ಸಾಲಗಳು ಮತ್ತು ಮುಂಗಡಗಳು ಮತ್ತು ಸಹಾಯಾನುದಾನ ಇವುಗಳ ಚಟುವಟಿಕೆಗಳ ಪ್ರವೃತ್ತಿಯನ್ನು **ಕೋಷ್ಟಕ 1.14**ರಲ್ಲಿ ನೀಡಲಾಗಿದೆ.

### ಕೋಷ್ಟಕ 1.14: ಒಟ್ಟು ವೆಚ್ಚ – ಚಟುವಟಿಕೆಗಳ ಪ್ರವೃತ್ತಿ

(ಪಾಲು ಶೇಕಡಾವಾರಿನಲ್ಲಿ)

| | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಸಾಮಾನ್ಯ ಸೇವೆಗಳು | 23.33 | 22.97 | 19.95 | 19.90 | 21.37 |
| ಸಾಮಾಜಿಕ ಸೇವೆಗಳು | 35.17 | 37.30 | 37.93 | 37.77 | 38.20 |
| ಆರ್ಥಿಕ ಸೇವೆಗಳು | 36.17 | 34.87 | 37.42 | 35.83 | 35.55 |
| ಸಾಲ ಮತ್ತು ಮುಂಗಡಗಳು | 0.47 | 0.47 | 1.19 | 2.86 | 2.21 |
| ಸಹಾಯಾನುದಾನ ಮತ್ತು ವಂತಿಗೆಗಳು | 4.86 | 4.39 | 3.51 | 3.64 | 2.67 |

*ಆಕರ: ಸಂಬಂಧಿತ ವರ್ಷಗಳ ಹಣಕಾಸು ಲೆಕ್ಕಗಳು:*

ಈ ಅಂಶಗಳ ಸಾಪೇಕ್ಷ ಪಾಲಿನ ನಡೆಯು, 2014–15ರಿಂದ 2018–19ರ ಅವಧಿಯಲ್ಲಿ ಅಂತರ ವರ್ಷದ ಅಲ್ಪ ಭಿನ್ನತೆಯೊಂದಿಗೆ ಸ್ಥಿರತೆಯನ್ನು ಪ್ರದರ್ಶಿಸಿತು. ಸಾಮಾನ್ಯ ಸೇವೆಗಳ ಪಾಲು ನಿಧಾನವಾಗಿ ಇಳಿದಿದ್ದು 2018–19ರಲ್ಲಿ ಅದರ ಪಾಲು ಸ್ವಲ್ಪ ಏರಿತ್ತು. ಸಾಮಾಜಿಕ ಸೇವೆಗಳ ಪಾಲು 2015–16ರಿಂದ 2017–18ರ ನಡುವೆ ಶೇಕಡ 37ರಲ್ಲಿದ್ದು ಬಹುತೇಕ ಸ್ಥಿರವಾಗಿತ್ತು. 2018–19ರಲ್ಲಿ ಅದು ಶೇಕಡ 38ಕ್ಕೆ ಏರಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಆರ್ಥಿಕ ಸೇವೆಗಳಲ್ಲಿ ಅಂತಹ ಬದಲಾವಣೆಯಿರಲಿಲ್ಲ. ಸಾಲ ಮತ್ತು ಮುಂಗಡಗಳು 2014–15 ಮತ್ತು 2015–16ರಲ್ಲಿ ಅತ್ಯಂತ ಕಡಿಮೆಯಿದ್ದು 2017–18ರಲ್ಲಿ ಶೇಕಡ 2.86ಕ್ಕೆ ಏರಿ 2018–19ರಲ್ಲಿ ಶೇಕಡ 2.21ಕ್ಕೆ ಇಳಿದಿದೆ. ಸಹಾಯಾನುದಾನ ಮತ್ತು ವಂತಿಗೆಗಳ ಪಾಲು ಇಳಿಕೆಯ ಪ್ರವೃತ್ತಿಯಲ್ಲಿದ್ದು 2018–19ರಲ್ಲಿ ಅತ್ಯಂತ ಕಡಿಮೆಯಾಗಿ ಶೇಕಡಾ 2.67ರಷ್ಟಿತ್ತು.

ವೆಚ್ಚ ಸುಧಾರಣಾ ಆಯೋಗವು (ಇಆರ್‌ಸಿ) ತನ್ನ ಮೊದಲ ವರದಿಯಲ್ಲಿ (ಫೆಬ್ರವರಿ 2010) ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಬೇಕು ಮತ್ತು ವಿವೇಚನಾಯುಕ್ತ ಹಂಚಿಕೆಗಳ ಮೂಲಕ ವಿತ್ತೀಯ ಅನಿಶ್ಚಿತತೆಗಳನ್ನು ತಡೆಯಬೇಕೆಂದು ಶಿಫಾರಸು ಮಾಡಿದೆ. ಅದು ಬಂಡವಾಳ ವೆಚ್ಚವನ್ನು (ಋಣ ಸೇವೆಯನ್ನು ಬಿಟ್ಟು) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಷ್ಟಿರುವಂತೆ ನಿರ್ವಹಿಸಬೇಕೆಂದು ಸಹಾ ಶಿಫಾರಸು ಮಾಡಿದೆ. ಆದರೆ, ಬಂಡವಾಳ ವೆಚ್ಚ ಮತ್ತು ರಾಒಆಉದ ಅನುಪಾತವು 2014–15ರಿಂದ 2018–19ರಲ್ಲಿ ಶೇಕಡ ಐದಕ್ಕಿಂತ ಕಡಿಮೆಯಿದ್ದಿತು. ಅದು 2014–15 ಮತ್ತು 2015–16ರಲ್ಲಿ ಶೇಕಡ ಎರಡರಷ್ಟಿದ್ದು 2016–17ರಿಂದ 2018–19ರಲ್ಲಿ ಸರಾಸರಿ ಶೇಕಡ ಮೂರಕ್ಕೆ ಏರಿದೆ.

ರಾಜಸ್ವ ವೆಚ್ಚವನ್ನು ಸಂಕುಚಿತಗೊಳಿಸುವ ಮೂಲಕ ಮಾತ್ರ ಸಾಧಿಸಬಹುದಾದ ಗಣನಾರ್ಹ ರಾಜಸ್ವ ಹೆಚ್ಚಳವು, ಬಂಡವಾಳ ವೆಚ್ಚವನ್ನು ಹೆಚ್ಚಿಸಬಹುದಾದರೂ, ಸರ್ಕಾರದ ರಾಜಸ್ವ ವೆಚ್ಚವು ನಿರ್ವಹಣೆ, ಸಾಮಾಜಿಕ ವಲಯ ಕಾರ್ಯಕ್ರಮಗಳು, ಮುಂತಾದ ಅತ್ಯವಶ್ಯಕ ವೆಚ್ಚಗಳನ್ನು ಒಳಗೊಂಡಿರುವುದರಿಂದ ಅದು ವಿಹಿತವಲ್ಲವೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಈ ಉತ್ತರವು ಒಪ್ಪಲರ್ಹವಲ್ಲ. ವೃದ್ಧಿಗೆ ಪ್ರಮುಖ ಸೂಚಕವಾಗಿರುವ ಮೂಲಭೂತ ಸೌಲಭ್ಯದ ಸೃಷ್ಟಿಗೆ ಬಂಡವಾಳ ವೆಚ್ಚವು ಅತ್ಯವಶ್ಯಕವಾಗಿದೆ. ರಾಜಸ್ವ ಶೇಖರಣೆಗೆ ಹೆಚ್ಚುವರಿ ಮಾರ್ಗಗಳನ್ನು ಕಾರ್ಯಗತಗೊಳಿಸುವ ಅವಶ್ಯಕತೆಯಿದೆ.

### 1.7.2 ರಾಜಸ್ವ ವೆಚ್ಚ

ರಾಜಸ್ವ ವೆಚ್ಚವು ಸರ್ಕಾರದ ದಿನನಿತ್ಯದ ವೆಚ್ಚಗಳನ್ನು, ಕೂಲಿ ಹಾಗೂ ಸಂಬಳ, ಪಿಂಚಣಿಗಳು, ಬಡ್ಡಿಪಾವತಿಗಳು, ಬಂಡವಾಳ ಕಾಮಗಾರಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಳ ವೆಚ್ಚ, ಸಹಾಯಧನಗಳು, ಸ್ಥಳೀಯ ಸಂಸ್ಥೆಗಳಿಗೆ, ಸಹಕಾರಿ ಸಂಸ್ಥೆಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ ಮತ್ತು ಇತರರಿಗೆ ಮಾಡುವ ವರ್ಗಾವಣೆಗಳನ್ನು ಒಳಗೊಂಡಿದೆ. ವೆಚ್ಚವನ್ನು ಆಡಳಿತ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳು ಎಂದು ವಿವಿಧ ಕಾರ್ಯವರ್ಗಗಳಾಗಿ ವಿಂಗಡಿಸಬಹುದು. ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಮೇಲಿನ ವೆಚ್ಚವು ಭೌತಿಕ ಮೂಲಸೌಕರ್ಯಗಳ ನಿರ್ಮಾಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಿಸಿದ್ದು ಇದನ್ನು ಉತ್ಪಾದಕ ವೆಚ್ಚ ಎಂದು ಪರಿಗಣಿಸಿದರೆ, ಸಾಮಾನ್ಯ ಆಡಳಿತ ಮತ್ತು ಋಣ ಸೇವೆಗಳ ಮೇಲಿನ ವೆಚ್ಚವನ್ನು ಅನುತ್ಪಾದಕ ಎಂದು ಪರಿಗಣಿಸಲಾಗುತ್ತದೆ.

ರಾಜಸ್ವ ವೆಚ್ಚವು 2014–15ರಲ್ಲಿ ₹1,03,614 ಕೋಟಿಗಳಿದ್ದು 2018–19 ರಲ್ಲಿ ₹1,64,300 ಕೋಟಿಗಳಿಗೆ ಏರಿ ಶೇಕಡ 59ರಷ್ಟು ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 15ರಷ್ಟು ಹೆಚ್ಚಾಗಿದ್ದು, ಇದು ಸಂಬಳ ವೆಚ್ಚ (₹5,099 ಕೋಟಿ), ಬಡ್ಡಿಪಾವತಿ (₹1,641 ಕೋಟಿ), ಪಿಂಚಣಿ (₹3,425 ಕೋಟಿ) ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ (₹1,589 ಕೋಟಿ) ಯಲ್ಲಿನ ಏರಿಕೆಯಿಂದ ಉಂಟಾಗಿದೆ.

2018–19ರಲ್ಲಿ ರಾಜಸ್ವ ವೆಚ್ಚವು ಖಾತರಿ ಶುಲ್ಕ[9] (₹54.19 ಕೋಟಿ), ಕರ್ನಾಟಕ ಸರ್ಕಾರ ವಿಮಾ ನಿಧಿಯ ಬಡ್ಡಿಯ ಹೊಂದಾಣಿಕೆ (₹220.26 ಕೋಟಿ), ಕರ್ನಾಟಕ ಸರ್ಕಾರಿ ವಿಮೆ ಯೋಜನೆಗಳ ನಿಧಿ ಶಿಲ್ಕುಗಳ ಮೇಲಿನ ಬಡ್ಡಿ ಹೊಂದಾಣಿಕೆ (₹972.89 ಕೋಟಿ), ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿಯಡಿಯ ಸಾಮಾನ್ಯ ಭವಿಷ್ಯ ನಿಧಿ ಶಿಲ್ಕುಗಳ ಮೇಲಿನ ಬಡ್ಡಿಯ ಹೊಂದಾಣಿಕೆ (₹1,164.40 ಕೋಟಿ), ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುತ್ ತೆರಿಗೆ (₹2,018.27 ಕೋಟಿ) ಬಾಕಿಯನ್ನು ಸಹಾಯಧನವೆಂದು ಪರಿಗಣಿಸಿರುವುದು, ಮತ್ತು ಸರ್ಕಾರಿ ಸ್ವಾಮ್ಯದ ವಾಣಿಜ್ಯ ಉದ್ಯಮಗಳಲ್ಲಿ ಹೂಡಿದ ಬಂಡವಾಳದ ಮೇಲಿನ ಬಡ್ಡಿಯ ಪುಸ್ತಕ ಹೊಂದಾಣಿಕೆ (₹0.72 ಕೋಟಿ)ಗಳ ಒಟ್ಟು ಮೊತ್ತವಾದ ₹4,430.73 ಕೋಟಿಗಳನ್ನು ಸಹ ಒಳಗೊಂಡಿದೆ.

### 1.7.3 ಬದ್ಧ ವೆಚ್ಚಗಳು

ಬಹುಪಾಲು ರಾಜಸ್ವ ವೆಚ್ಚಗಳು ಸಂಬಳಗಳು, ಪಿಂಚಣಿ, ಬಡ್ಡಿ ಪಾವತಿಗಳು, ಸಹಾಯಧನ ಮುಂತಾದ ಬದ್ಧ ವೆಚ್ಚಗಳ ರೂಪದಲ್ಲಿದೆ. ಇದು ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯದ ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಬಂಡವಾಳ ಹೂಡಿಕೆಗಳ ಮೂಲಕ ಪೂರೈಸುವಲ್ಲಿ ಮತ್ತು ವೆಚ್ಚದ ಆದ್ಯತೀಕರಣವನ್ನು ಬಾಧಿಸುತ್ತದೆ. ಈ ಅಂಗಗಳಡಿಯ ವೆಚ್ಚವನ್ನು ಮತ್ತು ಮಧ್ಯಂತರ ವಿತ್ತೀಯ ಯೋಜನೆ 2019–23ರಲ್ಲಿ ಬದ್ಧವೆಚ್ಚವೆಂದು ಪರಿಗಣಿಸಲಾದ ಸಾಮಾಜಿಕ ಭದ್ರತೆಯಡಿಯ ಪಿಂಚಣಿಗಳು, ಸಹಾಯಾನುದಾನ ಮತ್ತಿತರ ಆರ್ಥಿಕ ಸಹಾಯಗಳು, ಆಡಳಿತ ವೆಚ್ಚ, ಸರ್ಕಾರದ ವಿವಿಧ ಯೋಜನೆಗಳಡಿ ಬರುವ ಅಂತರ್ಗತ ಸಹಾಯಧನ, ಸಹಾಯಾನುದಾನ ಮತ್ತು ಆರ್ಥಿಕ ನೆರವು, ಆಡಳಿತ ವೆಚ್ಚ, ಸ್ಥಳೀಯ ಸಂಸ್ಥೆ ಮುಂತಾದವುಗಳಿಗೆ ವರ್ಗಾವಣೆ ಮುಂತಾದ ಕೆಲವು ವೆಚ್ಚಗಳ ವಿವರಗಳನ್ನು 2014–15ರಿಂದ 2018–19ರ ಅವಧಿಯಲ್ಲಿದ್ದಂತೆ **ಕೋಷ್ಟಕ 1.15** ರಲ್ಲಿ ಮತ್ತು **ನಕ್ಷೆ 1.13**ರಲ್ಲಿ ನೀಡಲಾಗಿದೆ.

[9] ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹12.78 ಕೋಟಿ), ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (₹1.83 ಕೋಟಿ) ಮತ್ತು ಕರ್ನಾಟಕ ವಿದ್ಯುತ್ ಕಂಪನಿ ಲಿಮಿಟೆಡ್ (₹39.58 ಕೋಟಿ).

## ಕೋಷ್ಟಕ 1.15: ಬದ್ಧ ವೆಚ್ಚಗಳ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2014–15 | 2015–16 | 2016–17 | 2017–18 | 2018–19 | |
|---|---|---|---|---|---|---|---|
| | | | | | | ಆಯವ್ಯಯ ಅಂದಾಜು | ವಾಸ್ತವಿಕ |
| 1 | ವೇತನಗಳು* | 19,952 | 20,774 | 21,708 | 22,958 | 31,712 | 28,024 |
| 2 | ಬಡ್ಡಿ ಪಾವತಿಗಳು# | 9,804 | 11,343 | 12,850 | 14,973 | 16,209@ | 16,614 |
| 3 | ಪಿಂಚಣಿಯ ಮೇಲಿನ ವೆಚ್ಚ | 10,118 | 11,251 | 11,295 | 11,684 | 17,801 | 15,109 |
| 4 | ಸಾಮಾಜಿಕ ಭದ್ರತೆ ಪಿಂಚಣಿಗಳು | 2,322 | 2,247 | 2,503 | 4,055 | 5,497 | 5,460 |
| 5 | (ಎ) ಸಹಾಯಾನುದಾನಗಳು | 11,153 | 13,149 | 14,387 | 14,148 | 24,404 | 15,400 |
| | (ಬಿ) ಆರ್ಥಿಕ ಬೆಂಬಲ, ಇತರೆ ಸ್ವರೂಪದ ಸಹಾಯಧನಗಳು | 2,973 | 3,913 | 3,714 | 3,318 | | 3,777^ |
| 6 | ಸಹಾಯಾನುದಾನಗಳು ಮತ್ತು ಆರ್ಥಿಕ ಬೆಂಬಲ | 9,737 | 10,840 | 13,163 | 11,812 | 16,834 | 24,888 |
| 7 | ಆಡಳಿತಾತ್ಮಕ ವೆಚ್ಚ | 1,708 | 1,958 | 1,966 | 2,404 | 2,716 | 2,136 |
| 8 | ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ | 19,952 | 21,163 | 23,466 | 25,131 | 26,537 | 26,720 |
| 9 | ದಿನಗೂಲಿ | – | – | – | 110 | 139 | 138 |
| 10 | ಗುತ್ತಿಗೆ/ಹೊರಗುತ್ತಿಗೆ | – | – | – | 457 | 569 | 576 |
| 11 | **ಒಟ್ಟು ಬದ್ಧ ವೆಚ್ಚಗಳು** | **87,719** | **96,638** | **1,05,052** | **1,11,050** | **1,42,418** | **1,38,841** |
| 12 | **ರಾಜಸ್ವ ವೆಚ್ಚಗಳು** | **1,03,614** | **1,17,028** | **1,31,921** | **1,42,482** | **1,66,290** | **1,64,300** |
| 13 | **ರಾಜಸ್ವ ಸ್ವೀಕೃತಿಗಳು** | **1,04,142** | **1,18,817** | **1,33,214** | **1,47,000** | **1,66,396** | **1,64,979** |
| 14 | **ರಾಜಸ್ವ ಸ್ವೀಕೃತಿಗಳಲ್ಲಿ ಬದ್ಧವೆಚ್ಚಗಳ ಶತಾಂಶ** | **84** | **81** | **79** | **76** | **86** | **84** |
| 15 | **ರಾಜಸ್ವ ವೆಚ್ಚದಲ್ಲಿ ಬದ್ಧ ವೆಚ್ಚಗಳ ಶತಾಂಶ** | **85** | **83** | **80** | **78** | **86** | **85** |

* ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಅನುದಾನಗಳಲ್ಲಿ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿನ ಸಂಬಳಗಳನ್ನು ಒಳಗೊಂಡಿದೆ.

# ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಗಳು.

@ ಪ್ರಧಾನ ಲೆಕ್ಕಶೀರ್ಷಿಕೆ *2049*ಕ್ಕೆ ಮಾತ್ರ ಸೇರಿದ ಬಡ್ಡಿಗಳನ್ನೊಳಗೊಂಡಿದೆ.

^ ಇಂದಿರಾ ಆವಾಸ್ ಯೋಜನೆಯಡಿ ಆರ್ಥಿಕ ಬೆಂಬಲವಾಗಿ ಬಿಡುಗಡೆಯಾದ ಸಹಾಯಧನವನ್ನು ಒಳಗೊಂಡಿಲ್ಲ

**ನಕ್ಷೆ 1.13: 2014–15ರಿಂದ 2018–19ರ ಅವಧಿಯಲ್ಲಿ ಬದ್ಧ ವೆಚ್ಚಗಳು**




ರಾಜಸ್ವ ಸ್ವೀಕೃತಿ ಮತ್ತು ರಾಜಸ್ವ ವೆಚ್ಚಗಳಲ್ಲಿ ಬದ್ಧ ವೆಚ್ಚದ ಅತಿಪ್ರಮಾಣವು, ರಾಜ್ಯವು ತನ್ನ ಸಂಪನ್ಮೂಲಗಳನ್ನು ಹೊಸ ಯೋಜನೆಗಳಿಗೆ ಹಂಚಿಕೆ ಮಾಡಲು ಸೀಮಿತ ನಮ್ಯತೆ ಇದೆಯೆಂಬುದನ್ನು ಸೂಚಿಸುತ್ತದೆ.

### ಸಂಬಳದ ಮೇಲಿನ ವೆಚ್ಚ

ಸಂಬಳದ ಮೇಲಿನ ವೆಚ್ಚವು 2014–15ರಲ್ಲಿ ₹19,952 ಕೋಟಿಗಳಿದ್ದು, 2018–19ರಲ್ಲಿ ₹28,024 ಕೋಟಿಗಳಿಗೆ ಏರಿತ್ತು. ಅದು ಕಳೆದ ವರ್ಷಕ್ಕಿಂತ ಶೇಕಡ 22ರಷ್ಟು ವೃದ್ಧಿಯಾಗಿತ್ತು. ಇದು ಪ್ರಮುಖವಾಗಿ ರಾಜ್ಯ ಸರ್ಕಾರಿ ನೌಕರರಿಗೆ ಆರನೇ ವೇತನ ಆಯೋಗವನ್ನು ಜಾರಿ ಮಾಡಿದ್ದರಿಂದಾಗಿತ್ತು. ಹಣಕಾಸು ಲೆಕ್ಕಗಳಲ್ಲಿನ ಸಂಬಳ ವೆಚ್ಚದ ಮಾಹಿತಿಯು ರಾಜ್ಯ ವಲಯಕ್ಕೆ ಮಾತ್ರ ಸಂಬಂಧಿಸಿದ್ದು, ಪಂಚಾಯತ್‌ರಾಜ್ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದ ಸಂಬಳ ವೆಚ್ಚವನ್ನು (₹14,709 ಕೋಟಿ) ಒಳಗೊಂಡಿಲ್ಲ. ಪಂಚಾಯತ್‌ರಾಜ್ ಸಂಸ್ಥೆಗಳ ಸಂಬಳಗಳನ್ನು ಸಹಾಯಾನುದಾನಗಳಾಗಿ ಬಿಡುಗಡೆ ಮಾಡಲಾಗುವುದರಿಂದ ಲೆಕ್ಕಗಳಲ್ಲಿ ಸಂಬಳಗಳ ಒಟ್ಟು ವೆಚ್ಚವನ್ನು ತೋರಿಸುವುದಿಲ್ಲ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಸಂಬಳ ಅನುದಾನಗಳನ್ನು ಹೊರತುಪಡಿಸಿದ ಒಟ್ಟು ಸಂಬಳ ವೆಚ್ಚವು (₹797.95 ಕೋಟಿ) ಬಡ್ಡಿ ಪಾವತಿಗಳು ಮತ್ತು ಪಿಂಚಣಿಗಳನ್ನು ಬಿಟ್ಟು ನಿವ್ವಳ ರಾಜಸ್ವ ವೆಚ್ಚದ ಶೇಕಡ 21ರಷ್ಟಿತ್ತು. ಇದು ಹನ್ನೆರಡನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ಶೇಕಡ 35ರ ಮಿತಿಯೊಳಗೆ ಇದ್ದಿತು.

ಬಂಡವಾಳ ವರ್ಗದಡಿಯ ಸಂಬಳ ವೆಚ್ಚವು 2017–18ರಲ್ಲಿ ₹14.73 ಕೋಟಿಗಳಷ್ಟಿದ್ದು 2018–19ರಲ್ಲಿ ₹16.55 ಕೋಟಿಗಳಷ್ಟಿತ್ತು.

ಸಾರ್ವಜನಿಕ ಲೆಕ್ಕ ಸಮಿತಿಯು ತನ್ನ 5ನೇ ವರದಿಯಲ್ಲಿ ಆರ್ಥಿಕ ಇಲಾಖೆಗೆ ಜಿಲ್ಲಾ ವಲಯದ ಸಂಬಳದ ವಿವರಗಳನ್ನು ಹೊಂದಿದ ದತ್ತಾಂಶವನ್ನು ಹಣಕಾಸು ಲೆಕ್ಕಗಳ ಅನುಬಂಧದಲ್ಲಿ ಬಿಂಬಿಸಲು ಕ್ರೋಢೀಕರಿಸಬೇಕೆಂಬ ತನ್ನ ಮೊದಲಿನ ಶಿಫಾರಸನ್ನು ಪುನರುಚ್ಛರಿಸಿತು (ಜುಲೈ 2015).

ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ನಂತರವೂ ಜಿಲ್ಲಾ ವಲಯದ ಸಂಬಳದ ವಿವರಗಳನ್ನು ಹಣಕಾಸು ಲೆಕ್ಕದ ಅನುಬಂಧದಲ್ಲಿ ಬಿಂಬಿಸಲು ರಾಜ್ಯ ಸರ್ಕಾರವು ಕ್ರಮ ಕೈಗೊಂಡಿಲ್ಲ.

ಜಿಲ್ಲಾ ಪಂಚಾಯತಿಗಳು ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ನೀಡುವ ಅನುದಾನಗಳನ್ನು ಸಂಬಳವೆಂದು ಪರಿಗಣಿಸಲಾಗುವುದಿಲ್ಲ ಮತ್ತು ಸಂಬಳದ ವಿವರಗಳನ್ನು ಅನುಬಂಧ–ಬಿ ನಲ್ಲಿ

ನೀಡಲಾಗಿದೆಯೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಅನುದಾನದ ಸಂಬಳದ ಭಾಗವನ್ನು ಸಂಪರ್ಕ ಸಂಪುಟಗಳಲ್ಲಿ ತೋರಿಸಲಾಗಿದೆ ಮತ್ತು ಸಂಬಳ ವೆಚ್ಚದ ವಿವರಗಳನ್ನು ಪ್ರತಿ ಜಿಲ್ಲಾ ಪಂಚಾಯತಿಯ ವಾರ್ಷಿಕ ಲೆಕ್ಕಗಳಲ್ಲಿ ತೋರಿಸಲಾಗಿದೆಯೆಂದೂ ಸಹ ರಾಜ್ಯ ಸರ್ಕಾರವು ಉತ್ತರಿಸಿತು. ಸಂಬಳ ವಿವರಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ತೋರಿಸದೇ ಕೇವಲ ಅಡಿಟಿಪ್ಪಣಿಯ ರೂಪದಲ್ಲಿ ತೋರಿಸಿರುವುದರಿಂದ ಉತ್ತರವು ಒಪ್ಪಲರ್ಹವಲ್ಲ. ನಿರ್ಗಮನ ಸಭೆಯ ನಂತರ ವಿಷಯವನ್ನು ಪರಿಶೀಲಿಸಲಾಗುವುದೆಂದು ಆರ್ಥಿಕ ಇಲಾಖೆಯು ಉತ್ತರಿಸಿತು.

ಅಲ್ಲದೆ ನಗರ ಸ್ಥಳೀಯ ಸಂಸ್ಥೆಗಳ ನೌಕರರ ಸಂಬಳ ವೆಚ್ಚವು ರಾಜ್ಯ ವಿಭಾಗದ (ಸಾಂವಿಧಾನಿಕ ಗಣ್ಯರ) ವೆಚ್ಚದಲ್ಲಿ ಮೇಲು ವ್ಯಾಪಿಸಿದೆ. ಇದನ್ನು ವರದಿಯ **ಕಂಡಿಕೆ 2.4.4**ರಲ್ಲಿ ಚರ್ಚಿಸಲಾಗಿದೆ. ಮುಂದುವರೆದು, ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯು, ಅನೇಕ ಸಹಾಯಾನುದಾನ ಸಂಸ್ಥೆಗಳು ಹೆಚ್‌ಆರ್‌ಎಮ್‌ಎಸ್‌ನ ಪರಿಧಿಯ ಹೊರಗಿದ್ದವೆಂದು ಗಮನಿಸಿತು ಮತ್ತು ಸುಧಾರಿತ ಆಯವ್ಯಯ ಅಂದಾಜುಗಳನ್ನು ಹೊಂದಲು ಅಂತಹ ಎಲ್ಲ ಸಂಸ್ಥೆಗಳನ್ನು ಹೆಚ್‌ಆರ್‌ಎಮ್‌ಎಸ್ ಚೌಕಟ್ಟಿನೊಳಗೆ ತರಬೇಕೆಂದು ಸಲಹೆ ನೀಡಿತು.

ಎಲ್ಲ ಸಹಾಯಾನುದಾನ ಸಂಸ್ಥೆಗಳನ್ನು ಹೆಚ್‌ಆರ್‌ಎಮ್‌ಎಸ್ ಅಡಿಯಲ್ಲಿ ತರಲು ಕ್ರಮ ವಹಿಸಲಾಗುತ್ತಿದೆಯೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### ನಿವೃತ್ತಿ ವೇತನ ಪಾವತಿಗಳು

2018–19ರಲ್ಲಿ ನಿವೃತ್ತಿ ವೇತನದ ವೆಚ್ಚವು ₹15,109 ಕೋಟಿಗಳಷ್ಟಿದ್ದು ವೆಚ್ಚದಲ್ಲಿ ಹಿಂದಿನ ವರ್ಷಕ್ಕಿಂತ ₹3,425 ಕೋಟಿಗಳಷ್ಟು ಗಣನಾರ್ಹ ಹೆಚ್ಚಳವಾಗಿತ್ತು.

01 ಏಪ್ರಿಲ್ 2008ಕ್ಕೆ ಹಿಂದಿನ, ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ಪಾವತಿಯು ರಾಜ್ಯ ಸರ್ಕಾರದ ಬಾಧ್ಯತೆಯಾಗಿದ್ದಿತು. ಏಪ್ರಿಲ್ 2008ರಿಂದ ಈ ಅಧಿಕಾರಿಗಳ ಪಿಂಚಣಿ ಪಾವತಿಯನ್ನು ಕೇಂದ್ರ ಸರ್ಕಾರ ಭರಿಸಬೇಕಾಗಿದ್ದು, ಈ ಪಾವತಿಗಳನ್ನು 8658–ಅಮಾನತ್ತು ಶೀರ್ಷಿಕೆಗೆ ಹಾಕಿ ನಂತರ ಕೇಂದ್ರ ಸರ್ಕಾರದಿಂದ ಆ ಮೊತ್ತದ ಮರುಪಾವತಿಗೆ ಬೇಡಿಕೆಯನ್ನು ಸಲ್ಲಿಸಬೇಕಾಗಿದೆ. ಮಾರ್ಚ್ 2018ರ ಅಂತ್ಯದಲ್ಲಿದ್ದ ₹92.18 ಕೋಟಿಗಳಿಗೆ ಹೋಲಿಸಿದಲ್ಲಿ ಮಾರ್ಚ್ 2019ರ ಅಂತ್ಯದಲ್ಲಿ ₹150.26 ಕೋಟಿಗಳ ಮೊತ್ತವು ಇತ್ಯರ್ಥವಾಗದೆ ಬಾಕಿ ಉಳಿದಿದ್ದು ರಾಜ್ಯ ಸರ್ಕಾರವು ತನಗೆ ಬರಬೇಕಾದ ಮೊತ್ತವನ್ನು ಇನ್ನೂ ಪಡೆಯಬೇಕಾಗಿದೆ ಎಂಬುದನ್ನು ಸೂಚಿಸುತ್ತದೆ.

### ನೂತನ ಪಿಂಚಣಿ ಯೋಜನೆ

ಏಪ್ರಿಲ್ 1, 2006ರಂದು ಅಥವಾ ನಂತರ ರಾಜ್ಯ ಸರ್ಕಾರದ ಸೇವೆಗೆ ಸೇರಿದ ಎಲ್ಲಾ ಉದ್ಯೋಗಿಗಳಿಗೆ ನೂತನ ಪಿಂಚಣಿ ಯೋಜನೆ ಎಂದು ಕರೆಯಲಾಗುವ ನಿರ್ದಿಷ್ಟ ವಂತಿಗೆ ನಿವೃತ್ತಿ ವೇತನ ಯೋಜನೆಯು ಏಪ್ರಿಲ್ 1, 2010ರಿಂದ ಪೂರ್ಣವಾಗಿ ಜಾರಿಗೊಂಡಿದೆ. ಖಜಾನೆ ನಿರ್ದೇಶನಾಲಯದ ನಿಯಂತ್ರಣದಲ್ಲಿ ಇದಕ್ಕಾಗಿ ಒಂದು ಪ್ರತ್ಯೇಕ ಹೊಸ ನಿವೃತ್ತಿ ವೇತನ ಯೋಜನಾ ಕೋಶವನ್ನು ಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರವು ಪಿಂಚಣಿ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರವು ವಿನ್ಯಾಸಗೊಳಿಸಿದ ಹೊಸ ಪಿಂಚಣಿ ಯೋಜನೆಯ ಶೈಲಿಯನ್ನು ಅಂಗೀಕರಿಸಿದ್ದು, ಕೇಂದ್ರ ದಾಖಲೆ ನಿರ್ವಹಣಾ ಏಜೆನ್ಸಿಯಾಗಿ ರಾಷ್ಟ್ರೀಯ ಭದ್ರತೆಗಳ ಭಂಡಾರ ನಿಯಮಿತವನ್ನು ನೇಮಿಸಿದೆ. ಪಿಂಚಣಿ ನಿಧಿಗಳನ್ನು ನಿರ್ವಹಿಸಲು ಏಕ್ಸಿಸ್ ಬ್ಯಾಂಕನ್ನು ಟ್ರಸ್ಟಿ ಬ್ಯಾಂಕ್‌ಆಗಿ ಆಯ್ಕೆ ಮಾಡಲಾಗಿದೆ.

ಯೋಜನೆಯ ಹಾಗೂ ಸರ್ಕಾರಿ ನೌಕರರ ಮತ್ತು ಸರ್ಕಾರವು ಮಾಡಿದ ವಂತಿಗೆಗಳ ವಿವರಗಳು ಖಜಾನೆ ನಿರ್ದೇಶಕರು ಒದಗಿಸಿದಂತೆ (ಜುಲೈ 2019) ಕೆಳಗೆ ಕೊಡಲಾಗಿದೆ.

- 2,14,438 ನೌಕರರಿಗೆ ಖಾಯಂ ನಿವೃತ್ತಿ ಲೆಕ್ಕ ಸಂಖ್ಯೆ (ಪಿಆರ್‌ಎಎನ್) ನೀಡಲಾಗಿತ್ತು.
- ಮಾರ್ಚ್ 31, 2019ರವರೆಗೆ ನೌಕರರ ವಂತಿಗೆಯು (ಮಾಹೆಯಾನ ಹಾಗೂ ಬಾಕಿ[10]) ₹3,447.75 ಕೋಟಿಗಳಿದ್ದು ಯೋಜನೆಯ ಪ್ರಾರಂಭದಿಂದ ಸರ್ಕಾರವು ನೀಡಿದ ಸರ್ಕಾರದ ವಂತಿಗೆಯು ₹3,498.24 ಕೋಟಿಗಳಷ್ಟಿತ್ತು. ಇದು ಪ್ರಸಕ್ತ ವರ್ಷದಲ್ಲಿನ ₹838.53 ಕೋಟಿಗಳ ಸರ್ಕಾರಿ ವಂತಿಗೆ ಹಾಗೂ ₹777.74 ಕೋಟಿಗಳ ನೌಕರರ ವಂತಿಗೆಗಳನ್ನೊಳಗೊಂಡಿತ್ತು.
- ಪ್ರಸಕ್ತ ವರ್ಷದಲ್ಲಿನ ಒಟ್ಟು ಜಮೆಗಳಲ್ಲಿ ಪ್ರಾರಂಭಶಿಲ್ಕು ₹6.23 ಕೋಟಿಗಳೂ ಸೇರಿದಂತೆ ₹1,531.67 ಕೋಟಿಗಳನ್ನು ಟ್ರಸ್ಟಿ ಬ್ಯಾಂಕ್/ಎನ್‌ಎಸ್‌ಡಿಎಲ್‌ಗೆ ವರ್ಗಾಯಿಸಲಾಗಿದ್ದು (ನೌಕರರ ಹಾಗೂ ಸರ್ಕಾರದ ವಂತಿಗೆ) 31 ಮಾರ್ಚ್ 2019ರ ಅಂತ್ಯಕ್ಕೆ ಠೇವಣಿ ಲೆಕ್ಕದಲ್ಲಿ ₹3.27 ಕೋಟಿಗಳ ಅಂತಿಮ ಶಿಲ್ಕು ಉಳಿದಿತ್ತು.
- 2018-19ರಲ್ಲಿ ₹4.69 ಕೋಟಿಗಳನ್ನು ಸಂಚಿತ ನಿಧಿಯಿಂದ 'ಹೊಸ ವಂತಿಗೆ ಪಿಂಚಣಿ ಯೋಜನೆಗಳು' ಸೇವೆಯಲ್ಲಿರುವಾಗ ನಿವೃತ್ತಿ/ಮರಣ ಹೊಂದಿದ ನೌಕರರು/ಕುಟುಂಬದವರಿಗೆ ಸೌಲಭ್ಯದ ವಿಸ್ತರಣೆಯಾಗಿ ಹೊಸ ನಿರ್ದಿಷ್ಟ ಪಿಂಚಣಿ ಯೋಜನೆಗೆ ಸೇರಿದವರಿಗೆ ಪಾವತಿಸಲಾಗಿದೆ.
- ಸರ್ಕಾರದ ಇಲಾಖೆಗಳು 01.04.2010ರಿಂದ ಅನ್ವಯವಾಗುವಂತೆ ಸರ್ಕಾರದ ಬಾಕಿ ಇರುವ ವಂತಿಗೆಯ ಮೇಲೆ ಶೇಕಡ ಎಂಟರ ಚಕ್ರಬಡ್ಡಿಯನ್ನು ಹೊಸ ಪಿಂಚಣಿ ಯೋಜನೆಯ ನೌಕರರಿಗೆ ನೀಡುತ್ತಿದೆ. ಆರ್ಥಿಕ ಇಲಾಖೆಯು ಬಾಕಿ ಉಳಿದಿರುವ ಸರ್ಕಾರದ ವಂತಿಗೆಯ ಮೇಲೆ ಬಡ್ಡಿ ಪಾವತಿಯನ್ನು 01.07.2016ರಿಂದ ನಿಲ್ಲಿಸುವಂತೆ ಆದೇಶವನ್ನು ಹೊರಡಿಸಿದ್ದರೂ, ಬಟವಾಡೆ ಅಧಿಕಾರಿಗಳಿಂದ ಸೂಚಿತ ಪಟ್ಟಿಗಳು ಬಾರದಿದ್ದುದರಿಂದ ಇಲಾಖೆಗಳು ಸರ್ಕಾರದ ಬಾಕಿ ಇರುವ ವಂತಿಗೆಯ ಮೇಲೆ 31.03.2018ರವರೆಗೆ ಬಡ್ಡಿಯನ್ನು ಪಾವತಿಸಿವೆ. (₹73.86 ಕೋಟಿ).

### ಬಡ್ಡಿ ಪಾವತಿಗಳು

ಬಡ್ಡಿ ಪಾವತಿಗಳು 2014-15ರಲ್ಲಿದ್ದ ₹9,804 ಕೋಟಿಯಿಂದ 2018-19ರಲ್ಲಿ ₹12,359 ಕೋಟಿಗೆ ಏರಿದ್ದು, ₹6,810 ಕೋಟಿಯಷ್ಟು ಹೆಚ್ಚಾಗಿದೆ. 2018-19ರಲ್ಲಿನ ಬಡ್ಡಿ ಪಾವತಿಗಳು, ಆಂತರಿಕ ಸಾಲಗಳ ಮೇಲಿನ ಬಡ್ಡಿ (₹12,359 ಕೋಟಿ), ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ (₹2,358 ಕೋಟಿ), ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ (₹706 ಕೋಟಿ) ಹಾಗೂ ಆಯವ್ಯಯದ ಹೊರಗೆ ಮಾಡಲಾದ ಸಾಲಗಳ ಮೇಲಿನ ಬಡ್ಡಿ (₹1,191 ಕೋಟಿ) ಇವುಗಳನ್ನು ಒಳಗೊಂಡಿವೆ.

ಆಂತರಿಕ ಸಾಲಗಳ ಮೇಲಿನ ಬಡ್ಡಿಯು 2017-18ರಲ್ಲಿದ್ದ, ₹11,196 ಕೋಟಿಯಿಂದ 2018-19ರಲ್ಲಿ ₹12,359 ಕೋಟಿಗೆ ಏರಿ ಶೇಕಡ 10ರಷ್ಟು ಹೆಚ್ಚಾಗಿದೆ. ಇದು ಮಾರುಕಟ್ಟೆ ಸಾಲಗಳ ಮೇಲಿನ ಬಡ್ಡಿಪಾವತಿ ₹1,321 ಕೋಟಿ (ಶೇಕಡ 15) ಹೆಚ್ಚಳದಿಂದ ಉಂಟಾಗಿದೆ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಇತ್ಯಾದಿಗಳ ಮೇಲಿನ ಬಡ್ಡಿಯು 2017-18ರಲ್ಲಿನ ₹2,081 ಕೋಟಿಯಿಂದ 2018-19ರಲ್ಲಿ ₹2,358 ಕೋಟಿಗೆ ಏರಿದ್ದು, ₹276 ಕೋಟಿಗಳಷ್ಟು ಹೆಚ್ಚಾಗಿದೆ. ಇದು ರಾಜ್ಯ ಭವಿಷ್ಯ ನಿಧಿ ಮತ್ತು ವಿಮಾ ನಿಧಿಗಳ ಮೇಲಿನ ಬಡ್ಡಿಯು ಶೇಕಡ 13ರಷ್ಟು ಹೆಚ್ಚಳಗೊಂಡಿದ್ದುದರಿಂದ ಉಂಟಾಗಿದೆ.

---

[10] ನೌಕರನು ಸೇವೆಗೆ ಸೇರಿದ ದಿನಾಂಕದಿಂದ ಯೋಜನೆಯ ಅನುಷ್ಠಾನದ ದಿನಾಂಕದವರೆಗೆ ಕೊಡಬೇಕಾದ ವಂತಿಗೆಯನ್ನು ಸೂಚಿಸುತ್ತದೆ.

### ಸಹಾಯಾನುದಾನಗಳು

2014–15ರಲ್ಲಿ ₹11,153 ಕೋಟಿಯಿದ್ದ ಸಹಾಯಧನದ ವೆಚ್ಚವು 2018–19ರಲ್ಲಿ ₹15,400 ಕೋಟಿಗಳಿಗೆ ಏರಿದ್ದು, ರಾಜಸ್ವ ಸ್ವೀಕೃತಿಗಳ ಶೇಕಡ ಒಂಬತ್ತರಷ್ಟಿದೆ. ಇದು ಹಿಂದಿನ ವರ್ಷಕ್ಕಿಂತ ₹1,252 ಕೋಟಿಯಷ್ಟು ಅಧಿಕವಾಗಿತ್ತು (ಶೇಕಡ ಒಂಭತ್ತು). ನಾಲ್ಕು ಪ್ರಧಾನವಾದ ನೇರ ಸಹಾಯಧನ ವೆಚ್ಚವು ಕೃಷಿ ಪಂಪ್‌ಸೆಟ್‌ಗಳ ಬಳಕೆಗೆ ರೈತರಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು ನೀಡುವ ಸಹಾಯಧನ, ಆಹಾರ ಸಹಾಯಧನ ಮತ್ತು ಕೃಷಿ ಸಾಲಗಳಿಗೆ ಬಡ್ಡಿ ಸಹಾಯಧನ ಮತ್ತು ಸಾರಿಗೆಗಳಾಗಿವೆ. ವಿವಿಧ ಸಹಾಯಧನಗಳ ವಿವರಗಳನ್ನು **ಅನುಬಂಧ 1.8**ರಲ್ಲಿ ನೀಡಲಾಗಿದೆ.

ವೈದ್ಯನಾಥನ್ ಸಮಿತಿ ವರದಿಯಂತೆ (ಮಾರ್ಚ್ 2008) ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಪುನರುಚ್ಚರಿಸಿರುವಂತೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕಾರಿ ಸಾಲ ವ್ಯವಸ್ಥೆಯು ಕ್ಷೀಣಿಸುವುದನ್ನು ತಡೆಗಟ್ಟಲು, ಸಾಲ ವಸೂಲಾತಿಯನ್ನು ಮತ್ತು ಬಡ್ಡಿಪಾವತಿಯನ್ನು ಮನ್ನಾ ಮಾಡುವ ಪದ್ದತಿಯನ್ನು ನಿಲ್ಲಿಸಬೇಕಾಗಿದೆ. ಆದಾಗ್ಯೂ, ಸಾಲಗಳ ಮನ್ನಾ ಪದ್ಧತಿಯು ಮುಂದುವರೆದಿದೆ.

ವಿಪತ್ತು ಸ್ಥಿತಿಗತಿಗಳು, ಬೆಳೆಹಾನಿ, ಮಾರಾಟದಲ್ಲಿನ ತೊಂದರೆಗಳು ಮುಂತಾದವುಗಳಿಂದ ರೈತರಲ್ಲಿ ಹೆಚ್ಚುತ್ತಿದ್ದ ಅಸಮಾಧಾನ ಸ್ಥಿತಿಗತಿಯ ನಡುವೆ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಸಾಲ ಮನ್ನಾ ಕಾರ್ಯನೀತಿಯನ್ನು ಪೂರಕ ಬೆಂಬಲ ವ್ಯವಸ್ಥೆಯಾಗಿ ರಾಜ್ಯ ಸರ್ಕಾರವು ಕೈಗೊಂಡಿದ್ದು, ಇದರಿಂದ ಪಡೆದ ಸಾಲಗಳ ಮರುಪಾವತಿಗೆ ಅತ್ಯಂತ ಕಷ್ಟವನ್ನು ಅನುಭವಿಸುತ್ತಿದ್ದ ರೈತರಿಗೆ ತುರ್ತಾದ ಪರಿಹಾರವನ್ನು ಒದಗಿಸಿದಂತಾಗುತ್ತದೆಯೆಂದು ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ಮಾರ್ಚ್ 2020).

2017–18 ಮತ್ತು 2018–19ರಲ್ಲಿ ತೀವ್ರವಾಗಿ ಹೆಚ್ಚುತ್ತಿರುವ ಸಹಾಯಧನ ವೆಚ್ಚವನ್ನು ಗಮನದಲ್ಲಿರಿಸಿ ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯು ಅನರ್ಹ ಫಲಾನುಭವಿಗಳ ನಿವಾರಣೆಗೆ ನೇರ ಸೌಲಭ್ಯ ವರ್ಗಾವಣೆಯನ್ನು ಆಧಾರ್‌ಗೆ ಜೋಡಣೆ ಮಾಡಲು ಶಿಫಾರಸು ಮಾಡಿತು.

ಫಲಾನುಭವಿಗಳಿಗೆ ನೇರ ಸೌಲಭ್ಯ ವರ್ಗಾವಣೆಯನ್ನು ಆಧಾರ್ ಮೂಲಕ ಮಾಡಲು ಪ್ರಯತ್ನಿಸಲಾಗಿದೆ ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಪ್ರಾರಂಭಿಕ ಹಂತದಲ್ಲಿ ಅನರ್ಹ ಫಲಾನುಭವಿಗಳ ನಿವಾರಣೆಗೆ ಸಹಾಯವಾಗುವಂತೆ ಜಿಲ್ಲಾ ಮಟ್ಟದಲ್ಲಿ ಸಾಮಾಜಿಕ ಭದ್ರತಾ ಪಿಂಚಣಿ, ಅನ್ನಭಾಗ್ಯ, ಐಪಿ ಸೆಟ್‌ಗಳ ಸರಬರಾಜಿಗೆ ಸಹಾಯಧನ ಮುಂತಾದ ವಿವಿಧ ಯೋಜನೆಗಳ ಸಮಗ್ರ ದತ್ತಾಂಶವನ್ನು ಪಡೆಯಲಾಗುವುದು ಎಂದು ಹೇಳಿದೆ.

### ಆರ್ಥಿಕ ಬೆಂಬಲ, ಉತ್ತೇಜನ ಮುಂತಾದ ರೂಪದಲ್ಲಿ ಸಹಾಯಧನಗಳು

ಸಹಾಯಧನಗಳು, ಇನ್ನಿತರವುಗಳ ಜೊತೆಗೆ ಸರ್ಕಾರವು ಸಾಮಾಜಿಕ ಹಾಗೂ ಆರ್ಥಿಕ ಸರಕುಗಳ/ ಸೇವೆಗಳ, ಅನುವುಗಳಲ್ಲಿ ಅದು ಭರಿಸುವ ವೆಚ್ಚಗಳನ್ನು ವಾಪಸ್ಸು ಪಡೆಯಲು ಸಾಧ್ಯವಾಗದಿದ್ದಲ್ಲಿ ಉದ್ಭವಿಸುತ್ತವೆ. ಕೆಲವೊಮ್ಮೆ ಇವು ವಿಸ್ತರಿಸಿದ ಸೌಲಭ್ಯಗಳಾಗಬಹುದು. ಇದು ಪರೋಕ್ಷವಾಗಿರಬಹುದು, ವಸ್ತು ರೂಪದಲ್ಲಿರಬಹುದು ಅಥವಾ ತೆರಿಗೆ ರಿಯಾಯಿತಿಯ ರೂಪದಲ್ಲಿರಬಹುದು. 2014–15 ರಿಂದ 2018–19ವರೆಗೆ ನೀಡಲಾದ ಕೆಲವು ಪರೋಕ್ಷ ಸಹಾಯಧನಗಳ ವಿವರಗಳನ್ನು **ಅನುಬಂಧ 1.9**ರಲ್ಲಿ ವಿವರಿಸಲಾಗಿದೆ.

2014–15ರಲ್ಲಿ ₹2,973 ಕೋಟಿಗಳಷ್ಟಿದ್ದ ಈ ಸಹಾಯಧನವು 2018–19ರಲ್ಲಿ ₹3,777 ಕೋಟಿಗಳಿಗೆ ಏರಿತ್ತು. ಇದು ಪ್ರಮುಖವಾಗಿ ಬೀಜ ಸರಬರಾಜಿಗೆ ನೀಡಿದ ಆರ್ಥಿಕ ಸಹಾಯ, ನೇಕಾರರ ಪ್ಯಾಕೇಜ್, ಆಶ್ರಯ ಯೋಜನೆ, ಕಿರು/ಹನಿ ನೀರಾವರಿ, ಕನಿಷ್ಠದರ ಯೋಜನೆ, ದುರ್ಬಲ ವರ್ಗದವರಿಗೆ ವಸತಿ, ಭೂಹೀನರಿಗೆ ಮನೆ ನಿವೇಶನಗಳು ಮುಂತಾದವುಗಳಿಗೆ ನೀಡಿದ ಆರ್ಥಿಕ ಸಹಾಯವನ್ನು ಒಳಗೊಂಡಿದೆ.

2018–19ರಲ್ಲಿ ಇಂದಿರಾ ಆವಾಸ್ ಯೋಜನೆಯಡಿಯ ಸಹಾಯಧನವು (₹361 ಕೋಟಿ) ಲೆಕ್ಕಶೀರ್ಷಿಕೆ 2216–80–103–0–21 (ಇಂದಿರಾ ಆವಾಸ್ ಯೋಜನೆ) ಮತ್ತು 2216–80–800–0–04ರ (ಇಂದಿರಾ ಆವಾಸ್ ಯೋಜನೆ – ರಾಜ್ಯಪಾಲು) ಬದಲಾಗಿ ಲೆಕ್ಕಶೀರ್ಷಿಕೆ 2216–80–198–6–02–300(ಯೋಜನೆ) ಯಡಿ ಗ್ರಾಮ ಪಂಚಾಯತ್‌ಗಳಿಗೆ ಬ್ಲಾಕ್ ಅನುದಾನವೆಂದು ಲೆಕ್ಕ ಮಾಡಲಾಗಿದೆ. ಸಹಾಯಧನವು ಅಷ್ಟರಮಟ್ಟಿಗೆ ಕಡಿಮೆ ಹೇಳಿದಂತಾಗಿದೆ.

### ರಾಜಸ್ವ ವೆಚ್ಚದಡಿಯಲ್ಲಿ ತಪ್ಪಾಗಿ ಲೆಕ್ಕ ಹಾಕಿರುವುದು

ಪ್ರಧಾನ ಮತ್ತು ಒಳಶೀರ್ಷಿಕೆಗಳ ಪಟ್ಟಿಯ **ಕಂಡಿಕೆ 2.2**ರ ಅನ್ವಯ ಸಾಮಾನ್ಯ ನಿಯಮದಂತೆ ರಾಜಸ್ವಗಳ ಮರುಪಾವತಿಯು ರಾಜಸ್ವ ಸ್ವೀಕೃತಿಗಳಲ್ಲಿನ ಕಡಿತವೆಂದು ಪರಿಗಣಿಸಬೇಕು. ವಲಯ 'ಎ' ತೆರಿಗೆ ರಾಜಸ್ವದ ಅಡಿಬರುವ ಪ್ರಧಾನ/ಉಪ ಪ್ರಧಾನ ಲೆಕ್ಕ ಶೀರ್ಷಿಕೆಗಳಲ್ಲಿ 'ಮರುಪಾವತಿಯನ್ನು ಕಳೆಯುವುದು' ಎಂಬ ಲೆಕ್ಕ ಶೀರ್ಷಿಕೆಯನ್ನು ಪ್ರತ್ಯೇಕ ಒಳ ಶೀರ್ಷಿಕೆಯಡಿ ತೆರೆಯಬೇಕು. ಇದರಿಂದ ಪ್ರತಿ ತೆರಿಗೆ/ಸುಂಕದ ನಿವ್ವಳ ಸಂಗ್ರಹಣೆಯು ಲೆಕ್ಕಗಳಿಂದ ಸುಲಭವಾಗಿ ಲಭ್ಯವಾಗುತ್ತದೆ.

2018–19ರಲ್ಲಿ ₹299.46 ಕೋಟಿಗಳಷ್ಟು ಮಾರಾಟ ತೆರಿಗೆ ಮರುಪಾವತಿಯು ರಾಜಸ್ವದ ಮರುಪಾವತಿಯಾಗಿದ್ದು ರಾಜಸ್ವದಿಂದ ಕಳೆಯಬೇಕಾಗಿತ್ತು. ಆದರೆ, ಲೆಕ್ಕಶೀರ್ಷಿಕೆ 2852–80–103–0–01 ಮಾರಾಟ ತೆರಿಗೆಯ ಮರುಪಾವತಿಯಡಿ ತಪ್ಪಾಗಿ ಲೆಕ್ಕ ಹಾಕಲಾಗಿತ್ತು. ಈ ವ್ಯವಹಾರವನ್ನು ರಾಜಸ್ವ ವೆಚ್ಚವೆಂದು ಪರಿಗಣಿಸಿದ್ದು ತಪ್ಪಾಗಿದ್ದು ಅದು ರಾಜಸ್ವ ಸ್ವೀಕೃತಿ ಹಾಗೂ ರಾಜಸ್ವ ವೆಚ್ಚಗಳೆರಡನ್ನೂ ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. ಇದನ್ನು **ಕಂಡಿಕೆ 3.9.1**ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.

### ಸ್ಥಳೀಯ ಸಂಸ್ಥೆಗಳಿಗೆ ಮತ್ತು ಇತರೆ ಸಂಸ್ಥೆಗಳಿಗೆ ಹಣಕಾಸು ನೆರವು

2018–19ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಇತರೆ ಸಂಸ್ಥೆಗಳಿಗೆ ಅನುದಾನಗಳ ರೂಪದಲ್ಲಿ ಒದಗಿಸಲಾದ ನೆರವಿನ ಪರಿಮಾಣವನ್ನು, ಹಿಂದಿನ ವರ್ಷಗಳಿಗೆ ಹೋಲಿಸಿದಂತೆ, **ಕೋಷ್ಟಕ 1.16**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.16: ಸ್ಥಳೀಯ ಸಂಸ್ಥೆಗಳಿಗೆ ಮತ್ತು ಇತರೆ ಸಂಸ್ಥೆಗಳಿಗೆ ಹಣಕಾಸು ನೆರವು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಸಂಸ್ಥೆಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| ಅ | **ಪಂಚಾಯತ್‌ರಾಜ್ ಸಂಸ್ಥೆಗಳು** | 24,991.27 | 26,694.94 | 29,697.94 | 31,054.63 | 35,897.61 |
| ಆ | **ನಗರ ಸ್ಥಳೀಯ ಸಂಸ್ಥೆಗಳು** | 6,011.45* | 6,076.05 | 5,685.58 | 6,489.76 | 5,425.31 |
| ಇ | **ಶೈಕ್ಷಣಿಕ ಸಂಸ್ಥೆಗಳು (ವಿಶ್ವವಿದ್ಯಾಲಯಗಳನ್ನು ಒಳಗೊಂಡು)** | 1,145.04 | 1,406.50 | 1,449.75 | 1,293.70 | 1,081.29 |
| ಈ | **ಸಹಕಾರಿ ಸಂಘಗಳು ಮತ್ತು ಸಹಕಾರಿ ಸಂಸ್ಥೆಗಳು** | 818.09 | 1,023.13 | 1,009.47 | 1,191.32 | 1,477.76 |
| ಉ | **ಇತರೆ ಸಂಸ್ಥೆಗಳು ಮತ್ತು ಮಂಡಳಿಗಳು (ಶಾಸನಬದ್ಧ ಸಂಸ್ಥೆಗಳನ್ನು ಒಳಗೊಂಡು)** | 5,782.63 | 4,820.87 | 6,656.29 | 7,067.08 | 6,720.59 |
| ಊ | **ರಾಜಸ್ವ ವೆಚ್ಚಕ್ಕೆ ಶತಾಂಶವಾಗಿ ನೆರವು** | 37 | 34 | 34 | 33 | 31 |
| | **ಒಟ್ಟು** | **38,748.48** | **40,021.49** | **44,499.03** | **47,096.49** | **50,602.56** |

*ಆಕರ: ಹಣಕಾಸು ಲೆಕ್ಕಗಳು*

* *ನಗರ ಸ್ಥಳೀಯ ಸಂಸ್ಥೆಗಳಿಗೆ ನೆರವು ಅಡಿಯಲ್ಲಿ ತೋರಿಸಿರುವ ಅಂಕಿಗಳು ಹಿಂದಿನ ವರದಿಗಳಲ್ಲಿ ತೋರಿಸಿರುವ ಅಂಕಿಗಳಿಗಿಂತ ಒಳಶೀರ್ಷಿಕೆ 200–ಇತರೆ ಪರಿಹಾರಗಳು ಮತ್ತು ಹಂಚಿಕೆಗಳು' ಇದರಡಿಯ ವರ್ಗಾವಣೆಗಳನ್ನು ಸೇರಿಸಿದ್ದರಿಂದ ಭಿನ್ನವಾಗಿದೆ.*

ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸಿನ ಮುಂದಿನ ಹಂತವಾಗಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅನುದಾನವನ್ನು 196, 197 ಮತ್ತು 198 ಎಂಬ ಮೂರು ಕಾರ್ಯಕ್ರಮ ವಿಶಿಷ್ಟ ಒಳಶೀರ್ಷಿಕೆಗಳಡಿ ಬಿಡುಗಡೆ ಮಾಡಲಾಗುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮಾಡಲಾದ ಸಹಾಯವು 2014-15ರಲ್ಲಿದ್ದ ₹24,991 ಕೋಟಿಯಿಂದ 2018-19ರಲ್ಲಿ ₹35,898 ಕೋಟಿಗೆ ಏರಿಕೆಯಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ಸಹಾಯವು 2014-15ರಲ್ಲಿನ ₹6,011 ಕೋಟಿಯಿಂದ 2018-19ರಲ್ಲಿ ₹5,425 ಕೋಟಿಗೆ ಇಳಿಕೆಯಾಗಿದೆ.

2018-19ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಾಡಲಾದ ಒಟ್ಟು ಹಂಚಿಕೆಯ ಮೊತ್ತ ₹35,898 ಕೋಟಿಯ ಪೈಕಿ, ₹14,709 ಕೋಟಿ (ಶೇಕಡ 41) ಮೊತ್ತವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾದ ರಾಜ್ಯ ಸರ್ಕಾರದ ಕಾರ್ಯ ಚಟುವಟಿಕೆಗಳಾದ ಶಿಕ್ಷಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಸತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇತ್ಯಾದಿ ಇಲಾಖೆಗಳ ಸಂಬಳಕ್ಕೆ ಸಂಬಂಧಿಸಿದೆ. ಇದು ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ (₹1,841.54 ಕೋಟಿ) ಅನುದಾನವನ್ನು ಒಳಗೊಂಡಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನಗಳು ₹1,064 ಕೋಟಿಗಳಷ್ಟು ಇಳಿದಿವೆ. ಇಳಿಕೆಯು ಪ್ರಮುಖವಾಗಿ ಪೌರನಿಗಮಗಳು/ನಗರ ಸ್ಥಳೀಯ ಸಂಸ್ಥೆಗಳು /ಪುರಸಭೆಗಳು ಮತ್ತು ನಗರ ಪಂಚಾಯತಿಗಳು ಅಧಿಸೂಚಿತ ಪ್ರದೇಶ ಸಮಿತಿಗಳಿಗೆ ಕ್ರಮವಾಗಿ ಶೇಕಡ 23, ಶೇಕಡ ಎರಡು ಮತ್ತು ಶೇಕಡ ಮೂರರಷ್ಟು ಕಡಿಮೆ ಬಿಡುಗಡೆಯಿಂದಾಗಿತ್ತು. ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಸಹಾಯವು ಬಂಡವಾಳ ಆಸ್ತಿಗಳನ್ನು ಸೃಷ್ಟಿಸುವುದಕ್ಕಾದ ₹1,330 ಕೋಟಿ ಮೊತ್ತವನ್ನು ಒಳಗೊಂಡಿದೆ. ಇದರಲ್ಲಿ ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯಕ್ಕೆ ಬಿಡುಗಡೆ ಮಾಡಿದ (₹1,040.27 ಕೋಟಿ) ಮೊತ್ತವು ಸೇರಿದೆ.

ಇತರ ಸಂಸ್ಥೆಗಳಿಗೆ ಮಾಡಲಾದ ಸಹಾಯವು (₹6,721 ಕೋಟಿ) ಇನ್ನಿತರವುಗಳ ಜೊತೆಗೆ ಶಾಸನಬದ್ಧ ನಿಕಾಯಗಳು ಮತ್ತು ಅಭಿವೃದ್ಧಿ ಪ್ರಾಧಿಕಾರಗಳಿಗೆ (₹1,849 ಕೋಟಿ), ಸರ್ಕಾರೇತರ ಸಂಸ್ಥೆಗಳಿಗೆ (₹1,848 ಕೋಟಿ), ಸಾರ್ವಜನಿಕ ವಲಯ ಉದ್ದಿಮೆಗಳಿಗೆ (₹57 ಕೋಟಿ) ಹಾಗೂ ಇತರರಿಗೆ (₹2,967 ಕೋಟಿ) ನೀಡಿದ ಸಹಾಯವನ್ನು ಒಳಗೊಂಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಹಕಾರಿ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನಗಳು ₹286 ಕೋಟಿಗಳಷ್ಟು ಏರಿದ್ದು ಇತರ ಸಂಸ್ಥೆಗಳಿಗೆ ₹346 ಕೋಟಿಗಳಷ್ಟು ಇಳಿಕೆಯಾಗಿದೆ. 2018-19ರಲ್ಲಿ ಶಿಕ್ಷಣ ಸಂಸ್ಥೆಗಳಿಗೆ ₹212 ಕೋಟಿಗಳಷ್ಟು ಇಳಿಕೆಯಾಯಿತು.

### ನಿಧಿಗಳ ಕಡಿಮೆ ಬಿಡುಗಡೆ

ನಾಲ್ಕನೆಯ ರಾಜ್ಯ ಹಣಕಾಸು ಆಯೋಗದ ಶಿಫಾರಸಿನಂತೆ (ಮೇ 2018) ಮತ್ತು ರಾಜ್ಯ ಸರ್ಕಾರದ ನಿರ್ಣಯದಂತೆ (ಡಿಸೆಂಬರ್ 2018), ಜಿಎಸ್‌ಟಿ ಪರಿಹಾರವನ್ನು ಹೊರತುಪಡಿಸಿ ಋಣೇತರ ರಾಜ್ಯದ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯ ಶೇಕಡ 36 ಮತ್ತು ಶೇಕಡ 10.5ರಷ್ಟನ್ನು ಕ್ರಮವಾಗಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಾಗಿದೆ. ಇದಕ್ಕೆದುರಾಗಿ ಋಣೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯ (₹92,848.58 ಕೋಟಿ) ಶೇಕಡಾ 38.66ರಷ್ಟನ್ನು (₹35,897.61 ಕೋಟಿ) ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ಕೇವಲ ಶೇಕಡ 5.84ರಷ್ಟನ್ನು (₹5,425.31 ಕೋಟಿ) ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಬಿಡುಗಡೆ ಮಾಡಿತು. ಇದು 2018-19ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ₹4,323.79 ಕೋಟಿಗಳಷ್ಟು ಕಡಿಮೆ ಬಿಡುಗಡೆಯಾಗುವಲ್ಲಿ ಪರಿಣಮಿಸಿತು.

ವಾಸ್ತವವಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾದ ಹಣವು ₹12,235.83 ಕೋಟಿಗಳೆಂದು ರಾಜ್ಯ ಸರ್ಕಾರವು ಉತ್ತರಿಸಿತು. ಇದು ರಾಜ್ಯ ಹಣಕಾಸು ಆಯೋಗದ ನೇರ (₹3,756.22 ಕೋಟಿ), ರಾಜ್ಯದ ಸ್ವಂತ ಯೋಜನೆಗಳು (₹2,994.05 ಕೋಟಿ), ಕೇಂದ್ರ ಸರ್ಕಾರದ ಬಿಡುಗಡೆಗೆ ಪ್ರತಿಯಾಗಿ ರಾಜ್ಯದ ಪಾಲು

(₹811.10 ಕೋಟಿ), ರಾಜ್ಯಾಧೀನ ಏಜೆನ್ಸಿಗಳು (₹3,634.19 ಕೋಟಿ) ಮತ್ತು ಕೇಂದ್ರ ಹಣಕಾಸು ಆಯೋಗದ ಅನುದಾನಗಳನ್ನು (₹1,040.27 ಕೋಟಿ) ಒಳಗೊಂಡಿದೆ. ರಾಜ್ಯ ಹಣಕಾಸು ಆಯೋಗದ ಅನುದಾನಗಳು ಕೇಂದ್ರ ಅಥವಾ ರಾಜ್ಯ ಸರ್ಕಾರದ ನಿರ್ದಿಷ್ಟ ಯೋಜನೆಗಳಿಗೆ ಬಿಡುಗಡೆಯಾದ ನಿಧಿಗಳನ್ನು ಅಥವಾ ಕೇಂದ್ರ ಹಣಕಾಸು ಆಯೋಗದ ಅನುದಾನಗಳನ್ನು ಒಳಗೊಳ್ಳಕೂಡದು. ಆದ್ದರಿಂದ ಉತ್ತರವು ಒಪ್ಪಲರ್ಹವಲ್ಲ. ಮುಂದುವರೆದು, ರಾಜ್ಯಾಧೀನ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನಗಳು ಮೂಲಸೌಕರ್ಯ ಯೋಜನೆಗಳು ಅನುಷ್ಠಾನಗೊಳ್ಳುತ್ತಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಸಹಾಯಕವಾಗಿದ್ದು ಸಂಪೂರ್ಣ ನಗರ ಸ್ಥಳೀಯ ಸಂಸ್ಥೆಗಳ ವಲಯಕ್ಕೆ ಅಲ್ಲ.

## 1.8 ವೆಚ್ಚದ ಗುಣಮಟ್ಟ

ರಾಜ್ಯದಲ್ಲಿನ ಉತ್ತಮ ಸಾಮಾಜಿಕ ಮತ್ತು ಭೌತಿಕ ಮೂಲಭೂತ ಸೌಕರ್ಯಗಳ ಲಭ್ಯತೆಯು ಸಾಮಾನ್ಯವಾಗಿ ಅದರ ವೆಚ್ಚದ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ. ವೆಚ್ಚದ ಗುಣಮಟ್ಟದಲ್ಲಿನ ಸುಧಾರಣೆಯು ಮೂಲತಃ ವೆಚ್ಚದ ಪರ್ಯಾಪ್ತತೆ (ಅಂದರೆ ಸಾರ್ವಜನಿಕ ಸೇವೆಗಳನ್ನು ಒದಗಿಸಲು ಸಾಕಾಗುವಷ್ಟು ಅನುವುಗಳು) ವೆಚ್ಚದ ದಕ್ಷತೆ ಹಾಗೂ ವೆಚ್ಚದ ಪರಿಣಾಮಕಾರಿತ್ವ ಎಂಬ ಮೂರು ಅಂಶಗಳನ್ನು ಒಳಗೊಂಡಿರುತ್ತದೆ.

### 1.8.1 ಸಾರ್ವಜನಿಕ ವೆಚ್ಚದ ಪರ್ಯಾಪ್ತತೆ

ರಾಜ್ಯ ಸರ್ಕಾರಕ್ಕೆ ವಹಿಸಲಾದ ಸಾಮಾಜಿಕ ವಲಯ ಹಾಗೂ ಆರ್ಥಿಕ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ವೆಚ್ಚ ಜವಾಬ್ದಾರಿಗಳು ಬಹುಪಾಲು ರಾಜ್ಯದ ವಿಷಯಗಳಾಗಿವೆ. ಮಾನವ ಅಭಿವೃದ್ಧಿ ಮಟ್ಟವನ್ನು ಹೆಚ್ಚಿಸಲು ಪ್ರಮುಖ ಸಾಮಾಜಿಕ ಸೇವೆಗಳಾದ ಶಿಕ್ಷಣ ಮತ್ತು ಆರೋಗ್ಯ ಮುಂತಾದವುಗಳ ಮೇಲಿನ ವೆಚ್ಚವನ್ನು ಹೆಚ್ಚಾಗಿಸಬೇಕಾಗುತ್ತದೆ. ನಿರ್ದಿಷ್ಟ ವೆಚ್ಚ ಶೀರ್ಷಿಕೆಗೆ ನೀಡಿದ ಆದ್ಯತೆಯು ಸಾಮಾನ್ಯ ವರ್ಗದ ರಾಜ್ಯಗಳ ಆ ವರ್ಷದ ಸರಾಸರಿಗಿಂತಲೂ ಕಡಿಮೆಯಿದ್ದರೆ, ಕಡಿಮೆ ವಿತ್ತ ಆದ್ಯತೆಯನ್ನು (ಒಟ್ಟು ವೆಚ್ಚಕ್ಕೆ–ವೆಚ್ಚವರ್ಗದ ಅನುಪಾತ) ಆ ವಿಭಾಗಕ್ಕೆ ಅನ್ವಯಿಸಲಾಗುತ್ತದೆ. **ಕೋಷ್ಟಕ 1.17** ರಾಜ್ಯದ ವೆಚ್ಚ ವರ್ಗಗಳಿಗೆ ನೀಡಿದ ವಿತ್ತೀಯ ಆದ್ಯತೆಯನ್ನು ಅಭಿವೃದ್ಧಿ ವೆಚ್ಚ, ಸಾಮಾಜಿಕ ವೆಚ್ಚ ಮತ್ತು ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದಂತೆ, ಸಾಮಾನ್ಯ ವರ್ಗದ ರಾಜ್ಯಗಳಿಗೆ ಹೋಲಿಸಿದಂತೆ 2018–19ರ ವಿವರಗಳನ್ನು ನೀಡುತ್ತದೆ.

**ಕೋಷ್ಟಕ 1.17: 2018–19ರಲ್ಲಿ ರಾಜ್ಯದ ವಿತ್ತೀಯ ಆದ್ಯತೆ**

| ರಾಜ್ಯದ ವಿತ್ತೀಯ ಆದ್ಯತೆ (ಅನುಪಾತ) | ಒವೆ/ ರಾಒಆಉ | ಬವೆ/ ಒವೆ | ಆವವೆ/ ಒವೆ | ಸಾವವೆ/ ಒವೆ | ಅವೆ#/ ಒವೆ | ಶಿಕ್ಷಣ/ ಒವೆ | ಆರೋಗ್ಯ/ ಒವೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ಸಾಮಾನ್ಯ ವರ್ಗದ ರಾಜ್ಯಗಳ* ಸರಾಸರಿ | 16.05 | 14.28 | 30.45 | 36.59 | 67.04 | 14.99 | 5.07 |
| ಕೇರಳ | 15.23 | 6.24 | 16.47 | 33.73 | 50.21 | 16.33 | 5.96 |
| ತಮಿಳುನಾಡು | 13.70 | 10.66 | 26.47 | 34.74 | 61.22 | 14.85 | 5.48 |
| ಕರ್ನಾಟಕ | 14.45 | 19.24 | 36.55 | 39.41 | 75.95 | 12.06 | 4.66 |

*ಒವೆ: ಒಟ್ಟು ವೆಚ್ಚ, ಬವೆ: ಬಂಡವಾಳ ವೆಚ್ಚ, ಆವವೆ: ಆರ್ಥಿಕ ವಲಯ ವೆಚ್ಚ, ಸಾವವೆ: ಸಾಮಾಜಿಕ ವಲಯ ವೆಚ್ಚ, ಅವೆ: ಅಭಿವೃದ್ಧಿ ವೆಚ್ಚ*

*#ಅಭಿವೃದ್ಧಿ ವೆಚ್ಚವು, ಅಭಿವೃದ್ಧಿ ರಾಜಸ್ವ ವೆಚ್ಚವನ್ನು, ಅಭಿವೃದ್ಧಿ ಬಂಡವಾಳ ವೆಚ್ಚವನ್ನು ಹಾಗೂ ವಿತರಿಸಲಾದ ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಿದೆ.*

*ಆಕರ: ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮಾಹಿತಿಯನ್ನು ಭಾರತ ಸರ್ಕಾರವು ತಿಳಿಸಿದ ಹಾಗೂ ರಾಜ್ಯ ಸರ್ಕಾರವು ತನ್ನ ಆಯವ್ಯಯ ದಾಖಲೆಗಳಲ್ಲಿ ಅಳವಡಿಸಿಕೊಂಡ ಅಂಕಿಗಳಾಗಿವೆ.*

**ಅನುಬಂಧ 1.1ರ ಟಿಪ್ಪಣಿಯನ್ನು ನೋಡಿ.*

*ತುಲನಾತ್ಮಕ ವಿಶ್ಲೇಷಣೆಯು ಕೆಳಕಂಡ ಅಂಶಗಳನ್ನು ಸೂಚಿಸಿದೆ.*

- **ಕೋಷ್ಟಕ 1.17**_ರಲ್ಲಿ ಗಮನಿಸಿದಂತೆ ಶಿಕ್ಷಣ ವಲಯದ ವೆಚ್ಚದ ಅನುಪಾತವು ಸಾಮಾನ್ಯ ವರ್ಗ ರಾಜ್ಯ ಸರಾಸರಿಗಿಂತ ಕಡಿಮೆಯಿದ್ದು, 2018–19ರಲ್ಲಿ ಕೇರಳ ಮತ್ತು ತಮಿಳುನಾಡಿಗಿಂತ ಕಡಿಮೆಯಿದ್ದುದರಿಂದ ಶಿಕ್ಷಣ ವಲಯಕ್ಕೆ ಸಾಕಷ್ಟು ಆದ್ಯತೆಯನ್ನು ನೀಡುವ ಅವಶ್ಯಕತೆಯಿದೆ._
- *2018–19ರಲ್ಲಿ ಆರೋಗ್ಯ ವಲಯದ ಅನುಪಾತವು ಸಾಮಾನ್ಯ ವರ್ಗ ರಾಜ್ಯಗಳ ಅನುಪಾತಕ್ಕಿಂತ ಹಾಗೂ ಕೇರಳ ಮತ್ತು ತಮಿಳುನಾಡುಗಳಿಗಿಂತ ಕಡಿಮೆಯಿದ್ದಿತು. ಆದುದರಿಂದ ಆರೋಗ್ಯ ವಲಯಕ್ಕೂ ಸಾಕಷ್ಟು ಆದ್ಯತೆ ನೀಡುವ ಅವಶ್ಯಕತೆಯಿದೆ.*

*2014–15ರಿಂದ 2017–18ರವರೆಗಿನ ರಾಜ್ಯ ಹಣಕಾಸುಗಳ ಮೇಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಗಮನಿಸಿರುವಂತೆ ರಾಜ್ಯವು ಶಿಕ್ಷಣ ಹಾಗೂ ಆರೋಗ್ಯ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ. ಶಿಕ್ಷಣದೆಡೆಗೆ ಆದ್ಯತೆಯು ಇಳಿಕೆಯಾಗುತ್ತಿದ್ದು, ಆರೋಗ್ಯ ವಲಯಕ್ಕೆ ಆದ್ಯತೆಯು ಗಮನಾರ್ಹವಾಗಿ ಹೆಚ್ಚಾಗಿಲ್ಲ.*

### 1.8.2 ವೆಚ್ಚದ ದಕ್ಷತೆ

ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಸಾರ್ವಜನಿಕ ವೆಚ್ಚದ ಮಹತ್ವದ ದೃಷ್ಟಿಯಲ್ಲಿ ರಾಜ್ಯ ಸರ್ಕಾರವು ಸೂಕ್ತ ವೆಚ್ಚ ಪುನರ್ವ್ಯವಸ್ಥೆಯ ಕ್ರಮಗಳನ್ನು ತೆಗೆದುಕೊಂಡು ಅಭಿವೃದ್ಧಿ ವೆಚ್ಚಗಳಿಗೆ ಒತ್ತುಕೊಡ ಬೇಕಾಗಿರುವುದು ಅನಿವಾರ್ಯವಾಗಿದೆ. ಒಟ್ಟು ವೆಚ್ಚಕ್ಕೆ ಈ ಭಾಗಗಳ ಅನುಪಾತವು ಹೆಚ್ಚಾಗಿದ್ದಷ್ಟೂ, ವೆಚ್ಚದ ಗುಣಮಟ್ಟವು ಉತ್ತಮವಾಗಿರುತ್ತದೆ. **ಕೋಷ್ಟಕ 1.18**ರಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದಂತೆ 2018–19ರ ಸಾಲಿನ ಒಟ್ಟು ವೆಚ್ಚಕ್ಕೆ ಪ್ರತಿಯಾಗಿ ಅಭಿವೃದ್ಧಿ ವೆಚ್ಚದ ಪ್ರವೃತ್ತಿಯನ್ನು ತೋರಿಸುತ್ತದೆ.

**ಕೋಷ್ಟಕ 1.18: ಅಭಿವೃದ್ಧಿ ವೆಚ್ಚ***(ಆವರಣದಲ್ಲಿರುವ ಅಂಕಿಗಳು ಒಟ್ಟು ವೆಚ್ಚದ ಶೇಕಡಾವಾರನ್ನು ತೋರಿಸುತ್ತವೆ)*

**(₹ ಕೋಟಿಗಳಲ್ಲಿ)**

| | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಅಭಿವೃದ್ಧಿ ವೆಚ್ಚ | 88,904 | 1,00,441 | 1,23,988 | 1,36,286 | 1,54,528 |
| ಒಟ್ಟು ವೆಚ್ಚಕ್ಕೆ ಅಭಿವೃದ್ಧಿ ವೆಚ್ಚದ ಶೇಕಡಾವಾರು | 72 | 73 | 77 | 76 | 76 |
| ಅಭಿವೃದ್ಧಿ ವೆಚ್ಚದ ಅಂಗಗಳು | | | | | |
| ರಾಜಸ್ವ | 69,337 (78) | 80,153 (80) | 94,970 (76) | 1,01,508 (74) | 1,16,220 (75) |
| ಬಂಡವಾಳ | 19,004 (21) | 19,722 (20) | 27,090 (22) | 29,690 (22) | 33,832 (22) |
| ಸಾಲಗಳು ಮತ್ತು ಮುಂಗಡಗಳು | 563(1) | 566(0) | 1,928(2) | 5,088(4) | 4,476(3) |

*ಆಕರ: ಹಣಕಾಸು ಲೆಕ್ಕಗಳು.*

ಅಭಿವೃದ್ಧಿ ವೆಚ್ಚವು 2014–15ರಲ್ಲಿ ₹88,904 ಕೋಟಿ ಇದ್ದುದು 2018–19ರಲ್ಲಿ 1,54,528 ಕೋಟಿಗೆ ಏರಿದೆ. ಒಟ್ಟಾರೆ ವೆಚ್ಚಕ್ಕೆ, ಅದು 2014–15ರಲ್ಲಿದ್ದ ಶೇಕಡ 72ರಿಂದ 2016–17ರಲ್ಲಿ ಶೇಕಡ 77ಕ್ಕೆ ಏರಿ 2017–18 ಮತ್ತು 2018–19ರಲ್ಲಿ ಶೇಕಡ 76ಕ್ಕೆ ಇಳಿಯಿತು. 2014–15 ರಿಂದ 2018–19ರ ಅವಧಿಯಲ್ಲಿ ಸರಾಸರಿಯಾಗಿ ಅಭಿವೃದ್ಧಿ ವೆಚ್ಚದ ಶೇಕಡ 77ರಷ್ಟು ರಾಜಸ್ವ ಲೆಕ್ಕದಡಿಯಿದ್ದರೆ ಉಳಿದ ಭಾಗ ಬಂಡವಾಳ ಸೇರಿದಂತೆ ಸಾಲ ಮತ್ತು ಮುಂಗಡಗಳ ವೆಚ್ಚದಡಿ ಉಂಟಾಗಿದೆ. 2018–19ರಲ್ಲಿ ಸಂಬಳ ವೆಚ್ಚ (₹19,856 ಕೋಟಿ) ಮತ್ತು ಸಹಾಯಧನ (₹15,400 ಕೋಟಿ) ಅಭಿವೃದ್ಧಿ ರಾಜಸ್ವ ವೆಚ್ಚದ ಎರಡು ಪ್ರಮುಖ ಅಂಶಗಳಾಗಿದ್ದವು.

ಈ ಕೆಳಗಿನ **ಕೋಷ್ಟಕ 1.19**ರಲ್ಲಿ ಆಯ್ದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ ಮತ್ತು ಸಂಬಳ ಮತ್ತು ನಿರ್ವಹಣೆಗಳ ಮೇಲಿನ ರಾಜಸ್ವ ವೆಚ್ಚದ ಅಂಶಗಳ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ 1.19: ಆಯ್ದ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ವೆಚ್ಚದ ದಕ್ಷತೆ**

(ಅನುಪಾತ ಶೇಕಡಾವಾರಿನಲ್ಲಿ)

| ವಲಯ | 2017–18 | | | 2018–19 | | |
|---|---|---|---|---|---|---|
| | ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತ | ರಾಜಸ್ವ ವೆಚ್ಚ | | ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತ | ರಾಜಸ್ವ ವೆಚ್ಚ | |
| | | ವೇತನ ಮತ್ತು ಮಜೂರಿ | ಕಾರ್ಯಾಚರಣೆ ಮತ್ತು ನಿರ್ವಹಣೆ | | ವೇತನ ಮತ್ತು ಮಜೂರಿ | ಕಾರ್ಯಾಚರಣೆ ಮತ್ತು ನಿರ್ವಹಣೆ |
| ಸಾಮಾಜಿಕ ಸೇವೆಗಳು | | | | | | |
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 0.64 | 7.94 | 0.03 | 0.54 | 8.31 | 0.01 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 0.64 | 1.61 | 0.01 | 0.54 | 1.52 | 0.03 |
| ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 1.75 | 0.09 | 0.09 | 1.98 | 0.09 | 0.10 |
| ಇತರೆ | 1.84 | 0.49 | 0.02 | 1.75 | 0.53 | 0.01 |
| ಒಟ್ಟು (ಸಾಮಾಜಿಕ ಸೇವೆಗಳು) | **4.87** | **10.13** | **0.15** | **4.81** | **10.45** | **0.15** |
| ಆರ್ಥಿಕ ಸೇವೆಗಳು | | | | | | |
| ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು | 0.13 | 0.74 | 0.04 | 0.11 | 0.76 | 0.03 |
| ನೀರಾವರಿ ಮತ್ತು ನೆರೆ ನಿಯಂತ್ರಣ | 5.83 | 0.09 | 0.26 | 5.95 | 0.09 | 0.23 |
| ವಿದ್ಯುಚ್ಛಕ್ತಿ ಮತ್ತು ಇಂಧನ | 0.46 | 0.02 | – | 0.31 | – | – |
| ಸಾರಿಗೆ | 4.14 | 0.05 | 0.57 | 4.35 | 0.05 | 0.57 |
| ಇತರೆ | 1.23 | 0.67 | 0.03 | 1.10 | 0.73 | – |
| ಒಟ್ಟು (ಆರ್ಥಿಕ ಸೇವೆಗಳು) | **11.79** | **1.57** | **0.90** | **11.82** | **1.63** | **0.83** |
| ಒಟ್ಟು (ಸಾ.ಸೇ + ಆ.ಸೇ) | **16.66** | **11.70** | **1.05** | **16.63** | **12.08** | **0.98** |

*ಆಕರ: ಹಣಕಾಸು ಲೆಕ್ಕಗಳು.*

### ಸಾಮಾಜಿಕ ಸೇವೆಗಳ ಮೇಲಿನ ವೆಚ್ಚ

ಸಾಮಾಜಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು (ಸಾಲ ಮತ್ತು ಮುಂಗಡಗಳು ಸೇರಿದಂತೆ) 2017–18ರಲ್ಲಿದ್ದ ₹9,855 ಕೋಟಿಗಳಿಂದ 2018–19ರಲ್ಲಿ ₹12,235 ಕೋಟಿಗಳಿಗೆ ಏರಿಕೆಯಾಗಿದ್ದು, ಬಂಡವಾಳ ವೆಚ್ಚ ಮತ್ತು ಒಟ್ಟು ವೆಚ್ಚಗಳ ಅನುಪಾತವು 2017–18ರಲ್ಲಿ ಶೇಕಡ 4.87 ರಷ್ಟಿದ್ದು 2018–19ರಲ್ಲಿ ಶೇಕಡ 4.81ಕ್ಕೆ ಇಳಿದಿತ್ತು. ಒಟ್ಟು ರಾಜಸ್ವ ವೆಚ್ಚದಲ್ಲಿ ಸಂಬಳದ ಮೇಲಿನ ವೆಚ್ಚದ (ಸಾಮಾಜಿಕ ಸೇವೆಗಳಡಿ) ಪಾಲು 2018–19ರಲ್ಲಿ ಶೇಕಡ 10ರಷ್ಟಿತ್ತು (**ಕೋಷ್ಟಕ 1.19**).

### ಆರ್ಥಿಕ ಸೇವೆಗಳ ಮೇಲಿನ ವೆಚ್ಚ

ಆರ್ಥಿಕ ವಿಭಾಗದಲ್ಲಿನ ಬಂಡವಾಳ ವೆಚ್ಚವು (ಸಾಲ ಮತ್ತು ಮುಂಗಡಗಳು ಸೇರಿ) 2017–18ರಲ್ಲಿದ್ದ ₹24,923 ಕೋಟಿಗಳಿಂದ 2018–19ರಲ್ಲಿ ₹26,073 ಕೋಟಿಗಳಿಗೆ ಏರಿದೆ ಮತ್ತು ಒಟ್ಟು ವೆಚ್ಚಕ್ಕೆ ಅದರ ಅನುಪಾತವು 2017–18ರಲ್ಲಿದ್ದ ಶೇಕಡ 11.79ರಿಂದ 2018–19ರಲ್ಲಿ ಶೇಕಡ 11.82ಕ್ಕೆ ಏರಿದೆ. ರಾಜಸ್ವ ವೆಚ್ಚದಲ್ಲಿ (ಆರ್ಥಿಕ ಸೇವೆಗಳ ಅಡಿ) ಸಂಬಳದ ವೆಚ್ಚದ ಪಾಲು 2018–19ರಲ್ಲಿ ಶೇಕಡ 2ರಷ್ಟಿತ್ತು (**ಕೋಷ್ಟಕ 1.19**).

ರಾಜ್ಯ ಸರ್ಕಾರವು ಆರ್ಥಿಕ ಸೇವೆಗಳಲ್ಲಿ ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿ ಮತ್ತು ಪ್ರವಾಹ ನಿಯಂತ್ರಣ, ಸಾರಿಗೆ, ಇಂಧನ, ಕೈಗಾರಿಕೆ ಮತ್ತು ಖನಿಜಗಳನ್ನು ಆದ್ಯತೆಯ ವಿಭಾಗಗಳಾಗಿ ಗುರುತಿಸಿದೆ.

2018-19ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಂಡವಾಳ ವೆಚ್ಚವು ಕ್ರಮವಾಗಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣ, ಸಾರಿಗೆ ಮತ್ತು ವಿಶೇಷ ಪ್ರದೇಶ ಕಾರ್ಯಕ್ರಮಗಳಲ್ಲಿ ಕ್ರಮವಾಗಿ ₹1,704 ಕೋಟಿ, ₹1,480 ಕೋಟಿ ಮತ್ತು ₹243 ಕೋಟಿ ಹೆಚ್ಚಾಗಿದ್ದು ಇಂಧನ, ಕೈಗಾರಿಕೆ ಮತ್ತು ಖನಿಜಗಳು, ಗ್ರಾಮೀಣಾಭಿವೃದ್ಧಿ, ಕೃಷಿ ಮತ್ತು ಸಾರಿಗೆಗಳಲ್ಲಿ ಕ್ರಮವಾಗಿ ₹199 ಕೋಟಿ, ₹117 ಕೋಟಿ ಮತ್ತು ₹47 ಕೋಟಿ ಹಾಗೂ ₹11 ಕೋಟಿಗಳಷ್ಟು ಇಳಿದಿದೆ.

## 1.9 ಸರ್ಕಾರದ ಬಂಡವಾಳ ವೆಚ್ಚ ಮತ್ತು ಹೂಡಿಕೆಗಳ ಆರ್ಥಿಕ ವಿಶ್ಲೇಷಣೆ

ವಿತ್ತೀಯ ಜವಾಬ್ದಾರಿ ಕಾಯಿದೆ ನಂತರದ ನಿರ್ಬಂಧಗಳನ್ವಯ ರಾಜ್ಯ ಸರ್ಕಾರವು ತನ್ನ ವಿತ್ತ ಕೊರತೆಯನ್ನು (ಸಾಲಗಳನ್ನು) ಕನಿಷ್ಠ ಮಟ್ಟದಲ್ಲಿಟ್ಟುಕೊಳ್ಳುವುದು ಮಾತ್ರವಲ್ಲದೆ ತನ್ನ ಬಂಡವಾಳ ವೆಚ್ಚ/ ಹೂಡಿಕೆಗಳ (ಸಾಲ ಮತ್ತು ಮುಂಗಡಗಳೂ ಸೇರಿ) ಅಗತ್ಯತೆಗಳನ್ನು ಪೂರೈಸಿಕೊಳ್ಳಬೇಕಾಗಿದೆ. ರಾಜ್ಯ ಸರ್ಕಾರವು ಇದನ್ನು ಪರೋಕ್ಷ ಸಹಾಯಧನಗಳ ರೂಪದಲ್ಲಿ ತನ್ನ ಆಯವ್ಯಯದ ಮೂಲಕ ಭರಿಸುವ ಬದಲು ತನ್ನ ಹೂಡಿಕೆಗಳ ಮೇಲಿನ ಪ್ರತಿಫಲಗಳನ್ನು ಮತ್ತು ಕಡವಾಗಿ ಪಡೆದ ಮೊತ್ತಗಳ ಬೆಲೆಯನ್ನು ಗಳಿಸಲು ಕ್ರಮಗಳನ್ನು ತೆಗೆದುಕೊಳ್ಳುವುದರೊಂದಿಗೆ ತನ್ನ ಹಣಕಾಸು ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ತುಂಬಲು ಯತ್ನಿಸಬೇಕಾಗಿದೆ. ಈ ವಿಭಾಗವು ಹಿಂದಿನ ವರ್ಷಗಳಿಗೆ ಹೋಲಿಸಿದಂತೆ 2018-19ರಲ್ಲಿ ಸರ್ಕಾರವು ಮಾಡಿದ ಹೂಡಿಕೆ ಮತ್ತಿತರ ಬಂಡವಾಳ ವೆಚ್ಚಗಳ ಸ್ಥೂಲ ಆರ್ಥಿಕ ವಿಶ್ಲೇಷಣೆಯನ್ನು ನೀಡುತ್ತದೆ.

### 1.9.1 ಬಂಡವಾಳ ವೆಚ್ಚ

ಪ್ರಸಕ್ತ ವರ್ಷದಲ್ಲಿ ಬಂಡವಾಳ ವೆಚ್ಚವು ₹3,992.56 ಕೋಟಿಗಳಷ್ಟು (ಶೇಕಡ 13) ಹೆಚ್ಚಾಗಿದೆ. ಈ ಹೆಚ್ಚಳವು ಪ್ರಮುಖವಾಗಿ ಆರ್ಥಿಕ ಸೇವೆಗಳು ವಿಭಾಗ (₹3,025.80 ಕೋಟಿ-ಶೇಕಡ 14) ಮತ್ತು ಸಾಮಾಜಿಕ ಸೇವೆಗಳು ವಿಭಾಗದಲ್ಲಿ (₹1,116.50 ಕೋಟಿಗಳು-ಶೇಕಡ 13) ಕಂಡುಬಂದಿದ್ದು ಸಾಮಾನ್ಯ ಸೇವೆಗಳ ವಿಭಾಗದಲ್ಲಿನ (₹150.04 ಕೋಟಿಗಳು-ಶೇಕಡ 15) ಇಳಿಕೆಯಿಂದ ಉತ್ತಾರವಾಗಿದೆ.

ಸಾಮಾನ್ಯ ಸೇವೆಗಳ ವಿಭಾಗದಲ್ಲಿ ಬಂಡವಾಳ ವೆಚ್ಚದಲ್ಲಿ ಇಳಿಕೆಯು ಮುಖ್ಯವಾಗಿ ಪೊಲೀಸ್ (ಶೇಕಡ 22) ಮತ್ತು ಲೋಕೋಪಯೋಗಿ ಕಾಮಗಾರಿಗಳಲ್ಲಿ (ಶೇಕಡ 11) ಕಂಡುಬಂದಿತು. ಲೋಕೋಪಯೋಗಿ ಕಾಮಗಾರಿಗಳಲ್ಲಿ ಬಂಡವಾಳ ವೆಚ್ಚವು ಪ್ರಸಕ್ತ ವರ್ಷದಲ್ಲಿ ಕಡಿಮೆಯಾಗಿದ್ದರೂ ಇದು ಸಾಮಾನ್ಯ ಸೇವೆಗಳ ವಿಭಾಗದಲ್ಲಿ ಪ್ರಧಾನ ಪಾಲಿನ ಕೊಡುಗೆಯಾಗಿದೆ.

ಸಾಮಾಜಿಕ ಸೇವೆಗಳ ವಿಭಾಗದಲ್ಲಿ ಬಂಡವಾಳ ವೆಚ್ಚದ ಪ್ರಮುಖ ಭಾಗವು ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿಗಳಲ್ಲಿ (ಶೇಕಡ 41) ವೆಚ್ಚವಾಗಿದ್ದು ನಂತರದ ಸ್ಥಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣದ್ದಾಗಿದೆ (ಶೇಕಡ 35).

ಆರ್ಥಿಕ ಸೇವೆಗಳ ವಿಭಾಗದಲ್ಲಿ ಬಂಡವಾಳ ವೆಚ್ಚದ ಪ್ರಧಾನಪಾಲು ನೀರಾವರಿ ಮತ್ತು ಪ್ರವಾಹ ನಿಯಂತ್ರಣ (ಶೇಕಡ 50)ದಡಿ ಇದ್ದು ನಂತರದ ಸ್ಥಾನ ಸಾರಿಗೆ ಇಲಾಖೆ (ಶೇಕಡ 37)ಯದ್ದಾಗಿದೆ.

2018-19ರಲ್ಲಿ ₹10,767 ಕೋಟಿಗಳ ಬಂಡವಾಳ ವೆಚ್ಚವನ್ನು ಕರ್ನಾಟಕದ ಸಾರ್ವಜನಿಕ ವಿಭಾಗದ ಉದ್ದಿಮೆಗಳು ಮಾಡಿವೆ. ಕರ್ನಾಟಕ ನೀರಾವರಿ ನಿಗಮ ನಿಯಮಿತ (₹3,702.67 ಕೋಟಿ), ಕೃಷ್ಣ ಭಾಗ್ಯ ಜಲನಿಗಮ ನಿಯಮಿತ (₹3,538.74 ಕೋಟಿ) ಮತ್ತು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(₹1,703.40 ಕೋಟಿ)ಗಳು ಮಾಡಿದ ವೆಚ್ಚದ ಪ್ರಧಾನ ಭಾಗವು ಭೂಸ್ವಾಧೀನ ವೆಚ್ಚ, ಬಾಕಿ ಇರುವ ಬಿಲ್ಲುಗಳ ಬಂಡವಾಳ ವೆಚ್ಚ ಮತ್ತು ಇತರ ಬಂಡವಾಳ ಅನುದಾನಗಳಿಗೆ ಸಂಬಂಧಿಸಿದೆ.

**ಅನುಬಂಧ 1.3**(ಎ)ನಲ್ಲಿ 2014–15ರಿಂದ 2018–19ರ ಅವಧಿಯಲ್ಲಿ ವಿವಿಧ ಸೇವಾ ವಿಭಾಗಗಳು, ಉಪ ವಿಭಾಗಗಳು ಮತ್ತು ಸಾರ್ವಜನಿಕ ವಿಭಾಗದ ಉದ್ದಿಮೆಗಳಡಿಯ ಬಂಡವಾಳ ವೆಚ್ಚದ ವಿವರಗಳನ್ನು ನೀಡಲಾಗಿದೆ.

### 1.9.2 ಅಪೂರ್ಣ ಕಾಮಗಾರಿಗಳು

ದಾವೆ ಮುಂತಾದ ಕಾರಣಗಳೂ ಸೇರಿದಂತೆ ವಿವಿಧ ಕಾರಣಗಳಿಂದ ಅಪೂರ್ಣವಾಗಿ ಉಳಿದ ಕಾಮಗಾರಿಗಳಿಂದ ಅವುಗಳ ಮೇಲಿನ ವೆಚ್ಚವು ನಿರ್ಬಂಧಿತವಾಗಿ ವೆಚ್ಚದ ಗುಣಮಟ್ಟದ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತದೆ. 31 ಮಾರ್ಚ್ 2019ರಲ್ಲಿದ್ದಂತೆ, ಅಪೂರ್ಣ ಕಾಮಗಾರಿಗಳ ಇಲಾಖಾವಾರು ಮಾಹಿತಿಯನ್ನು **ಕೋಷ್ಟಕ 1.20**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.20: ಅಪೂರ್ಣ ಕಾಮಗಾರಿಗಳು**

**(₹ ಕೋಟಿಗಳಲ್ಲಿ)**

| ಇಲಾಖೆ | ಅಪೂರ್ಣ ಯೋಜನೆಗಳು* | | | | ಮಾರ್ಚ್ 2019ರ ಅಂತ್ಯಕ್ಕೆ ಸಂಚಿತ ವೆಚ್ಚ |
|---|---|---|---|---|---|
| | ಸಂಖ್ಯೆ | ಆಯವ್ಯಯ ವೆಚ್ಚ | ವೆಚ್ಚದ ಅಧಿವ್ಯಾಪನೆ | | |
| | | | ಸಂಖ್ಯೆ | ಮೊತ್ತ | |
| **ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ** | | | | | |
| **ಕಟ್ಟಡಗಳು** | 74 | 368.26 | 14 | 8.18 | 338.22 |
| **ರಸ್ತೆಗಳು ಮತ್ತು ಸೇತುವೆಗಳು** | 718 | 2,845.44 | 165 | 76.91 | 2,579.51 |
| ನೀರಾವರಿ | 86 | 200.09 | 18 | 11.50 | 196.88 |
| ಒಟ್ಟು | **878** | **3,413.79** | **197** | **96.59** | **3,114.61** |

*ಆಕರ: ಹಣಕಾಸು ಲೆಕ್ಕಗಳು*

* 31 ಮಾರ್ಚ್ 2019ಕ್ಕೆ ಮುಂಚಿತವಾಗಿ ಪೂರ್ಣಗೊಳ್ಳಲು ಉದ್ದೇಶಿಸಿದ್ದ ಯೋಜನೆಗಳನ್ನು ಪರಿಗಣಿಸಲಾಗಿದೆ.

₹3,413.79 ಕೋಟಿಗಳ ಮೂಲ ಅಂದಾಜು ಮೊತ್ತದ 878 ಕಾಮಗಾರಿಗಳು ಮಾರ್ಚ್ 2019 ಅಥವಾ ಅದಕ್ಕಿಂತಲೂ ಮುಂಚಿತವಾಗಿ ಪೂರ್ಣಗೊಳ್ಳಬೇಕಾಗಿದ್ದು, 31 ಮಾರ್ಚ್ 2019ರಲ್ಲಿದ್ದಂತೆ ಇವುಗಳ ಮೇಲಿನ ಸಂಚಿತ ವೆಚ್ಚವು ₹3,114.61 ಕೋಟಿಗಳಷ್ಟಿದೆ. ಇದರಲ್ಲಿ 197 ಪ್ರಕರಣಗಳಲ್ಲಿ ಅಧಿವ್ಯಾಪನ ವೆಚ್ಚವು ₹96.59 ಕೋಟಿಗಳಷ್ಟಿತ್ತು. ಯೋಜನೆಗಳು ಪೂರ್ಣಗೊಳ್ಳುವಲ್ಲಿನ ವಿಳಂಬವು ಐದು ವರ್ಷಕ್ಕಿಂತ ಅಧಿಕ (8), ಐದು ವರ್ಷಕ್ಕಿಂತ ಕಡಿಮೆಯಿದ್ದು ಒಂದು ವರ್ಷಕ್ಕಿಂತ ಅಧಿಕವಾದವುಗಳು (317) ಮತ್ತು ಒಂದು ವರ್ಷಕ್ಕಿಂದ ಕಡಿಮೆಯಿದ್ದ ಪ್ರಕರಣಗಳು (553) ಇದ್ದವು. ಲೋಕೋಪಯೋಗಿ ಬಂದರು ಮತ್ತು ಒಳನಾಡು ಸಾರಿಗೆ ಮತ್ತು ನೀರಾವರಿ ಇಲಾಖೆಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಆದ ವಿಳಂಬಕ್ಕೆ ಕಾರಣಗಳನ್ನು ನೀಡಿರುವುದಿಲ್ಲ.

**ಸಮಯ ಮತ್ತು ವೆಚ್ಚ ಎರಡರ ಏರಿಕೆಯನ್ನು ಕಡಿಮೆಗೊಳಿಸಲು ಅಂತಿಮಗೊಳ್ಳುತ್ತಿರುವ ಯೋಜನೆಗಳಿಗೆ ಹಣವನ್ನು ಆದ್ಯತೆಯ ಮೇಲೆ ಬಿಡುಗಡೆ ಮಾಡಬೇಕೆಂದು ವಿತ್ತೀಯ ನಿರ್ವಹಣಾ ಪರಿಶೀಲನಾ ಸಭೆಯು ಸಲಹೆ ನೀಡಿತು (ಜುಲೈ 2018). ಆದಾಗ್ಯೂ, 31 ಮಾರ್ಚ್ 2018ರಲ್ಲಿ 236ರಷ್ಟಿದ್ದ ಅಪೂರ್ಣ ಕಾಮಗಾರಿಗಳ ಸಂಖ್ಯೆಯು 31 ಮಾರ್ಚ್ 2019ಕ್ಕೆ 878ರಷ್ಟಾಗಿತ್ತು. ಇದು ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯ ಸಲಹೆಯಂತೆ ಕ್ರಮ ಕೈಗೊಂಡಿರಲಿಲ್ಲವೆಂಬುದನ್ನು ಸೂಚಿಸಿತು. ಮುಂದುವರೆದು, ಜುಲೈ 2013ರಿಂದ ಡಿಸೆಂಬರ್ 2016ರ ಅವಧಿಯಲ್ಲಿ ಪೂರ್ಣಗೊಳ್ಳ ಬೇಕಾಗಿದ್ದ 14 ಕಾಮಗಾರಿಗಳಲ್ಲಿ**

**ಭೌತಿಕ ಪ್ರಗತಿಯು ಶೇಕಡ 10ರಿಂದ ಶೇಕಡ 60ರ ನಡುವೆ ಇದ್ದಿತು. ಇದು ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಬೇಕೆಂಬುದನ್ನು ತೋರಿಸುತ್ತದೆ.**

**ಕಾಮಗಾರಿಗಳ ಅನುಷ್ಠಾನಕ್ಕೆ ಏಪ್ರಿಲ್ 2013ರಲ್ಲಿಯೇ ವಿವರವಾದ ಕಾರ್ಯಸೂಚಿಗಳನ್ನು ಜಾರಿ ಮಾಡಲಾಗಿದೆಯೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಕಾರ್ಯಸೂಚಿಗಳ ಅನ್ವಯ ಆಡಳಿತಾತ್ಮಕ ಅನುಮೋದನೆಗಳ ಪಡೆಯುವಿಕೆ, ಆಯವ್ಯಯ ಹಂಚಿಕೆ ಮತ್ತು ಯೋಜನೆಗಳನ್ನು ನಿಗದಿತ ಸಮಯದ ಚೌಕಟ್ಟಿನೊಳಗೆ ಅನುಷ್ಠಾನಗೊಳಿಸುವುದನ್ನು ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಗಳು ಪಾಲಿಸುವ ಅಗತ್ಯವಿದೆ.**

### 1.9.3 ಹೂಡಿಕೆಗಳು ಮತ್ತು ಪ್ರತಿಫಲಗಳು

ರಾಜ್ಯ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕಂಪನಿ/ನಿಗಮ ಮುಂತಾದವುಗಳಲ್ಲಿನ ಸರ್ಕಾರದ ಷೇರು ಬಂಡವಾಳ ಹೂಡಿಕೆಯ ಲೆಕ್ಕಶೀರ್ಷಿಕೆ 4225–107 ಸಾಲ ಸಹಕಾರಿಗಳಲ್ಲಿನ ಹೂಡಿಕೆಗಳು, 4225–108 ಇತರ ಸಹಕಾರಿಗಳಲ್ಲಿನ ಹೂಡಿಕೆಗಳು, 4405–00–191 ಮೀನುಗಾರರ ಸಹಕಾರಿಗಳು ಮತ್ತು 4851–00–108–01 ವಿದ್ಯುತ್ ಚಾಲಿತ ಮಗ್ಗ ಸಹಕಾರಿ ಸಂಸ್ಥೆಗಳಿಗೆ ಷೇರು ಬಂಡವಾಳ ಸಹಾಯ ಮತ್ತು ವಿವಿಧ ಬಂಡವಾಳ ವೆಚ್ಚ ಶೀರ್ಷಿಕೆಗಳಡಿಯಲ್ಲಿನ ಒಳಶೀರ್ಷಿಕೆ 190–ಸಾರ್ವಜನಿಕ ವಿಭಾಗ ಮತ್ತು ಇತರ ಉದ್ದಿಮೆಗಳು ಮತ್ತು 195–ಸಹಕಾರಿಗಳಡಿಯ ಹೂಡಿಕೆಗಳ ವೆಚ್ಚವನ್ನು ಒಳಗೊಂಡಿದೆ.

31 ಮಾರ್ಚ್ 2019ರಲ್ಲಿದ್ದಂತೆ ಸರ್ಕಾರವು ₹66,518 ಕೋಟಿಗಳನ್ನು 87[11] ಸರ್ಕಾರಿ ಕಂಪೆನಿಗಳ (₹60,278 ಕೋಟಿ), ಒಂಭತ್ತು ಶಾಸನಬದ್ಧ ನಿಗಮಗಳು (₹2,664 ಕೋಟಿ), 44 ಕೂಡು ಬಂಡವಾಳ ಕಂಪೆನಿಗಳು (₹3,033 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ (₹523 ಕೋಟಿ) ಹೂಡಿದೆ. ಇವು ವಿವಿಧ ವಲಯಗಳಡಿ[12] ಹರಡಿತ್ತು. ಈ ಹೂಡಿಕೆಗಳಿಂದ ಬಂದ ಪ್ರತಿಫಲವು ನಗಣ್ಯವಾಗಿದೆ (**ಕೋಷ್ಟಕ 1.21**).

**ಕೋಷ್ಟಕ 1.21: ಹೂಡಿಕೆಗಳ ಮೇಲಿನ ಪ್ರತಿಫಲ**

| | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ವರ್ಷಾಂತ್ಯದಲ್ಲಿ ಹೂಡಿಕೆ (ಕೋಟಿ ರೂಪಾಯಿಗಳಲ್ಲಿ) | 61,726.92 | 61,335.89 | 63,115.06 | 65,145.88 | 66,518.28 |
| ಪ್ರತಿಫಲ (ಕೋಟಿ ರೂಪಾಯಿಗಳಲ್ಲಿ) | 74.84 | 69.40 | 82.50 | 78.83 | 38.30 |
| ಪ್ರತಿಫಲ (ಶೇಕಡ) | 0.1 | 0.1 | 0.1 | 0.1 | 0.1 |
| ಸರ್ಕಾರದ ಸಾಲದ ಮೇಲಿನ ಸರಾಸರಿ ಬಡ್ಡಿ (ಶೇಕಡ) | 6.5 | 6.5 | 6.3 | 7.7 | 8.2 |
| ಬಡ್ಡಿದರ ಮತ್ತು ಪ್ರತಿಫಲಗಳ ನಡುವಿನ ವ್ಯತ್ಯಾಸ (ಶೇಕಡ) | 6.4 | 6.4 | 6.2 | 7.6 | 8.1 |

*ಆಧಾರ: ಹಣಕಾಸು ಲೆಕ್ಕಗಳು*

[11] ನಿಷ್ಕ್ರಿಯ 16 ಸರ್ಕಾರಿ ಕಂಪನಿಗಳಲ್ಲಿನ ₹68 ಕೋಟಿಗಳ ಹೂಡಿಕೆಯೂ ಸೇರಿದೆ.

[12] ನೀರಾವರಿ (₹36,779 ಕೋಟಿ), ವಿದ್ಯುಚ್ಛಕ್ತಿ (₹11,209 ಕೋಟಿ), ಮೂಲ ಸೌಕರ್ಯ (₹4,734 ಕೋಟಿ), ಹಣಕಾಸು (₹3,320 ಕೋಟಿ), ಸಾರಿಗೆ (₹2,399 ಕೋಟಿ), ಸಾಮಾಜಿಕ (₹1,851 ಕೋಟಿ), ವಸತಿ (₹1,451 ಕೋಟಿ), ಕೈಗಾರಿಕೆ (₹1,017 ಕೋಟಿ), ನಿರ್ಮಾಣ (₹2 ಕೋಟಿ) ಮತ್ತು ಇತರ ವಲಯಗಳು (₹113 ಕೋಟಿ).

ರಾಜ್ಯ ಸರ್ಕಾರವು ಈ ಹೂಡಿಕೆಗಳ ಮೇಲಿನ ಪ್ರತಿಫಲವು ನಗಣ್ಯವೆಂಬ ಸತ್ಯಾಂಶವನ್ನು ಒಪ್ಪಿಕೊಂಡಿದ್ದರೂ (ಜುಲೈ 2011), ಅದು ದೀರ್ಘಕಾಲೀನ ಬೆಳವಣಿಗೆ ಮತ್ತು ಪ್ರತಿಫಲಾವಧಿಯಿರುವ ಸಾಮಾಜಿಕ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಲು ಹಿಂಜರಿಯುವುದಿಲ್ಲವೆಂದು ಹೇಳಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಉತ್ತರವನ್ನು ಒಪ್ಪಿಕೊಳ್ಳುತ್ತಾ (ಡಿಸೆಂಬರ್ 2011) ಹಣಕಾಸಿನ ಗಾತ್ರದಲ್ಲಿ ನಿರೀಕ್ಷಿತ ಪ್ರತಿಫಲವನ್ನು ನಿರ್ಧಾರಣೆ ಮಾಡಲು ಆರ್ಥಿಕ ಇಲಾಖೆಯು ಯಾವುದೇ ಕಾರ್ಯವಿಧಾನವನ್ನು ಕೈಗೊಂಡಿರಲಿಲ್ಲ ಎಂದು ಗಮನಿಸಿತ್ತು. ಆದ್ದರಿಂದ ಅದಕ್ಕಾಗಿ ಕಾರ್ಯಸೂಚಿಯೊಂದನ್ನು ರೂಪಿಸಲು ಶಿಫಾರಸು ಮಾಡಿತ್ತು. ಮುಂದುವರೆದು, ಸರ್ಕಾರವು ನಿರ್ದಿಷ್ಟ ಪ್ರತಿಫಲವನ್ನು ಖಚಿತಪಡಿಸಿಕೊಳ್ಳಲು ತನ್ನ ಶ್ರಮವನ್ನು ಮುಂದುವರಿಸುವುದೆಂದು ಹೇಳಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳು ಹಾಗೂ ಕಳೆದ ಹತ್ತು ವರ್ಷಗಳಿಂದ ನಮ್ಮ ನಿರಂತರ ಗಮನಿಸುವಿಕೆಯ ನಂತರವೂ ಮಾರ್ಗಸೂಚಿಯನ್ನು ರೂಪಿಸಿರಲಿಲ್ಲ. ಅಲ್ಲದೆ, ಶಾಸಕಾಂಗದ ಮುಂದೆ ಮಂಡಿಸಲಾಗುವ ಮಧ್ಯಮಾವಧಿ ವಿತ್ತೀಯ ಯೋಜನೆಗಳು ಹೂಡಿಕೆಗಳ ಮೇಲೆ ಸೂಕ್ತ ಪ್ರತಿಫಲ ಪಡೆಯಲು ಯಾವುದೇ ಮಾರ್ಗಸೂಚಿಗಳನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ.

ಹೂಡಿಕೆಯು ಸತತ ನಷ್ಟದಲ್ಲಿರುವ ಈ ಕೆಳಗಿನ ಕಂಪೆನಿಗಳ/ನಿಗಮಗಳಲ್ಲಿ ₹38,949 ಕೋಟಿಗಳನ್ನು (ಶೇಕಡ 59) ಒಳಗೊಂಡಿದ್ದು, ಇವುಗಳಲ್ಲಿ ಹೂಡಿಕೆಯು ಗಣನೀಯ ಪ್ರಮಾಣದಲ್ಲಿದೆ (**ಕೋಷ್ಟಕ 1.22**).

**ಕೋಷ್ಟಕ 1.22: ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿನ ಹೂಡಿಕೆಗಳು**

**(₹ ಕೋಟಿಗಳಲ್ಲಿ)**

| ಕಂಪನಿ/ನಿಗಮ | 2018–19ರವರೆಗಿನ ಹೂಡಿಕೆ | 2017–18ರವರೆಗೆ ಸಂಚಿತ ನಷ್ಟ |
|---|---|---|
| ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ | 266.85 | 792.48 |
| ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ | 183.43 | 542.42 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 1,145.70 | 143.73 |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 23,745.34 | 2,587.22 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 13,034.03 | 3,492.46 |
| ಮೈಸೂರು ಸಕ್ಕರೆ ಕಂಪನಿ ನಿಯಮಿತ | 335.78 | 289.42 |
| ಮೈಸೂರು ಪೇಪರ್ ಮಿಲ್ಸ್ ನಿಯಮಿತ | 237.37 | 425.94 |
| ಒಟ್ಟು | **38,948.50** | **8,273.67** |

*ಆಕರ: ಹಣಕಾಸು ಲೆಕ್ಕಗಳು*

2018–19ರವರೆಗೆ ಈ ಕಂಪೆನಿಗಳಲ್ಲಿ ಸರ್ಕಾರವು ₹38,948.50 ಕೋಟಿಗಳನ್ನು ಹೂಡಿದ್ದು ಸಂಚಿತ ನಷ್ಟವು ₹8,274 ಕೋಟಿಗಳಷ್ಟಿತ್ತು. ಆರ್ಥಿಕ ಇಲಾಖೆಯು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ನೀಡಿದ ಉತ್ತರದಲ್ಲಿ (ಜುಲೈ 2011) ಈ ಮೇಲೆ ಹೇಳಿದ ಕಂಪೆನಿಗಳು/ನಿಗಮಗಳು/ರಾಜ್ಯದ/ಸಾರ್ವಜನಿಕ ಸೇವೆಗಾಗಿ ಮೂಲಸೌಲಭ್ಯಗಳ ಅವಶ್ಯಕತೆಗಾಗಿ ಸೃಷ್ಟಿಯಾಗಿದ್ದು, ಅವುಗಳನ್ನು ಆರ್ಥಿಕ ಲಾಭದ ದೃಷ್ಟಿಯಿಂದ ಪರಿಗಣಿಸಲಾಗುವುದಿಲ್ಲ ಎಂದು ಹೇಳಿದೆ. ಸಾರ್ವಜನಿಕ ಲೆಕ್ಕ ಸಮಿತಿಯು ಉತ್ತರವನ್ನು ಸಾಮಾನ್ಯವಾಗಿ ಒಪ್ಪಿದರೂ, ನಷ್ಟದಲ್ಲಿರುವ ಕಂಪೆನಿಗಳು/ನಿಗಮಗಳ ಕಾರ್ಯಸಾಧ್ಯತೆಯನ್ನು ನಿರ್ಧಾರಣೆ ಮಾಡಲು ಮತ್ತು ಹದಿಮೂರನೇ ಹಣಕಾಸು ಆಯೋಗದ ಶಿಫಾರಸಿನಂತೆ ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲದಿರುವ ಕಂಪೆನಿ/ನಿಗಮಗಳನ್ನು ಮುಚ್ಚಲು ಶಿಫಾರಸು ಮಾಡಿತ್ತು. ಆದರೂ, ರಾಜ್ಯ ಸರ್ಕಾರವು ಯಾವುದೇ ಕ್ರಮವನ್ನು ಕೈಗೊಂಡಿರಲಿಲ್ಲ. 2018–19ರಲ್ಲಿ ಮೈಸೂರು ಸಕ್ಕರೆ ಕಂಪೆನಿ ನಿಯಮಿತವು ನಷ್ಟದಲ್ಲಿದ್ದರೂ ₹37.00 ಕೋಟಿಗಳನ್ನು ಹೂಡಿಕೆ ಮಾಡಲಾಗಿತ್ತು.

2018–19ರಲ್ಲಿ ಸರ್ಕಾರವು ₹1,375.69 ಕೋಟಿಗಳನ್ನು ಸರ್ಕಾರಿ ಕಂಪನಿಗಳಲ್ಲಿ (ಕಾರ್ಯನಿರತ) (₹933.37 ಕೋಟಿ), ಕೂಡು ಬಂಡವಾಳ ಕಂಪನಿಗಳು (₹300 ಕೋಟಿ), ಶಾಸನಬದ್ಧ ನಿಗಮಗಳಲ್ಲಿ (₹68,45 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳಲ್ಲಿ (₹83.87 ಕೋಟಿ) ಹೂಡಿದೆ.

ಷೇರು ಬಂಡವಾಳದ ಸಂಸ್ಥೆಗಳಲ್ಲಿನ ಸರ್ಕಾರಿ ಹೂಡಿಕೆಗಳು ಕೊನೆಗೊಂಡು ಅದರ ಸ್ವೀಕೃತಿಗಳನ್ನು 2018–19ರಲ್ಲಿ ಇತರ ಬಂಡವಾಳ ಸ್ವೀಕೃತಿಗಳಡಿ ಲೆಕ್ಕ ಹಾಕಿದ್ದರಿಂದ ಇತರೆ ಸಹಕಾರಿಗಳು ಮತ್ತು ಮೀನುಗಾರರ ಸಹಕಾರಿಗಳಡಿ ಹೂಡಿಕೆ ಲೆಕ್ಕಗಳನ್ನು ₹3.29 ಕೋಟಿಗಳಷ್ಟು ಕಡಿಮೆಗೊಳಿಸಲಾಯಿತು.

### 1.9.4 ರಾಜ್ಯ ಸರ್ಕಾರವು ನೀಡಿದ ಸಾಲಗಳು ಮತ್ತು ಮುಂಗಡಗಳು

ಕಂಪೆನಿಗಳು, ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆಯೊಂದಿಗೆ ಸರ್ಕಾರವು ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡವನ್ನು ನೀಡುತ್ತದೆ. ಕೋಷ್ಟಕ **1.23**ರಲ್ಲಿ, 31 ಮಾರ್ಚ್ 2019ರ ಅಂತ್ಯಕ್ಕೆ ಕಳೆದ ಐದು ವರ್ಷಗಳಲ್ಲಿ ಬಾಕಿ ಇರುವ ಸಾಲ ಮತ್ತು ಮುಂಗಡಗಳ ಸ್ಥಿತಿಯನ್ನು ಮತ್ತು ಬಡ್ಡಿ ಸ್ವೀಕೃತಿಗಳಿಗೆ ಸಂವಾದಿಯಾಗಿ ಬಡ್ಡಿ ಪಾವತಿಗಳನ್ನು ನೀಡಲಾಗಿದೆ.

**ಕೋಷ್ಟಕ 1.23: ರಾಜ್ಯ ಸರ್ಕಾರ ನೀಡಿದ ಸಾಲಗಳ ಮೇಲೆ ಸ್ವೀಕೃತಿಯಾದ ಸರಾಸರಿ ಬಡ್ಡಿ**

(₹ ಕೋಟಿಗಳಲ್ಲಿ)

| | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಪ್ರಾರಂಭಿಕ ಶಿಲ್ಕು | 12,724* | 13,216 | 13,813 | 15,578^ | 20,525@ |
| ಪ್ರಸಕ್ತ ವರ್ಷದಲ್ಲಿ ನೀಡಿದ ಮುಂಗಡ | 576 | 657 | 1,934 | 5,092 | 4,487 |
| ಪ್ರಸಕ್ತ ವರ್ಷದಲ್ಲಿ ಮಾಡಿದ ಮರುಪಾವತಿಗಳು | 84 | 60 | 100 | 137 | 31 |
| ಅಂತಿಮ ಶಿಲ್ಕು | 13,216 | 13,813 | 15,648 | 20,533 | 24,981 |
| ನಿವ್ವಳ ಸೇರ್ಪಡೆ | 492 | 597 | 1,835 | 4,955 | 4,456 |
| ಬಡ್ಡಿ ಸ್ವೀಕೃತಿಗಳು | 127 | 264 | 145 | 99 | 108 |
| ವಿತ್ತೀಯ ಜವಾಬ್ದಾರಿಗಳು | 1,64,279 | 1,83,322 | 2,21,319 | 2,46,231 | 2,85,238 |
| ಬಡ್ಡಿ ಪಾವತಿಗಳು | 9,804 | 11,343 | 12,850 | 14,973 | 16,614 |
| ಬಾಕಿ ಇರುವ ಸಾಲ ಮತ್ತು ಮುಂಗಡಗಳಿಗೆ ಬಡ್ಡಿ ಸ್ವೀಕೃತಿಯ ಶತಾಂಶ | 1.0 | 1.9 | 0.9 | 0.5 | 0.4 |
| ರಾಜ್ಯ ಸರ್ಕಾರದ ಬಾಕಿ ಇರುವ ವಿತ್ತ ಜವಾಬ್ದಾರಿಗಳಿಗೆ ಬಡ್ಡಿ ಪಾವತಿಯ ಶತಾಂಶ | 6.0 | 6.2 | 5.8 | 6.1 | 5.8 |
| ಬಡ್ಡಿ ಸ್ವೀಕೃತಿಗಳು ಮತ್ತು ಬಡ್ಡಿ ಪಾವತಿಗಳ ನಡುವಿನ ವ್ಯತ್ಯಾಸ | (–)5.0 | (–)4.3 | (–)4.9 | (–)5.6 | (–)5.4 |

*ಆಕರ: ಹಣಕಾಸು ಲೆಕ್ಕಗಳು.*

* ಎಮ್‌ಎಸ್‌ಐಎಲ್‌ನಿಂದ ಬಾಕಿ ಇದ್ದ ₹5 ಕೋಟಿ ಸಾಲವನ್ನು 2014–15ರಲ್ಲಿ ಷೇರು ಬಂಡವಾಳಕ್ಕೆ ಪರಿವರ್ತಿಸಿದ್ದರಿಂದ ವ್ಯತ್ಯಾಸವಾಗಿದೆ.

^ 2017–18ರಲ್ಲಿ ಸಾಲಗಳನ್ನು ಷೇರು ಬಂಡವಾಳವಾಗಿ ಪರಿವರ್ತಿಸಿದ್ದರಿಂದ ₹70 ಕೋಟಿಗಳ ವ್ಯತ್ಯಾಸವಾಗಿದೆ.

@ 2018–19ರಲ್ಲಿ ಸಾಲಗಳನ್ನು ಅನುದಾನವಾಗಿ ಪರಿವರ್ತಿಸಿದ್ದರಿಂದ ₹8 ಕೋಟಿಗಳ ವ್ಯತ್ಯಾಸವಾಗಿದೆ.

ಮಾರ್ಚ್ 2019ರ ಅಂತ್ಯಕ್ಕೆ ಬಾಕಿ ಇರುವ ಸಾಲಗಳ ಮೊತ್ತವು ₹24,981 ಕೋಟಿಯಷ್ಟಿತ್ತು. 2014–15ರಿಂದ 2018–19ರ ಅವಧಿಯಲ್ಲಿ ಸರ್ಕಾರದ ಸಾಲಗಳ ಮೇಲಿನ ಬಡ್ಡಿಯ ಹರಹು ಋಣಾತ್ಮಕವಾಗಿದ್ದು, ಇದು ರಾಜ್ಯ ಸರ್ಕಾರ ಪಡೆದ ಸಾಲಗಳು, ಸಾಲಗಳ ನೀಡಿಕೆಗಿಂತ ದುಬಾರಿಯಾಗಿರುವುದನ್ನು ಸೂಚಿಸುತ್ತದೆ.

2018–19ರಲ್ಲಿ ನೀಡಿದ ಸಾಲಗಳ ಮೊತ್ತವು ₹4,487ಕೋಟಿಗಳಿದ್ದು ಸಾರ್ವಜನಿಕ ವಲಯ ಮತ್ತಿತರ ಉದ್ಯಮಗಳಿಗೆ ನಗರಾಭಿವೃದ್ಧಿ ಯೋಜನೆಗಳಡಿಯ ₹2,297 ಕೋಟಿ ಹಾಗೂ ವಿದ್ಯುಚ್ಛಕ್ತಿ ಯೋಜನೆಗಳಡಿ

ವಿದ್ಯುಚ್ಛಕ್ತಿ ಮಂಡಳಿಗಳಿಗೆ ₹1,500 ಕೋಟಿಗಳ ಬಿಡುಗಡೆಯನ್ನು ಒಳಗೊಂಡಿದೆ. ಈ ವರ್ಷದಲ್ಲಿ ಸಾಲಗಳ ಮರುಪಾವತಿಯ ಮೊತ್ತವು ₹31 ಕೋಟಿಯಷ್ಟಿದೆ.

ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ಅವರ ಕಛೇರಿಯಲ್ಲಿ ನಿರ್ವಹಿಸಲಾಗಿರುವ ಸಾಲ ಮರುಪಾವತಿಗಳ ವಿವರವಾದ ಲೆಕ್ಕಗಳು, 31 ಮಾರ್ಚ್ 2019ರ ಅಂತ್ಯಕ್ಕೆ 21 ಸಂಸ್ಥೆಗಳಿಂದ ₹8,505 ಕೋಟಿ (ಅಸಲು: ₹4,644 ಕೋಟಿ ಮತ್ತು ಬಡ್ಡಿ: ₹3,861 ಕೋಟಿ) ಅವಧಿ ಮೀರಿದ ಸಾಲವಾಗಿ ಉಳಿದಿರುವುದನ್ನು ಸೂಚಿಸುತ್ತದೆ (**ಅನುಬಂಧ 1.10**).

ಇಲಾಖಾ ಮುಖ್ಯಸ್ಥರು/ಪ್ರಧಾನ ನಿಯಂತ್ರಣಾಧಿಕಾರಿಗಳು ಸಾಲಗಳ ವಿವರವಾದ ಲೆಕ್ಕಗಳನ್ನು ನಿರ್ವಹಿಸುವ ರಾಜ್ಯದ 842 ಸಂಸ್ಥೆಗಳ ಪೈಕಿ ಕೇವಲ 19[13] ಸಂಸ್ಥೆಗಳು ಮಾತ್ರ ಅಗತ್ಯವಾದ ಮಾಹಿತಿಯನ್ನು ಮಹಾಲೇಖಾಪಾಲರಿಗೆ ಒದಗಿಸಿರುವುದರಿಂದ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–7ರಲ್ಲಿ ನೀಡಿರುವ ಅವಧಿ ಮೀರಿದ ಅಸಲು ಮತ್ತು ಬಡ್ಡಿಗಳ ಮಾಹಿತಿಯು ಅಪೂರ್ಣವಾಗಿದೆ.

ಭಾರತೀಯ ಲೆಕ್ಕವಿಧಾನ ಪ್ರಮಾಣಕ–3 (ಐಜಿಎಎಸ್)ರ ಅನ್ವಯ ಪ್ರತಿ ಸಾಲವನ್ನು ನಿಯಂತ್ರಿಸುವ ನಿರ್ದಿಷ್ಟ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸದೆ ಮಂಜೂರು ಮಾಡಲಾದ ಸಾಲಗಳ ವಿವರಗಳನ್ನು ಪ್ರಕಟಿಸುವುದು ಅಗತ್ಯವಾಗಿದೆ. 2018–19ರಲ್ಲಿ ರಾಜ್ಯಸರ್ಕಾರವು ಮಂಜೂರು ಮಾಡಿದ ₹4,487.22 ಕೋಟಿಗಳ ಮೊತ್ತದ 82 ಸಾಲ ಪ್ರಕರಣಗಳಲ್ಲಿ ₹3,149.23 ಕೋಟಿಗಳ 35 ಸಾಲಗಳನ್ನು ಯಾವುದೇ ನಿರ್ದಿಷ್ಟ ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಸದೆ ಮಂಜೂರು ಮಾಡಲಾಗಿದೆ. ಇದರ ವಿವರಗಳು ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–18ಕ್ಕೆ ನೀಡಿರುವ ಹೆಚ್ಚುವರಿ ಪ್ರಕಟಗಳಲ್ಲಿ ಲಭ್ಯವಿದೆ.

ಆರ್ಥಿಕ ಇಲಾಖೆಯು ತನ್ನ ಸುತ್ತೋಲೆಯಲ್ಲಿ (ಆಗಸ್ಟ್ 2018) ರಾಜ್ಯ ಸರ್ಕಾರವು ಸಾಲ ಮಂಜೂರಾತಿಗೆ ಸಂಬಂಧಿಸಿದಂತೆ ಇಲಾಖೆಗಳು ಅನುಸರಿಸಬೇಕಾದ ಷರತ್ತು ಮತ್ತು ನಿಬಂಧನೆಗಳು ಮತ್ತು ಇತರ ಕಾರ್ಯವಿಧಾನಗಳನ್ನು ನವೆಂಬರ್ 2013ರ ಸರ್ಕಾರಿ ಆದೇಶದಲ್ಲಿ ಪರಿಷ್ಕರಿಸಿರುವುದಾಗಿ ಹೇಳಿದೆ. ಎಲ್ಲ ಇಲಾಖೆಗಳೂ ನವೆಂಬರ್ 2013ರಲ್ಲಿ ಜಾರಿ ಮಾಡಲಾದ ಸಾಮಾನ್ಯ ಸಾಲಗಳ ಸರ್ಕಾರಿ ಆದೇಶದಲ್ಲಿ ನೀಡಿರುವ ಸೂಚನೆಗಳಿಗೆ ಬದ್ಧರಾಗಿರಬೇಕೆಂದು ಆದೇಶಿಸಲಾಗಿದೆ. ಎಲ್ಲ ಇಲಾಖೆಗಳಿಗೂ ಆರ್ಥಿಕ ಇಲಾಖೆಯಿಂದ ಸೂಚನೆಗಳನ್ನು ನೀಡಿದ ನಂತರವೂ ಅನುಪಾಲನೆಯು ಸಮರ್ಪಕವಾಗಿಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಗೊಳಿಸದೆ ಸಾಲಗಳನ್ನು ಮಂಜೂರು ಮಾಡುವುದು ಹಾಗೂ ಸಾಲಗಳ ಅತಿ ಕಡಿಮೆ ವಸೂಲಾತಿಯನ್ನು 2006–07ರಿಂದಲೂ ಲೆಕ್ಕಪರಿಶೋಧನೆಯಲ್ಲಿ ಹೇಳಲಾಗುತ್ತಿದೆ. ರಾಜ್ಯ ಸರ್ಕಾರವು ಕಾಲಕಾಲಕ್ಕೆ ಷರತ್ತು ಮತ್ತು ನಿಬಂಧನೆಗಳ ಪರಿಷ್ಕರಣೆಯ ಬಗ್ಗೆ ಸುತ್ತೋಲೆಗಳನ್ನು ಜಾರಿ ಮಾಡಿದೆ. ಆದಾಗ್ಯೂ, ಅದು ಸಾಲಗಳ/ಬಡ್ಡಿಯ ವಸೂಲಾತಿಗಾಗಿ ಯಾವುದೇ ಮಾರ್ಗಸೂಚಿಯನ್ನು ತಯಾರಿಸಿರಲಿಲ್ಲ ಮತ್ತು ಅದರ ಸುತ್ತೋಲೆಗಳನ್ನು ಪಾಲಿಸದ ವಿವಿಧ ಇಲಾಖೆಗಳಿಗೆ ಯಾವುದೇ ಕ್ರಮವನ್ನೂ ವಿಧಿಸಿರಲಿಲ್ಲ.

ಸಾಲ ಲೆಕ್ಕಗಳು ಸಾಲಗಳನ್ನು ಈಕ್ವಿಟಿಗಳನ್ನಾಗಿ ಅನುದಾನಗಳಾಗಿ ಮಾರ್ಪಡಿಸುವಿಕೆಯಂತಹ ಕೆಲವು ನಗದಲ್ಲದ ವ್ಯವಹಾರಗಳನ್ನು ಮತ್ತು ಸರ್ಕಾರದ ಹೂಡಿಕೆಗಳನ್ನು ಕಂಪೆನಿಗಳ ಲೆಕ್ಕಪುಸ್ತಕಗಳೊಂದಿಗೆ ಮರುಹೊಂದಾಣಿಕೆಯನ್ನು ಒಳಗೊಂಡಿದೆ. ಇಂಡಿಯನ್ ಕಾಫೀ ಮಾರ್ಕೆಟಿಂಗ್ ಕೋ–ಆಪರೇಟಿವ್ ಲಿಮಿಟೆಡ್ (ಕೋಮಾರ್ಕ್), ಹಾಸನ ಅವರಿಗೆ ಸಂಬಂಧಿಸಿದ ₹8.28 ಕೋಟಿಗಳ ಸಾಲವನ್ನು ಅನುದಾನವನ್ನಾಗಿ ಮಾರ್ಪಡಿಸಲಾಗಿದೆ.

[13] 2017–18ರಲ್ಲಿ 842ರಲ್ಲಿ 18 ಸಂಸ್ಥೆಗಳು ಮಾಹಿತಿ ಒದಗಿಸಿದ್ದವು.

ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯು ಸಾರ್ವಜನಿಕ ವಲಯ ಉದ್ಯಮಗಳಿಗೆ, ಸಹಕಾರಿ ಮತ್ತಿತರ ಸಂಸ್ಥೆಗಳಿಗೆ ನೀಡಲಾದ ಸಾಲಗಳ ವಸೂಲಾತಿಯು ಅತ್ಯಂತ ಕಡಿಮೆಯಿದ್ದು ವಸೂಲಾತಿ ವೇಳಾಪಟ್ಟಿಯನ್ವಯ ಸಾಲಗಳ ಮರುಪಾವತಿಯನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಮುಂದುವರೆಸ ಬೇಕೆಂದು ಸಲಹೆ ನೀಡಿತು.

ಸಾಲಗಳನ್ನು ಮಂಜೂರು ಮಾಡುವ ಸಮಯದಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಲು ಸರ್ಕಾರವು ನಿರಂತರ ಶ್ರಮ ವಹಿಸುತ್ತಿದೆಯೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಅವಧಿ ಮೀರಿದ ಸಾಲಗಳನ್ನು ವಸೂಲಿ ಮಾಡಲು ಸಂಬಂಧಿತ ಸಂಸ್ಥೆಗಳೊಡನೆ ನಿಯತವಾಗಿ ಸಮೀಕ್ಷೆಗಳನ್ನು ನಡೆಸುವ ಮೂಲಕ ಇಲಾಖೆಯು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆಯೆಂದೂ ಹೇಳಿತು.

### 1.9.5 ನಗದು ಶಿಲ್ಕುಗಳು ಮತ್ತು ನಗದು ಶಿಲ್ಕುಗಳ ಹೂಡಿಕೆ

2018-19ರ ವರ್ಷದಲ್ಲಿನ ರಾಜ್ಯ ಸರ್ಕಾರದ ನಗದು ಶಿಲ್ಕುಗಳು ಮತ್ತು ಅವುಗಳಿಂದ ಮಾಡಿದ ಹೂಡಿಕೆಗಳ ವಿವರಗಳನ್ನು **ಕೋಷ್ಟಕ 1.24**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.24: ನಗದು ಶಿಲ್ಕುಗಳು ಮತ್ತು ಅವುಗಳ ಹೂಡಿಕೆಗಳು**

(₹ ಕೋಟಿಗಳಲ್ಲಿ)

| | **01-04-2018** ರಲ್ಲಿದ್ದಂತೆ ಪ್ರಾರಂಭಿಕ ಶಿಲ್ಕು | **31-03-2019** ರಲ್ಲಿದ್ದಂತೆ ಅಂತಿಮ ಶಿಲ್ಕು | ಹೆಚ್ಚಳ (+)/ ಕಡಿಮೆ (-) |
|---|---|---|---|
| (ಎ) ಸಾಮಾನ್ಯ ನಗದು ಶಿಲ್ಕು | | | |
| ಖಜಾನೆಗಳಲ್ಲಿನ ನಗದು | - | - | - |
| ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿ | 723.77 | 989.96 | 266.19 |
| ಇತರೆ ಬ್ಯಾಂಕುಗಳಲ್ಲಿನ ಠೇವಣಿ | - | - | - |
| ರವಾನೆಯಲ್ಲಿರುವ ಇರಸಾಲುಗಳು-ಸ್ಥಳೀಯ | 0.01 | 0.01 | - |
| ಉಪ ಮೊತ್ತ | 723.78 | 989.97 | 266.19 |
| ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿನ ಹೂಡಿಕೆಗಳು | 12,655.49 | 5,139.28 | (-)7,516.21 |
| ಒಟ್ಟು (ಎ) | 13,379.27 | 6,129.25 | (-)7,250.02 |
| (ಬಿ) ಇತರೆ ನಗದು ಶಿಲ್ಕುಗಳು ಮತ್ತು ಹೂಡಿಕೆಗಳು | | | |
| ಇಲಾಖಾ ಅಧಿಕಾರಿಗಳ ಬಳಿ ಇರುವ ನಗದು (ಲೋಕೋಪಯೋಗಿ, ಅರಣ್ಯ ಇಲಾಖೆ ಅಧಿಕಾರಿಗಳು, ಜಿಲ್ಲಾಧಿಕಾರಿಗಳು) | 2.09 | 2.09 | - |
| ಸಾದಿಲ್ವಾರುರ ವೆಚ್ಚಗಳಿಗಾಗಿ ಇಲಾಖಾ ಅಧಿಕಾರಿಗಳ ಬಳಿ ಇರುವ ಖಾಯಂ ಮುಂಗಡಗಳು | 1.75 | 1.87 | 0.12 |
| ಮೀಸಲಿಟ್ಟ ನಿಧಿಗಳ ಹೂಡಿಕೆಗಳು | 12,800.94 | 15,870.66 | 3,069.72 |
| ಒಟ್ಟು (ಬಿ) | **12,804.78** | **15,874.62** | **3,069.74** |
| ಒಟ್ಟು ಮೊತ್ತ (ಎ + ಬಿ) | **26,184.05** | **22,003.87** | **(-)4,180.18** |

*ಆಕರ: ಹಣಕಾಸು ಲೆಕ್ಕಗಳು*

ಸರ್ಕಾರದಿಂದ ಬರಬೇಕಾದ ಕ್ಲೈಮುಗಳ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವ ಮೂಲಕ ಇತ್ಯರ್ಥಗೊಳಿಸಲಾಗುತ್ತದೆ. ಸಂಚಿತ ನಿಧಿಗೆ ಖರ್ಚು ಹಾಕಿ ಕ್ಲೈಮುದಾರರಿಗೆ ಚೆಕ್ ಮೂಲಕ ಪಾವತಿ ಮಾಡಲಾಗುತ್ತದೆ. ಪ್ರತಿ ಚೆಕ್ಕಿನ ಮೊತ್ತವನ್ನೂ ಪ್ರಧಾನ ಲೆಕ್ಕಶೀರ್ಷಿಕೆ 8670-ಚೆಕ್ಕುಗಳು ಮತ್ತು ಬಿಲ್ಲುಗಳಿಗೆ ಜಮಾ ತೋರಿಸಿ, ಆ ಚೆಕ್ಕುಗಳು ಏಜೆನ್ಸಿ ಬ್ಯಾಂಕುಗಳಲ್ಲಿ ನಗದೀಕರಣವಾದ ನಂತರ ಈ ಜಮಾವನ್ನು

ಕಳೆಯಲಾಗುತ್ತದೆ. ಹೀಗಾಗಿ ಈ ಶೀರ್ಷಿಕೆಯಲ್ಲಿನ ಜಮೆಗಳಲ್ಲಿ ಶಿಲ್ಕು ಉಳಿದಿದ್ದರೆ, ಅದು ನಗದೀಕರಣವಾಗದೆ ಉಳಿದ ಚೆಕ್ಕುಗಳ ಮೊತ್ತವಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 75(1)ರ ಅನ್ವಯ ಖಜಾನಾಧಿಕಾರಿಗಳು ನಮೂದಿಸಿದ ದಿನಾಂಕದಿಂದ 12 ತಿಂಗಳು ಮೀರಿ ನಗದೀಕರಿಸದೆ ಉಳಿದ ಚೆಕ್ಕುಗಳ ಮೊತ್ತಕ್ಕೆ ಪ್ರತಿ ವರ್ಷ ಮೇ 15ರಂದು, ತಿದ್ದುಪಡಿ ದಾಖಲೆಯನ್ನು ತಯಾರಿಸಿ ಮಹಾಲೇಖಪಾಲರಿಗೆ ಕಳುಹಿಸಿಕೊಡಬೇಕು. ವರ್ಷದ ಆರಂಭದಲ್ಲಿ ನಗದೀಕರಣವಾಗದೆ ಉಳಿದ ಚೆಕ್ಕುಗಳ ಆರಂಭಿಕ ಶಿಲ್ಕು ₹12,637.18 ಕೋಟಿಗಳಷ್ಟಿತ್ತು. 2018–19ರಲ್ಲಿ ನೀಡಲಾದ ₹1,66,604.02 ಕೋಟಿಗಳ ಚೆಕ್ಕುಗಳಲ್ಲಿ ₹1,72,676.13 ಕೋಟಿಗಳಷ್ಟು ಮೊತ್ತದ ಚೆಕ್ಕುಗಳು ನಗದೀಕರಣಗೊಂಡಿದ್ದವು. 31 ಮಾರ್ಚ್ 2019ರಲ್ಲಿದ್ದಂತೆ, ನಗದೀಕರಣವಾಗದೇ ಉಳಿದ ಚೆಕ್ಕುಗಳ ಶಿಲ್ಕು ₹6,565.08 ಕೋಟಿಗಳಷ್ಟಿತ್ತು.

ಲೆಕ್ಕ ಪರಿಶೋಧನೆಯು 2018–19ರ ಲೆಕ್ಕಗಳಲ್ಲಿನ ನಿವ್ವಳ ಜಮಾ ₹6,072 ಕೋಟಿಗಳಷ್ಟಿರುವುದನ್ನು ಗಮನಿಸಿದೆ. ದತ್ತಾಂಶವನ್ನು ಪರಿಶೀಲಿಸಿ ಇವುಗಳನ್ನು ತೀರುವಳಿ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ರಾಜ್ಯ ಸರ್ಕಾರವು ವಿಶೇಷ ಪರಿಸ್ಥಿತಿಗಳಲ್ಲಿ ನಿಧಿಗಳ ವ್ಯವಹಾರಗಳನ್ನು ಬ್ಯಾಂಕ್ ಖಾತೆಗಳ ಮೂಲಕ ನಡೆಸಲು ಇಲಾಖೆಗಳಿಗೆ ಅನುಮತಿ ನೀಡುತ್ತದೆ. ಬ್ಯಾಂಕ್ ಖಾತೆಗಳ ವ್ಯವಹಾರದ ಬಗೆಗಿನ ಕಾರ್ಯಸೂಚಿಗಳನ್ನು ಸಹ ಜಾರಿ ಮಾಡಲಾಗಿದೆ (ಜನವರಿ 2017). ಆದಾಗ್ಯೂ, ತನ್ನ ನಗದು ಅವಶ್ಯಕತೆಯನ್ನು ಯೋಜಿಸಲು ಅಂತಹ ಖಾತೆಗಳಲ್ಲಿನ ಖರ್ಚಾಗದೇ ಉಳಿದ ಶಿಲ್ಕುಗಳನ್ನು ಪಡೆದಿರುವುದಿಲ್ಲ.

ವರ್ಷದ ಅಂತ್ಯಕ್ಕೆ ರಾಜ್ಯದ ನಗದು ಶಿಲ್ಕು ₹22,004 ಕೋಟಿಗಳಷ್ಟಿದ್ದು, ಕಳೆದ ವರ್ಷಕ್ಕಿಂತಲೂ ನಗದು ಶಿಲ್ಕಿನಲ್ಲಿ ಶೇಕಡ 16ರಷ್ಟು ಇಳಿಕೆಯಾಗಿದೆ.

## 1.10 ಆಸ್ತಿಗಳು ಮತ್ತು ಜವಾಬ್ದಾರಿಗಳು

### 1.10.1 ಆಸ್ತಿಗಳ ಮತ್ತು ಜವಾಬ್ದಾರಿಗಳ ವೃದ್ಧಿ ಮತ್ತು ಸಂಯೋಜನೆ

ಚಾಲ್ತಿಯಲ್ಲಿರುವ ಸರ್ಕಾರದ ಲೆಕ್ಕ ವಿಧಾನದಲ್ಲಿ ಸರ್ಕಾರವು ಹೊಂದಿರುವ ಜಮೀನು ಮತ್ತು ಕಟ್ಟಡಗಳು ಮುಂತಾದ ಸ್ಥಿರ ಆಸ್ತಿಗಳ ಸಮಗ್ರ ಲೆಕ್ಕವನ್ನು ಮಾಡಿರುವುದಿಲ್ಲ. ಆದರೂ, ಸರ್ಕಾರದ ಲೆಕ್ಕಗಳಲ್ಲಿ ಸರ್ಕಾರದ ಹಣಕಾಸಿನ ಜವಾಬ್ದಾರಿಗಳು ಮತ್ತು ಮಾಡಿದ ವೆಚ್ಚದಿಂದ ನಿರ್ಮಿಸಲಾದ ಆಸ್ತಿಗಳ ಲೆಕ್ಕಗಳನ್ನು ತೋರಿಸಲಾಗುತ್ತದೆ. 31 ಮಾರ್ಚ್ 2019ರಂದು, 31 ಮಾರ್ಚ್ 2018ಕ್ಕೆ ಹೋಲಿಸಿದಂತೆ, ಅಂತಹ ಜವಾಬ್ದಾರಿಗಳ ಮತ್ತು ಆಸ್ತಿಗಳ ಘೋಷ್ವಾರೆಯನ್ನು **ಅನುಬಂಧ 1.11**ರಲ್ಲಿ ನೀಡಲಾಗಿದೆ.

ಕರ್ನಾಟಕ ವಿತ್ತ ಜವಾಬ್ದಾರಿಗಳ ಕಾಯಿದೆ, 2002ರಲ್ಲಿ ಹೇಳಿರುವಂತೆ ಒಟ್ಟು ಜವಾಬ್ದಾರಿಗಳು ಅಂದರೆ ರಾಜ್ಯದ ಸಂಚಿತ ನಿಧಿಯಲ್ಲಿನ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಜವಾಬ್ದಾರಿಗಳು ಆಗಿರುತ್ತದೆ. ಈ ಕಾಯಿದೆಯ ಅನುಚ್ಛೇದ 2(ಜಿ)ಗೆ ಫೆಬ್ರವರಿ 2014ರಲ್ಲಿ ತಂದಿರುವ ತಿದ್ದುಪಡಿಯಂತೆ ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮತ್ತು ಇತರ ಸಮಾನ ಸಾಧನಗಳ ಸಾಲಗಳನ್ನೂ ಒಳಗೊಂಡು, ಈ ಸಾಲಗಳ ಅಸಲು ಮತ್ತು/ಅಥವಾ ಬಡ್ಡಿಗಳ ತೀರುವಳಿಯು ರಾಜ್ಯಸರ್ಕಾರದ ಆಯವ್ಯಯ ಅವಕಾಶದ ಮೂಲಕ ಮಾಡಬೇಕಾಗಿದ್ದು ರಾಜ್ಯದ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯು ವಿಸ್ತೃತವಾಗಿದೆ.

ಆಂತರಿಕ ಋಣವು ಮಾರುಕಟ್ಟೆ ಸಾಲಗಳು, ರಿಸರ್ವ್ ಬ್ಯಾಂಕಿಗೆ ನೀಡಿದ ವಿಶೇಷ ಭದ್ರತೆಗಳು ಮತ್ತಿತರ ಸಮಾಲೋಚಿತ ಸಾಲಗಳನ್ನು ಒಳಗೊಂಡಿದೆ. ಸಾರ್ವಜನಿಕ ಲೆಕ್ಕಗಳ ಜವಾಬ್ದಾರಿಗಳು, ಸಣ್ಣ ಉಳಿತಾಯ, ಭವಿಷ್ಯನಿಧಿ ಇತ್ಯಾದಿ, ಮೀಸಲು ನಿಧಿಗಳು ಮತ್ತು ಇತರ ಠೇವಣಿಗಳನ್ನು ಒಳಗೊಂಡಿದೆ. ಆದರೆ,

ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ರಾಜ್ಯದ ಜವಾಬ್ದಾರಿಗಳು ರಾಜ್ಯದ ನಿವೃತ್ತ/ನಿವೃತ್ತಿಯಾಗಲಿರುವ ಸರ್ಕಾರಿ ನೌಕರರಿಗೆ ನೀಡಬೇಕಾದ ನಿವೃತ್ತಿವೇತನ, ಇತರ ನಿವೃತ್ತಿ ಸೌಲಭ್ಯಗಳು/ಖಾತರಿಗಳು/ಸರ್ಕಾರ ನೀಡಿದ ಭರವಸೆ ಪತ್ರಗಳು, ಆಯವ್ಯಯ ಹೊರಗಿನ ಸಾಲಗಳು ಎಂದು ಕರೆಯಲ್ಪಡುವ ವಿಶೇಷ ಉದ್ದೇಶ ಸಾಧನಗಳ ಮೂಲಕ ಪಡೆದ ಸಾಲಗಳನ್ನು ಒಳಗೊಂಡಿಲ್ಲ.

ಆಸ್ತಿಗಳು, ಸಂಚಿತ ನಿಧಿಯಲ್ಲಿನ ಆಸ್ತಿಗಳು ಮತ್ತು ನಗದನ್ನು ಒಳಗೊಂಡಿದೆ. ಸಂಚಿತ ನಿಧಿಯಲ್ಲಿನ ಆಸ್ತಿಗಳು ಸ್ಥಿರ ಆಸ್ತಿಗಳ ಮೇಲಿನ ಬಂಡವಾಳ ವೆಚ್ಚ–ಕಂಪೆನಿಗಳು ಮತ್ತು ನಿಗಮಗಳ ಷೇರುಗಳ ಮೇಲಿನ ಹೂಡಿಕೆ ಮತ್ತು ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಿದ್ದು ಸಾಲಗಳು ಮತ್ತು ಮುಂಗಡಗಳು ವಿದ್ಯುಚ್ಛಕ್ತಿ ಯೋಜನೆಗಳಿಗೆ ನೀಡಿದ ಸಾಲಗಳು ಮತ್ತು ಇತರ ಅಭಿವೃದ್ಧಿ ಸಾಲಗಳನ್ನು ಒಳಗೊಂಡಿದೆ. ಆಸ್ತಿಗಳ ಮತ್ತು ಜವಾಬ್ದಾರಿಗಳ ಅಂಗಗಳ ವೃದ್ಧಿದರವನ್ನು **ಕೋಷ್ಟಕ 1.25**ರಲ್ಲಿ ಕ್ರೋಢೀಕರಿಸಿದೆ.

**ಕೋಷ್ಟಕ 1.25: ಆಸ್ತಿಗಳು ಮತ್ತು ಜವಾಬ್ದಾರಿಗಳ ಸಂಕ್ಷಿಪ್ತ ಸ್ಥಿತಿ**

(₹ ಕೋಟಿಗಳಲ್ಲಿ)

| ಜವಾಬ್ದಾರಿಗಳು | | | | ಆಸ್ತಿಗಳು | | | |
|---|---|---|---|---|---|---|---|
| | **2017–18** | **2018–19** | ***ವೃದ್ಧಿಯ ದರ (ಶೇಕಡಾ)*** | | **2017–18** | **2018–19** | ***ವೃದ್ಧಿಯ ದರ (ಶೇಕಡಾ)*** |
| *ಸಂಚಿತ ನಿಧಿ* | **1,63,135** | **1,93,967** | **19** | ***ಸಂಚಿತ ನಿಧಿ*** | **2,56,146** | **2,95,251** | **15** |
| ಎ. ಆಂತರಿಕ ಋಣ | 1,48,581 | 1,79,309 | 21 | **ಬಂಡವಾಳ ವೆಚ್ಚ** | 2,35,614 | 2,70,270 | 15 |
| ಬಿ. ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳು | 14,555 | 14,658 | 1 | **ಸಾಲಗಳು ಮತ್ತು ಮುಂಗಡಗಳು** | 20,533 | 24,981 | 22 |
| ಆಯವ್ಯಯದ ಹೊರಗಿನ ಸಾಲಗಳು | **13,173** | **14,862** | **13** | **ನಗದು** | **26,184** | **22,004** | **(–)16** |
| ಸಾರ್ವಜನಿಕ ಲೆಕ್ಕ* | **69,922** | **76,410** | **9** | | | | |
| ಎ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ | 27,731 | 31,024 | 12 | | | | |
| ಬಿ. ಮೀಸಲು ನಿಧಿಗಳು | 16,873 | 17,001 | 1 | | | | |
| ಸಿ. ಠೇವಣಿಗಳು | 25,318 | 28,385 | 12 | | | | |

* ಜವಾಬ್ದಾರಿಗಳು ನಿವ್ವಳ ಆಧಾರಿತವಾಗಿವೆ. ಅವು ಮೀಸಲಿಟ್ಟ ನಿಧಿಗಳಿಂದ ಮಾಡಿದ ₹12,801 ಕೋಟಿ (2017–18) ಮತ್ತು ₹15,871 ಕೋಟಿ (2018–19) ಹೂಡಿಕೆಗಳನ್ನು ಒಳಗೊಂಡಿಲ್ಲ.

ಆಸ್ತಿಗಳ ವೃದ್ಧಿಯ ದರವು 2017–18ರಲ್ಲಿ ಶೇಕಡ 16ರಲ್ಲಿದ್ದು, 2018–19ರಲ್ಲಿ ಶೇಕಡಾ 15ಕ್ಕೆ ಇಳಿದಿದೆ. ಆಯವ್ಯಯದ ಹೊರಗಿನ ಸಾಲವನ್ನು ಸೇರಿದಂತೆ ಜವಾಬ್ದಾರಿಗಳ ವೃದ್ಧಿಯ ದರವು 2017–18ರಲ್ಲಿ ಶೇಕಡ 12ರಷ್ಟಿದ್ದು, 2018–19ರಲ್ಲಿ ಶೇಕಡ 19ಕ್ಕೆ ಏರಿದೆ.

ಹಣಕಾಸು ಲೆಕ್ಕಗಳು, ಎಲ್ಐಸಿ, ಜಿಐಸಿ, ನಬಾರ್ಡ್, ಎನ್‌ಸಿಡಿಸಿ ಮುಂತಾದವುಗಳ ಲೆಕ್ಕಗಳಲ್ಲಿದ್ದ ₹561.59 ಕೋಟಿಗಳ ವ್ಯತ್ಯಾಸವನ್ನು ಪರಿಗಣಿಸಿದ ನಂತರ 2018–19ರ ಅಂತ್ಯಕ್ಕೆ ಬಾಕಿಯಿರುವ ಆಂತರಿಕ ಋಣವು ₹1,79,309 ಕೋಟಿಗಳೆಂದು ತೋರಿಸಿದೆ. ಮುಂದುವರೆದು, ಭಾರತೀಯ ರಿಸರ್ವ್ ಬ್ಯಾಂಕ್, 31 ಮಾರ್ಚ್ 2019ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಬಾಕಿ ಶಿಲ್ಕುಗಳ ತನ್ನ ತ್ರೈಮಾಸಿಕ ವಿವರಣಾ ಪಟ್ಟಿಯಲ್ಲಿ ಬಡ್ಡಿರಹಿತ

ಮಾರುಕಟ್ಟೆ ಸಾಲಗಳ ಆಖೈರು ಶಿಲ್ಕನ್ನು ₹0.09 ಕೋಟಿಗಳೆಂದು ತೋರಿಸಿದೆ. ಆದರೆ, ಹಣಕಾಸು ಲೆಕ್ಕಗಳು, ₹0.65 ಕೋಟಿಗಳ ಮೊತ್ತವನ್ನು ತೋರಿಸಿದ್ದು ಇದು ಸಾಲಶಿಲ್ಕುಗಳ (ಬಂಡವಾಳ ಲೆಕ್ಕ) ಹೊಂದಾಣಿಕೆಯ ಅಗತ್ಯವನ್ನು ಸೂಚಿಸುತ್ತದೆ. ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ಕೆಲವು ಸಾಲ ಶಿಲ್ಕುಗಳು ರಿಸರ್ವ್ ಬ್ಯಾಂಕಿನ ಪುಸ್ತಕಗಳಲ್ಲಿ ತೋರಿಸಿಲ್ಲ (ಮೂರು ಪ್ರಕರಣಗಳು). ಇನ್ನು ಆರು ಪ್ರಕರಣಗಳಲ್ಲಿ ವ್ಯತ್ಯಾಸಗಳಿದ್ದು ಲೆಕ್ಕ ಹೊಂದಾಣಿಕೆ ಆಗಬೇಕಾಗಿದೆ. ನಾಲ್ಕು ಪ್ರಕರಣಗಳಲ್ಲಿ ಪ್ರಧಾನ ಮಹಾಲೇಖಪಾಲರ (ಲೆ ಮತ್ತು ಹ) ಪುಸ್ತಕಗಳಲ್ಲಿನ ಶಿಲ್ಕುಗಳು ರಿಸರ್ವ್ ಬ್ಯಾಂಕಿನ ಶಿಲ್ಕುಗಳೊಂದಿಗೆ ತಾಳೆ ಆಗಿವೆ.

ಹಣಕಾಸು ಲೆಕ್ಕಗಳಲ್ಲಿನ ಮತ್ತು ರಿಸರ್ವ್ ಬ್ಯಾಂಕಿನ ಶಿಲ್ಕುಗಳಲ್ಲಿನ ವ್ಯತ್ಯಾಸಗಳಿಗೆ ಪತ್ರವ್ಯವಹಾರ ನಡೆಯುತ್ತಿದೆ ಮತ್ತು ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಕಛೇರಿಯಿಂದ ತೀರುವಳಿಯಾದ ನಂತರ ರಿಸರ್ವ್ ಬ್ಯಾಂಕಿನ ಶಿಲ್ಕುಗಳನ್ನು ಮುಂದಿನ ವರ್ಷದ ಲೆಕ್ಕಗಳಿಗೆ ಅಳವಡಿಸಿಕೊಳ್ಳಲಾಗುವುದೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

ಅಲ್ಲದೆ, ರಿಜರ್ವ್ ಬ್ಯಾಂಕ್ ಹೇಳಿರುವಂತೆ ಒಳಶೀರ್ಷಿಕೆ 106 ಅಡಿ ಲೆಕ್ಕಹಾಕಲಾದ ಪರಿಹಾರ ಬಾಂಡುಗಳಿಗೆ ಸಂಬಂಧಿಸಿದ ₹0.40 ಕೋಟಿಗಳ ಶಿಲ್ಕು ಮೊತ್ತವು ಇನ್ನೂ ತೀರಿಕೆಯಾಗದೆ ಉಳಿದಿದೆ. ಆದರೆ ಇದನ್ನು ಸಹಾಯಾನುದಾನವೆಂದು ಲೆಕ್ಕ ಮಾಡಿರುವುದರಿಂದ ಹಣಕಾಸು ಲೆಕ್ಕಗಳಲ್ಲಿ ಈ ಸಾಲಗಳು ಪ್ರತಿಬಿಂಬಿತವಾಗಿಲ್ಲ. 2018–19ರ ಅಂತ್ಯಕ್ಕೆ ಭಾರತ ಸರ್ಕಾರದಿಂದ ಪಡೆದ ಸಾಲಗಳ ಬಾಕಿ ಮೊತ್ತವು ₹14,657 ಕೋಟಿಗಳಷ್ಟಿದೆ.

ಪರಿಹಾರ ಬಾಂಡುಗಳ ವಿವರಗಳನ್ನು ಒದಗಿಸಲು ರಿಸರ್ವ್ ಬ್ಯಾಂಕನ್ನು ವಿನಂತಿಸಲಾಗಿದೆ ಮತ್ತು ವಿವರಗಳನ್ನು ಪಡೆದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

ರಾಜ್ಯ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ಆಸ್ತಿಗಳು (ವಿವರಣಾ ಪಟ್ಟಿ–1 : ಮೀಸಲಿಟ್ಟ ನಿಧಿಗಳಿಂದ ಹೂಡಿಕೆ ₹15,871 ಕೋಟಿ) ₹903.71 ಕೋಟಿಗಳ ಮಟ್ಟಿಗೆ ಕಡಿಮೆಯಾಗಿ ತೋರಿಸಿದೆ. ಇದು 2012–13 ಮತ್ತು 2018–19ರ ಅವಧಿಯಲ್ಲಿ ಋಣ ಪರಿಹಾರ ನಿಧಿಯ ಹೂಡಿಕೆಯ ಮೇಲಿನ ಬಡ್ಡಿಗೆ ಸಂಬಂಧಿಸಿದ್ದು ಸರ್ಕಾರದ ಪುಸ್ತಕಗಳಲ್ಲಿ ಇದರ ಉಲ್ಲೇಖವಿಲ್ಲ ಮತ್ತು ಇದು ಸಂಚಿತ ಋಣಪರಿಹಾರ ನಿಧಿಯಲ್ಲಿ ಪುನರ್ ಹೂಡಿಕೆಯಾಗಿದೆ.

ಕ್ರೋಢೀಕೃತ ಋಣ ಪರಿಹಾರನಿಧಿಯ ಹೂಡಿಕೆಗಳ ಮೇಲೆ ಸಂಚಯವಾದ ಬಡ್ಡಿಯನ್ನು ರಾಜ್ಯದ ಸಂಚಿತ ನಿಧಿಯ ಮೂಲಕ ಹಾದು ಹೋಗುವಂತೆ ಮಾಡುವ ವಿಷಯವನ್ನು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಇವರೊಂದಿಗೆ ಸಮಾಲೋಚಿಸಲಾಗುತ್ತಿದೆಯೆಂದು ಆರ್ಥಿಕ ಇಲಾಖೆಯು ಉತ್ತರಿಸಿತು.

### 1.10.2 ವಿತ್ತೀಯ ಜವಾಬ್ದಾರಿಗಳು

ರಾಜ್ಯ ಸರ್ಕಾರದ ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ಪ್ರವೃತ್ತಿಯನ್ನು **ಅನುಬಂಧ 1.4**ರಲ್ಲಿ ನೀಡಲಾಗಿದೆ. 2014–15ರಿಂದ 2018–19ರ ವರ್ಷಗಳ ವಿತ್ತೀಯ ಜವಾಬ್ದಾರಿಗಳ ಸಂಯೋಜನೆಯನ್ನು **ನಕ್ಷೆ 1.14**ರಲ್ಲಿ ನೀಡಲಾಗಿದೆ.

ನಕ್ಷೆ 1.14: ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ಸಂಯೋಜನೆ (ಕೋಟಿ ರೂಪಾಯಿಗಳಲ್ಲಿ)




ಆಕರ: ಹಣಕಾಸು ಲೆಕ್ಕಗಳು

ರಾಜ್ಯದ ವಿತ್ತೀಯ ಜವಾಬ್ದಾರಿಗಳು, ಅವುಗಳ ವೃದ್ಧಿಯ ದರ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಈ ಜವಾಬ್ದಾರಿಗಳ ಅನುಪಾತ, ರಾಜಸ್ವ ಸ್ವೀಕೃತಿಗಳು ಮತ್ತು ಸ್ವಂತ ಸಂಪನ್ಮೂಲಗಳು ಅಲ್ಲದೆ ಈ ಪ್ರಮಿತಿಗಳಿಗೆ ಸಂಬಂಧಿಸಿದಂತೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆಯನ್ನು **ಅನುಬಂಧ 1.4**ರಲ್ಲಿ ತೋರಿಸಿದೆ. ರಾಜ್ಯದ ವಿತ್ತೀಯ ಜವಾಬ್ದಾರಿಗಳು 2014-15ರಲ್ಲಿದ್ದ ₹1,64,279 ಕೋಟಿಗಳಿಂದ 2018-19ರಲ್ಲಿ ₹2,85,238 ಕೋಟಿಗಳಿಗೆ ಏರಿ ಶೇಕಡ 74ರಷ್ಟು ಏರಿಕೆಯನ್ನು ಕಂಡಿತ್ತು.

### 1.10.2.1 ಆಂತರಿಕ ಋಣ

ಸಂಚಿತ ನಿಧಿಯ ಜವಾಬ್ದಾರಿಗಳ ಭಾಗವಾಗಿರುವ ಆಂತರಿಕ ಋಣವು 2014-15ರಲ್ಲಿ ₹92,904 ಕೋಟಿಗಳಿದ್ದು 2018-19ರಲ್ಲಿ ₹1,79,309 ಕೋಟಿಗಳಾಗಿ ಶೇಕಡ 93ರಷ್ಟು ಏರಿಕೆಯನ್ನು ಕಂಡಿದೆ.

### 1.10.2.2 ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು

ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು 2014-15ರಲ್ಲಿದ್ದ ₹12,681 ಕೋಟಿಗಳಿಂದ 2018-19ರಲ್ಲಿ ₹14,658 ಕೋಟಿಗಳಿಗೆ ಏರಿ ಶೇಕಡ 16ರಷ್ಟು ಏರಿಕೆಯನ್ನು ತೋರಿಸಿತು.

2018-19ರಲ್ಲಿ ಪಡೆದ ಹೆಚ್ಚಿನ ಸಾಲಗಳಿಂದ 2017-18ಕ್ಕೆ ಹೋಲಿಸಿದಂತೆ ವಿತ್ತೀಯ ಜವಾಬ್ದಾರಿಗಳ ವೃದ್ಧಿಯ ದರವು ಶೇಕಡ 16ರಷ್ಟಿತ್ತು. ಅಲ್ಲದೆ, ರಾಜಸ್ವ ಸ್ವೀಕೃತಿಗಳಿಗೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆಯು 2017-18 ಮತ್ತು 2018-19ರಲ್ಲಿ ಕ್ರಮವಾಗಿ ಶೇಕಡ 1.10 ಮತ್ತು ಶೇಕಡ 1.30ರಷ್ಟಿದ್ದವು. ಸ್ವಂತ ಸಂಪನ್ಮೂಲಗಳಿಗೆ ವಿತ್ತೀಯ ಜವಾಬ್ದಾರಿಗಳ ಅನುಪಾತದ ಪ್ಲವನತೆಯು 2014-15ರಲ್ಲಿನ ಶೇಕಡ 1.52ರಿಂದ ಕ್ರಮೇಣ 2018-19ರಲ್ಲಿ ಶೇಕಡ 1.48ಕ್ಕೆ ಇಳಿದಿದೆ.

### 1.10.3 ಆಯವ್ಯಯದ ಹೊರಗಿನ ಸಾಲಗಳು

ಭಾರತದ ಸಂವಿಧಾನದ ಅನುಚ್ಛೇದ 293(1)ರ ಅಡಿಯಲ್ಲಿ ರಾಜ್ಯಸರ್ಕಾರಗಳು ಮಾಡುವ ಸಾಲಗಳನ್ನು ನಿಯಂತ್ರಿಸಲಾಗುತ್ತದೆ. ರಾಜ್ಯ ಸರ್ಕಾರವು ಸರ್ಕಾರಿ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಮಾಡಿರುವ ಸಾಲಗಳಿಗೆ ಖಾತರಿ ನೀಡಿವೆ. ಈ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಅನೇಕ ರಾಜ್ಯ ಯೋಜನೆಗಳ ಅನುಷ್ಠಾನಕ್ಕೆ ಮಾರುಕಟ್ಟೆ/ಹಣಕಾಸು ಸಂಸ್ಥೆಗಳ ಮೂಲಕ ಸಾಲಗಳನ್ನು ಪಡೆದಿವೆ. ಈ ಕಾರ್ಯಕ್ರಮಗಳ ಅನುಷ್ಠಾನವನ್ನು ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಆಯವ್ಯಯದ ಹೊರಗಿನ ಮೂಲಗಳಿಂದ

ಸಂಗ್ರಹಿಸಿದ ಮೊತ್ತಗಳಲ್ಲಿ ಭರಿಸಬೇಕಾಗಿದ್ದರೂ, ವಾಸ್ತವದಲ್ಲಿ ಈ ಸಂಸ್ಥೆಗಳು ಮಾಡಿದ ಸಾಲಗಳು ಅಂತಿಮವಾಗಿ 'ಆಯವ್ಯಯದ ಹೊರಗಿನ ಸಾಲಗಳು' ಎಂದು ಕರೆಯಲ್ಪಡುವ ಜವಾಬ್ದಾರಿಗಳಾಗಿ ಉಳಿದು, ಈ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಮಾಡಿದ ಸಾಲಗಳನ್ನು ಬಡ್ಡಿಸಹಿತ ಬಂಡವಾಳ ಲೆಕ್ಕದಡಿ ರಾಜ್ಯಸರ್ಕಾರದ ಆಯವ್ಯಯದ ಮೂಲಕವೇ ಭರಿಸಲಾಗುತ್ತಿದೆ.

2018–19ರಲ್ಲಿ ₹39,146 ಕೋಟಿಗಳ ಬಂಡವಾಳ ವೆಚ್ಚದಲ್ಲಿ ಆಯವ್ಯಯದ ಹೊರಗಿನ ಸಾಲಗಳ ಋಣಸೇವೆಯ ಅಸಲಿಗೆ ಸಂಬಂಧಿಸಿದ ₹1,339.44 ಕೋಟಿ ಸೇರಿವೆ. **ಕೋಷ್ಟಕ–1.26**ರಲ್ಲಿ 2014–15 ರಿಂದ 2018–19ರ ಅವಧಿಯಲ್ಲಿನ ರಾಜ್ಯ ಸರ್ಕಾರದ ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿಯನ್ನು ಸೂಚಿಸಿದ್ದು, **ಕೋಷ್ಟಕ 1.27**ರಲ್ಲಿ 2018–19ರ ಅಂತ್ಯದಲ್ಲಿದ್ದಂತೆ ಸಂಸ್ಥಾವಾರು ಸಾಲಗಳ ಸ್ಥಿತಿಯನ್ನು ಸೂಚಿಸಲಾಗಿದೆ.

### ಕೋಷ್ಟಕ 1.26: ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿ

**(₹ ಕೋಟಿಗಳಲ್ಲಿ)**

| ವರ್ಷ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಸಂಸ್ಥೆಗಳು ಒದಗಿಸಿದಂತ ಮೊತ್ತ* | 3,081.50 | 2,372.00 | 3,005.16 | 3,500.23 | 3,523.65 |

*ಆಕರ: ಸಂಬಂಧಿಸಿದ ಸಂಸ್ಥೆಗಳು ವರದಿ ಮಾಡಿದಂತೆ*

* ಅಂಕಿಗಳನ್ನು ಆಯವ್ಯಯ ಪಕ್ಷಿನೋಟದಲ್ಲಿ ಸೂಚಿಸಿದ ಅಂಕಿಗಳೊಂದಿಗೆ ಹೊಂದಾಣಿಕೆ ಮಾಡಬೇಕಿದೆ.

### ಕೋಷ್ಟಕ 1.27: ಆಯವ್ಯಯದ ಹೊರಗಿನ ಸಾಲಗಳ ಸಂಸ್ಥಾವಾರು ವಿವರಗಳು

**(₹ ಕೋಟಿಗಳಲ್ಲಿ)**

| ಕಂಪನಿ/ನಿಗಮ/ಮಂಡಳಿ | ಬಾಕಿಯಿರುವ ಆಯವ್ಯಯದ ಹೊರಗಿನ ಸಾಲಗಳು* | 2018–19ನೇ ವರ್ಷದ ಸಾಲಗಳು | 2018–19ನೇ ವರ್ಷದಲ್ಲಿ ಮರುಪಾವತಿ | | ಅಂತಿಮ ಶಿಲ್ಕು |
|---|---|---|---|---|---|
| | | | **ಅಸಲು** | **ಬಡ್ಡಿ** | |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 6,609.23 | 1,064.65 | 586.93 | 610.61 | 7,086.95 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 2,635.58 | 765.00 | 411.75 | 233.48 | 2,988.83 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 123.16 | 3.50 | 12.52 | 12.84 | 114.14 |
| ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 1,068.77 | – | 176.59 | 86.10 | 892.18 |
| ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ | 8.47 | – | 3.08 | 0.71 | 5.39 |
| ಕಾವೇರಿ ನೀರಾವರಿ ನಿಗಮ ನಿಯಮಿತ# | 1,735.00 | 500.00 | – | 164.41 | 2,235.01 |
| ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ* | 497.14 | 1,190.50 | 148.57 | 82.46 | 1,539.07 |
| ಒಟ್ಟು | **12,677.35** | **3,523.65** | **1,339.44** | **1,190.61** | **14,861.56** |

* ಈ ಸಂಸ್ಥೆಗಳ ಅಂತಿಮ ಶಿಲ್ಕುಗಳಲ್ಲಿ ವ್ಯತ್ಯಾಸಗಳಿದ್ದುದರಿಂದ (2017–18) ಅವುಗಳನ್ನು 2018–19ರ ಅಂತ್ಯಕ್ಕೆ ಸಂಸ್ಥೆಗಳು ತೋರಿಸಿದ ಅಂತಿಮ ಶಿಲ್ಕಿಗೆ ಸರಿದೂಗಿಸಲು ಅಸಲು ಮರುಪಾವತಿಗಳನ್ನು ಹೊಂದಾಣಿಕೆ ಮಾಡಲಾಗಿತ್ತು.

# ಈ ಸಂಸ್ಥೆಯ ಆರಂಭಿಕ ಶಿಲ್ಕಿಗೂ, ಹಿಂದಿನ ವರ್ಷದ ಅಂತಿಮ ಶಿಲ್ಕಿಗೂ ಇರುವ ವ್ಯತ್ಯಾಸವು 2017–18ರಲ್ಲಿ ಮಂಜೂರಾದ ₹495.00 ಕೋಟಿಯನ್ನು 2018–19ರಲ್ಲಿ ಪಡೆದಿರುವುದರಿಂದ ಉಂಟಾಗಿದೆ.

ಆಯವ್ಯಯದ ಹೊರಗಿನ ಸಾಲಗಳನ್ನು ಲೆಕ್ಕಕ್ಕೆ ತೆಗೆದುಕೊಂಡಲ್ಲಿ ಮಾರ್ಚ್ 2019ರ ಅಂತ್ಯಕ್ಕೆ ತೋರಿಸಿರುವ ಒಟ್ಟು ಜವಾಬ್ದಾರಿಗಳು ₹2,85,238 ಕೋಟಿಗಳಷ್ಟಿತ್ತು. ರಾಒಆಂಉಗೆ ಒಟ್ಟು ಜವಾಬ್ದಾರಿಗಳ ಬಾಕಿಯ (ಅಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ಅನುಪಾತವು ವರ್ಷಾಂತ್ಯಕ್ಕೆ ಶೇಕಡಾ 20.26ರಷ್ಟಿತ್ತು.

ಆಯವ್ಯಯದ ಹೊರಗಿನ ಸಾಲಗಳ ಮೂಲಕ ವೆಚ್ಚವನ್ನು ಭರಿಸುವುದರಿಂದ ಕೆಎಫ್‌ಆರ್‌ಎ ಕಾಯಿದೆಯಡಿ ನಿಗದಿಪಡಿಸಿರುವ ವಿತ್ತೀಯ ಪ್ರಮಿತಿ ಗುರಿಗಳನ್ನು ಸಾಧಿಸಲು ಬಾಧಿತವಾಗುತ್ತದೆ. ಅಲ್ಲದೆ ಈ ಆಯವ್ಯಯದ ಹೊರಗಿನ ಸಾಲಗಳು ವಿಶೇಷವಾಗಿ ಕರ್ನಾಟಕದಲ್ಲಿ ವಿತ್ತೀಯ ಕೊರತೆ/ರಾಒಆಂಉದ ಅನುಪಾತವು ಏರಿಕೆಯ ಪ್ರವೃತ್ತಿಯಲ್ಲಿರುವುದರಿಂದ ರಾಜ್ಯದ ನಿಗದಿತ ವಿತ್ತೀಯ ಕೊರತೆಯ ಮಿತಿಯನ್ನು ಮೀರುವ ಅಪಾಯವನ್ನು ಹೊಂದಿದೆ. ಇಂತಹ ಹೆಚ್ಚಿನ ಆಯವ್ಯಯ ಜವಾಬ್ದಾರಿಗಳು ಸುಸ್ಪಷ್ಟವಾಗಿ ಗುರುತಿಸಿ ವರದಿ ಮಾಡಬೇಕಾಗಿದೆ.

### 1.10.4 ಸಾರ್ವಜನಿಕ ಲೆಕ್ಕಗಳ ವಹಿವಾಟುಗಳು

#### 1.10.4.1 ಮೀಸಲು ನಿಧಿಗಳು

ಮೀಸಲುಗಳು ಮತ್ತು ಮೀಸಲು ನಿಧಿಗಳನ್ನು ರಾಜ್ಯಸರ್ಕಾರದ ಲೆಕ್ಕಗಳಲ್ಲಿ 'ಜೆ' ವಿಭಾಗದಡಿ (ಸಾರ್ವಜನಿಕ ಲೆಕ್ಕ) ನಿರ್ದಿಷ್ಟವಾದ ಮತ್ತು ಸ್ಪಷ್ಟವಾಗಿ ವಿವರಿಸಿದ ಉದ್ದೇಶಗಳಿಗಾಗಿ ಸ್ಥಾಪಿಸಲಾಗುತ್ತದೆ. ಈ ನಿಧಿಗಳು ಕೇಂದ್ರದ ಅಥವಾ ರಾಜ್ಯದ ಸಂಚಿತ ನಿಧಿಗಳಿಂದ ಅಥವಾ ಹೊರಗಿನ ಏಜೆನ್ಸಿಗಳ ಅನುದಾನಗಳಿಂದ ಪೂರೈಸಲ್ಪಡುತ್ತವೆ. ಸರ್ಕಾರದ ವಂತಿಗೆಗಳನ್ನು ಸಂಚಿತನಿಧಿಯಡಿ ವೆಚ್ಚವೆಂದು ಪರಿಗಣಿಸಲಾಗುತ್ತದೆ. ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಆರಂಭದಲ್ಲಿ ಸಂಚಿತ ನಿಧಿಯಲ್ಲಿಯೇ ಲೆಕ್ಕ ಮಾಡಿದ್ದು ಇದಕ್ಕೆ ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ವರ್ಷದ ಕೊನೆಯಲ್ಲಿ ಲೆಕ್ಕಗಳನ್ನು ಮುಕ್ತಾಯಗೊಳಿಸುವಾಗ ಈ ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕದಡಿಯ ಲೆಕ್ಕಕ್ಕೆ ವರ್ಗಾಯಿಸಲಾಗುವುದು. ಸಾಧಾರಣವಾಗಿ, ನಿಧಿಗಳನ್ನು "ಬಡ್ಡಿಸಹಿತ ನಿಧಿಗಳು" ಮತ್ತು "ಬಡ್ಡಿರಹಿತ ನಿಧಿಗಳು" ಎಂದು ವರ್ಗೀಕರಿಸಬಹುದು. ಸಾಮಾನ್ಯವಾಗಿ ಮೀಸಲು ನಿಧಿಗಳನ್ನು, ಅವುಗಳನ್ನು ಭರಿಸುವ ಮೂಲಗಳನ್ನು ಆಧರಿಸಿ ಕೆಳಗಿನ ಮೂರು ವರ್ಗಗಳಡಿ ವಿಂಗಡಿಸಲಾಗಿದೆ.

- ಬೇರೊಂದು ಸರ್ಕಾರದ ಅನುದಾನಗಳಿಂದ ಶೇಖರಿಸಿದ ನಿಧಿಗಳು ಮತ್ತು ಕೆಲವು ಬಾರಿ ಸಾರ್ವಜನಿಕರಿಂದ ಪಡೆದ ಸಹಾಯ, ಉದಾಹರಣೆಗೆ, ಕೇಂದ್ರ ರಸ್ತೆ ನಿಧಿಯಿಂದ ಬಂದ ಆರ್ಥಿಕ ಸಹಾಯದಿಂದ ಸ್ಥಾಪಿಸಿದ ನಿಧಿ;
- ನಿರ್ದಿಷ್ಟ ಉದ್ದೇಶಗಳ ವೆಚ್ಚ ಭರಿಸಲು ಮೀಸಲುಗಳನ್ನು ಸಂದರ್ಭಾನುಸಾರ ಒದಗಿಸಲು ಕೇಂದ್ರ/ರಾಜ್ಯಗಳಿಂದ ಭಾರತದ ಸಂಚಿತ ನಿಧಿ ಅಥವಾ ರಾಜ್ಯದ ಸಂಚಿತ ನಿಧಿಯಿಂದ ಹೊರಗೆ ಇರಿಸಿರುವ ಮೊತ್ತಗಳಿಂದ ಶೇಖರಿಸಿದ ನಿಧಿ, ಉದಾಹರಣೆಗೆ: ಸವಕಳಿನಿಧಿ; ಮತ್ತು
- ರಾಜ್ಯ ಸರ್ಕಾರಕ್ಕೆ ಹೊರಗಿನ ಏಜೆನ್ಸಿಗಳು ನೀಡಿದ ವಂತಿಗೆಯಿಂದ ಶೇಖರಿಸಿದ ನಿಧಿ.

ಪ್ರಸಕ್ತ ವರ್ಷದ ಹಣಕಾಸು ಲೆಕ್ಕಗಳಲ್ಲಿನ 'ಲೆಕ್ಕಗಳಿಗೆ ಟಿಪ್ಪಣಿ'ಗಳ ಪ್ರಕಾರ, 31 ಮಾರ್ಚ್ 2019ರಲ್ಲಿದ್ದಂತೆ ವಿವಿಧ ಮೀಸಲು ನಿಧಿಗಳಡಿ ಒಟ್ಟು ಬಾಕಿಯಿದ್ದ ₹32,871.47 ಕೋಟಿಗಳ ಶಿಲ್ಕಿನಲ್ಲಿ ಕರ್ನಾಟಕ ಸರ್ಕಾರವು ₹15,871 ಕೋಟಿಗಳನ್ನು ಹೂಡಿಕೆ ಮಾಡಿದೆ (ಶೇಕಡ 48). ಇದು ಪ್ರಮುಖವಾಗಿ ಮೂಲಸೌಲಭ್ಯ ಯೋಜನೆಗಳ ಮೇಲೆ ಬಂಡವಾಳ ವೆಚ್ಚ (₹13,101 ಕೋಟಿ) ಮತ್ತು ಕ್ರೋಢೀಕೃತ ಋಣಪರಿಹಾರ ನಿಧಿಯಿಂದ ಹೂಡಿಕೆಯಾದ ₹2,770 ಕೋಟಿಗಳ ರೂಪದಲ್ಲಿತ್ತು.

ಸರ್ಕಾರದ ಜವಾಬ್ದಾರಿಗಳ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಮೀಸಲು ನಿಧಿಗಳು, ಅದರ ಹಣದ ಹರಿವು ಮತ್ತು ವೆಚ್ಚವನ್ನು ಈ ಕೆಳಗೆ ನೀಡಲಾಗಿದೆ.

### (ಎ) ಕ್ರೋಢೀಕೃತ ಋಣಪರಿಹಾರ ನಿಧಿ

ಹನ್ನೆರಡನೆಯ ಹಣಕಾಸು ಆಯೋಗದ ಶಿಫಾರಸಿನಂತೆ ರಾಜ್ಯ ಸರ್ಕಾರವು ಸಾಲಗಳ ಮರುಪಾವತಿಗಾಗಿ ಕ್ರೋಢೀಕೃತ ಋಣ ಪರಿಹಾರ ನಿಧಿಯನ್ನು (ಸಿಎಸ್‌ಎಫ್) 2012–13ರಲ್ಲಿ ಸ್ಥಾಪಿಸಿತು ಮತ್ತು 2012–13ರಲ್ಲಿ ₹1,000 ಕೋಟಿಗಳನ್ನು ನಿಧಿಯ ಮೂಲಧನಕ್ಕೆ ವರ್ಗಾಯಿಸಿತು. ನಿಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ವಹಿಸುತ್ತದೆ ಮತ್ತು ಮೂಲಧನವನ್ನು ಭಾರತ ಸರ್ಕಾರದ ಭದ್ರತಾ ಪತ್ರಗಳಲ್ಲಿ ಹೂಡಿಕೆ ಮಾಡಲಾಗಿದೆ. ಸರ್ಕಾರದ ಅಧಿಸೂಚನೆಯಂತೆ (ಫೆಬ್ರವರಿ 2013) ಹಿಂದಿನ ಆರ್ಥಿಕ ವರ್ಷದ ಅಂತ್ಯದಲ್ಲಿದ್ದ ಬಾಕಿ ಜವಾಬ್ದಾರಿಗಳ (ಆಯವ್ಯಯದ ಹೊರಗಿನ ಸಾಲಗಳನ್ನು ಹೊರತುಪಡಿಸಿ) ಶೇಕಡ 0.50ರಷ್ಟು ಕನಿಷ್ಟ ವಾರ್ಷಿಕ ವಂತಿಗೆಯನ್ನು ರಾಜ್ಯಸರ್ಕಾರವು ನಿಧಿಗೆ ಜಮೆ ಮಾಡಬೇಕು. 2018–19ರಲ್ಲಿ ಅಗತ್ಯವಿದ್ದ ₹1,165 ಕೋಟಿಗಳಿಗೆದುರಾಗಿ ರಾಜ್ಯ ಸರ್ಕಾರವು ₹700 ಕೋಟಿಗಳನ್ನು ನಿಧಿಗೆ ಪ್ರಧಾನ ಲೆಕ್ಕಶೀರ್ಷಿಕೆ 2048–ಕ್ರೋಢೀಕೃತ ಋಣ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡಿತು.

ಹದಿನಾಲ್ಕನೆಯ ಹಣಕಾಸು ಆಯೋಗವೂ ಸಹ ತನ್ನ ವರದಿಯಲ್ಲಿ ಕ್ರೋಢೀಕೃತ ಋಣ ಪರಿಹಾರ ನಿಧಿಯು ವಿವೇಚನಾಯುಕ್ತ ವಿತ್ತೀಯ ನಿರ್ವಹಣೆಯಲ್ಲಿನ ಒಂದು ಅವಿಭಾಜ್ಯ ಅಂಗವಾಗಿದೆಯೆಂದು ವಿಶ್ಲೇಷಿಸಿತು. ಕ್ರೋಢೀಕೃತ ಋಣ ಪರಿಹಾರ ನಿಧಿಯು ಆರ್ಥಿಕ/ಮಾರುಕಟ್ಟೆ ಸಂಕಷ್ಟಗಳಲ್ಲಿ ಮರುಪಾವತಿ ಜವಾಬ್ದಾರಿಗಳನ್ನು ನಿರ್ವಹಿಸಲು ಆಧಾರವನ್ನು ಸೃಷ್ಟಿಸುವುದರಿಂದ, ಹೂಡಿಕೆದಾರರ ನಂಬಿಕೆಯನ್ನು ಹೆಚ್ಚಿಸುವ ಮೂಲಕ ಸಾಮಾನ್ಯ ಸಮಯಗಳಲ್ಲೂ ಸಹ ಪ್ರಾಥಮಿಕ ಮಾರುಕಟ್ಟೆಯಲ್ಲಿ ಯುಕ್ತ ಬೆಲೆಗೆ ಸಾಲಗಳನ್ನು ಪಡೆಯಲು ಸಹಾಯ ನೀಡುತ್ತದೆ. ವರ್ಷದ ಅಂತ್ಯದಲ್ಲಿ ನಿಧಿಯಲ್ಲಿನ ಶಿಲ್ಕು ₹2,770 ಕೋಟಿಗಳಲ್ಲೇ ಉಳಿದಿತ್ತು.

ಕ್ರೋಢೀಕೃತ ಋಣ ಪರಿಹಾರ ನಿಧಿಗೆ ವರ್ಗಾವಣೆ ಮತ್ತು ಹೂಡಿಕೆಯು ರಾಜ್ಯವು ತನ್ನೆಲ್ಲ ವಿತ್ತೀಯ ಅಗತ್ಯತೆಗಳನ್ನು ಸರಿದೂಗಿಸುವ ಸಾಧ್ಯತೆಯ ಮೇಲೆ ಅವಲಂಬಿತವಾಗಿದೆಯೆಂದು ಪುನರುಚ್ಚರಿಸುತ್ತದೆ ಎಂದು ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಮಾರ್ಚ್ 2020) ತಿಳಿಸಿತು.

ಹೂಡಿಕೆ ಮೇಲಿನ ಬದ್ಧತೆಯು ವರ್ಷದ ಆರಂಭದಲ್ಲೇ ಆಯವ್ಯಯ ಕಸರತ್ತುಗಳ ಭಾಗವಾಗಬೇಕಾದ್ದರಿಂದ ಆರ್ಥಿಕ ಇಲಾಖೆಯ ಉತ್ತರವು ತೃಪ್ತಿಕರವಾಗಿಲ್ಲ. ಅಲ್ಲದೆ ಮೂರರಿಂದ ಐದು ವರ್ಷದ ಅವಧಿಯಲ್ಲಿ ನಿಧಿಯು ಬಾಕಿಯಿರುವ ಜವಾಬ್ದಾರಿಗಳ ಕನಿಷ್ಠ ಶೇಕಡ ಮೂರರಿಂದ ಶೇಕಡ ಐದರಷ್ಟಾಗುವಂತೆ ವರ್ಷಾನುವರ್ಷ ವಂತಿಗೆಯ ಮೂಲಕ ನಿಧಿಯನ್ನು ಬೆಳೆಸುವುದು ಭಾರತೀಯ ರಿಸರ್ವ್ ಬ್ಯಾಂಕಿನ ಶಿಫಾರಸಾಗಿದೆ ಹಾಗೂ ಇದು ವಿವೇಚನಾಯುಕ್ತ ವಿತ್ತೀಯ ನಿರ್ವಹಣೆಯಾಗಿದೆ.

### (ಬಿ) ಹಸಿರು ತೆರಿಗೆ

ಕರ್ನಾಟಕ ಸರ್ಕಾರವು ಮೋಟಾರು ವಾಹನ ತೆರಿಗೆ (ತಿದ್ದುಪಡಿ) ಅಧಿನಿಯಮ, 2002ರ ಮೂಲಕ ವಾಯುಮಾಲಿನ್ಯವನ್ನು ನಿಯಂತ್ರಿಸುವ 'ಹಸಿರು ತೆರಿಗೆ'[14] ಎಂಬ ಉಪಕರದ ಸಂಗ್ರಹಣೆಯನ್ನು ಪ್ರಾರಂಭಿಸಿತು.

ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ 2016ರ **ಕಂಡಿಕೆ 1.3.1.1**ರಲ್ಲಿ ಹಸಿರು ತೆರಿಗೆ ಉಪಕರದ ತಪ್ಪಾದ ಲೆಕ್ಕ ಹಾಕುವಿಕೆ ಮತ್ತು ಬಳಸದಿರುವುದು' ಎಂಬ ಬಗ್ಗೆ ಸಂಗ್ರಹಿಸಿದ ಹಸಿರು ತೆರಿಗೆ ಉಪಕರವನ್ನು ರಾಜಸ್ವ ಸ್ವೀಕೃತಿಗಳ ಲೆಕ್ಕ ಶೀರ್ಷಿಕೆ '0041–00–

[14] ಹದಿನೈದು ವರ್ಷಗಳಷ್ಟು ಹಳೆಯದಾದ ದ್ವಿಚಕ್ರ ಮತ್ತು ಸಾರಿಗೆಯೇತರ ವಾಹನಗಳು ಮತ್ತು ಏಳು ವರ್ಷಗಳಷ್ಟು ಹಳೆಯದಾದ ಸಾರಿಗೆ ವಾಹನಗಳ ಮೇಲೆ ಅವುಗಳ ನೋಂದಣಿ ಪ್ರಮಾಣಪತ್ರದ ನವೀಕರಣ ಸಮಯದಲ್ಲಿ ಕಾಯಿದೆಯ ಅಡಿ ವಿಧಿಸಲಾಗುವ ತೆರಿಗೆಯೊಂದಿಗೆ ವಾಯು ಮಾಲಿನ್ಯ ನಿಯಂತ್ರಣಕ್ಕೆ ಅನುಷ್ಠಾನಗೊಳಿಸುತ್ತಿರುವ ವಿವಿಧ ಕ್ರಮಗಳಲ್ಲಿ ನಿಗದಿಪಡಿಸಿರುವ ದರದಲ್ಲಿ ಹಸಿರು ತೆರಿಗೆಯನ್ನು ವಿಧಿಸಲಾಗುತ್ತದೆ.

102–0–11–ಹಸಿರು ತೆರಿಗೆ' ಯಡಿ ಲೆಕ್ಕ ಹಾಕಬೇಕಾಗಿದೆ ಎಂದು ಹೇಳಲಾಗಿತ್ತು. ಸಂಗ್ರಹಿಸಿದ ಹಸಿರು ತೆರಿಗೆ ಉಪಕರವನ್ನು ವರ್ಗಾಯಿಸಲು ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳು–8229–00–200–0–63–ಹಸಿರು ತೆರಿಗೆ' ಯಡಿ ಮೀಸಲು ನಿಧಿಯೊಂದನ್ನು ತೆರೆಯಲಾಗಿದೆ.

2006–07ರಿಂದ 2017–18ರವರೆಗೆ ಸಂಗ್ರಹಿಸಿದ ಉಪಕರ ₹57.89 ಕೋಟಿಗಳಲ್ಲದೇ 2018–19ರ ಸಾಲಿನಲ್ಲಿ ₹27.20 ಕೋಟಿಗಳನ್ನು ರಾಜಸ್ವ ಸ್ವೀಕೃತಿಯ ಲೆಕ್ಕಗಳಡಿ ಸಂಗ್ರಹಿಸಲಾಗಿದೆ. ಆದ್ದರಿಂದ 2018–19ರವರೆಗೆ ಸಂಗ್ರಹಿಸಿದ ಒಟ್ಟು ಹಸಿರು ತೆರಿಗೆ ಉಪಕರದ ₹85.09 ಕೋಟಿಗಳನ್ನು ಮತ್ತು ಸಂಬಂಧಿತ ವೆಚ್ಚಗಳನ್ನು ಸಾರ್ವಜನಿಕ ಲೆಕ್ಕಗಳಲ್ಲಿನ ನಿಧಿಯ ಲೆಕ್ಕಕ್ಕೆ ವರ್ಗಾಯಿಸಬೇಕಿದೆ. ಆದಾಗ್ಯೂ, ಹಸಿರು ತೆರಿಗೆ ಉಪಕರದ ರಾಜಸ್ವ ಸ್ವೀಕೃತಿಯ ಸಂಗ್ರಹಗಳನ್ನಾಗಲಿ ಅಥವಾ ಅದರ ಸಂಬಂಧಿತ ವೆಚ್ಚಗಳನ್ನಾಗಲಿ ಸಾರ್ವಜನಿಕ ಲೆಕ್ಕಗಳಿಗೆ ವರ್ಗಾಯಿಸಿಲ್ಲ.

2017–18 ಮತ್ತು 2018–19ರ ಸಾಲುಗಳ ಸ್ವೀಕೃತಿಗಳ ವರ್ಗಾವಣೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಇಲಾಖೆಯೊಂದಿಗೆ ಕೈಗೊಳ್ಳಲಾಗಿದೆ. ನಿಧಿಯ ಕಾರ್ಯಾಚರಣೆಯ ಪ್ರಕ್ರಿಯೆಯು ಸಫಲಗೊಂಡ ನಂತರ 2006–07ರಿಂದ ಬಾಕಿಯಿರುವ ಹಣದ ಬಗ್ಗೆ ಮತ್ತು ತದನಂತರ ವಾರ್ಷಿಕವಾಗಿ ಕ್ರಮವಾಗಿ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### (ಸಿ) ರಾಜ್ಯ ವಿಪತ್ತು ಪರಿಹಾರ ನಿಧಿ

ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯು (ಎಸ್‌ಡಿಆರ್‌ಎಫ್) ವಿಪತ್ತು ಪರಿಹಾರ ಕಾಯಿದೆ, 2005ರಡಿ ರಚಿಸಲಾಗಿದ್ದು, ಇದು 2010–11ರಿಂದ ಬಡ್ಡಿಸಹಿತ ಮೀಸಲು ನಿಧಿಯಡಿ ಕಾರ್ಯಗತವಾಗಿದೆ. ಮಾರ್ಗಸೂಚಿಗಳ ಅನುಸಾರ ಎಸ್‌ಡಿಆರ್‌ಎಫ್‌ನ ಹೂಡಿಕೆಗಳ ಮೇಲೆ ಗಳಿಸಿದ ಆದಾಯಗಳೊಂದಿಗೆ ಎಸ್‌ಡಿಆರ್‌ಎಫ್‌ಗೆ ಬಂದ ಪ್ರಾಪ್ತಿಗಳನ್ನು ಒಂದು ಅಥವಾ ಹೆಚ್ಚಿನ ಸಾಧನಗಳಲ್ಲಿ ಅಂದರೆ ಕೇಂದ್ರ ಸರ್ಕಾರದ ದಿನಾಂಕ ನಮೂದಿಸಿದ ಭದ್ರತೆಗಳು, ಹರಾಜು ಹಾಕಿದ ಖಜಾನೆ ಬಿಲ್ಲುಗಳು ಮತ್ತು ಬಡ್ಡಿ ಗಳಿಸುವ ಠೇವಣಿಗಳು ಮತ್ತು ಅನುಸೂಚಿತ ವಾಣಿಜ್ಯ ಬ್ಯಾಂಕುಗಳಲ್ಲಿ ಠೇವಣಿಗಳ ಪ್ರಮಾಣಪತ್ರದಲ್ಲಿ ಹೂಡಬೇಕಿದೆ. ಬರ, ಪ್ರವಾಹ, ಸೈಕ್ಲೋನ್, ಭೂಕಂಪ, ಅಗ್ನಿದುರಂತದಂತಹ ಪ್ರಕೃತಿ ವಿಕೋಪಗಳು ಈ ಯೋಜನೆಯಡಿ ಪರಿಹಾರಕ್ಕೆ ಅರ್ಹವಾಗಿದೆ.

ಹದಿನಾಲ್ಕನೆಯ ಹಣಕಾಸು ಆಯೋಗವು ನಿಧಿಗೆ ಭಾರತ ಸರ್ಕಾರ ರಾಜ್ಯ ಸರ್ಕಾರದಿಂದ ಕ್ರಮವಾಗಿ 90:10 ಅನುಪಾತದಲ್ಲಿ ವಂತಿಗೆಯನ್ನು ಶಿಫಾರಸು ಮಾಡಿತ್ತು. ಭಾರತ ಸರ್ಕಾರವು ರಾಜ್ಯಗಳ ಶೇಕಡಾಪಾಲು ಮುಂಚಿನಂತೆಯೇ (75:25) ಮುಂದುವರೆಯುವುದು ಮತ್ತು ಹರಿವು ಸಹ ಹಾಲಿ ವ್ಯವಸ್ಥೆಯಲ್ಲಿರುವಂತೆಯೇ ಇರುವುದು ಮತ್ತು ಒಮ್ಮೆ ಜಿಎಸ್‌ಟಿಯು ಜಾರಿಯಾದ ನಂತರ ವಿಪತ್ತು ಪರಿಹಾರದ ಬಗೆಗಿನ ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸನ್ನು ಸಂಪೂರ್ಣವಾಗಿ ಅನುಷ್ಠಾನ ಗೊಳಿಸಲಾಗುವುದೆಂಬ ಬದಲಾವಣೆಯೊಂದಿಗೆ ಒಪ್ಪಿಕೊಂಡಿತು. ಜುಲೈ 2017ರಿಂದ ಜಿಎಸ್‌ಟಿಯ ಅನುಷ್ಠಾನವಾಗಿದ್ದು 2018–19ರಲ್ಲಿ ನಿಧಿಗೆ ವಂತಿಗೆಯು 90:10ರ ಅನುಪಾತದಲ್ಲಿದೆ.

2018–19ರಲ್ಲಿ ಒಟ್ಟು ₹1,279.84 ಕೋಟಿಗಳನ್ನು ನಿಧಿಯ ಲೆಕ್ಕಕ್ಕೆ ವರ್ಗಾಯಿಸಲಾಯಿತು (ಕೇಂದ್ರ ಸರ್ಕಾರದ ವಂತಿಗೆ ₹288 ಕೋಟಿ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿಗೆ ರಾಜ್ಯದ ವಂತಿಗೆ ₹32 ಕೋಟಿ ಮತ್ತು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಕೇಂದ್ರ ಸರ್ಕಾರದ ವಂತಿಗೆ ₹959.84 ಕೋಟಿ) ನಿಧಿಯ ಒಟ್ಟು ಶಿಲ್ಕು ₹1,322 ಕೋಟಿಗಳಲ್ಲಿ ₹887 ಕೋಟಿಗಳನ್ನು ಪ್ರಧಾನ ಶೀರ್ಷಿಕೆ 2245–ಪ್ರಕೃತಿ ವಿಕೋಪದಡಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಯಿತು. ಮಾರ್ಚ್ 31, 2019ರಲ್ಲಿದ್ದಂತೆ ನಿಧಿಯಲ್ಲಿನ ಶಿಲ್ಕು ₹434.62 ಕೋಟಿಗಳಷ್ಟಿತ್ತು.

ಅದಲ್ಲದೆ, ರಾಜ್ಯ ಸರ್ಕಾರವು ರಾಜ್ಯ ವಿಪತ್ತು ಪರಿಹಾರ ನಿಧಿಗೆ ಓವರ್ ಡ್ರಾಫ್ಟ್‌ಗಳಿಗೆ ಅನ್ವಯಿಸುವ ದರದಲ್ಲಿ ಬಡ್ಡಿಯನ್ನು ಪಾವತಿಸಬೇಕಿತ್ತು ಮತ್ತು ಅದನ್ನು ಪ್ರಧಾನಶೀರ್ಷಿಕೆ '2049–ಬಡ್ಡಿ ಪಾವತಿಗಳು' ಅದರಡಿ ಭರಿಸಿ ಅರ್ಧವಾರ್ಷಿಕ ಆಧಾರದ ಮೇಲೆ ಜಮೆ ಮಾಡಬೇಕಿತ್ತು. ಆದಾಗ್ಯೂ, 2018–19ರಲ್ಲಿ ನಿಧಿಯ ಆರಂಭಿಕ ಶಿಲ್ಕುಗಳ ಮೇಲೆ ಬಡ್ಡಿಯನ್ನು ಪಾವತಿಸಿರಲಿಲ್ಲ.

₹41.98 ಕೋಟಿಗಳ ಆರಂಭಿಕ ಶಿಲ್ಕಿನ ಮೇಲೆ ಬಡ್ಡಿಯನ್ನು ಪಾವತಿಸಿಲ್ಲವೆಂದು ಆರ್ಥಿಕ ಇಲಾಖೆಯು ಒಪ್ಪಿಕೊಳ್ಳುತ್ತಾ ಅದಕ್ಕೆ 2020–21ರ ಪೂರಕ ಅಂದಾಜುಗಳಲ್ಲಿ ಅನುವು ಮಾಡಲಾಗುವುದೆಂದು ಆರ್ಥಿಕ ಇಲಾಖೆಯು ಹೇಳಿತು (ಮಾರ್ಚ್ 2020).

### (ಡಿ) ಅರಣ್ಯ ಅಭಿವೃದ್ಧಿ ನಿಧಿ

ಅರಣ್ಯ ಅಭಿವೃದ್ಧಿ ತೆರಿಗೆಯ ಮೂಲಕ ಸಂಗ್ರಹಿಸಿದ ಹಣವು ಸರ್ಕಾರದ ಆದಾಯವಾಗಿ ಜಮೆಯಾಗುತ್ತದೆ ಮತ್ತು ಇದಕ್ಕೆ ಸಮನಾದ ಮೊತ್ತವನ್ನು ಸಾರ್ವಜನಿಕ ಲೆಕ್ಕದಡಿಯ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವರ್ಗಾಯಿಸಲಾಗುತ್ತದೆ. ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿಯ ಕಾಮಗಾರಿಗಳಿಗೆ ಮಾಡಿದ ವಾಸ್ತವ ವೆಚ್ಚವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ಲೆಕ್ಕ ಹೊಂದಾಣಿಕೆಯ ಮೂಲಕ ಲೆಕ್ಕ ಶೀರ್ಷಿಕೆ 8229–00–200–0–04 ರಡಿ ವರ್ಗಾಯಿಸಲಾಗುತ್ತದೆ.

1ನೇ ಏಪ್ರಿಲ್ 2018ರಂದು ಈ ನಿಧಿಯಲ್ಲಿ ₹2,947.09 ಕೋಟಿ ಶಿಲ್ಕು ಇದ್ದಿತು. 2018–19ರಲ್ಲಿ ₹26.38 ಕೋಟಿಗಳನ್ನು ನಿಧಿಗೆ ಜಮೆ ಮಾಡಲಾಗಿದೆ. ಆದರೆ, ಪ್ರಸಕ್ತ ಸಾಲಿನಲ್ಲಿನ ವೆಚ್ಚ ₹299.20 ಕೋಟಿಗಳನ್ನು ನಿಧಿಗೆ ವರ್ಗಾಯಿಸಿರಲಿಲ್ಲ. ಮಾರ್ಚ್ 31, 2019ರಲ್ಲಿದ್ದಂತೆ ನಿಧಿಯಲ್ಲಿನ ಶಿಲ್ಕು ₹2,973.47 ಕೋಟಿಗಳಷ್ಟಿತ್ತು.

ವೆಚ್ಚವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ವರ್ಗಾವಣೆ ಮಾಡದಿರುವ ಬಗ್ಗೆ ಇಲಾಖೆಯು ನ್ಯಾಯಾಲಯದ ಆದೇಶವು ಬಂದ ನಂತರ ನಿಧಿಯನ್ನು ಕಾರ್ಯಗತಗೊಳಿಸುವುದರ ಬಗೆಗಿನ ನಿರ್ಣಯವನ್ನು ತಿಳಿಸಲಾಗುವುದೆಂದು ಉತ್ತರಿಸಿತು (ಮಾರ್ಚ್ 2020). ಮೇಲ್ಮನವಿ ಸಲ್ಲಿಸಿರುವುದು ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಶೇಕಡ 5ರಿಂದ 12ಕ್ಕೆ ಹೆಚ್ಚು ಮಾಡಿರುವುದಕ್ಕೆ ಸಂಬಂಧಿಸಿದ್ದು ಸಂಚಿತ ನಿಧಿಯಿಂದ ವೆಚ್ಚವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವರ್ಗಾಯಿಸುವುದರ ಬಗ್ಗೆ ಅಲ್ಲವಾದ್ದರಿಂದ ಇಲಾಖೆಯ ಉತ್ತರವು ಸಮರ್ಥನೀಯವಲ್ಲ.

### (ಇ) ಗ್ರಾಹಕರ ಕಲ್ಯಾಣ ನಿಧಿ

**ರಾಜ್ಯ ಗ್ರಾಹಕರ ಕಲ್ಯಾಣ ನಿಧಿಯು ಕರ್ನಾಟಕ ರಾಜ್ಯ ಗ್ರಾಹಕ ಕಲ್ಯಾಣ ನಿಧಿ ನಿಯಮಗಳು, 2005**ರ ನಿಯಮ 3ರ **ಅನ್ವಯ ಮೀಸಲು ನಿಧಿಗಳು ಸಾರ್ವಜನಿಕ ಲೆಕ್ಕದ (ಬಡ್ಡಿ ರಹಿತ) ವಿಭಾಗದಲ್ಲಿ ಪ್ರಧಾನ ಶೀರ್ಷಿಕೆ 8229–00–123–ಗ್ರಾಹಕರ ಕಲ್ಯಾಣ ನಿಧಿಯು ರಚಿತವಾಗಿದೆ.**

**ಈ ನಿಯಮಗಳ ಅನ್ವಯಗಳನುಸಾರ ನಿಧಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತಗಳು, ರಾಜ್ಯದಲ್ಲಿ ಗ್ರಾಹಕರ ಆಂದೋಲನವನ್ನು ಬಲಪಡಿಸಲು ಕೇಂದ್ರ ಸರ್ಕಾರದಿಂದ ಒದಗಿಸಲಾದ ನೆರವು/ ಅನುದಾನ, ಸಮಾನ ಅನುದಾನ ಅಥವಾ ರಾಜ್ಯ ಸರ್ಕಾರದಿಂದ ಇನ್ನಿತರ ನೆರವು ಮತ್ತು ರಾಜ್ಯ ಮತ್ತು ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ಸಂಗ್ರಹವಾದ ಕೋರ್ಟ್ ಶುಲ್ಕ ಗ್ರಾಹಕರು ಬಳಸುವ ಸರಕುಗಳ/ಸೇವೆಗಳ ಉತ್ಪಾದಕರು ಭರಿಸಿದ ದಂಡ, ನಿಧಿ ಶಿಲ್ಕುಗಳ ಹೂಡಿಕೆಯಿಂದ ಬಂದ ಆದಾಯ ಮತ್ತು ನಿಧಿಯ ಬಳಕೆಗೆ ರಾಜ್ಯ ಸರ್ಕಾರದಿಂದ ಸ್ವೀಕರಿಸುವ ಇನ್ನಿತರ ಮೊತ್ತಗಳು ಜಮೆಯಾಗುತ್ತವೆ. ನಿಧಿಯಲ್ಲಿ ಕ್ರೋಢೀಕರಣಗೊಂಡ ಮೊತ್ತವನ್ನು ರಾಜ್ಯ ಸರ್ಕಾರವು ಗ್ರಾಹಕರ ಕಲ್ಯಾಣಕ್ಕೆ ಬಳಸಬೇಕು.**

**2018–19ರಲ್ಲಿ ಲೆಕ್ಕಶೀರ್ಷಿಕೆ 1456–00–800–0–01ರಡಿ ಲೆಕ್ಕ ಹಾಕಲಾದ ಸ್ವೀಕೃತಿಯಾದ ₹0.41 ಕೋಟಿಗಳನ್ನು ನಿಧಿಯ ಲೆಕ್ಕಗಳಿಗೆ ವರ್ಗಾಯಿಸಬೇಕಿತ್ತು. ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 3456–00–797–0–04–261 ರಡಿ ಸ್ವೀಕೃತಿಗಳ ವರ್ಗಾವಣೆಗೆ ಅನುವು ಮಾಡಿದ್ದಾಗ್ಯೂ ನಿಧಿಗೆ ಯಾವುದೇ ಮೊತ್ತವನ್ನು ವರ್ಗಾಯಿಸಿರಲಿಲ್ಲ. ಲೆಕ್ಕಶೀರ್ಷಿಕೆ 3456–00–104–0–02ರಡಿ ಆಯವ್ಯಯದಲ್ಲಿ ವೆಚ್ಚದೆಡೆಗೆ ₹0.42 ಕೋಟಿಗಳಷ್ಟು ಅನುವನ್ನು ಮಾಡಲಾಗಿದ್ದಾಗ್ಯೂ ಯಾವುದೇ ವೆಚ್ಚವನ್ನು ಲೆಕ್ಕ ಹಾಕಿರಲಿಲ್ಲ. ನಿಧಿಯ ಆರಂಭಿಕ ಮತ್ತು ಅಂತಿಮ ಶಿಲ್ಕುಗಳು ₹1.43 ಕೋಟಿಗಳಲ್ಲಿ ಉಳಿಯಿತು.**

**ಸ್ವೀಕೃತಿಗಳನ್ನು ನಿಧಿಗೆ ವರ್ಗಾಯಿಸಲು ಮತ್ತು ನಿಧಿಯ ಲೆಕ್ಕದಿಂದ ವೆಚ್ಚವನ್ನು ಭರಿಸಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯೊಂದಿಗೆ ವ್ಯವಹರಿಸುತ್ತಿರುವುದಾಗಿ ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).**

### ಮೀಸಲು ನಿಧಿಯ ವ್ಯವಹಾರಗಳ ಪರಿಣಾಮ

**2018–19ರಲ್ಲಿ ಮೇಲೆ ಹೇಳಿದ ಮೀಸಲು ನಿಧಿಗಳ ವ್ಯವಹಾರಗಳ ಪರಿಣಾಮ/ಫಲಿತಾಂಶಗಳನ್ನು ಕೆಳಗೆ ನೀಡಲಾಗಿದೆ.**

- **ಕ್ರೋಢೀಕೃತ ಋಣ ಪರಿಹಾರದ ನಿಧಿಗೆ ವಂತಿಗೆಯು ಕಡಿಮೆಯಾದ್ದರಿಂದ ರಾಜಸ್ವ ಹೆಚ್ಚಳವನ್ನು ಅಧಿಕವಾಗಿ ಹೇಳುವಲ್ಲಿ ಹಾಗೂ ವಿತ್ತೀಯ ಕೊರತೆಯನ್ನು ಕಡಿಮೆ ಹೇಳುವಲ್ಲಿ ಪರಿಣಮಿಸಿತು.**
- **ಸಾರ್ವಜನಿಕ ಲೆಕ್ಕದಲ್ಲಿರುವ ಹಸಿರು ತೆರಿಗೆ ನಿಧಿಗೆ ಸ್ವೀಕೃತಿ ಹಾಗೂ ವೆಚ್ಚವನ್ನು ವರ್ಗಾಯಿಸದಿರುವುದು ರಾಜಸ್ವ ಸ್ವೀಕೃತಿ/ವೆಚ್ಚವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು.**
- **ಅರಣ್ಯ ಅಭಿವೃದ್ಧಿ ತೆರಿಗೆಗೆ ಕೇವಲ ಸ್ವೀಕೃತಿಗಳನ್ನು ವರ್ಗಾಯಿಸಿ ತತ್ಸಂಬಂಧಿತ ವೆಚ್ಚವನ್ನು ವರ್ಗಾಯಿಸದಿರುವುದು ರಾಜಸ್ವ ವೆಚ್ಚ ಮತ್ತು ವಿತ್ತೀಯ ಕೊರತೆಯನ್ನು ಅಧಿಕವಾಗಿ ಹೇಳುವಲ್ಲಿ ಮತ್ತು ರಾಜಸ್ವ ಹೆಚ್ಚಳವನ್ನು ಕಡಿಮೆಯಾಗಿ ತೋರಿಸಿದಂತಾಗಿದೆ.**
- **ಗ್ರಾಹಕರ ಕಲ್ಯಾಣನಿಧಿಗೆ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ವರ್ಗಾಯಿಸದಿರುವುದು ರಾಜಸ್ವ ಸ್ವೀಕೃತಿಗಳು/ವೆಚ್ಚವನ್ನು ಅಧಿಕವಾಗಿ ಹೇಳುವ ಪರಿಣಾಮವನ್ನು ಹೊಂದಿತ್ತು.**
- **ಜಿಲ್ಲಾಧಿಕಾರಿಗಳ ರಾಜ್ಯ ವಿಪತ್ತು ಪರಿಹಾರ ನಿಧಿಗಳ ವೈಯಕ್ತಿಕ ಠೇವಣಿಗಳಲ್ಲಿನ ಬಳಕೆಯಾಗದ ಶಿಲ್ಕುಗಳನ್ನು ಲೆಕ್ಕಗಳಲ್ಲಿ ಬಿಂಬಿಸದೇ ಸಾಮಾನ್ಯ ಶಿಲ್ಕುಗಳಲ್ಲಿ ವಿಲೀನಗೊಳಿಸಲಾಗಿತ್ತು. ಇಂತಹ ಬಳಕೆಯಾಗದ ಶಿಲ್ಕುಗಳು ಸಾರ್ವಜನಿಕ ಲೆಕ್ಕದ ನಿಧಿ ಲೆಕ್ಕಗಳನ್ನು ಕಡಿಮೆ ಹೇಳುವಲ್ಲಿ ಮತ್ತು ಸಂಚಿತ ನಿಧಿಯಲ್ಲಿ ವಿಪತ್ತು ಪರಿಹಾರದೆಡೆಗಿನ ವೆಚ್ಚಗಳನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು.**

### ನಿಷ್ಕ್ರಿಯ ಮೀಸಲು ನಿಧಿಗಳು

ಮಾರ್ಚ್ 31, 2019ರಲ್ಲಿದ್ದಂತೆ, 125 ಮೀಸಲು ನಿಧಿಗಳಲ್ಲಿ 106 ನಿಧಿಗಳು ನಿಷ್ಕ್ರಿಯವಾಗಿ ಉಳಿದಿದ್ದವು. ಆ 106 ನಿಷ್ಕ್ರಿಯ ಮೀಸಲು ನಿಧಿಗಳಲ್ಲಿ, 83 ಮೀಸಲು ನಿಧಿಗಳಲ್ಲಿ ಶೂನ್ಯ ಶಿಲ್ಕು ಇದ್ದು, 12 ಮೀಸಲು ನಿಧಿಗಳು ₹3,514.84 ಕೋಟಿಗಳ ಧನಾತ್ಮಕ ಶಿಲ್ಕನ್ನು ಹೊಂದಿದ್ದು 11 ಮೀಸಲು ನಿಧಿಗಳು ₹5,239.89 ಕೋಟಿಗಳ ಋಣಾತ್ಮಕ ಶಿಲ್ಕನ್ನು ಹೊಂದಿದ್ದವು. ಇದರ ಪರಿಣಾಮವಾಗಿ ಮೀಸಲು ನಿಧಿಗಳಡಿ ಸರ್ಕಾರದ ಜವಾಬ್ದಾರಿಯು ನಿವ್ವಳ ₹1,725.05 ಕೋಟಿಗಳಷ್ಟು ಇಳಿಕೆಯಾಗಿದೆ.

### 1.10.5 ಸಾಂದರ್ಭಿಕ ಜವಾಬ್ದಾರಿಗಳು

#### 1.10.5.1 ಖಾತರಿಗಳ ಸ್ಥಿತಿ

ಸರ್ಕಾರವು ಖಾತರಿ ನೀಡಿದ ಸಾಲಗಾರರು ಸಾಲ ತೀರಿಸದಿದ್ದಲ್ಲಿ ಖಾತರಿಗಳು ರಾಜ್ಯದ ಸಾಂದರ್ಭಿಕ ಜವಾಬ್ದಾರಿಗಳಾಗುತ್ತವೆ. ಹಿಂದಿನ ಐದು ವರ್ಷಗಳ ವಿವರಗಳನ್ನು ಅನುಬಂಧ **1.4**ರಲ್ಲಿ ನೀಡಲಾಗಿದೆ.

ಕರ್ನಾಟಕ ಖಾತರಿಗಳ ಮೇಲಿನ ಮಿತಿ ಕಾಯಿದೆ, 1999ಯು ಯಾವುದೇ ವರ್ಷದ ಕೊನೆಗೆ ಸರ್ಕಾರವು ನೀಡಿದ ಖಾತರಿ ಬಾಕಿಯು ಹಿಂದಿನ ಎರಡನೇ ವರ್ಷದಲ್ಲಿನ ರಾಜ್ಯ ರಾಜಸ್ವ ಸ್ವೀಕೃತಿಗಳ ಶೇಕಡ 80ರಷ್ಟನ್ನು ಮೀರಬಾರದೆಂಬ ಮಿತಿಯನ್ನು ವಿಧಿಸುತ್ತದೆ, ಪ್ರತಿ ವರ್ಷದ ಏಪ್ರಿಲ್ 1ರಂದು ಬಾಕಿ ಇರುವ ಖಾತರಿಗಳು ನಿಗದಿಪಡಿಸಿದ ಮಿತಿಯ ಒಳಗಿದೆ. 2018–19ರ ಅಂತ್ಯಕ್ಕೆ ಬಾಕಿ ಇದ್ದ ₹24,091 ಕೋಟಿಗಳು (ಅಸಲು+ಬಡ್ಡಿ) ನೀರಾವರಿ (₹13,849 ಕೋಟಿ), ಸಹಕಾರ (₹1,798 ಕೋಟಿ), ಹಣಕಾಸು (₹1,285 ಕೋಟಿ), ಇಂಧನ (₹4,234 ಕೋಟಿ), ವಸತಿ (₹2,083 ಕೋಟಿ) ಸಾರಿಗೆ (₹288 ಕೋಟಿ) ಮತ್ತಿತರ ವಲಯಗಳ (₹554 ಕೋಟಿ) ಅಡಿ ಬರುವ 158 ಸಂಸ್ಥೆಗಳು/ಕಂಪನಿಗಳಿಗೆ ನೀಡಿದ ಖಾತರಿಯನ್ನು ಒಳಗೊಂಡಿದೆ.

2018–19ನೇ ವರ್ಷದಲ್ಲಿ ಅಂದಾಜಿಸಿದ ಒಟ್ಟು ಖಾತರಿ ಶುಲ್ಕ ₹433.30 ಕೋಟಿಗಳ ಬದಲಾಗಿ ಸರ್ಕಾರವು ವರದಿ ಮಾಡಿದಂತೆ ಕೇವಲ ₹226.66 ಕೋಟಿ ಮಾತ್ರ ಸ್ವೀಕೃತಿಯಾಗಿತ್ತು. ಈ ರೀತಿ ಸ್ವೀಕರಿಸಿದ ಖಾತರಿ ಶುಲ್ಕವು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹12.78 ಕೋಟಿ), ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (₹1.83 ಕೋಟಿ) ಮತ್ತು ಪವರ್ ಕಂಪೆನಿ ಆಫ್ ಕರ್ನಾಟಕ ಲಿಮಿಟೆಡ್ (₹39.58 ಕೋಟಿ)ಗಳಿಗೆ ಸಹಾಯಧನ/ಸಹಾಯಾನುದಾನ/ಹಣಕಾಸು ಸಹಾಯ ರೂಪದಲ್ಲಿ ಪುಸ್ತಕ ಹೊಂದಾಣಿಕೆ ಮಾಡಿದ ರಾಜ್ಯ ಸರ್ಕಾರಕ್ಕೆ ಪಾವತಿಮಾಡಬೇಕಿದ್ದ ಖಾತರಿ ಶುಲ್ಕವನ್ನು ಸಹ ಒಳಗೊಂಡಿತ್ತು. ತತ್ಪರಿಣಾಮವಾಗಿ, ಸ್ವೀಕರಿಸಿದ ಖಾತರಿ ಶುಲ್ಕದ ನಿವ್ವಳ ಕೊರತೆಯು ₹260.83 ಕೋಟಿಗಳಷ್ಟಿತ್ತು (ಪುಸ್ತಕ ಹೊಂದಾಣಿಕೆಯ ₹54.19 ಕೋಟಿಗಳನ್ನು ಬಿಟ್ಟು ₹433.20 ಕೋಟಿಗಳಿಂದ ₹172.47 ಕೋಟಿಗಳನ್ನು ಕಳೆದಿರುವುದು).

ಶಾಸಕಾಂಗದ ಮುಂದೆ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ (2016–20), ಖಾತರಿಗಳು ಸಾಂದರ್ಭಿಕ ಜವಾಬ್ದಾರಿಗಳನ್ನು ಹೆಚ್ಚಿಸುವುದರಿಂದ ಅವುಗಳನ್ನು, ಸಾಲಗಾರನ ಸಾಲ ತೀರಿಸುವ ಸಾಮರ್ಥ್ಯ, ಖಾತರಿಯ ಮೂಲಕ ಒಳಗೊಳ್ಳುವ ಮೊತ್ತ ಮತ್ತು ಅಪಾಯಗಳು, ಸಾಲದ ಷರತ್ತುಗಳು, ಸಾರ್ವಜನಿಕ ಉದ್ದೇಶದ ಈಡೇರಿಕೆ ಮತ್ತು ಸಮರ್ಥನೆ, ವಿವಿಧ ಬದ್ಧತೆಗಳು, ಬಾಕಿಯಾಗುವ ಸಾಧ್ಯತೆಗಳು ಮತ್ತು ಅಂತಹ ಜವಾಬ್ದಾರಿಗಳ ಬೆಲೆಯಂಥವುಗಳನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ಸಾಲದ ಪ್ರಸ್ತಾವನೆಯನ್ನು ಪರೀಕ್ಷಿಸುವ ರೀತಿಯಲ್ಲಿಯೇ ಪರಿಶೀಲಿಸಬೇಕು. ಪ್ರಕಾರ್ಯ ಖಾತರಿ ಮೀಸಲು ನಿಧಿ ಮತ್ತು ಖಾತರಿ ಕಾರ್ಯನೀತಿಯ ಉಪಯುಕ್ತತೆಯು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಸರ್ಕಾರವು ಹೇಳಿದೆ.

ಸಾರ್ವಜನಿಕ ಲೆಕ್ಕ ಸಮಿತಿಯೂ (ಜುಲೈ 2015) ಸಹ ಖಾತರಿ ಮೀಸಲು ನಿಧಿಯನ್ನು ಪ್ರಕಾರ್ಯಗೊಳಿಸಿ ಮುಂದುವರಿಸಲು ಕ್ರಮ ವಹಿಸಬೇಕೆಂದು ಶಿಫಾರಸು ಮಾಡಿದೆ. ಆದಾಗ್ಯೂ ರಾಜ್ಯ ಸರ್ಕಾರವು ಖಾತರಿ ಮೀಸಲು ನಿಧಿಯನ್ನು ಇನ್ನೂ ಸ್ಥಾಪಿಸಬೇಕಾಗಿದೆ.

ಆರ್ಥಿಕ ವರ್ಷ 2020–21ರಿಂದ ಖಾತರಿ ಮೀಸಲು ನಿಧಿಯನ್ನು ಸರ್ಕಾರದಿಂದ ಕಾರ್ಯಗತಗೊಳಿಸಲಾಗುವುದೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

## 1.11 ಋಣ ನಿರ್ವಹಣೆ

### 1.11.1 ಋಣ ಚಿತ್ರಣ

ಸರ್ಕಾರದ ಆದಾಯವು ಎರಡು ರೀತಿಯಲ್ಲಿರುತ್ತದೆ. ರಾಜಸ್ವ ಸ್ವೀಕೃತಿಗಳು ಎಂದು ಕರೆಯಲ್ಪಡುವ ಪ್ರಸಕ್ತ ಆದಾಯಗಳು ತೆರಿಗೆಗಳ ನಿರ್ವಹಣೆ, ಬಳಕೆದಾರರ ಶುಲ್ಕ ಮತ್ತು ಕೇಂದ್ರ ಸರ್ಕಾರದಿಂದ ಬರುವ ಅನುದಾನಗಳ ಮೂಲಕ ಸಂಗ್ರಹವಾಗುತ್ತದೆ ಮತ್ತು ಬಂಡವಾಳ ಸ್ವೀಕೃತಿಗಳು, ಸಾಲಗಳು, ಋಣೇತರ ಸ್ವೀಕೃತಿಗಳು ಮತ್ತು ಸಾರ್ವಜನಿಕ ಲೆಕ್ಕದ ಹೆಚ್ಚಳವನ್ನು ಒಳಗೊಂಡಿವೆ. ಋಣಗಳನ್ನು ಲೆಕ್ಕ ಹಾಕಲು ಕೆಲವು ಪುಸ್ತಕ ಹೊಂದಾಣಿಕೆಗಳನ್ನು ಇವು ನಗದು ರೂಪದ ವ್ಯವಹಾರಗಳ ಹಾಗೆಯೇ ಎಂಬಂತೆ ಪರಿಗಣಿಸಲಾಗುತ್ತದೆ. ಇಂತಹ ವ್ಯವಹಾರಗಳು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ಬಾಕಿ, ವಿದ್ಯಾರ್ಥಿಗಳಿಗೆ/ಹಿರಿಯ ನಾಗರೀಕರಿಗೆ ರಿಯಾಯಿತಿ ಪಾಸುಗಳ ನೀಡಿಕೆ ಮುಂತಾದ ಸಹಾಯಧನದ ರೂಪದಲ್ಲಿದ್ದು, ಇವುಗಳನ್ನು ಒಂದು ಕಡೆ ವೆಚ್ಚವೆಂದು, ಮತ್ತೊಂದು ಕಡೆ ಆದಾಯವೆಂದು ಆಯಾ ಸ್ವೀಕೃತಿ ಶೀರ್ಷಿಕೆಗಳಡಿ (ತೆರಿಗೆ/ತೆರಿಗೆಯೇತರ) ತೋರಿಸಲಾಗುತ್ತದೆ. 2018–19ನೇ ವರ್ಷದಲ್ಲಿ ಈ ರೀತಿಯ ವ್ಯವಹಾರದ ಮೊತ್ತವು ₹2,075 ಕೋಟಿಗಳಷ್ಟಿದೆ. ಈ ವ್ಯವಹಾರಗಳು ವಾಸ್ತವವಾಗಿ ನಗದು ಹರಿವು ಇಲ್ಲದೆ ತೆರಿಗೆ/ತೆರಿಗೆಯೇತರ ಆದಾಯವನ್ನು ತೋರಿಸಿರುವ ಪರಿಣಾಮವನ್ನು ಉಂಟು ಮಾಡಿದೆ. ಪುಸ್ತಕ ಹೊಂದಾಣಿಕೆಯ ಮೂಲಕ ಲೆಕ್ಕಮಾಡಲಾದ ಮೊತ್ತವು ₹1,955 ಕೋಟಿ (ತೆರಿಗೆ ಆದಾಯ) ಮತ್ತು ₹120 ಕೋಟಿ (ತೆರಿಗೆಯೇತರ ಆದಾಯ) ವಾಗಿದ್ದು ಒಟ್ಟು ರಾಜಸ್ವ ಸ್ವೀಕೃತಿಗಳ ಶೇಕಡ ಒಂದರಷ್ಟಿತ್ತು.

ಕೋಷ್ಟಕ 1.28ರಲ್ಲಿ ಸರ್ಕಾರದ ಸಂಚಿತ ನಿಧಿಯಲ್ಲಿ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ವಿವರಗಳನ್ನು ತಲಾ ಜವಾಬ್ದಾರಿಗೆ ಹೋಲಿಸಿದಂತೆ ನೀಡಲಾಗಿದೆ.

**ಕೋಷ್ಟಕ 1.28: ರಾಜ್ಯದ ಋಣ ಚಿತ್ರಣ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಸಾಲದ ಮೂಲಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| 1 | ಮುಕ್ತ ಮಾರುಕಟ್ಟೆ ಸಾಲಗಳು | 69,419 | 84,334 | 1,08,359 | 1,25,708 | 1,57,890 |
| 2 | ಸಮಾಲೋಚಿತ ಸಾಲಗಳು | 3,318 | 3,482 | 3,973 | 4,289 | 4,430 |
| 3 | ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿ ಸಾಲಗಳು | 20,167 | 21,729 | 20,157 | 18,584 | 16,989 |
| 4 | ಭಾರತ ಸರ್ಕಾರದ ಸಾಲಗಳು | 12,681 | 13,002 | 13,794 | 14,555 | 14,657 |
| 5 | ಸಾರ್ವಜನಿಕ ಲೆಕ್ಕ ಸಾಲಗಳು | 52,968 | 53,076 | 64,788 | 69,922 | 76,410 |
| 6 | ಆಯವ್ಯಯದ ಹೊರಗಿನ ಸಾಲಗಳು | 5,726 | 7,699 | 10,248 | 13,173 | 14,862 |
| 7 | ಒಟ್ಟು ವಿತ್ತೀಯ ಜವಾಬ್ದಾರಿಗಳು | 1,64,279 | 1,83,322 | 2,21,319 | 2,46,231 | 2,85,238 |
| 8 | ಜನಸಂಖ್ಯೆ (ಕೋಟಿಗಳಲ್ಲಿ) | 6.35 | 6.42 | 6.49 | 6.56 | 6.63 |
| 9 | ತಲಾ ಸಾಲದ ಅನುಪಾತ (ರೂಪಾಯಿಗಳಲ್ಲಿ) | 25,871 | 28,555 | 34,102 | 37,535 | 43,022 |

*ಆಕರ: ಹಣಕಾಸು ಲೆಕ್ಕಗಳು*

2014–15ರಿಂದ 2018–19ರ ಅವಧಿಯಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಶೇಕಡ 127ರಷ್ಟು ಮತ್ತು ಭಾರತ ಸರ್ಕಾರದ ಸಾಲಗಳು ಶೇಕಡ 16ರಷ್ಟು ಹೆಚ್ಚಾಗಿದ್ದವು. 2014–15ರಲ್ಲಿ ₹52,968 ಕೋಟಿಗಳಿದ್ದ ಸಾರ್ವಜನಿಕ ಲೆಕ್ಕದ ಸಾಲಗಳು 2018–19ರಲ್ಲಿ ₹76,410 ಕೋಟಿಗಳಾಗಿ ಶೇಕಡ 44ರಷ್ಟು ಹೆಚ್ಚಾಗಿತ್ತು. ಆಯವ್ಯಯದ ಹೊರಗಿನ ಸಾಲಗಳು 2014–15ರಲ್ಲಿ ₹5,726 ಕೋಟಿಗಳಿದ್ದು 2018–19ರಲ್ಲಿ ₹14,862 ಕೋಟಿಗಳಾಗಿ ಶೇಕಡ 160ರಷ್ಟು ಹೆಚ್ಚಾಗಿದ್ದಿತು. 2014–15ರಲ್ಲಿ ₹25,871 ರಷ್ಟಿದ್ದ ತಲಾ ಸಾಲದ ಅನುಪಾತವು 2018–19ರಲ್ಲಿ ₹43,022ಕ್ಕೆ ಗಣನೀಯವಾಗಿ ಏರಿದ್ದು ಶೇಕಡ 66ರಷ್ಟು ಹೆಚ್ಚಾಗಿದೆ.

### 1.11.2 ಋಣ ಸಹಿಷ್ಣುತೆ

ರಾಜ್ಯ ಸರ್ಕಾರದ ಋಣ ಮೊತ್ತಗಳ ಪ್ರಮಾಣಗಳಲ್ಲದೆ ರಾಜ್ಯದ ಋಣ ಸಹಿಷ್ಣುತೆಯನ್ನು ನಿರ್ಧರಿಸುವ ವಿವಿಧ ಸೂಚಕಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಋಣ ಸಹಿಷ್ಣುತೆಯು ಕಾಲಕಾಲಕ್ಕೆ ಋಣ– ರಾಒಆಂಉದ ಸ್ಥಿರ ಅನುಪಾತವನ್ನು ಕಾಯ್ದುಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ ಮತ್ತು ಅದರ ಋಣ ಸೇವೆಯ ಕಾಳಜಿಯನ್ನು ಸಾಕಾರಗೊಳಿಸುತ್ತದೆ. ಈ ವಿಭಾಗವು ರಾಒಆಂಉದ ಶತಾಂಶವಾಗಿ ಋಣ, ಬಾಕಿ ಇರುವ ಋಣದ ವೃದ್ಧಿಯ ದರ, ಬಡ್ಡಿ ಪಾವತಿಗಳು/ರಾಜಸ್ವ ಸ್ವೀಕೃತಿಗಳ ಅನುಪಾತ, ಮತ್ತು ನಿವ್ವಳ ಋಣಗಳ ಲಭ್ಯತೆಯ ಮೂಲಕ ರಾಜ್ಯದ ಋಣ ಸಹಿಷ್ಣುತೆಯನ್ನು ನಿರ್ಣಯಿಸುತ್ತದೆ. ಕೋಷ್ಟಕ **1**.29ರಲ್ಲಿ 2014–15 ರಿಂದ 2018–19ರ ಅವಧಿಯಲ್ಲಿನ ರಾಜ್ಯದ ಋಣ ಸಹಿಷ್ಣುತೆಯನ್ನು ಈ ಸೂಚಕಗಳನ್ವಯ ವಿಶ್ಲೇಷಿಸಲಾಗಿದೆ.

**ಕೋಷ್ಟಕ 1.29: ಋಣ ಸಹಿಷ್ಣುತೆ ಸೂಚಕಗಳು ಮತ್ತು ಪ್ರವೃತ್ತಿಗಳು**

*(ಶೇಕಡಾವಾರಿನಲ್ಲಿ)*

| ಋಣ ಸಹಿಷ್ಣುತೆಯ ಸೂಚಕಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಋಣ*/ರಾಒಆಂಉ | 11.57 | 12.10 | 12.92 | 12.44 | 13.77 |
| ಬಾಕಿ ಇರುವ ಋಣದ ವೃದ್ಧಿಯ ದರ* | 19.28 | 16.06 | 19.37 | 11.52 | 18.90 |
| ರಾಒಆಂಉ ವೃದ್ಧಿಯ ದರ | 11.91 | 14.36 | 10.59 | 14.67 | 6.24 |
| ಬಾಕಿ ಇರುವ ಋಣದ ಸರಾಸರಿ ಬಡ್ಡಿ ದರ (ಬಡ್ಡಿ ಪಾವತಿಗಳು/ ಸಾರ್ವಜನಿಕ ಋಣದ ಪ್ರಾರಂಭಿಕ ಶಿಲ್ಕು + ಸಾರ್ವಜನಿಕ ಋಣದ ಅಂತಿಮ ಶಿಲ್ಕು/2) | 10.10 | 9.94 | 9.56 | 9.68 | 9.30 |
| ಬಡ್ಡಿ ಪಾವತಿಗಳು/ರಾಜಸ್ವ ಸ್ವೀಕೃತಿಗಳು | 9.41 | 9.55 | 9.65 | 10.18 | 10.07 |
| ಸಾಲದ ಮೂಲಕ ಪಡೆದ ಮೊತ್ತಗಳ ನಿವ್ವಳ ಲಭ್ಯತೆ (ಕೋಟಿ ರೂಪಾಯಿಗಳಲ್ಲಿ) | 9,324 | 8,060 | 13,609 | 5,005 | 17,766 |
| ಋಣ ಮರುಪಾವತಿ/ಋಣ ಸ್ವೀಕೃತಿಗಳು** | 57.37 | 61.75 | 56.32 | 80.08 | 57.61 |
| ಆಂತರಿಕ ಋಣದ ಅವಧಿ ಮುಗಿದ ಚಿತ್ರಣ (ವರ್ಷಗಳಲ್ಲಿ) (ಕೋಟಿ ರೂಪಾಯಿಗಳಲ್ಲಿ) | | | | | |
| 0–1 | | | | | 0.64(–) |
| 1–3 | | | | | 18,099.41(10) |
| 3–5 | | | | | 22,540.29(13) |
| 5–7 | | | | | 37,902.47(21) |
| 7 ಮತ್ತು ಅಧಿಕ | | | | | 1,00,766.50(56) |

*ಆಕರ: ಹಣಕಾಸು ಲೆಕ್ಕಗಳು.*

* ಸಾರ್ವಜನಿಕ ಲೆಕ್ಕಗಳಡಿಯ ಜವಾಬ್ದಾರಿಗಳು ಮತ್ತು ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಿಲ್ಲ.

** ಬಡ್ಡಿ ಪಾವತಿಯ ಸೇರ್ಪಡೆಯಿಂದ ಅಂಕಿಗಳು ಹಿಂದಿನ ವರ್ಷಗಳ ವರದಿಗಿಂತ ಭಿನ್ನವಾಗಿದೆ.

- 2018–19ರಲ್ಲಿ ಬಾಕಿ ಇರುವ ಋಣದ ವೃದ್ಧಿಯ ದರವು ಶೇಕಡ 18.90ರಷ್ಟಿದ್ದು, ಇದು ಹಿಂದಿನ ವರ್ಷಕ್ಕಿಂತಲೂ (ಶೇಕಡ 11.52) ಶೇಕಡ 7.38ರಷ್ಟು ಹೆಚ್ಚಾಗಿದೆ;
- ಋಣ ಮರುಪಾವತಿ/ಋಣ ಸ್ವೀಕೃತಿಗಳ ಅನುಪಾತದಲ್ಲಿ ಇಳಿಕೆಯಾಗಿದ್ದರೂ ಒಟ್ಟು ಋಣ ಸ್ವೀಕೃತಿಗಳಲ್ಲಿ ₹16,792 ಕೋಟಿಗಳಷ್ಟು ಏರಿಕೆಯಾಗಿದ್ದು, ಇದು 2018–19ರಲ್ಲಿ ಮಾರುಕಟ್ಟೆ ಸಾಲಗಳಲ್ಲಿ ಮತ್ತು ಋಣ ಮರುಪಾವತಿಯಲ್ಲಿ ₹2,814 ಕೋಟಿಗಳಷ್ಟು ಹೆಚ್ಚಾದ್ದರಿಂದ ಉಂಟಾಗಿದೆ; ಮತ್ತು
- ರಾಜ್ಯಕ್ಕೆ ನಿವ್ವಳ ಋಣ ಲಭ್ಯತೆಯಲ್ಲಿನ ಏರಿಕೆಗೆ, 2017–18ರಲ್ಲಿ ₹23,179 ಕೋಟಿಯಷ್ಟಿದ್ದ ಆಂತರಿಕ ಋಣ ಸ್ವೀಕೃತಿಯು 2018–19ರಲ್ಲಿ ₹40,470 ಕೋಟಿಗೆ ಏರಿದ್ದು (**ಅನುಬಂಧ 1.4**) ಮುಖ್ಯ

ಕಾರಣವಾಗಿದ್ದು, ಭಾರತ ಸರ್ಕಾರದ ಸಾಲ ಮತ್ತು ಮುಂಗಡಗಳಲ್ಲಿ ₹499 ಕೋಟಿಯಷ್ಟು ಇಳಿಕೆಯಾಗಿ ಉತ್ತಾರವಾಗಿದೆ.

ಋಣ ಸಹಿಷ್ಣುತೆಯನ್ನು ಪರೀಕ್ಷಿಸಬೇಕಾದರೆ ಋಣದ ವೃದ್ಧಿಯನ್ನು ಅಧ್ಯಯನ ಮಾಡಬೇಕಾದುದು ಮುಖ್ಯವಾಗುತ್ತದೆ ಮತ್ತು ಋಣ ಪರಿಸ್ಥಿತಿಯನ್ನು ಹದಗೆಡಿಸುವ ಅಥವಾ ಉತ್ತಮಗೊಳಿಸುವ ವಿತ್ತೀಯ ಶಿಲ್ಕಿನ (ವಿಶೇಷವಾಗಿ ಪ್ರಾಥಮಿಕ ಶಿಲ್ಕು) ಸಂಗ್ರಹವನ್ನು ನಿರ್ಧರಿಸಬೇಕಾಗುತ್ತದೆ. ಡೋಮರ್ಸ್ ಮಾದರಿಯನ್ನು ಅನುಸರಿಸಿ ಕರ್ನಾಟಕದ ಸಾರ್ವಜನಿಕ ಋಣ ಸಹಿಷ್ಣುತೆಯನ್ನು ವಿಶ್ಲೇಷಣೆ ಮಾಡಲಾಗಿದೆ. ಇ.ಡಿ.ಡೋಮರ್ (1944) ಸರ್ಕಾರದ ನಿರಂತರ ಸಾಲಗಳಿಂದ ಸಾರ್ವಜನಿಕ ಋಣವು ಹೆಚ್ಚಾಗುವುದು ಮಾತ್ರವಲ್ಲದೆ, ಅವುಗಳ ತೀರಿಕೆಗೆ ಹೆಚ್ಚಿನ ತೆರಿಗೆಗಳನ್ನು ವಿಧಿಸಬೇಕಾಗುವುದು ಮತ್ತು ಇದು ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡುತ್ತದೆ ಎಂದು ವಿವರಿಸಿದ್ದಾನೆ. ಆದ್ದರಿಂದ ಹೆಚ್ಚಾಗುವ ತೆರಿಗೆಯ ಹೊರೆಯನ್ನು ತಪ್ಪಿಸಲು ಋಣಭಾರದ ಮಟ್ಟವನ್ನು ಸೀಮಿತಗೊಳಿಸಬೇಕೆಂದು ಅವನು ಹೇಳುತ್ತಾನೆ. ಹೀಗೆ ಸಾರ್ವಜನಿಕ ಋಣ ಸಹಿಷ್ಣುತೆಗೆ ವಾಸ್ತವಿಕ ಬಡ್ಡಿಯ ದರಗಳಿಗಿಂತಲೂ ಅರ್ಥವ್ಯವಸ್ಥೆಯ ವಾಸ್ತವ ವೃದ್ಧಿಯು ಅಧಿಕವಾಗಿರಬೇಕೆಂದು ಡೋಮರ್ ಮಾದರಿಯು ನಿರ್ಣಯಿಸುತ್ತದೆ. ಸಾರ್ವಜನಿಕ ಋಣ ಭಾರತ್ವವನ್ನು ಖಚಿತಪಡಿಸಿಕೊಳ್ಳಲು ಇರುವ ಷರತ್ತುಗಳನ್ನು ಕೋಷ್ಟಕ 1.30ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 1.30: ಬಡ್ಡಿಯ ದರ, ಒಟ್ಟು ಆಂತರಿಕ ಉತ್ಪನ್ನ ಮತ್ತು ಪ್ರಾಥಮಿಕ ಆಯವ್ಯಯ ಶಿಲ್ಕುಗಳನ್ನು ಆದರಿಸಿದ ಸಾರ್ವಜನಿಕ ಋಣದ ಚಲನಶೀಲತೆ**

| g–r/s | s<0 (ಪ್ರಾಥಮಿಕ ಕೊರತೆ) | s>0 (ಪ್ರಾಥಮಿಕ ಹೆಚ್ಚಳ) |
|---|---|---|
| g–r>o (ಬಲಿಷ್ಠ ಆರ್ಥಿಕ ವೃದ್ಧಿ) | 0 ಗಿಂತಲೂ ಅಧಿಕವಾಗಿದ್ದಲ್ಲಿ ಸಾರ್ವಜನಿಕ ಋಣವು ಸ್ಥಿರತೆಯ ಮಟ್ಟದಲ್ಲಿರುತ್ತದೆ | ಸಾರ್ವಜನಿಕ ಋಣವು ಸ್ಥಿರತೆಯ ಮಟ್ಟವು 0 ಗಿಂತ ಕಡಿಮೆಯಿದ್ದಲ್ಲಿ ಸಾರ್ವಜನಿಕ ಉಳಿತಾಯಗಳಿಗೆ ದಾರಿ ಮಾಡಿಕೊಡುತ್ತದೆ. |
| g–r<o (ನಿಧಾನ ಗತಿಯ ಆರ್ಥಿಕ ಬೆಳವಣಿಗೆ) | ಸ್ಥಿರತೆಯ ಮಟ್ಟಕ್ಕೆ ಬಾರದೆ ಸಾರ್ವಜನಿಕ ಋಣವು ಅನಿಶ್ಚಿತವಾಗಿ ಹೆಚ್ಚಾಗುತ್ತದೆ. | ಅಸ್ಪಷ್ಟ ಸ್ಥಿತಿಯಲ್ಲಿರುತ್ತದೆ. |

g:ವಾಸ್ತವ ಆರ್ಥಿಕ ಬೆಳವಣಿಗೆಯ ದರ, r:ವಾಸ್ತವ ಬಡ್ಡಿದರ, s:ಪ್ರಾಥಮಿಕ ಕೊರತೆ/ಹೆಚ್ಚಳ

ಈ ವಿಶ್ಲೇಷಣೆಯನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸಿದಾಗ ಸಾರ್ವಜನಿಕ ಋಣವು ಸ್ಥಿರತೆಯ ಮಟ್ಟವನ್ನು ತಲುಪಿರುವುದನ್ನು ಸೂಚಿಸುತ್ತದೆ. **ಕೋಷ್ಟಕ 1.31**ರಲ್ಲಿ ಇದನ್ನು ತೋರಿಸಲಾಗಿದೆ.

**ಕೋಷ್ಟಕ 1.31: ಡೋಮರ್‌ನ ಮಾದರಿಯನ್ನು ಬಳಸಿ ಋಣ ಸಹಿಷ್ಣುತೆಯ ವಿಶ್ಲೇಷಣೆ**

| ವರ್ಷ | ವಾಸ್ತವ ಬೆಳವಣಿಗೆಯ ದರ (g) | ವಾಸ್ತವ ಬಡ್ಡಿಯ ದರ (r) | g–r | ಪ್ರಾಥಮಿಕ ಕೊರತೆ/ ಹೆಚ್ಚಳ (s) (ಕೋಟಿ ರೂಪಾಯಿಗಳಲ್ಲಿ) | ಅಭಿಪ್ರಾಯ |
|---|---|---|---|---|---|
| 2015–16 | 11.09 | 3.26 | 7.83 | (–) 7,826 | g–r>0 ಮತ್ತು s<0 ಆಗಿರುವುದರಿಂದ ಸಾರ್ವಜನಿಕ ಋಣವು ಸ್ಥಿರತೆಯ ಮಟ್ಟದಲ್ಲಿದೆ. |
| 2016–17 | 7.61 | 4.69 | 2.92 | (–) 15,814 | |
| 2017–18 | 10.41 | 6.63 | 3.78 | (–) 16,128 | |
| 2018–19 | 9.59 | 6.00 | 3.59 | (–) 21,828 | |

ವಾಸ್ತವಿಕ ಬೆಳವಣಿಗೆಯ ದರವನ್ನು ವಾಸ್ತವಿಕ ಒಟ್ಟು ಆಂತರಿಕ ಉತ್ಪನ್ನದೊಡನೆ ಲೆಕ್ಕ ಹಾಕಲಾಗಿದೆ (ಶತಾಂಶ).
ವಾಸ್ತವ ಬಡ್ಡಿ ದರವನ್ನು ಬಡ್ಡಿದರದಲ್ಲಿ ಹಣದುಬ್ಬರವನ್ನು ಕಳೆದು ಲೆಕ್ಕ ಹಾಕಿದೆ (ಶತಾಂಶ).

ಕಾಲಾನುಕ್ರಮದಲ್ಲಿ ಪ್ರಾಥಮಿಕ ಕೊರತೆಯು ಹೆಚ್ಚಾಗಿದ್ದರೂ, g ಯು r ಗಿಂತಲೂ ಅಧಿಕವಾಗಿರುವುದರಿಂದ ಸಾರ್ವಜನಿಕ ಋಣವು ಸಹಿಷ್ಣುವಾಗಿದೆ.

ಮೇಲಿನ **ಕೋಷ್ಟಕ 1.31**ರಿಂದ ಕರ್ನಾಟಕವು ಇಲ್ಲಿಯವರೆಗೂ ಅದರ ಋಣದ ಮಟ್ಟವನ್ನು ಸ್ಥಿರವಾಗಿಸಿಕೊಂಡಿದೆ. ಗಮನಿಸಬೇಕಾದ ವಿಷಯವೆಂದರೆ, ವಾಸ್ತವ ಬೆಳವಣಿಗೆ ದರದಲ್ಲಿನ ಇಳಿಕೆಯಾಗಿದ್ದು, ಅದು 2015-16ರಲ್ಲಿ 11.09ರಷ್ಟಿದ್ದು, 2018-19ರಲ್ಲಿ 9.59ಗೆ ಇಳಿದಿದೆ. g-rರ ಮೇಲಿನ ಇದರ ಪ್ರಭಾವದಿಂದಾಗಿ 2015-16ರಲ್ಲಿ 7.83ರಷ್ಟಿದ್ದ ಅದು 2018-19ರಲ್ಲಿ 3.59ಗೆ ಇಳಿದಿದೆ. ಅಭಿವೃದ್ಧಿಯ ವಾಸ್ತವದರವನ್ನು ಸಪ್ರಮಾಣದಲ್ಲಿ ಸಾಧಿಸಧಿದ್ದಲ್ಲಿ, ಡೋಮರ್ ತತ್ವದಂತೆ ಪ್ರಾಥಮಿಕ ಕೊರತೆಯ ಹೆಚ್ಚಳ ಮತ್ತು g-r ಅನುಪಾತದಲ್ಲಿನ ಇಳಿಕೆಯಿಂದಾಗಿ ರಾಜ್ಯವು 'ಅಸ್ಪಷ್ಟ ಪರಿಸ್ಥಿತಿ'ಯನ್ನು ತಲುಪುತ್ತದೆ.

### 1.11.3 ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ

ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ(ಐಪಿ/ಆರ್ಆರ್) ಅನುಪಾತವು ರಾಜ್ಯದ ಋಣ ಸಹಿಷ್ಣುತೆಯನ್ನು ಸೂಚಿಸುತ್ತದೆ. 2018-19ರಲ್ಲಿ ಇದರ ಅನುಪಾತವು ಶೇಕಡ 10.07ರಷ್ಟಿದ್ದು ಹನ್ನೆರಡನೆಯ ಹಣಕಾಸು ಆಯೋಗವು ನಿಗದಿಸಿದ ಮಿತಿಯಾದ ಶೇಕಡ 9.2ಕ್ಕಿಂತ ಶೇಕಡ 0.95ರಷ್ಟು ಅಧಿಕವಾಗಿತ್ತು. 2014-15ರಿಂದ 2018-19ರಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿನ ಪ್ಲವನತೆಯ ಕಾರಣ, ಅನುಪಾತವು ಶೇಕಡ 9.41 ಮತ್ತು ಶೇಕಡ 10.18ರ ಮಧ್ಯೆ ಇದ್ದಿತು. ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮಕ್ಕೆ ಫೆಬ್ರವರಿ 2014ರಲ್ಲಿ ಮಾಡಿದ ತಿದ್ದುಪಡಿಯನುಸಾರ, ಸಾರ್ವಜನಿಕ ವಿಭಾಗದ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶಿತ ಸಾಧನಗಳು ಮತ್ತು ಇತರ ಸಮಾನ ಸಾಧನಗಳು ಮಾಡುವ ಸಾಲಗಳ ಅಸಲು ಮತ್ತು ಬಡ್ಡಿಗಳ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯನ್ನು ರಾಜ್ಯದ ಆಯವ್ಯಯದ ಮೂಲಕವೇ ಭರಿಸುವಂತೆ ಹಿಗ್ಗಿಸಲಾಯಿತು. ಆದ್ದರಿಂದ ರಾಜ್ಯದ ಒಟ್ಟು ಜವಾಬ್ದಾರಿಗಳನ್ನು ಲೆಕ್ಕ ಹಾಕಲು ಆಯವ್ಯಯದ ಹೊರಗಿನ ಸಾಲಗಳು ರಾಜ್ಯದ ಸ್ವಂತ ಜವಾಬ್ದಾರಿಗಳ ಭಾಗವಾಗಿರುತ್ತದೆ.

ರಾಜ್ಯ ಸರ್ಕಾರವು ತನ್ನ ಮಧ್ಯಮಾವಧಿ ವಿತ್ತೀಯ ಯೋಜನೆ 2019-23ರಲ್ಲಿ ಬಡ್ಡಿ ಪಾವತಿ/ರಾಜಸ್ವ ಸ್ವೀಕೃತಿ ಅನುಪಾತಕ್ಕೆ ಲೆಕ್ಕಶೀರ್ಷಿಕೆ 2049ರಡಿ ಪಾವತಿಸಲಾದ ಬಡ್ಡಿಯನ್ನು ಮಾತ್ರ ಪರಿಗಣಿಸಿತ್ತು. ಆದರೆ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯು ಇತರ ಲೆಕ್ಕ ಶೀರ್ಷಿಕೆಗಳ ಮೂಲಕ ಆಗಿದ್ದು, ಅದು ಬಡ್ಡಿ ಪಾವತಿ/ರಾಜಸ್ವ ಸ್ವೀಕೃತಿ ಅನುಪಾತದ ಭಾಗವಾಗಿರಲಿಲ್ಲ. ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಸೇರಿಸದ ಕಾರಣ 2014-15ರಿಂದ 2018-19ರ ಅವಧಿಯಲ್ಲಿ ಈ ಅನುಪಾತವು ಶೇಕಡ 9.03 ಮತ್ತು ಶೇಕಡ 9.47ರ ನಡುವೆ ಇದ್ದಿತು. ಅನುಪಾತವು ನಿಗದಿಪಡಿಸಿರುವ ಮಿತಿಯೊಳಗಿದ್ದರೂ ರಾಜ್ಯ ಸರ್ಕಾರವು ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಈ ಅನುಪಾತವನ್ನು ಲೆಕ್ಕ ಮಾಡುವಾಗ ಆಯವ್ಯಯದ ಹೊರಗಿನ ಮೇಲಿನ ಬಡ್ಡಿಯನ್ನು ಸೇರಿಸುವುದನ್ನು ಪರಿಗಣಿಸಿಬೇಕು.

ಕಳೆದ ವರ್ಷದಿಂದ ರಾಜ್ಯದ ಹಣಕಾಸು ವ್ಯವಹಾರಗಳ ಮೇಲಿನ ವರದಿಯಲ್ಲಿ ಲೆಕ್ಕಪರಿಶೋಧನೆಯ ಆಕ್ಷೇಪಣೆಯ ನಂತರ ಆರ್ಥಿಕ ಇಲಾಖೆಯು (ಮಾರ್ಚ್ 2020) ರಾಜ್ಯ ಸರ್ಕಾರದ ಬಡ್ಡಿಪಾವತಿ/ ರಾಜಸ್ವ ಸ್ವೀಕೃತಿಯ ಅನುಪಾತವನ್ನು ಲೆಕ್ಕ ಮಾಡುವಾಗ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಪರಿಗಣಿಸುವುದಾಗಿ ಉತ್ತರಿಸಿದೆ.

### 1.11.4 ಋಣ ಸ್ಥಿರತೆ

ಸರ್ಕಾರವು ಭವಿಷ್ಯದಲ್ಲಿ ಎದುರಾಗುವಂತಹ ಜವಾಬ್ದಾರಿಗಳಿಗೆ ನೆರವು ನೀಡಲು ಸಾಧ್ಯವಾದರೆ ಮತ್ತು ಋಣ-ರಾಒಆಂಉದ ಅನುಪಾತವು ನಿರ್ವಹಿಸಲಾಗದ ಪ್ರಮಾಣಕ್ಕೆ ವೃದ್ಧಿಸದಿದ್ದರೆ ವಿತ್ತೀಯ ಜವಾಬ್ದಾರಿಗಳು ಸಹಿಷ್ಣುವೆಂದು ಪರಿಗಣಿಸಬಹುದಾಗಿದೆ. ಸ್ಥಿರತೆಗೆ ಒಂದು ಅವಶ್ಯಕವಾದ

ನಿಬಂಧನೆಯೆಂದರೆ ಅರ್ಥವ್ಯವಸ್ಥೆಯ ವೃದ್ಧಿದರವು ಸಾಲಗಳ ಹೊಣೆಯನ್ನು ಮೀರಿದ್ದರೆ, ಪ್ರಾಥಮಿಕ ಶಿಲ್ಕುಗಳು ಧನಾತ್ಮಕ/ಸೊನ್ನೆ/ಅತಿಯಾಗದ ಋಣಾತ್ಮಕವಾಗಿದ್ದ ಪಕ್ಷದಲ್ಲಿ ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಸ್ಥಿರವಾಗಿರುತ್ತದೆ. ಪ್ರಾಥಮಿಕ ರಾಜಸ್ವ ಶಿಲ್ಕು ರಾಜಸ್ವ ಸ್ವೀಕೃತಿಗಳು ಮತ್ತು ಪ್ರಾಥಮಿಕ ರಾಜಸ್ವ ವೆಚ್ಚ ಇವುಗಳ ವ್ಯತ್ಯಾಸವಾಗಿದ್ದು ಪ್ರಸಕ್ತ ರಾಜಸ್ವ ವೆಚ್ಚವನ್ನು ಭರಿಸಿದ ನಂತರ ಉಳಿದಿರುವ ರಾಜಸ್ವ ಸ್ವೀಕೃತಿಯ ಶಿಲ್ಕು, ಬಡ್ಡಿ ವೆಚ್ಚವನ್ನು ಭರಿಸಲು ಸಾಕಷ್ಟಿದೆಯೆ ಎಂಬುದನ್ನು ಸೂಚಿಸುತ್ತವೆ. 2014-15ರಿಂದ 2018-19ರ ಅವಧಿಯಲ್ಲಿ ಪ್ರಾಥಮಿಕ ರಾಜಸ್ವ ಶಿಲ್ಕು ಧನಾತ್ಮಕವಾಗಿದ್ದು, ವೃದ್ಧಿತ ಬಡ್ಡಿ ವೆಚ್ಚವನ್ನು ಭರಿಸಲು ಸಾಕಷ್ಟಿತ್ತು (**ಅನುಬಂಧ-1.4**).

### 1.11.5 ವೃದ್ಧಿತ ಋಣೇತರ ಸ್ವೀಕೃತಿಗಳ ಪರ್ಯಾಪ್ತತೆ

ಋಣ ಸಹಿಷ್ಣುತೆಯ ಮತ್ತೊಂದು ಸೂಚಕವು ಬಡ್ಡಿ ಜವಾಬ್ದಾರಿಯ ಹೆಚ್ಚಳ ಮತ್ತು ಪ್ರಾಥಮಿಕ ವೆಚ್ಚದ ಹೆಚ್ಚಳಗಳನ್ನು ಭರಿಸಲು ರಾಜ್ಯದ ಋಣೇತರ ಸ್ವೀಕೃತಿಗಳ ಹೆಚ್ಚಳವು ಸಾಕಷ್ಟಿರುವುದು. ಬಡ್ಡಿಯ ಹೊರೆಯ ಹೆಚ್ಚಳ ಮತ್ತು ಪ್ರಾಥಮಿಕ ವೆಚ್ಚದ ಹೆಚ್ಚಳವನ್ನು ಋಣೇತರ ಸ್ವೀಕೃತಿಗಳ[15] ಹೆಚ್ಚಳವು ಭರಿಸುವಂತಾದರೆ ಋಣ ಸಹಿಷ್ಣುತೆಗೆ ಅನುಕೂಲವಾಗುತ್ತದೆ. ಋಣಾತ್ಮಕ ಸಂಪನ್ಮೂಲ ಅಂತರವು ಋಣದ ಅಸಹಿಷ್ಣುತೆಯನ್ನು ಸೂಚಿಸಿದರೆ ಧನಾತ್ಮಕ ಸಂಪನ್ಮೂಲಾಂತರವು ಋಣ ಸಹಿಷ್ಣುತೆಯನ್ನು ಸೂಚಿಸುತ್ತದೆ. ಕೋಷ್ಟಕ **1.32**ರಲ್ಲಿ ಕಳೆದ ಐದು ವರ್ಷಗಳ ವಿವರಗಳನ್ನು ಸೂಚಿಸಿದೆ.

**ಕೋಷ್ಟಕ 1.32: ಋಣೇತರ ಸ್ವೀಕೃತಿಗಳ ಹೆಚ್ಚಳದ ಪರ್ಯಾಪ್ತತೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|
| 1 | ಸಾಲವಲ್ಲದ ಹೆಚ್ಚಳ ಸ್ವೀಕೃತಿಗಳು | 14,497 | 14,993 | 14,112 | 13,800 | 17,863 |
| 2 | ಬಡ್ಡಿ ಪಾವತಿಗಳ ಹೆಚ್ಚಳ | 1,777 | 1,539 | 1,507 | 2,123 | 1,641 |
| 3 | ಪ್ರಾಥಮಿಕ ವೆಚ್ಚದ ಹೆಚ್ಚಳ | 15,204 | 13,047 | 22,101 | 14,114 | 23,563 |
| 4 | ಸಂಪನ್ಮೂಲ ಅಂತರ | (-) 2,484 | 407 | (-) 9,496 | (-) 2,437 | (-) 7,341 |

2014-15ರಲ್ಲಿ ಋಣಾತ್ಮಕವಾಗಿದ್ದ ಸಂಪನ್ಮೂಲಾಂತರವು 2015-16ರಲ್ಲಿ ಮತ್ತೆ ಧನಾತ್ಮಕವಾಗಿ ಮತ್ತೆ 2016-17ರಿಂದ 2018-19ರವರೆಗೆ ಋಣಾತ್ಮಕವಾಯಿತು. ಇದಕ್ಕೆ ರಾಜಸ್ವ ಸ್ವೀಕೃತಿಗಳ ವೃದ್ಧಿಯು, ಒಟ್ಟು ವೆಚ್ಚಗಳ ವೃದ್ಧಿಗಿಂತ ಕಡಿಮೆ ಇದ್ದುದು ಮುಖ್ಯ ಕಾರಣವಾಗಿತ್ತು. ಅಂದರೆ, ರಾಜ್ಯವು ತನ್ನ ಸ್ವಂತ ಸಂಪನ್ಮೂಲಗಳಿಂದ ಪ್ರಸಕ್ತ ಸಾಲಿನ ರಾಜಸ್ವ ಮತ್ತು ಬಂಡವಾಳ ವೆಚ್ಚವನ್ನು ಭರಿಸಲು ಸಾಲಗಳ ಮೂಲಕ ಪಡೆದ ಮೊತ್ತಗಳ ಮೇಲೆ ಅವಲಂಬಿತವಾಗಿತ್ತು.

### 1.11.6 ಸಾಲಗಳ ಮೂಲಕ ಪಡೆದ ಮೊತ್ತಗಳ ನಿವ್ವಳ ಲಭ್ಯತೆ

ಋಣ ಸಹಿಷ್ಣುತೆಯು, ಋಣ ವಿಮೋಚನೆ (ಅಸಲು ಮತ್ತು ಬಡ್ಡಿ ಪಾವತಿಗಳು) ಮತ್ತು ಒಟ್ಟು ಋಣ ಸ್ವೀಕೃತಿಗಳ ಅನುಪಾತವನ್ನು ಮತ್ತು ಸಾಲವಾಗಿ ಪಡೆದ ಲಭ್ಯ ಮೊತ್ತಗಳ ಅನ್ವಯವನ್ನು ಅವಲಂಬಿಸಿರುತ್ತವೆ. ಋಣ ವಿಮೋಚನೆ ಮತ್ತು ಋಣ ಸ್ವೀಕೃತಿಗಳ ಅನುಪಾತವು ಋಣ ಸ್ವೀಕೃತಿಗಳು ಎಷ್ಟರ ಮಟ್ಟಿಗೆ ಋಣ ವಿಮೋಚನೆಗೆ ಬಳಸಲ್ಪಟ್ಟಿದೆ ಮತ್ತು ಬಂಡವಾಳ ವೆಚ್ಚಕ್ಕೆ ಸಾಲವಾಗಿ ಪಡೆದ ಮೊತ್ತಗಳ ನಿವ್ವಳ ಲಭ್ಯತೆ ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ. ಋಣ ಸ್ವೀಕೃತಿಗಳಿಗೆ ಋಣ ವಿಮೋಚನೆಯ ಅನುಪಾತವು 2014-

[15] ಹಿಂದಿನ ವರ್ಷಕ್ಕೆ ಹೋಲಿಸಿದರೆ ಋಣೇತರ ಸ್ವೀಕೃತಿಗಳ ಹೆಚ್ಚಳವು ರಾಜಸ್ವ ಸ್ವೀಕೃತಿಗಳ ಮತ್ತು ಋಣೇತರ ಬಂಡವಾಳ ಸ್ವೀಕೃತಿಗಳಲ್ಲಿನ ಹೆಚ್ಚಳ ಅಥವಾ ಇಳಿಕೆ.

15ರಿಂದ 2018–19ರ ಅವಧಿಯಲ್ಲಿ ಶೇಕಡ 56.32 ಮತ್ತು ಶೇಕಡ 80.08 ನಡುವೆ ಇತ್ತು. 2018–19ನೇ ಸಾಲಿನಲ್ಲಿ ಋಣ ವಿಮೋಚನಾ ಅನುಪಾತವು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಶೇಕಡ 22.47ರಷ್ಟು ಇಳಿಕೆಯಾಗಿತ್ತು.

## 1.12 ವಿತ್ತೀಯ ಮಾನದಂಡಗಳು/ಪ್ರಮಿತಿಗಳು

ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳಾದ ಮೂರು ಪ್ರಮುಖ ವಿತ್ತೀಯ ಪ್ರಮಿತಿಗಳು ನಿರ್ದಿಷ್ಟ ಅವಧಿಯೊಂದರಲ್ಲಿ ರಾಜ್ಯಸರ್ಕಾರದ ಒಟ್ಟು ವಿತ್ತೀಯ ಅಸಮತೆಗಳ ವ್ಯಾಪ್ತಿಯನ್ನು ಸೂಚಿಸುತ್ತದೆ. ಸರ್ಕಾರಿ ಲೆಕ್ಕದಲ್ಲಿ ಕೊರತೆಯು ಅದರ ಸ್ವೀಕೃತಿ ಮತ್ತು ವೆಚ್ಚಗಳಲ್ಲಿನ ಅಂತರವನ್ನು ಬಿಂಬಿಸುತ್ತದೆ.

ಕೊರತೆಯ ಸ್ವರೂಪವು ಸರ್ಕಾರದ ವಿತ್ತೀಯ ನಿರ್ವಹಣೆಯ ವಿವೇಚನೆಯ ಸೂಚಕವಾಗಿದೆ. ಅದಲ್ಲದೆ, ಕೊರತೆಯನ್ನು ತುಂಬುವ ಮತ್ತು ಹೊಂದಿಸಿದ ಸಂಪನ್ಮೂಲಗಳನ್ನು ಬಳಸುವ ರೀತಿಗಳು ರಾಜ್ಯದ ವಿತ್ತೀಯ ಸ್ವಾಸ್ಥ್ಯದ ಪ್ರಮುಖ ಸೂಚಕಗಳಾಗಿದೆ. ಈ ವಿಭಾಗವು ಕೊರತೆಗಳ ಪ್ರವೃತ್ತಿ, ಸ್ವಭಾವ ಮತ್ತು ಪರಿಮಾಣಗಳನ್ನು ಹಾಗೂ ಅವುಗಳ ಪೂರೈಕೆಯ ವಿಧಾನವನ್ನು ತೋರಿಸುತ್ತದೆ ಹಾಗೂ 2018–19ರಲ್ಲಿ ರಾಜಸ್ವ ಮತ್ತು ವಿತ್ತೀಯ ಕೊರತೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದಡಿ ನಿಗದಿಪಡಿಸಿದ ಗುರಿಗಳು ಹಾಗೂ ಅವುಗಳ ವಾಸ್ತವ ಸ್ತರಗಳ ತುಲನೆಯನ್ನು ನೀಡುತ್ತದೆ.

### 1.12.1 ಕೊರತೆಗಳಲ್ಲಿನ ಪ್ರವೃತ್ತಿ

#### (ಅ) ರಾಜಸ್ವ ಹೆಚ್ಚಳ

ರಾಜಸ್ವ ಹೆಚ್ಚಳವು, ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಪ್ರತಿನಿಧಿಸುತ್ತದೆ. ರಾಜಸ್ವ ಹೆಚ್ಚಳವು ಸಾಲಗಳನ್ನು ಕಡಿಮೆಗೊಳಿಸಲು ಸಹಾಯ ಮಾಡುತ್ತದೆ. ರಾಜಸ್ವ ಹೆಚ್ಚಳವು 2014–15ರಲ್ಲಿದ್ದ ₹528 ಕೋಟಿಯಿಂದ 2017–18ರಲ್ಲಿ ₹4,518 ಕೋಟಿಗಳಿಗೆ[16] ಏರಿದ್ದು 2018–19ರಲ್ಲಿ ₹679 ಕೋಟಿಗೆ ಇಳಿದಿತ್ತು. 2018–19ರಲ್ಲಿ ರಾಜಸ್ವ ವೆಚ್ಚದ ವೃದ್ಧಿದರದ ಶೇಕಡಾ 15ಕ್ಕೆ ಪ್ರತಿಯಾಗಿ ರಾಜಸ್ವ ಸ್ವೀಕೃತಿಗಳ ಕಡಿಮೆ ವೃದ್ಧಿ ದರದ (ಶೇಕಡ 12) ಕಾರಣ ರಾಜಸ್ವ ಹೆಚ್ಚಳದಲ್ಲಿ ಗಣನಾರ್ಹ ಇಳಿಕೆಯಾಗಿತ್ತು.

ರಾಜ್ಯ ಸರ್ಕಾರವು ಮಧ್ಯಮಾವಧಿ ವಿತ್ತೀಯ ಯೋಜನೆ (2019–23)ರಲ್ಲಿ, ರಾಜ್ಯದ ಆಯವ್ಯಯ ಗಾತ್ರವು ವರ್ಷಾವರ್ಷ ಹೆಚ್ಚಾಗಿದ್ದರೂ, ಅದು ಬಹುತೇಕ ಬದ್ಧ ವೆಚ್ಚ ಸ್ವರೂಪದ ಬಾಬ್ತುಗಳಿಂದ ಕೂಡಿದೆ ಎಂದು ಹೇಳಿದೆ. ಇದು ರಾಜ್ಯಕ್ಕೆ ವೆಚ್ಚದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿನ ಹಾದಿಯನ್ನು ಕಡಿತಗೊಳಿಸುತ್ತದೆ ಮತ್ತು ಬದ್ಧವೆಚ್ಚಗಳ ಅಗತ್ಯವನ್ನು ಭರಿಸಿದ ನಂತರ ರಾಜಸ್ವ ಅವಕಾಶ ಸೀಮಿತವಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರವು ವೆಚ್ಚ ವಿಭಾಗದಲ್ಲಿ ಅಂತಹ ಬದ್ಧ ವೆಚ್ಚಗಳನ್ನು ಸುಧಾರಿಸಲು, ಮಧ್ಯಮಾವಧಿ ತಿದ್ದುಪಡಿಗಳನ್ನು ಮಾಡುವ ಅವಶ್ಯಕತೆಯಿದೆ.

#### (ಆ) ವಿತ್ತೀಯ ಕೊರತೆ

ವಿತ್ತೀಯ ಕೊರತೆ ಸರ್ಕಾರದ ನಿವ್ವಳ ಜವಾಬ್ದಾರಿಗಳ ಹೆಚ್ಚಳ ಅಥವಾ ಅದರ ಹೆಚ್ಚುವರಿ ಸಾಲಗಳನ್ನು ಸೂಚಿಸುತ್ತದೆ. ಈ ಕೊರತೆಯನ್ನು ಹೆಚ್ಚುವರಿ ಸಾರ್ವಜನಿಕ ಋಣ (ಆಂತರಿಕ ಅಥವಾ ಹೊರಗಿನ) ಅಥವಾ ಸಾರ್ವಜನಿಕ ಲೆಕ್ಕದಿಂದ ಹೆಚ್ಚುವರಿ ನಿಧಿಗಳನ್ನು ಬಳಸುವುದರ ಮೂಲಕ ಪೂರೈಸಬಹುದು. ಪ್ರಮುಖ ಅಂಶಗಳಿಗೆ ಸಂಬಂಧಿಸಿದ ಕೊರತೆಯ ಪ್ರವೃತ್ತಿಗಳೊಂದಿಗೆ ವಿತ್ತೀಯ ಕೊರತೆಯ ಪ್ರವೃತ್ತಿಗಳನ್ನು **ಕೋಷ್ಟಕ 1.33**ರಲ್ಲಿ ಸೂಚಿಸಿದೆ.

[16] ಬಂಡವಾಳ ವೆಚ್ಚವೆಂದು ತಪ್ಪಾಗಿ ವರ್ಗೀಕರಿಸಲಾದ ₹3,400 ಕೋಟಿಗಳನ್ನು ಒಳಗೊಂಡಿದೆ.

**ಕೋಷ್ಟಕ 1.33: ವಿತ್ತೀಯ ಕೊರತೆ ಮತ್ತು ಅದರ ಪ್ರಮಿತಿಗಳು**

(₹ ಕೋಟಿಗಳಲ್ಲಿ)

| ಅವಧಿ | ಋಣೇತರ ಸ್ವೀಕೃತಿಗಳು | ಒಟ್ಟು ವೆಚ್ಚ | ವಿತ್ತೀಯ ಕೊರತೆ | ವಿತ್ತೀಯ ಕೊರತೆಯ ಶತಾಂಶವಾಗಿ | | |
|---|---|---|---|---|---|---|
| | | | | ರಾಒಉಆಂಉ | ಋಣೇತರ ಸ್ವೀಕೃತಿ | ಒಟ್ಟು ವೆಚ್ಚ |
| 2014-15 | 1,04,236 | 1,23,812 | 19,576 | 2.14 | 18.78 | 15.81 |
| 2015-16 | 1,19,229 | 1,38,398 | 19,169 | 1.89 | 16.08 | 13.85 |
| 2016-17 | 1,33,341 | 1,62,005 | 28,664 | 2.53 | 21.50 | 17.69 |
| 2017-18 | 1,47,141 | 1,78,241 | 31,101 | 2.37 | 21.14 | 17.45 |
| 2018-19 | 1,65,004 | 2,03,446 | 38,442 | 2.73 | 23.30 | 18.90 |

*ಆಕರ: ಹಣಕಾಸು ಲೆಕ್ಕಗಳು*

2014-15 ರಿಂದ 2018-19ರ ಅವಧಿಯಲ್ಲಿ ವಿತ್ತೀಯ ಕೊರತೆಯು ರಾಒಆಂಉದ ಶತಾಂಶವಾಗಿ ಶೇಕಡ 2.14ರಿಂದ ಶೇಕಡ 2.73ಕ್ಕೆ ನಡುವಿನ ಅಲ್ಪ ವ್ಯತ್ಯಯಗಳಿಂದ ಏರಿಕೆಯಾಗಿದೆ. ವಿತ್ತೀಯ ಕೊರತೆಯು ರಾಒಆಂಉದ, ಋಣೇತರ ಸ್ವೀಕೃತಿಗಳ ಮತ್ತು ಒಟ್ಟು ವೆಚ್ಚದ ಶತಾಂಶವಾಗಿ 2018-19ರಲ್ಲಿ ಹಿಂದಿನ ವರ್ಷಕ್ಕಿಂತ ಏರಿಕೆಯಾಗಿದ್ದು, ಇದು ರಾಜಸ್ವ ಹೆಚ್ಚಳದಲ್ಲಿ ಇಳಿಕೆಯಾದುದರಿಂದ ಹೆಚ್ಚಾದ ಸಾಲಗಳಿಂದ ಉಂಟಾಗಿದೆ.

### (ಇ) ಪ್ರಾಥಮಿಕ ಕೊರತೆ

ಬಡ್ಡಿ ಪಾವತಿಗಳು ಹಿಂದಿನ ವರ್ಷಗಳ ಹೊಣೆಗಾರಿಕೆಗೆ ಸಂಬಂಧಿಸಿದ ವೆಚ್ಚವಾಗಿದ್ದು, ಪ್ರಸಕ್ತ ವೆಚ್ಚಗಳಿಗೆ ಹೊರತಾಗಿರುತ್ತದೆ. ಹಾಲಿ ಇರುವ ಅಸಮತೆಗಳ ಸ್ವರೂಪವನ್ನು ಕಾಣಬೇಕಾದಲ್ಲಿ, ಈ ಪಾವತಿಗಳನ್ನು ಪ್ರತ್ಯೇಕಿಸುವ ಅಗತ್ಯವಿದ್ದು ಒಟ್ಟು ಅಸಮತೆಗಳಿಂದ ಕಳೆಯಬೇಕಾಗುತ್ತದೆ. ಪ್ರಾಥಮಿಕ ಕೊರತೆಯು ವಿತ್ತೀಯ ಕೊರತೆಯ ಹಾಗೂ ಬಡ್ಡಿ ಪಾವತಿಗಳ ನಿವ್ವಳವಾಗಿದೆ. ಅಂತೆಯೇ ಪ್ರಾಥಮಿಕ ಕೊರತೆಯು ಬಡ್ಡಿ ಪಾವತಿಗಳನ್ನು ಹೊರತುಪಡಿಸಿ ಒಟ್ಟು ಸಾಲಗಳ ಅವಶ್ಯಕತೆಯನ್ನು ಸೂಚಿಸುತ್ತದೆ. ಕಳೆದ ಐದು ವರ್ಷಗಳ ಪ್ರಾಥಮಿಕ ಕೊರತೆ ಮತ್ತು ಅವುಗಳ ಪ್ರಮಿತಿಗಳ ವಿವರಗಳನ್ನು **ಕೋಷ್ಟಕ 1.34**ರಲ್ಲಿ ನೀಡಿದೆ.

**ಕೋಷ್ಟಕ 1.34: ಪ್ರಾಥಮಿಕ ಕೊರತೆ ಮತ್ತು ಅದರ ಪ್ರಮಿತಿಗಳು**

(₹ ಕೋಟಿಗಳಲ್ಲಿ)

| ಅವಧಿ | ವಿತ್ತೀಯ ಕೊರತೆ | ಬಡ್ಡಿ ಪಾವತಿಗಳು | ಪ್ರಾಥಮಿಕ ಕೊರತೆ |
|---|---|---|---|
| **2014-15** | 19,576 | 9,804* | 9,772 |
| **2015-16** | 19,169 | 11,343* | 7,826 |
| **2016-17** | 28,664 | 12,850* | 15,814 |
| **2017-18** | 31,101 | 14,973* | 16,128 |
| **2018-19** | 38,442 | 16,614* | 21,828 |

*ಆಕರ: ಹಣಕಾಸು ಲೆಕ್ಕಗಳು.*

* ಕ್ರಮವಾಗಿ 2014-15, 2015-16, 2016-17, 2017-18 ಮತ್ತು 2018-19ನೇ ಸಾಲಿನ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಕ್ರಮವಾಗಿ ₹400 ಕೋಟಿ, ₹597 ಕೋಟಿ, ₹817 ಕೋಟಿ, ರೂ1,043 ಕೋಟಿ ಮತ್ತು ₹1,191 ಕೋಟಿಗಳನ್ನು ಒಳಗೊಂಡಿದೆ.

2016-17ರಿಂದ 2018-19ರ ಅವಧಿಯಲ್ಲಿ ವಿತ್ತೀಯ ಕೊರತೆಯು ಬಡ್ಡಿ ಪಾವತಿಯ ಎರಡರಷ್ಟಕ್ಕಿಂತ ಹೆಚ್ಚಾಗಿತ್ತು. ಬಡ್ಡಿ ಪಾವತಿಗಳನ್ನು ಕಡಿಮೆ ಮಾಡಿದರೆ ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳದಲ್ಲಿ ಅಧಿಕ್ಯವನ್ನು

ಸಾಧಿಸಲು ಹಾಗೂ ಅದನ್ನು ಬಂಡವಾಳ ವೆಚ್ಚಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. 2014–15ರಿಂದ 2018–19ರ ಅವಧಿಯಲ್ಲಿ ಕೊರತೆ ಸೂಚಕಗಳಲ್ಲಿನ ಪ್ರವೃತ್ತಿಗಳನ್ನು **ನಕ್ಷೆ 1.15** ಸೂಚಿಸುತ್ತದೆ.

**ನಕ್ಷೆ 1.15: ವಿತ್ತೀಯ ಸೂಚಕಗಳ ಪ್ರವೃತ್ತಿಗಳು**




### 1.12.2 ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ

ವಿತ್ತೀಯ ಕೊರತೆಯನ್ನು ತುಂಬುವ ಹಣಕಾಸಿನ ವಿಧಾನವು ಅನುಬಂಧ **1.12**ರಲ್ಲಿ ತೋರಿಸಿರುವಂತೆ ಸಂಯೋಜಿತ ಪಲ್ಲಟಗಳಿಗೆ ಈಡಾಗಿದೆ. ವಿತ್ತೀಯ ಕೊರತೆಯ ವಿಭಜನೆಯು, ರಾಜಸ್ವ ಮತ್ತು ಋಣೇತರ ಸ್ವೀಕೃತಿಗಳನ್ನು ಮೀರಿದ ಅಗತ್ಯಗಳನ್ನು ಪೂರೈಸಲು ರಾಜ್ಯ ಸರ್ಕಾರವು ಎಷ್ಟರಮಟ್ಟಿಗೆ ವಿವಿಧ ರೀತಿಯ ಸಾಲಗಳನ್ನು ಅವಲಂಬಿಸಿತ್ತು ಎಂಬುದನ್ನು ತೋರಿಸುತ್ತದೆ.

ವಿತ್ತೀಯ ಕೊರತೆಯ ಭಾಗಗಳು, ರಾಜಸ್ವ ಹೆಚ್ಚಳದ ಕಳೆಯುವಿಕೆ, ನಿವ್ವಳ ಬಂಡವಾಳ ವೆಚ್ಚ ಮತ್ತು ನಿವ್ವಳ ಸಾಲ ಮತ್ತು ಮುಂಗಡಗಳಾಗಿವೆ. ರಾಜ್ಯವು ರಾಜಸ್ವ ಹೆಚ್ಚಳವನ್ನು 2004–05ರಲ್ಲಿಯೇ ಸಾಧಿಸಿದ್ದ ಕಾರಣ, ರಾಜಸ್ವ ಲೆಕ್ಕದಲ್ಲಿನ ಹೆಚ್ಚಳವನ್ನು ಮಾರುಕಟ್ಟೆ ಸಾಲಗಳು, ಭಾರತ ಸರ್ಕಾರದಿಂದ ಬಂದ ಸಾಲಗಳೂ ಸೇರಿದಂತೆ ಬಂಡವಾಳ ವೆಚ್ಚಕ್ಕೆ ಬಳಸಲಾಗಿತ್ತು. 2014–15, 2015–16, 2016–17 ಮತ್ತು 2017–18ರಲ್ಲಿ ರಾಜಸ್ವ ಹೆಚ್ಚಳದಿಂದ ಕ್ರಮವಾಗಿ ಬಂಡವಾಳ ವೆಚ್ಚದ ಶೇಕಡ ಮೂರು, ಒಂಭತ್ತು, ಐದು ಮತ್ತು 15ರಷ್ಟನ್ನು ಭರಿಸಲಾಗಿತ್ತು. 2018–19ರಲ್ಲಿ ರಾಜಸ್ವ ಹೆಚ್ಚಳದಲ್ಲಿ ಅತೀವ ಇಳಿಕೆಯಾಗಿದ್ದು ಕೇವಲ ಶೇಕಡ ಎರಡರಷ್ಟು ಬಂಡವಾಳ ವೆಚ್ಚವನ್ನು ಭರಿಸಿತ್ತು.

ಇದರ ಫಲವಾಗಿ 2018–19ರಲ್ಲಿ ಮಾರುಕಟ್ಟೆ ಸಾಲಗಳಲ್ಲಿ ಸಾಕಷ್ಟು ಏರಿಕೆಯಾಗಿದ್ದು, ವಿತ್ತೀಯ ಕೊರತೆಯನ್ನು ತುಂಬುವ ಅದರ ಪಾಲು ಶೇಕಡ 84ಕ್ಕೆ ಏರಿತು. ಆದ್ದರಿಂದ ಹಿಂದಿನ ವರ್ಷಕ್ಕೆ ಹೋಲಿಸಿದರೆ ಭಾರತ ಸರ್ಕಾರದಿಂದ ಸಾಲ ಮತ್ತು ಮುಂಗಡಗಳಲ್ಲಿ, ಹಣಕಾಸು ಸಂಸ್ಥೆಗಳಿಂದ ಸಾಲ, ಮತ್ತು ಅಮಾನತ್ತು ಮತ್ತು ಇತರ ಶಿಲ್ಕುಗಳಲ್ಲಿ ಇಳಿಕೆಯಾಗಿದ್ದು (ಇದು ಪ್ರಮುಖವಾಗಿ ಚೆಕ್ಕುಗಳು ಮತ್ತು ಬಿಲ್ಲುಗಳಿಗೆ ಸಂಬಂಧಿಸಿದ್ದು), ಇವುಗಳ ವ್ಯವಹಾರಗಳ ನಿವ್ವಳವನ್ನು ವಿತ್ತೀಯ ಕೊರತೆಯನ್ನು ಭರಿಸಲು ಕೂಡಿಸಲಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಠೇವಣಿ ಮತ್ತು ಮುಂಗಡಗಳು, ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳಲ್ಲಿ ಸ್ವಲ್ಪ ಏರಿಕೆಯಾಗಿತ್ತು. ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸಿನಂತೆ 1ನೇ ಏಪ್ರಿಲ್ 2015ರಿಂದ ಎನ್‌ಎಸ್‌ಎಸ್‌ಎಫ್ ಕಾರ್ಯಾಚರಣೆಯಿಂದ ರಾಜ್ಯ ಸರ್ಕಾರಗಳನ್ನು

ಹೊರಗಿಡಲಾಗಿದ್ದು, 2016–17ನೆಯ ಆರ್ಥಿಕ ವರ್ಷದಿಂದ ಎನ್‌ಎಸ್‌ಎಸ್‌ಎಫ್ ಅಡಿ ಭಾರತ ಸರ್ಕಾರದಿಂದ ಯಾವುದೇ ಸ್ವೀಕೃತಿಗಳಿರಲಿಲ್ಲ.

## 1.13 ಅನುಸರಣೆ

2009–10ನೇ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಮೇ 2011ರಿಂದ ಆಗಸ್ಟ್ 2011ರ ನಡುವಿನ ಅವಧಿಯಲ್ಲಿ ಚರ್ಚಿಸಿತು. ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಡಿಸೆಂಬರ್ 2011ರಲ್ಲಿ ಶಾಸನಸಭೆಯ ಮುಂದೆ ಮಂಡಿಸಲಾಯಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಂಡ ವರದಿಯನ್ನು ಸೆಪ್ಟೆಂಬರ್ 2014ರಲ್ಲಿ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಮುಂದೆ ಮಂಡಿಸಲಾಗಿದೆ. ಸಾರ್ವಜನಿಕ ಲೆಕ್ಕ ಸಮಿತಿಯು ಸರ್ಕಾರವು ಮಂಡಿಸಿದ ಕ್ರಮ ತೆಗೆದುಕೊಂಡ ವರದಿಯನ್ನು ಚರ್ಚಿಸಿ ಕ್ರಮ ತೆಗೆದುಕೊಂಡ ಟಿಪ್ಪಣಿಯ ಮೇಲಿನ ತನ್ನ ವರದಿಯನ್ನು ಜುಲೈ 2015ರಲ್ಲಿ ಶಾಸನಸಭೆಯ ಮುಂದೆ ಸಲ್ಲಿಸಿತು.

ಸಾರ್ವಜನಿಕ ಲೆಕ್ಕ ಸಮಿತಿಯ ಗಮನಕ್ಕೆ ತರಲು ಅರ್ಹವಾದ ರಾಜ್ಯ ಹಣಕಾಸಿನ ವ್ಯವಹಾರಗಳ ಮುಖ್ಯವಾದ ಅಂಶಗಳನ್ನು ಅದರ ಪರಿಗಣನೆಗಾಗಿ ತರಲಾಗಿದೆ.

## 1.14 ನಿರ್ಣಯಗಳು ಮತ್ತು ಶಿಫಾರಸುಗಳು

### ವಿತ್ತೀಯ ಸ್ಥಿತಿ

2014–15ರಿಂದ 2018–19ರ ಅವಧಿಯಲ್ಲಿ ರಾಜ್ಯವು ರಾಜಸ್ವ ಹೆಚ್ಚಳವನ್ನು ಕಾಯ್ದುಕೊಂಡಿದೆ. 2018–19ರಲ್ಲಿ ರಾಒಆಂಉದ ಸಾಪೇಕ್ಷವಾಗಿ ವಿತ್ತೀಯ ಕೊರತೆಯನ್ನು ಕರ್ನಾಟಕ ಹಣಕಾಸು ಜವಾಬ್ದಾರಿ ಕಾಯಿದೆಯಡಿಯಲ್ಲಿ ಸೂಚಿಸಿದ್ದ ಮಿತಿಯ ಒಳಗೆ ನಿರ್ವಹಿಸಿದೆ.

ಕ್ರೋಢೀಕೃತ ನಿಧಿ ಪರಿಹಾರ ನಿಧಿಗೆ ಹೊಂದಾಣಿಕೆ ಮಾಡುವಲ್ಲಿನ ವಿಫಲತೆಯು (₹1,165 ಕೋಟಿ) ಮತ್ತು ಭಾಗಶಃ ವಂತಿಗೆ ನೀಡಿರುವುದು (₹700 ಕೋಟಿ) ರಾಜಸ್ವ ಲೆಕ್ಕದಲ್ಲಿ ಹೆಚ್ಚಳವನ್ನು ಕಾಯ್ದುಕೊಳ್ಳುವಲ್ಲಿ ನೆರವಾಯಿತು. 2018–19ರಲ್ಲಿ ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (₹14,08,112 ಕೋಟಿ) ಶೇಕಡ 2.73 ರಷ್ಟಿದ್ದು ಇದು ವಿತ್ತೀಯ ಜವಾಬ್ದಾರಿ ಕಾಯಿದೆ ನಿಗದಿಪಡಿಸಿದ ಮಿತಿಯೊಳಗೆ ಇದ್ದಿತು.

**ಶಿಫಾರಸುಗಳು: ವಿತ್ತೀಯ ಮಾನದಂಡಗಳ ನೈಜ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ನೀಡಲು ಸಕಾಲಿಕ ಮತ್ತು ಸರಿಯಾದ ಲೆಕ್ಕ ಹೊಂದಾಣಿಕೆಗಳನ್ನು ಮಾಡಬೇಕಾಗಿದೆ. ಲೆಕ್ಕಹೊಂದಾಣಿಕೆಗಳು ಹೊಂದಾಣಿಕೆಗಳ ತತ್ವಗಳಿಗನುಸಾರವಾಗಿರಬೇಕು ಮತ್ತು ಅಂಶಿಕ ಲೆಕ್ಕ ಹೊಂದಾಣಿಕೆಗಳನ್ನು ತಪ್ಪಿಸಬೇಕು.**

### ರಾಜ್ಯದ ಸ್ವಂತ ಸಂಪನ್ಮೂಲಗಳು

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು 2014–15ರಲ್ಲಿದ್ದ ಶೇಕಡ 7.68ರಿಂದ 2018–19ರ ಅವಧಿಯಲ್ಲಿ ಶೇಕಡ 6.88ರಷ್ಟಾಗಿ ಇಳಿಕೆಯ ಪ್ರವೃತ್ತಿಯನ್ನು ತೋರಿಸಿತು. ಆದರೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ತೆರಿಗೆಯೇತರ ಆದಾಯದ ಅನುಪಾತದಲ್ಲಿ ಯಾವುದೇ ಸುಧಾರಣೆ ಕಂಡುಬರದೆ ಅದು 2014–15ರಿಂದ 2018–19ರ ಅವಧಿಯಲ್ಲಿಯೂ ಶೇಕಡ ಒಂದಕ್ಕಿಂತ ಕಡಿಮೆಯಾಗಿಯೇ ಮುಂದುವರೆದಿದೆ.

**ಶಿಫಾರಸುಗಳು: ವೆಚ್ಚ ಸುಧಾರಣೆಗಳ ಆಯೋಗದ ಹಾಗೂ ವಿತ್ತೀಯ ನಿರ್ವಹಣಾ ಸಮೀಕ್ಷಾ ಸಮಿತಿಯ (ಎಮ್‌ಟಿಎಫ್‌ಪಿ 2019–23) ಶಿಫಾರಸಿನಂತೆ ತೆರಿಗೆಯೇತರದ ಆದಾಯಗಳಾದ ಬಳಕೆದಾರರ ಶುಲ್ಕಗಳ ದರವನ್ನು ಕಾಲಕಾಲಕ್ಕೆ ಪರಿಷ್ಕರಿಸುವುದಕ್ಕೆ ಒತ್ತು ನೀಡಬೇಕಾಗಿದೆ.**

### ರಾಜಸ್ವ ವೆಚ್ಚ

ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಾಮಾಜಿಕ ವಲಯದಡಿಯ ವೃದ್ಧಿಯು 2018–19ರಲ್ಲಿ ಶೇಕಡ 16ರಷ್ಟಿದ್ದು ಒಟ್ಟು ವೆಚ್ಚದಲ್ಲಿ ಸಾಮಾಜಿಕ ಸೇವೆಗಳ ವೆಚ್ಚದ ಪಾಲು 2017–18 ಮತ್ತು 2018–19ರಲ್ಲಿ ಶೇಕಡ 41ರಷ್ಟೇ ಉಳಿಯಿತು. ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ವೃದ್ಧಿಯು 2017–18ರಲ್ಲಿ ಶೇಕಡ 6ರಷ್ಟಿದ್ದು ಇದು 2018–19ರಲ್ಲಿ ಶೇಕಡ 13ರಷ್ಟಿತ್ತು.

ರಾಜಸ್ವ ವೆಚ್ಚದ ಶೇಕಡ 85ರಷ್ಟು ಭಾಗವು, ಸಂಬಳ, ವಿಶ್ರಾಂತಿ ವೇತನ, ಬಡ್ಡಿ ಪಾವತಿಗಳು, ಸಹಾಯಧನಗಳು, ಸಹಾಯಾನುದಾನಗಳು ಮತ್ತು ಆರ್ಥಿಕ ನೆರವು, ಆಡಳಿತಾತ್ಮಕ ವೆಚ್ಚಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮುಂತಾದ ಬದ್ಧ ವೆಚ್ಚಗಳನ್ನೊಳಗೊಂಡಿತ್ತು. ₹19,177 ಕೋಟಿಗಳ ಸಹಾಯಧನದಲ್ಲಿ ₹3,777 ಕೋಟಿಗಳು ಸಾಮಾಜಿಕ ಆರ್ಥಿಕ ಸೇವೆಗಳಡಿಯ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವಿನ ರೂಪದಲ್ಲಿದ್ದಿತು.

**ಶಿಫಾರಸುಗಳು: 2018–19ರಲ್ಲಿ ಆರೋಗ್ಯ ಮತ್ತು ಶಿಕ್ಷಣ ವಿಭಾಗಗಳಲ್ಲಿನ ಅನುಪಾತಗಳು ಸಾಮಾನ್ಯವರ್ಗ ರಾಜ್ಯಗಳ ಸರಾಸರಿಗಿಂತ ಕಡಿಮೆಯಿರುವುದರಿಂದ ಈ ಎರಡೂ ವಿಭಾಗಗಳಿಗೆ ಸಾಕಷ್ಟು ಆದ್ಯತೆಯನ್ನು ನೀಡಬೇಕಾಗಿದೆ.**

**ಸಂಬಳ, ಪಿಂಚಣಿ ಮತ್ತು ಬಡ್ಡಿಪಾವತಿಗಳ ಮೇಲಿನ ವೆಚ್ಚವು ಅನಮ್ಯವಾಗಿರುವುದರಿಂದ, ಸತತವಾಗಿ ಏರುತ್ತಿರುವ ಸಹಾಯಧನಗಳ ಮೇಲಿನ ವೆಚ್ಚ, ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಇತರರಿಗೆ ನೀಡುತ್ತಿರುವ ಅನುದಾನಗಳ ಕಡೆಗೆ ರಾಜ್ಯ ಸರ್ಕಾರವು ಅರ್ಹ ಫಲಾನುಭವಿಗಳನ್ನು ಗುರಿಯಾಗಿಸಿಕೊಂಡು ಹೆಚ್ಚಿನ ಗಮನಕೊಡುವ ಅಗತ್ಯವಿದೆ.**

**ರಾಜಸ್ವ ವೆಚ್ಚದ ಪ್ರಧಾನ ಭಾಗವಾಗಿರುವ ಬದ್ಧ ವೆಚ್ಚಗಳಲ್ಲಿನ ಸಹಾಯಧನವನ್ನು ಮಿತಿಗೊಳಿಸುವುದರಿಂದ ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳದಲ್ಲಿ ಗಮನಾರ್ಹ ಮಟ್ಟವನ್ನು ಸಾಧಿಸಲು ನೆರವಾಗುತ್ತದೆ.**

### ವೆಚ್ಚದ ಗುಣಮಟ್ಟ

2018–19ರಲ್ಲಿ ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಪಾಲು (ಶೇಕಡ 19) ಹಿಂದಿನ ವರ್ಷಕ್ಕಿಂತ ಶೇಕಡ ಒಂದರಷ್ಟು ಇಳಿಕೆಯಾಯಿತು. ಒಟ್ಟು ವೆಚ್ಚಕ್ಕೆ ಅಭಿವೃದ್ಧಿ ವೆಚ್ಚದ ಶೇಕಡಾವಾರು 2017–18 ಮತ್ತು 2018–19ರಲ್ಲಿ ಶೇಕಡ 76ರಲ್ಲಿಯೇ ಉಳಿದಿತ್ತು. 2018–19ರ ಅಂತ್ಯಕ್ಕೆ ₹3,128 ಕೋಟಿಗಳಷ್ಟು ಮೊತ್ತವು ಅಪೂರ್ಣ ಕಾಮಗಾರಿಗಳಲ್ಲಿ ತೊಡಗಿಸಿದ್ದು ಫಲಪ್ರದವಿಲ್ಲದೆ ನಿರ್ಬಂಧಿತವಾಗಿತ್ತು.

31 ಮಾರ್ಚ್ 2019ರ ಅಂತ್ಯಕ್ಕೆ ಕಂಪೆನಿಗಳು/ನಿಗಮಗಳಲ್ಲಿ ತೊಡಗಿಸಿದ್ದ ₹66,518 ಕೋಟಿ ಹೂಡಿಕೆಗಳ ಮೇಲಿನ ಪ್ರತಿಫಲವು ಅತ್ಯಲ್ಪವಾಗಿತ್ತು (₹38.30 ಕೋಟಿ) ಹೂಡಿಕೆಯು ಸತತವಾಗಿ ನಷ್ಟದಲ್ಲಿರುವ ಕಂಪೆನಿ/ನಿಗಮಗಳಲ್ಲಿ ಹೂಡಿರುವ ₹38,949 ಕೋಟಿಗಳನ್ನು (ಶೇಕಡ 59) ಒಳಗೊಂಡಿತ್ತು.

**ಶಿಫಾರಸುಗಳು: ರಾಜ್ಯಸರ್ಕಾರವು ಅಪೂರ್ಣ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಸಮಯ ಮತ್ತು ವೆಚ್ಚ ಹೆಚ್ಚಳಗಳಿಗೆ ಕಾರಣಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸಬೇಕು. ವಿತ್ತೀಯ**

**ನಿರ್ವಹಣಾ ಸಮೀಕ್ಷಾ ಸಮಿತಿಯ ಸಲಹೆಯಂತೆ ಮುಕ್ತಾಯದ ಹಂತದಲ್ಲಿರುವ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು.**

ರಾಜ್ಯ ಸರ್ಕಾರವು ಅಧಿಕ ನಷ್ಟಗಳನ್ನು ಅನುಭವಿಸುತ್ತಿರುವ ರಾಜ್ಯದ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಯವೈಖರಿಯನ್ನು ಸಮೀಕ್ಷಿಸಿ ಅವುಗಳನ್ನು ಮುಚ್ಚುವ/ಪುನರುಜ್ಜೀವನಗೊಳಿಸುವ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

### ನಿಧಿಗಳು ಮತ್ತಿತರ ಜವಾಬ್ದಾರಿಗಳು

ಖಾತರಿ ವಿಮೋಚನಾ ನಿಧಿಯ ಮೂಲ ನಿಧಿಗಳಂತಹ ರಾಜ್ಯದ ಮೀಸಲು ನಿಧಿಗಳು ರಚಿತವಾಗಿರಲಿಲ್ಲ/ ಪುನಶ್ಚೇತನಗೊಂಡಿರಲಿಲ್ಲ. ಭಾರತೀಯ ರಿಸರ್ವ್ ಬ್ಯಾಂಕಿನಿಂದ ಕ್ರೋಢೀಕೃತ ಋಣಪರಿಹಾರ ನಿಧಿಯ ಮೇಲಿನ ₹903.71 ಕೋಟಿಗಳ ಬಡ್ಡಿಯ ಮರು ಹೂಡಿಕೆಯು ಲೆಕ್ಕಗಳ ಮೂಲಕ ಹಾದು ಹೋಗಿರಲಿಲ್ಲ. ಹಸಿರು ತೆರಿಗೆ ಸಂಗ್ರಹಣೆ ₹27.20 ಕೋಟಿಗಳನ್ನು ನಿಧಿಯ ಲೆಕ್ಕಕ್ಕೆ ವರ್ಗಾಯಿಸಿರಲಿಲ್ಲ.

**ಶಿಫಾರಸುಗಳು: ವಿವಿಧ ಮೀಸಲು ನಿಧಿಗಳ ನಿರ್ವಹಣೆ ಮತ್ತು ಹೂಡಿಕೆ ವಿಧಾನಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವ ಅಗತ್ಯವಿದೆ.**

### ಋಣ ಸಹಿಷ್ಣುತೆ

ರಾಜ್ಯದ ಒಟ್ಟು ವಿತ್ತೀಯ ಜವಾಬ್ದಾರಿಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಪ್ರಮುಖ ಪಾಲನ್ನು ಹೊಂದಿದ್ದವು (ಶೇಕಡ 55). 2014–15 ರಿಂದ 2018–19ರ ಅವಧಿಯಲ್ಲಿ ಬಡ್ಡಿ ಪಾವತಿಗೆ ರಾಜಸ್ವ ಸ್ವೀಕೃತಿಗಳ ಅನುಪಾತದಿಂದ ಅಳೆಯಲ್ಪಡುವ ಬಡ್ಡಿ ಪಾವತಿಯ ಹೊರೆಯು ಶೇಕಡ 9.41 ಮತ್ತು ಶೇಕಡ 10.18ರ ನಡುವೆ ಇದ್ದಿತು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ 2018–19ನೇ ಸಾಲಿನಲ್ಲಿ ರಾಜ್ಯಕ್ಕೆ ಲಭ್ಯವಿದ್ದ ನಿವ್ವಳ ಋಣವು (₹17,766 ಕೋಟಿ) ಶೇಕಡ 255ರಷ್ಟು ಏರಿಕೆಯಾಯಿತು. ಬದ್ಧ ವೆಚ್ಚಗಳ ಅಗತ್ಯತೆಗಳನ್ನು ಲೆಕ್ಕ ಹಾಕಿದ ಬಳಿಕ ರಾಜ್ಯಕ್ಕೆ ರಾಜಸ್ವ ಅವಕಾಶದ ಲಭ್ಯತೆಯು ಸೀಮಿತವಾಗಿತ್ತು.

**ಶಿಫಾರಸುಗಳು: ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯು, ಬಡ್ಡಿಪಾವತಿ/ರಾಜಸ್ವ ಸ್ವೀಕೃತಿಗಳ ಅನುಪಾತದ ಲೆಕ್ಕಾಚಾರದ ಭಾಗವಾಗಬೇಕು. ರಾಜ್ಯ ಸರ್ಕಾರವು ಬದ್ಧ ವೆಚ್ಚಗಳನ್ನು ಕಡಿಮೆ ಮಾಡಲು ವೆಚ್ಚದ ಭಾಗದಲ್ಲಿ ಮಧ್ಯಮಾವಧಿ ತಿದ್ದುಪಡಿಗಳನ್ನು ಮಾಡುವ ಅವಶ್ಯಕತೆಯಿದೆ.**

ಆರ್ಥಿಕ ಇಲಾಖೆಯು ಲೆಕ್ಕಚಾರದ ವಿನ್ಯಾಸದಲ್ಲಿ ಸುಸಂಬದ್ಧ ರೂಢಿಗಳನ್ನು ಅನ್ವಯಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಧಾನ/ಮಹಾ ಲೇಖಪಾಲರು (ಲೆ ಮತ್ತು ಹ) ಅವರೊಂದಿಗೆ ವ್ಯವಹರಿಸುತ್ತಿರುವುದಾಗಿ ಹೇಳಿದೆ (ಮಾರ್ಚ್ 2020). ಆದರೂ, ಶಿಫಾರಸು ಮಾಡಿರುವಂತೆ ಮುಂದಿನ ವರ್ಷಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಶೀಘ್ರದಲ್ಲಿ ಉಪಕ್ರಮಿಸಲಾಗುವುದು ಎಂದು ಹೇಳಿದೆ.

# ಅಧ್ಯಾಯ - II

# ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

# 2

# ಅಧ್ಯಾಯ–II
## ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

## 2.1 ಪೀಠಿಕೆ

ಧನವಿನಿಯೋಗ ಲೆಕ್ಕಗಳು ಶಾಸಕಾಂಗವು ಅಂಗೀಕರಿಸಿದ ಪ್ರತಿ ಆರ್ಥಿಕ ವರ್ಷದ ಧನವಿನಿಯೋಗ ಅಧಿನಿಯಮಗಳಿಗೆ ಸಹಬಂಧಗೊಳಿಸಿದ ಅನುಸೂಚಿಗಳಲ್ಲಿ ನಿಗದಿಪಡಿಸಲಾದ ಮೊತ್ತಗಳಿಗೆ ಹೋಲಿಸಿದ ಸರ್ಕಾರದ ವೆಚ್ಚದ (ಪುರಸ್ಕೃತ ಮತ್ತು ಪ್ರಭೃತ) ಲೆಕ್ಕಗಳಾಗಿವೆ. ಈ ಲೆಕ್ಕಗಳು ಮೂಲ ಆಯವ್ಯಯ ಅಂದಾಜುಗಳು, ಪೂರಕ ಅನುದಾನಗಳು, ಅಧ್ಯರ್ಪಣೆಗಳು ಮತ್ತು ಪುನರ್ವಿನಿಯೋಗಗಳನ್ನು ಸ್ಪಷ್ಟವಾಗಿ ಪಟ್ಟಿಮಾಡಿ, ಧನವಿನಿಯೋಗ ಕಾಯಿದೆಯಲ್ಲಿ ಅಧಿಕೃತಗೊಳಿಸಿದ ಪುರಸ್ಕೃತ ಮತ್ತು ಪ್ರಭೃತ ಆಯವ್ಯಯ ಬಾಬ್ತುಗಳಿಗೆ ಪ್ರತಿಯಾಗಿ ವಿವಿಧ ನಿರ್ದಿಷ್ಟ ಸೇವೆಗಳ ಮೇಲಿನ ವಾಸ್ತವ ಬಂಡವಾಳ ಮತ್ತು ರಾಜಸ್ವ ವೆಚ್ಚಗಳನ್ನು ಸೂಚಿಸುತ್ತವೆ. ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯ ಅಂದಾಜುಗಳನ್ನು ತಯಾರಿಸಲು ಅನುಸರಿಸಬೇಕಾದ ವಿಧಾನಗಳು, ವೆಚ್ಚ ಮಾಡಲು ಅಧಿಕೃತಗೊಳಿಸುವ ಸಂಬಂಧವಾಗಿನ ನಂತರದ ಕ್ರಮಗಳು, ಅನುದಾನಗಳ ವಿತರಣೆ, ವಾಸ್ತವಿಕ ವೆಚ್ಚದ ಪ್ರಗತಿಯ ಗಮನಿಸುವಿಕೆ ಮತ್ತು ಅದರ ಮೇಲಿನ ನಿಯಂತ್ರಣಕ್ಕೆ ಸಂಬಂಧಿಸಿದ ಕ್ರಮಗಳನ್ನು ಒಳಗೊಂಡಿದೆ.

## 2.2 ಧನವಿನಿಯೋಗ ಲೆಕ್ಕಗಳ ಸಾರಾಂಶ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಲ್ಪಡುವ ಧನವಿನಿಯೋಗದ ಲೆಕ್ಕ ಪರಿಶೋಧನೆಯು ವಿವಿಧ ಅನುದಾನಗಳಡಿ ಮಾಡಿದ ವಾಸ್ತವ ವೆಚ್ಚವು ಧನವಿನಿಯೋಗ ಅಧಿನಿಯಮದಡಿ ನೀಡಿದ ಅಧಿಕಾರದ ಪರಿಮಿತಿಯೊಳಗೆ ಇದೆಯೇ ಮತ್ತು ಸಂವಿಧಾನದ ಉಪಬಂಧಗಳ ಮತ್ತು ವಿಧಾನಸಭೆಯ ವಿವಿಧ ಶಾಸನಗಳ ಅಡಿಯಲ್ಲಿ ಪ್ರಭೃತಗೊಳಿಸಬೇಕಾದ ವೆಚ್ಚವನ್ನು ಹಾಗೆ ಪ್ರಭೃತಗೊಳಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಬಯಸುತ್ತದೆ. ಅಲ್ಲದೆ, ಹಾಗೆ ಮಾಡಿದ ವೆಚ್ಚವು ಸಂಬಂಧಿಸಿದ ಕಾನೂನು, ನಿಯಮಗಳು, ನಿಬಂಧನೆಗಳು ಮತ್ತು ನಿರ್ದೇಶನಗಳಿಗೆ ಅನುಗುಣವಾಗಿದೆಯೇ ಎಂಬುದನ್ನು ಸಹ ಖಚಿತಪಡಿಸಿಕೊಳ್ಳುತ್ತದೆ. 2018–19ನೇ ವರ್ಷದಲ್ಲಿ 29 ಅನುದಾನ/ವಿನಿಯೋಗಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚದ ಸಂಕ್ಷಿಪ್ತ ಸ್ಥಿತಿಯನ್ನು **ಕೋಷ್ಟಕ 2.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.1: ಮೂಲ/ಪೂರಕ ಅವಕಾಶಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚದ ಸಂಕ್ಷಿಪ್ತ ಸ್ಥಿತಿ**

(₹ ಕೋಟಿಗಳಲ್ಲಿ)

| ವೆಚ್ಚದ ಸ್ವರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವ ವೆಚ್ಚ | ಬಳಕೆಯಾಗದ ಅವಕಾಶ(–)/ ಅವಕಾಶಕ್ಕಿಂತ ಅಧಿಕ ವೆಚ್ಚ(+) | ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚ್ 31ರಂದು ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚ್ 31ರಂದು (ಶೇಕಡ ವಾರು) ಉಳಿಕೆಯ ಅಧ್ಯರ್ಪಣೆ |
|---|---|---|---|---|---|---|---|---|---|
| ಪುರಸ್ಕೃತ | I ರಾಜಸ್ವ | 1,49,168.61 | 14,703.43 | 1,63,872.04 | 1,48,976.27 | 14,895.77 | 8,036.77 | 8,036.77 | 100 |
| | II ಬಂಡವಾಳ | 35,442.84 | 3,978.02 | 39,420.86 | 35,053.78 | 4,367.08 | 1,609.61 | 1,609.61 | 100 |
| | III ಸಾಲಗಳು ಮತ್ತು ಮುಂಗಡಗಳು | 7,140.48 | 2,672.88 | 9,813.36 | 5,810.94 | 4,002.42 | 131.50 | 131.50 | 100 |
| ಒಟ್ಟು ಪುರಸ್ಕೃತ | | **1,91,751.93** | **21,354.33** | **2,13,106.26** | **1,89,840.99** | **23,265.27** | **9,777.88** | **9,777.88** | |
| ಪ್ರಭೃತ | *IV ರಾಜಸ್ವ* | *19,785.59* | *140.88* | *19,926.47* | *18,257.00* | *1,669.47* | *472.47* | *472.47* | *100* |
| | *V ಸಾರ್ವಜನಿಕ ಋಣ ಪಾವತಿ* | *11,135.84* | *67.09* | *11,202.93* | *11,094.58* | *108.35* | *120.31* | *120.31* | *100* |
| | *VI ಬಂಡವಾಳ* | *1,437.41* | *0.00* | *1,437.41* | *1,341.53* | *95.88* | *0.01* | *0.01* | *100* |
| ಒಟ್ಟು ಪ್ರಭೃತ | | ***32,358.84*** | ***207.97*** | ***32,566.81*** | ***30,693.11*** | ***1,873.70*** | ***592.79*** | ***592.79*** | |
| ಒಟ್ಟು ಮೊತ್ತ | | **2,24,110.77** | **21,562.30** | **2,45,673.07** | **2,20,534.10** | **25,138.97** | **10,370.67** | **10,370.67** | |

*ಆಕರ: ಧನವಿನಿಯೋಗ ಲೆಕ್ಕಗಳು.*

2018–19ರಲ್ಲಿ ₹2,45,673.07 ಕೋಟಿಗಳ ಅವಕಾಶಕ್ಕೆ ಪ್ರತಿಯಾಗಿ ₹2,20,534.10 ಕೋಟಿಗಳ ವೆಚ್ಚವನ್ನು ಭರಿಸಲಾಗಿದ್ದು, ₹25,138.97 ಕೋಟಿಗಳ ಅವಕಾಶವು ಬಳಕೆಯಾಗದೆ ಉಳಿಯುವುದರಲ್ಲಿ ಪರಿಣಮಿಸಿತು (ಶೇಕಡಾ 10).

## 2.3 ವೆಚ್ಚದ ಮೇಲಿನ ಟಿಪ್ಪಣಿಗಳು

ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದ ಹೊರತು ಮತ್ತು ಧನವಿನಿಯೋಗ ಕಾಯಿದೆ ಅಡಿಯಲ್ಲಿ/ಹಣದ ಪುನರ್ವಿನಿಯೋಗದ ಮೂಲಕ ಸಾಕಷ್ಟು ಹಣವನ್ನು ಒದಗಿಸಿದ ಹೊರತು ಸಾರ್ವಜನಿಕ ನಿಧಿಯಿಂದ ಹಣವನ್ನು ವೆಚ್ಚ ಮಾಡಲಾಗುವುದಿಲ್ಲ. ಶಾಸನಸಭೆಯಲ್ಲಿ ಮಂಡಿಸುವ ಅನುದಾನಗಳ ಬೇಡಿಕೆಗಳ ಸಾರಾಂಶವು, ಬೇಡಿಕೆಗೆ ಲಗತ್ತಿಸಿರುವ ಅನುಸೂಚಿಗಳಲ್ಲಿ ತಿಳಿಸಿರುವಂತೆ ವರ್ಷದ ಅವಧಿಯಲ್ಲಿ ವಿವಿಧ ನಿರ್ದಿಷ್ಟ ಸೇವೆಗಳ ಮೇಲಿನ ವೆಚ್ಚವನ್ನು ಭರಿಸಲು ಅನುಮೋದನೆಯನ್ನು ಕೋರುತ್ತದೆ. ಹಾಗೆ ತೋರಿಸಿದ ವೆಚ್ಚವು, ಸೆಳೆದ ಮೊತ್ತಗಳು ಆಯಾ ಉದ್ದೇಶಕ್ಕೆ ಖರ್ಚು ಮಾಡಲಾಗಿದೆ ಎಂಬುದನ್ನು ಸೂಚಿಸುತ್ತದೆ.

ಮಂಜೂರಾತಿಯ ನಿಯಮಾನುಸಾರ ಮತ್ತು ಮೂಲ ಉದ್ದೇಶಕ್ಕಾಗಿ ಹಣವನ್ನು ವೆಚ್ಚ ಮಾಡಲಾಗಿದೆ ಎಂಬ ಎಣಿಕೆಯು, ಕೆಳಗೆ ಚರ್ಚಿಸಿದಂತೆ, ದೋಷಯುಕ್ತವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### 2.3.1 ವೆಚ್ಚವನ್ನು ಅಧಿಕವಾಗಿ/ಕಡಿಮೆಯಾಗಿ ಹೇಳಿರುವುದು

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು (ಎನ್‌ಡಿಸಿ ಬಿಲ್ಲುಗಳು) ಸಲ್ಲಿಸದಿರುವುದು ಮತ್ತು ಸಾರ್ವಜನಿಕ ಲೆಕ್ಕದಡಿಯಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ನಿಧಿಗಳಲ್ಲಿನ ಬಳಕೆಯಾಗದ ಮೊತ್ತಗಳ ಕಾರಣದಿಂದ ವೆಚ್ಚವನ್ನು ಅಧಿಕವಾಗಿ ಹೇಳಲಾಗಿದೆ. ಜೊತೆಗೆ, ಮೀಸಲು ನಿಧಿಯಲ್ಲಿ ಕೆಲವು ವಹಿವಾಟುಗಳನ್ನ ಪ್ರಾರಂಭಿಸದಿರುವುದರಿಂದ ವೆಚ್ಚವನ್ನು ಕಡಿಮೆ ಹೇಳಲಾಗಿದೆ. ಮೇಲಿನ ವಹಿವಾಟುಗಳ ಪರಿಣಾಮವನ್ನು **ಕೋಷ್ಟಕ 2.2**ರಲ್ಲಿ ನೀಡಲಾಗಿದೆ (ಇವು ಕೇವಲ ಉದಾಹರಣೆಗಳು ಮಾತ್ರ).

**ಕೋಷ್ಟಕ 2.2: ವೆಚ್ಚವನ್ನು ಅಧಿಕವಾಗಿ/ಕಡಿಮೆಯಾಗಿ ಹೇಳಿರುವುದು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವೆಚ್ಚವನ್ನು ಅಧಿಕವಾಗಿ ಹೇಳಿರುವುದು | ಮೊತ್ತ | ವೆಚ್ಚವನ್ನು ಕಡಿಮೆ ಹೇಳಿರುವುದು | ಮೊತ್ತ |
|---|---|---|---|---|
| 1 | 2018–19ರ ಅವಧಿಯಲ್ಲಿ ಡಿಡಿಓಗಳು ಸೆಳೆದ ಎಸಿ ಬಿಲ್ಲುಗಳಿಗೆ ಎನ್‌ಡಿಸಿ ಬಿಲ್ಲುಗಳನ್ನು ಸಲ್ಲಿಸದಿರುವುದು (ವಿವರಗಳು ಕಂಡಿಕೆ 3.6ರಲ್ಲಿವೆ) | 52.37 | ಸಂಗ್ರಹಿಸಿದ ಹಸಿರು ತೆರಿಗೆಯನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾವಣೆ ಮಾಡದಿರುವುದು (ವಿವರಗಳು ಕಂಡಿಕೆ 1.10.4ರಲ್ಲಿವೆ) | 27.20 |
| 2 | ಸಾರ್ವಜನಿಕ ಲೆಕ್ಕದಲ್ಲಿ ಜಿಲ್ಲಾ ಪಂಚಾಯತ್ ನಿಧಿಯಡಿಯಲ್ಲಿ ಅದಕ್ಕೆ ಬಿಡುಗಡೆ ಮಾಡಿದ ಮೊತ್ತದಲ್ಲಿ (₹7,546.53 ಕೋಟಿ) ಬಳಕೆಯಾಗದೇ ಉಳಿದಿರುವುದು | 492.17 | ಹೂಡಿಕೆ ಮಾಡದಿರುವುದು ಹಾಗೂ ಮೊತ್ತವನ್ನು ಸಂಚಿತ ಋಣಪರಿಹಾರ ನಿಧಿಗೆ ಹೊಂದಾಣಿಕೆ ಮಾಡದಿರುವುದು (ವಿವರಗಳು ಕಂಡಿಕೆ 1.10.4ರಲ್ಲಿವೆ) | 465.29 |
| 3 | ಸಾರ್ವಜನಿಕ ಲೆಕ್ಕದಲ್ಲಿ ತಾಲ್ಲೂಕು ಪಂಚಾಯತ್ ನಿಧಿಯಡಿಯಲ್ಲಿ ಅದಕ್ಕೆ ಬಿಡುಗಡೆ ಮಾಡಿದ ಮೊತ್ತದಲ್ಲಿ (₹15,005.71 ಕೋಟಿ) ಬಳಕೆಯಾಗದೇ ಉಳಿದಿರುವುದು | 814.65 | | |
| 4 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವೆಚ್ಚದ ವರ್ಗಾವಣೆಯನ್ನು ಮಾಡದಿರುವುದು (ವಿವರಗಳು ಕಂಡಿಕೆ 1.10.4ರಲ್ಲಿವೆ) | 299.20 | | |
| ಒಟ್ಟು | | **1,658.39** | | **492.49** |

ಮೇಲಿನ ಕೋಷ್ಟಕದಿಂದ ₹1,165.90 ಕೋಟಿಗಳ ಮಟ್ಟಿಗೆ ವೆಚ್ಚವನ್ನು ಅಧಿಕವಾಗಿ ತೋರಿಸಿರುವುದನ್ನು ಗಮನಿಸಬಹುದು.

### 2.3.2 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತ

ಸಂವಿಧಾನದ 204 ಮತ್ತು 205ನೇ ವಿಧಿಗಳಡಿಯಲ್ಲಿನ ಸಂಬಂಧಿತ ಧನವಿನಿಯೋಗ ಕಾಯಿದೆಗಳಡಿಯಲ್ಲಿ ಶಾಸಕಾಂಗದಿಂದ ಅನುಮೋದಿತವಾಗದ ಹೊರತು ರಾಜ್ಯದ ಸಂಚಿತ ನಿಧಿಯಿಂದ ಹಣ ಸೆಳೆಯುವನ್ನು ಭಾರತದ ಸಂವಿಧಾನದ 266(3)ನೇ ವಿಧಿಯು ನಿಷೇಧಿಸುತ್ತದೆ.

2018–19ರಲ್ಲಿ 19 ಅನುದಾನಗಳ ರಾಜಸ್ವ/ಬಂಡವಾಳ ವರ್ಗಗಳಡಿಯಲ್ಲಿ ₹3,940.35 ಕೋಟಿಗಳನ್ನು (ಇವು ಕೇವಲ ಉದಾಹರಣೆಯಾಗಿ ಮಾತ್ರ) 77 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಿ ನಂತರ ಪೂರಕ ಅಂದಾಜುಗಳ ಮೂಲಕ ಸಕ್ರಮಗೊಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ 2.1**). ಈ ಹೆಚ್ಚುವರಿಗಳ ಮೂಲಕ ಮಾಡಿದ ವೆಚ್ಚವನ್ನು 6ನೇ ವೇತನ ಆಯೋಗದ ಅನುಷ್ಠಾನದ ಪಾವತಿ, ಪೂರಕ ವೆಚ್ಚಗಳು, ಬಾಕಿಯಿರುವ ಬಿಲ್‌ಗಳ ಪಾವತಿ, ಅರ್ಹ ಕೈಗಾರಿಕೆಗಳಿಗೆ ಮಾರಾಟ ತೆರಿಗೆ ಮರುಪಾವತಿ ಮುಂತಾದ ವಾಡಿಕೆಯ ಬಾಬ್ತುಗಳ ಮೇಲೆ ಮಾಡಿರುವುದನ್ನು ಗಮನಿಸಲಾಯಿತು ಮತ್ತು ಈ ವೆಚ್ಚಗಳು ತುರ್ತು/ಅನಿರೀಕ್ಷಿತ ವೆಚ್ಚಗಳೆಂದು ಪರಿಗಣಿಸಲು ಅರ್ಹವಾಗಿರಲಿಲ್ಲ ಹಾಗೂ ಇದಕ್ಕಾಗಿ ಪೂರಕ ಬೇಡಿಕೆಗಳ ಸಲ್ಲಿಸುವಿಕೆಗಾಗಿ ನಿರೀಕ್ಷೆ ಮಾಡಬಹುದಾಗಿತ್ತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಐದನೇ ವರದಿಯಲ್ಲಿ (ಹದಿನಾಲ್ಕನೇ ವಿಧಾನಸಭೆ) ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಮಂಜೂರು ಮಾಡುವುದನ್ನು ತತ್ಕಾಲದ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸಬೇಕು ಎಂದು ಶಿಫಾರಸು ಮಾಡಿತ್ತು (ಜುಲೈ 2015) (ದಿನಾಂಕ 6 ಆಗಸ್ಟ್ 2015ರ ಸರ್ಕಾರದ ಆದೇಶದ ಕಂಡಿಕೆ 5). ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ಹೊರತಾಗಿಯೂ ಶಾಸಕಾಂಗದ ಅನುಮೋದನೆಯಿಲ್ಲದೆ ವೆಚ್ಚವನ್ನು ಭರಿಸಿರುವುದನ್ನು ಗಮನಿಸಲಾಯಿತು.

**ಕೋಷ್ಟಕ 2.3: 2015–19ರಲ್ಲಿ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಿದ ಹೆಚ್ಚುವರಿ ಮೊತ್ತಗಳು**

(₹ ಕೋಟಿಗಳಲ್ಲಿ)

| ವರ್ಷ | ಅನುದಾನಗಳ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| **2015–16** | 25 | 190 | 5,065.69 |
| **2016–17** | 26 | 293 | 6,057.11 |
| **2017–18** | 20 | 128 | 3,747.77 |
| **2018–19** | 19 | 77 | 3,940.35 |

**ಸಂವಿಧಾನದ 266(3)ನೇ ವಿಧಿಯು ಪೂರಕ ಬೇಡಿಕೆಗಳನ್ನು ಮಂಡಿಸುವ ಮೂಲಕ ಶಾಸಕಾಂಗದ ಅನುಮೋದನೆ ಪಡೆಯದೆ ಆದಾಯಗಳ ವಿನಿಯೋಗವನ್ನು ನಿರ್ಬಂಧಿಸುತ್ತದೆ. ಈ ತತ್ವವನ್ನು ಸಾಧ್ಯವಾದಷ್ಟು ಗರಿಷ್ಠ ಮಟ್ಟದಲ್ಲಿ ಪಾಲಿಸಬೇಕಿದೆ.**

ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿಗಳನ್ನು ಮಂಜೂರು ಮಾಡುವುದನ್ನು ಕೇವಲ ಸಮರ್ಥನೀಯ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸುವ ಪ್ರಯತ್ನಗಳನ್ನು ಮುಂದಿನ ವರ್ಷಗಳಲ್ಲಿ ಮಾಡಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### 2.3.3 ಸಕ್ರಮೀಕರಣದ ಅಗತ್ಯವಿರುವ ಅಧಿಕ ವೆಚ್ಚಗಳು

ಭಾರತ ಸಂವಿಧಾನದ 204 ವಿಧಿಯಡಿಯಲ್ಲಿನ ಸಂಬಂಧಿತ ಧನವಿನಿಯೋಗ ಕಾಯಿದೆಯಡಿಯಲ್ಲಿ ಶಾಸಕಾಂಗದಿಂದ ಅನುಮೋದಿತವಾಗದ ಹೊರತು ರಾಜ್ಯದ ಸಂಚಿತ ನಿಧಿಯಿಂದ ಹಣ ಸೆಳೆಯುವಂತಿಲ್ಲ ಮತ್ತು 205ನೇ ವಿಧಿಯು ಅನುದಾನ/ವಿನಿಯೋಗದ ಮೇಲಿನ ಅಧಿಕವನ್ನು ರಾಜ್ಯ ಶಾಸಕಾಂಗದಿಂದ ಸಕ್ರಮಗೊಳಿಸಬೇಕೆಂದು ಕಡ್ಡಾಯ ವಿಧಿಸುತ್ತದೆ. ವಿಧಿಯ ಅಡಿಯಲ್ಲಿ ವೆಚ್ಚದ ಸಕ್ರಮೀಕರಣಕ್ಕೆ ಯಾವುದೇ ಸಮಯದ ಚೌಕಟ್ಟನ್ನು ನಿಗದಿಪಡಿಸಿರದಿದ್ದರೂ ಸಹ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಧನವಿನಿಯೋಗ ಲೆಕ್ಕಗಳ ಚರ್ಚೆಯು ಪೂರ್ಣಗೊಂಡ ನಂತರ ಅಧಿಕ ವೆಚ್ಚದ ಸಕ್ರಮೀಕರಣವನ್ನು ಮಾಡಲಾಗುತ್ತದೆ. 2018–19ರ ವರ್ಷದಲ್ಲಿ ಸಕ್ರಮೀಕರಣದ ಅಗತ್ಯವಿರುವ ಅವಕಾಶಗಳನ್ನು ಮೀರಿದ ವೆಚ್ಚಗಳನ್ನು ಒಳಗೊಂಡ ಯಾವುದೇ ಅನುದಾನಗಳು/ವಿನಿಯೊಗದ ಪ್ರಕರಣಗಳಿರಲಿಲ್ಲ. **ಅನುಬಂಧ 2.2**ರಲ್ಲಿ ತೋರಿಸಿರುವಂತೆ, 2012–13ರಿಂದ 2017–18ರ ಅವಧಿಯ ₹2,409.53 ಕೋಟಿಗಳಷ್ಟು ಒಟ್ಟು ಅಧಿಕ ವೆಚ್ಚವನ್ನು ಇನ್ನೂ ಸಕ್ರಮೀಕರಣಗೊಳಿಸಬೇಕಿದೆ. ಇದು ಭಾರತ ಸಂವಿಧಾನದ 204 ವಿಧಿಯಲ್ಲಿ ಹೇಳಿರುವಂತೆ ರಾಜ್ಯ ಶಾಸಕಾಂಗದಿಂದ ಅನುಮತಿ ಇಲ್ಲದೆ ಸಂಚಿತ ನಿಧಿಯಿಂದ ಹಣ ಸೆಳೆಯುವಂತಿಲ್ಲ ಎಂಬ ನಿಯಮದ ಉಲ್ಲಂಘನೆಯಾಗಿದೆ. ಮತ್ತು ಇದು ಆಯವ್ಯಯದ ಹಣಕಾಸು ನಿಯಂತ್ರಣವನ್ನು ದುರ್ಬಲಗೊಳಿಸುವುದಲ್ಲದೆ ಸಾರ್ವಜನಿಕ ಸಂಪನ್ಮೂಲದ ನಿರ್ವಹಣೆಯಲ್ಲಿನ ಆರ್ಥಿಕ ಅಶಿಸ್ತನ್ನು ಉತ್ತೇಜಿಸುತ್ತದೆ.

**ಸಾರ್ವಜನಿಕ ಲೆಕ್ಕಪತ್ರ ಸಮಿತಿಯೊಂದಿಗೆ ಸಮಾಲೋಚಿಸಿ ಹಿಂದಿನ ವರ್ಷಗಳ ಅಧಿಕ ವೆಚ್ಚವನ್ನು ಸಕ್ರಮಗೊಳಿಸುವ ಬಗ್ಗೆ ಶೀಘ್ರ ಕ್ರಮವನ್ನು ಕೈಗೊಳ್ಳಬೇಕಿದೆ.**

2012–13ರ ನಂತರದ ಅಧಿಕ ವೆಚ್ಚಗಳನ್ನು ಸಕ್ರಮೀಕರಣಗೊಳಿಸಲು ಉಪಕ್ರಮಿಸಲಾಗಿದೆ ಮತ್ತು ಈ ಸಂಬಂಧವಾಗಿ ಶೀಘ್ರದಲ್ಲಿಯೇ ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### 2.3.4 ಹೊಸ ಸೇವೆ/ಹೊಸ ಸೇವೆಗಳ ಸಾಧನ

ಸಂವಿಧಾನದ 205ನೇ ವಿಧಿಯ ಅನ್ವಯ ವಾರ್ಷಿಕ ಮುಂಗಡ ಪತ್ರದಲ್ಲಿ ನಿರೀಕ್ಷಿಸಿರದ 'ಹೊಸ ಸೇವೆ'ಯ ಮೇಲಿನ ವೆಚ್ಚವನ್ನು, ಅದಕ್ಕೆ ಶಾಸನಸಭೆಯಿಂದ ನಿರ್ದಿಷ್ಟ ಅನುಮೋದನೆ ದೊರೆತ ಮೇಲಷ್ಟೇ ಭರಿಸಬಹುದಾಗಿದೆ. ಸರ್ಕಾರವು ಸಾರ್ವಜನಿಕ ಲೆಕ್ಕ ಸಮಿತಿಯ ನಾಲ್ಕನೆಯ ವರದಿಯ (ಹದಿನಾಲ್ಕನೆ ವಿಧಾನಸಭೆ) ಶಿಫಾರಸಿನ ಮೇಲೆ 'ಹೊಸ ಸೇವೆ' ಯ ಮಾನದಂಡಗಳು ಅನ್ವಯಿಸದ ಕೆಲವು ವೆಚ್ಚದ ಬಾಬ್ತುಗಳನ್ನು ವಿನಾಯಿತಿಗೊಳಿಸಿ ಹಾಗೂ 'ಹೊಸ ಸೇವೆ' ಯನ್ನು ನಿರ್ಧರಿಸಲು ಇರುವ ಮಾನದಂಡಗಳನ್ನು ನಿಗದಿಗೊಳಿಸಿ, ಆಗಸ್ಟ್ 2015ರಲ್ಲಿ ಆದೇಶವನ್ನು ಹೊರಡಿಸಿತು. 'ಹೊಸ ಸೇವೆ'ಯ ಈ ಪರಿಷ್ಕೃತ ಮಾನದಂಡಗಳು 2015–16ನೇ ವರ್ಷದಿಂದ ಜಾರಿಗೆ ಬಂದಿವೆ. ಮೇಲಿನ ಆದೇಶದ ಅನ್ವಯ ಈಗಾಗಲೇ ಅವಕಾಶ ಕಲ್ಪಿಸಿರುವ ಮತ್ತು ಶಾಸಕಾಂಗದ ಅನುಮೋದನೆ ಪಡೆದಿರುವ ಪ್ರಕರಣಗಳು ಒಂದು ವೇಳೆ ಮುಂದೆ ವೆಚ್ಚಗಳು ಮೂಲತ: ಆಯವ್ಯಯದಲ್ಲಿ ಒದಗಿಸಿರುವ ಅವಕಾಶವನ್ನು ಮೀರಬಹುದಾಗಿದ್ದಲ್ಲಿ, ವಾಸ್ತವ ವೆಚ್ಚದ ಮೊತ್ತವು ಮೂಲ ಅವಕಾಶದ ಎರಡರಷ್ಟು ಅಥವಾ ₹5 ಕೋಟಿ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಮೀರದಿದ್ದಲ್ಲಿ ಆ ಬಾಬ್ತುಗಳನ್ನು '**ಹೊಸ ಸೇವೆ**' ಎಂದು ಪರಿಗಣಿಸಲಾಗುವುದಿಲ್ಲ.

2018–19ನೇ ವರ್ಷದಲ್ಲಿ ಮೂರು ಅನುದಾನಗಳನ್ನು ಒಳಗೊಂಡಿದ್ದ ನಾಲ್ಕು ಪ್ರಕರಣಗಳಲ್ಲಿ, 'ಹೊಸ ಸೇವೆ/ ಹೊಸ ಸೇವೆಗಳ ಸಾಧನ' ಎಂದು ಪರಿಗಣಿಸಬೇಕಿದ್ದ ₹686.82 ಕೋಟಿಗಳಷ್ಟು ಮೊತ್ತದ ಅಧಿಕ

ವೆಚ್ಚವನ್ನು ಶಾಸಕಾಂಗದ ಅನುಮೋದನೆ ಪಡೆಯದೆ ಭರಿಸಲಾಗಿದೆ. ವಿವರಗಳನ್ನು **ಕೋಷ್ಟಕ 2.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.4: ಹೊಸ ಸೇವೆ/ಹೊಸ ಸೇವೆಗಳ ಸಾಧನದ ಪ್ರಕರಣಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ ಸಂಖ್ಯೆ/ಹೆಸರು | ಪ್ರಧಾನ ಲೆಕ್ಕಶೀರ್ಷಿಕೆ | ಒಟ್ಟು ಅನುದಾನ | ವೆಚ್ಚ | ಅಧಿಕ |
|---|---|---|---|---|---|
| 1 | 12–ಮಾಹಿತಿ, ಪ್ರವಾಸೋದ್ಯಮ ಮತ್ತು ಯುವ ಸೇವೆಗಳು | 3452–80–104–0–04–106–ಸಹಾಯಾನುದಾನಗಳು | 5.00 | 15.10 | (+)10.10 |
| 2 | 19–ನಗರಾಭಿವೃದ್ಧಿ | 3604–00–191–1–51–240 – ಋಣ ಸೇವೆಗಳು | 0.00 | 573.67 | (+)573.67 |
| 3 | 20–ಲೋಕೋಪಯೋಗಿ | 3054–03–337–0–07–200 – ನಿರ್ವಹಣಾ ವೆಚ್ಚ | 37.46 | 117.46 | (+)80.00 |
| 4 | | 4711–02–103–2–00–139 – ಬೃಹತ್ ಕಾಮಗಾರಿಗಳು | 9.86 | 32.91 | (+)23.05 |
| ಒಟ್ಟು | | | | | **686.82** |

*ಆಕರ: ಧನವಿನಿಯೋಗ ಲೆಕ್ಕಗಳು*

ಕ್ರಮಸಂಖ್ಯೆ.2ರಲ್ಲಿನ ಪ್ರಕರಣವು, **ಕಂಡಿಕೆ 2.4.2**ರಲ್ಲಿ ಚರ್ಚಿಸಿರುವಂತೆ, ಪುರಸ್ಕೃತದ ಬದಲಿಗೆ ಪ್ರಭೃತದ ಅಡಿಯಲ್ಲಿ ಅವಕಾಶವನ್ನು ತಪ್ಪಾಗಿ ವರ್ಗೀಕರಿಸಿದ್ದರಿಂದ ಹೊಸ ಸೇವೆಯ ಮಾನದಂಡವನ್ನು ಆಕರ್ಷಿಸುತ್ತದೆ.

**'ಹೊಸ ಸೇವೆ/ಹೊಸ ಸೇವೆಗಳ ಸಾಧನ' ಮಾನದಂಡವನ್ನು ಆಕರ್ಷಿಸುವ ಮೊತ್ತಗಳ ಸೆಳೆಯುವಿಕೆಯನ್ನು ನಿಯಮಿತವಾಗಿ ಆಯವ್ಯಯಕ್ಕೆ ಪ್ರತಿಯಾಗಿ ವೆಚ್ಚದ ತಾಳೆ ಮಾಡುವುದರಿಂದ ತಪ್ಪಿಸಬಹುದು.**

ಮುಂದೆ ಅಂತಹ ತಪ್ಪುಗಳನ್ನು ನಿವಾರಿಸಲು ಅಗತ್ಯವಾದ ಪರಿಶೀಲನೆಗಳನ್ನು ನಡೆಸಲಾಗುವುದೆಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

## 2.4 ಆಯವ್ಯಯದಲ್ಲಿ ದೋಷಗಳು

ರಾಜಸ್ವ/ಬಂಡವಾಳ ಮತ್ತು ಪುರಸ್ಕೃತ/ಪ್ರಭೃತಗಳ ಮೇಲಿನ ವಹಿವಾಟುಗಳ ತಪ್ಪಾದ ವರ್ಗೀಕರಣವು ಸಂಬಂಧಪಟ್ಟ ಶೀರ್ಷಿಕೆಗಳಡಿಯಲ್ಲಿ ವಹಿವಾಟುಗಳ ವರ್ಗೀಕರಣದ ನಿಯಮಗಳ ಅನ್ವಯದಲ್ಲಿನ ಕೊರತೆಯನ್ನು ಸೂಚಿಸುತ್ತದೆ. ಈ ವಹಿವಾಟುಗಳು ರಾಜಸ್ವ ಲೆಕ್ಕದ ಮೇಲೆ ಮತ್ತು ರಾಜಸ್ವ ಅಧಿಕದಂತಹ ಆರ್ಥಿಕ ಸೂಚಕಗಳ ಮೇಲೆ ಪರಿಣಾಮ ಬೀರುತ್ತವೆ ಮತ್ತು ಅವುಗಳನ್ನು ವರ್ಷದ ಪ್ರಾರಂಭದಲ್ಲಿ ಆಯವ್ಯಯ ದಸ್ತಾವೇಜುಗಳಲ್ಲಿ ತೋರಿಸಲಾಗುತ್ತದೆ. ಕಳೆದ ವರ್ಷದ ಲೆಕ್ಕಗಳಲ್ಲಿ ದಾಖಲಿಸಿದ ವೆಚ್ಚವೊಂದಕ್ಕೆ ಅವಕಾಶ ಕಲ್ಪಿಸುವುದು ಸಹ ದೋಷಪೂರಿತ ಆಯವ್ಯಯವಾಗುತ್ತದೆ. ಅಲ್ಲದೆ, ಆ ವರ್ಷದಲ್ಲಾದ ವೆಚ್ಚವನ್ನು ತಿಳಿಯಲು ಮತ್ತು ಭವಿಷ್ಯದ ಆಯವ್ಯಯ ತಯಾರಿಕೆಗಾಗಿ ವಹಿವಾಟುಗಳನ್ನು ಸರಿಯಾದ ಉದ್ದೇಶ ಶೀರ್ಷಿಕೆಯಡಿ ವರ್ಗೀಕರಿಸುವುದು ಅವಶ್ಯಕವಾಗಿದೆ.

### 2.4.1 'ಬಂಡವಾಳ' ಮತ್ತು 'ರಾಜಸ್ವ' ನಡುವಿನ ತಪ್ಪು ವರ್ಗೀಕರಣ

2018–19ರ ಅವಧಿಯಲ್ಲಿ ₹108.40 ಕೋಟಿಗಳ ಮೊತ್ತವನ್ನು 'ಬಂಡವಾಳ' ಮತ್ತು 'ರಾಜಸ್ವ' ಗಳ ನಡುವೆ ತಪ್ಪಾಗಿ ವರ್ಗೀಕರಣ ಮಾಡಲಾಗಿತ್ತು. ವಿವರಗಳನ್ನು **ಕೋಷ್ಟಕ 2.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.5: 'ಬಂಡವಾಳ ಮತ್ತು 'ರಾಜಸ್ವ' ನಡುವಿನ ತಪ್ಪು ವರ್ಗೀಕರಣ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನ ಸಂಖ್ಯೆ | ಲೆಕ್ಕ ಶೀರ್ಷಿಕೆ | ಅವಕಾಶ | ವೆಚ್ಚ | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಸಂಕ್ಷಿಪ್ತ ಅಂಶ |
|---|---|---|---|---|---|
| ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚವೆಂದು ತೋರಿಸಿರುವುದು | | | | | |
| 1 | 25 – ಕನ್ನಡ ಮತ್ತು ಸಂಸ್ಕೃತಿ | 4202–04–800–1–08 – ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ | 38.06 | 28.06 | ಅವಕಾಶವು ಸಂಸ್ಥೆಗೆ ಒದಗಿಸಿದ್ದ ಅನುದಾನವಾಗಿತ್ತು. ಅನುದಾನಿತರಿಂದ ಪಡೆದ ಸಹಾಯಾನುದಾನವನ್ನು ಐಜಿಎಎಸ್–2ರ ಅನ್ವಯ ಅನುದಾನ ಪಡೆದವರ ಹಣಕಾಸಿನ ತ:ಖ್ತೆಯಲ್ಲಿ, ಯಾವ ಉದ್ದೇಶಕ್ಕಾಗಿ ಹಣವನ್ನು ವಿತರಿಸಲಾಗಿದೆ ಎಂಬುದನ್ನೂ ಗಣಿಸದೆ ರಾಜಸ್ವ ವೆಚ್ಚವೆಂದು ವರ್ಗೀಕರಿಸಿ ಲೆಕ್ಕವಿಡುವುದರಿಂದ ಈ ಅವಕಾಶವನ್ನು ರಾಜಸ್ವ ಎಂದು ವರ್ಗೀಕರಿಸಬೇಕಿತ್ತು. |
| 2 | 02– ಪಶುಸಂಗೋಪನೆ ಮತ್ತು ಮೀನುಗಾರಿಕೆ | 4403–00–101–0–11– ಕರ್ನಾಟಕ ಪಶುವೈದ್ಯಕೀಯ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ | 16.06 | 16.06 | |
| **ಹೀಗೆ ರಾಜಸ್ವ ವೆಚ್ಚವನ್ನು ₹44.12 ಕೋಟಿಗಳಷ್ಟು ಕಡಿಮೆ ಹೇಳಲಾಗಿದೆ.** | | | | | |
| ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚವೆಂದು ತೋರಿಸಿರುವುದು | | | | | |
| 3 | 05 – ಗೃಹ ಮತ್ತು ಸಾರಿಗೆ | 3055–00–190–0–03–240 – ಋಣ ಸೇವೆಗಳು | 80.97 | 64.28 | ಈ ಮೊತ್ತವನ್ನು ಋಣದ ಮರುಪಾವತಿಯ ಸಲುವಾಗಿ ಬಿಡುಗಡೆ ಮಾಡಲಾಗಿತ್ತು. ವೆಚ್ಚವು ಹೊಣೆಗಾರಿಕೆಯನ್ನು ಕಡಿಮೆಗೊಳಿಸುವುದರಿಂದ ಅದನ್ನು ಬಂಡವಾಳವೆಂದು ವರ್ಗೀಕರಿಸಬೇಕಿತ್ತು. |
| **ಹೀಗೆ ರಾಜಸ್ವ ವೆಚ್ಚವನ್ನು ₹64.28 ಕೋಟಿಗಳಷ್ಟು ಅಧಿಕವಾಗಿ ಹೇಳಲಾಗಿದೆ.** | | | | | |

2018–19ರ ಅವಧಿಯಲ್ಲಿ ₹20.16 ಕೋಟಿಗಳಷ್ಟು ರಾಜಸ್ವ ವೆಚ್ಚವನ್ನು ಹೆಚ್ಚಿಗೆ ಹೇಳಲಾಗಿತ್ತು ಮತ್ತು ತತ್ಸಂಬದ್ಧವಾಗಿ ರಾಜಸ್ವ ಅಧಿಕವನ್ನು ಕಡಿಮೆ ಹೇಳಲಾಗಿತ್ತು ಎಂಬುದು ಕೋಷ್ಟಕದಿಂದ ಸ್ಪಷ್ಟವಾಗುತ್ತದೆ.

ಆರ್ಥಿಕ ಇಲಾಖೆಯು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು ಮತ್ತು ತಪ್ಪು ವರ್ಗೀಕರಣವನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳುವುದಾಗಿ ನಿರ್ಗಮನ ಸಭೆಯಲ್ಲಿ ತಿಳಿಸಿತು (ಮಾರ್ಚ್ 2020).

### 2.4.2 ಆಯವ್ಯಯ ತಯಾರಿಸುವಾಗ 'ಪುರಸ್ಕೃತ' ಮತ್ತು 'ಪ್ರಭೃತ' ವಿಭಾಗಗಳ ನಡುವೆ ತಪ್ಪು ವರ್ಗೀಕರಣ

2018–19ರ ಅವಧಿಯಲ್ಲಿ, **ಕೋಷ್ಟಕ 2.6**ರಲ್ಲಿ ವಿವರಿಸಿರುವಂತೆ, ಪುರಸ್ಕೃತ ಮತ್ತು ಪ್ರಭೃತ ವಿಭಾಗಗಳಡಿ ₹621.88 ಕೋಟಿ ಮೊತ್ತವನ್ನು ಒಳಗೊಂಡ ತಪ್ಪು ವರ್ಗೀಕರಣದ ಎರಡು ಪ್ರಕರಣಗಳನ್ನು ಗಮನಿಸಲಾಯಿತು.

**ಕೋಷ್ಟಕ 2.6: 'ಪುರಸ್ಕೃತ' ಮತ್ತು 'ಪ್ರಭೃತ' ನಡುವೆ ತಪ್ಪು ವರ್ಗೀಕರಣ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನ ಸಂಖ್ಯೆ | ಲೆಕ್ಕ ಶೀರ್ಷಿಕೆ | ಅವಕಾಶ | ವೆಚ್ಚ | ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ್ದು |
|---|---|---|---|---|---|
| 1 | 03 – ಹಣಕಾಸು | 2071-01-104-0-06-240- ಋಣ ಸೇವೆಗಳು (ಪ್ರ) | *1.50* | *0.67* | ಕರ್ನಾಟಕ ಸರ್ಕಾರದ ಋಣ ಸೇವೆಗಳಿಗೆ ರಾಜ್ಯದ ಖಾತರಿಯಿದೆ ಎಂದು ಪರಿಗಣಿಸಲಾಗುತ್ತದೆ. ಆದುದರಿಂದ, ಅವುಗಳನ್ನು ಪ್ರಭೃತವೆಂದು ಪರಿಗಣಿಸಬೇಕು. ಆದರೆ, ಕೋಷ್ಟಕದಲ್ಲಿನ ಋಣ ಸೇವೆಗಳು ಪುರಸಭೆಗಳಿಗೆ ಉಪದಾನ ಮತ್ತು ನೆರವಿಗೆ ಸಂಬಂಧಿಸಿವೆ. ಹೀಗಾಗಿ ವೆಚ್ಚವು ಪುರಸ್ಕೃತದ ರೂಪದಲ್ಲಿದೆ. |
| 2 | 19 – ನಗರಾಭಿವೃದ್ಧಿ | 3604-00-191-1-51-240- ಋಣ ಸೇವೆಗಳು (ಪ್ರ) | *620.38* | *573.67* | |
| ಒಟ್ಟು | | | ***621.88*** | ***574.34*** | |

ಎರಡೂ ಲೆಕ್ಕಶೀರ್ಷಿಕೆಗಳಡಿಯಲ್ಲಿ 'ಪುರಸ್ಕೃತ' ಮತ್ತು 'ಪ್ರಭೃತ'ಗಳ ನಡುವಿನ ತಪ್ಪು ವರ್ಗೀಕರಣವನ್ನು 2019–20ರ ಹಣಕಾಸು ವರ್ಷದಲ್ಲಿ ಸರಿಪಡಿಸಿರುವುದಾಗಿ ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### 2.4.3 ಪ್ರಧಾನ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮಾಡಿದ ತಪ್ಪು ಅವಕಾಶಗಳು

ಕೆಲವು ಪ್ರಧಾನ ಲೆಕ್ಕಶೀರ್ಷಿಕೆಗಳಲ್ಲಿ ಅವಕಾಶಗಳಲ್ಲಿನ ತಪ್ಪುಗಳನ್ನು ಹಿಂದಿನ ರಾಜ್ಯಸರ್ಕಾರದ ಹಣಕಾಸಿನ ವ್ಯವಹಾರಗಳ ಮೇಲಿನ ಲೆಕ್ಕಪರಿಶೋಧನಾ ವರದಿಯಲ್ಲಿ (**ಕಂಡಿಕೆ 3.10.2** ಮತ್ತು **ಕಂಡಿಕೆ 2.4.4**) ಸೂಚಿಸಿದ್ದರೂ, 2018–19ರಲ್ಲಿಯೂ ತಪ್ಪುಗಳು ಮುಂದುವರೆದಿದ್ದವು, ಅವುಗಳನ್ನು ಕೆಳಗೆ ಚರ್ಚಿಸಲಾಗಿದೆ.

- 2017–18ರಲ್ಲಿ ರೈತರ ಸಾಲ ಮನ್ನಾ ಮಾಡುವುದನ್ನು ರಾಜಸ್ವ ವಿಭಾಗದ ಬದಲಿಗೆ ಬಂಡವಾಳ/ಸಾಲ ವಿಭಾಗದಡಿ ವರ್ಗೀಕರಿಸಲಾಗಿದ್ದು ಅದು ರಾಜಸ್ವ ಅಧಿಕದಂತಹ ಆರ್ಥಿಕ ಸೂಚಗಳ ಮೇಲೆ ಪರಿಣಾಮ ಬೀರುತ್ತದೆ. ಇಲಾಖೆಯು ಲೆಕ್ಕಪರಿಶೋಧನಾ ವ್ಯಾಖ್ಯೆಯನ್ನು ಒಪ್ಪಿಕೊಂಡಿತು ಮತ್ತು ಭವಿಷ್ಯದಲ್ಲಿ ಅಂತಹ ದೋಷಗಳನ್ನು ತಪ್ಪಿಸುವುದಾಗಿ ತಿಳಿಸಿತು. ಆದರೆ 2018–19ರಲ್ಲಿ ಲೆಕ್ಕ ಶೀರ್ಷಿಕೆ 6425-00-107-5-10-ಅಪೆಕ್ಸ್ ಬ್ಯಾಂಕ್‌ಗೆ ನೆರವು ಅಡಿಯಲ್ಲಿ ಸಾಲ ಮನ್ನಾ ಯೋಜನೆಯಡಿ ₹4,000 ಕೋಟಿಗಳ ಅವಕಾಶವನ್ನು ಕಲ್ಪಿಸಿರುವುದನ್ನು ಗಮನಿಸಲಾಯಿತು. ಇದನ್ನು ಸರಿಪಡಿಸುವುದಕ್ಕಾಗಿ ₹4,000 ಕೋಟಿಗಳಲ್ಲಿ ರಾಜಸ್ವ ಶೀರ್ಷಿಕೆ 2425-107-2-56-394-ಸಾಲ ಅಡಿಯಲ್ಲಿ ಅವಕಾಶವನ್ನು ಒದಗಿಸುವ ಮೂಲಕ ₹3,541 ಕೋಟಿಗಳನ್ನು ಅನುದಾನವನ್ನಾಗಿ ಪರಿವರ್ತಿಸಲಾಯಿತು. ಹೀಗೆ, ಬಂಡವಾಳ ವರ್ಗದಡಿಯಲ್ಲಿ ₹459 ಕೋಟಿ ಮೊತ್ತದ ಅಧಿಕ ಅವಕಾಶ ಮತ್ತು ಉಳಿತಾಯವಿದ್ದಿತು.

- ಎಲ್‌ಎಮ್‌ಎಮ್‌ಹೆಚ್ ನಲ್ಲಿನ ಪ್ರಧಾನ ಶೀರ್ಷಿಕೆ 6003 ಅಡಿಯಲ್ಲಿನ ಟಿಪ್ಪಣಿ (3)ರಲ್ಲಿನ ಸೂಚನೆಗಳ ಅನ್ವಯ ಕೋರಿಕೆ ಬಾರದ ಪರಿಹಾರ ಮತ್ತು ಇತರ ಬಾಂಡ್‌ಗಳ ಶಿಲ್ಕುಗಳನ್ನು ಸಾಮಾನ್ಯವಾಗಿ ಅವುಗಳ ಅವಧಿ ಮುಕ್ತಾಯ ದಿನದಿಂದ 20 ವರ್ಷಗಳವರೆಗೆ ಸರ್ಕಾರದ ಲೆಕ್ಕಗಳಲ್ಲಿ ಉಳಿಸಿಕೊಳ್ಳಲಾಗುತ್ತದೆ. ನಂತರ ಶಿಲ್ಕುಗಳನ್ನು '0075–ಇತರೆ ಸಾಮಾನ್ಯ ಸೇವೆಗಳು–ಇತರೆ ಸ್ವೀಕೃತಿಗಳು' ಶೀರ್ಷಿಕೆಗೆ ಜಮೆ ಮಾಡುವ ಮೂಲಕ ರಾಜಸ್ವಕ್ಕೆ ವರ್ಗಾವಣೆ ಮಾಡಲಾಗುತ್ತದೆ. ಆ ನಂತರ ಬೇಡಿಕೆ ಬಂದ ಈ ಮೊತ್ತಗಳ ಮರುಪಾವತಿಗಳನ್ನು 2075–ಇತರೆ ಸಾಮಾನ್ಯ ಸೇವೆಗಳು–ಇತರೆ ವೆಚ್ಚಗಳು' ಶೀರ್ಷಿಕೆಗೆ ಖರ್ಚು ಹಾಕಬೇಕು. ಆದರೆ, ಅಂತಹ ಕೋರಿಕೆಗಳಿಗಾಗಿ 2018–19ರ ಅವಧಿಯಲ್ಲಿ '2049–ಬಡ್ಡಿ ಪಾವತಿಗಳು' ಅಡಿಯಲ್ಲಿ ₹0.10 ಕೋಟಿಯ ಅವಕಾಶವನ್ನು ಮಾಡಿರುವುದು ಸರಿಯಲ್ಲ.

  ಇದಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು ಆಗತಾನೆ ಅವಧಿ ಪೂರೈಸಿದ ಪರಿಹಾರ ಬಾಂಡ್ ಒಂದನ್ನು 2018–19ರಲ್ಲಿ ಲೆಕ್ಕ ಮಾಡಲಾಗಿರುವ ನಿರ್ದಿಷ್ಟ ಪ್ರಕರಣವನ್ನು ಉಲ್ಲೇಖಿಸಿತು. ಆದರೆ, ಬಾಕಿ ಇರುವ ಪರಿಹಾರ ಬಾಂಡ್‌ಗಳ ಮೇಲೆ ಬಡ್ಡಿ ಪಾವತಿಗೆ ಅವಕಾಶವನ್ನು ಕಲ್ಪಿಸಿರುವುದರ ಬಗ್ಗೆ ಆಕ್ಷೇಪಣೆ ಇರುವುದರಿಂದ ಉತ್ತರವು ಅಪ್ರಸ್ತುತವಾಗಿದೆ.

### 2.4.4 ಉದ್ದೇಶ ಲೆಕ್ಕಶೀರ್ಷಿಕೆಗಳಡಿಯಲ್ಲಿ ವರ್ಗೀಕರಣ ದೋಷಗಳು

ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳ ಬಿಡುಗಡೆ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಉದ್ದೇಶ ಶೀರ್ಷಿಕೆ ಹಂತದ ವರ್ಗೀಕರಣದಲ್ಲಿ ತಪ್ಪಾದ ಆಯವ್ಯಯ ಕ್ರಮವನ್ನು ಅನುಸರಿಸಿರುವುದರಿಂದ ಆಯವ್ಯಯ/ವೆಚ್ಚಗಳಿಗೆ ಧಕ್ಕೆಯಾಗಿದೆ. ಅಂತಹ ತಪ್ಪಾದ ವರ್ಗೀಕರಣವು ಪಿಂಚಣಿ ಮತ್ತು ಇತರೆ ನಿವೃತ್ತಿ ವೇತನಗಳ ಅಡಿಯಲ್ಲಿ ₹35.93 ಕೋಟಿಯಷ್ಟು, ಸಂಚಿತ ವೇತನಗಳ ಅಡಿಯಲ್ಲಿ ₹797.95 ಕೋಟಿಯಷ್ಟು ಮತ್ತು ನಿರ್ವಹಣಾ ವೆಚ್ಚದಡಿ ₹476.76 ಕೋಟಿಯಷ್ಟು ಇದ್ದಿತು. ನಿರ್ದಿಷ್ಟ ಸಂಕೇತದೊಂದಿಗೆ ಪ್ರತ್ಯೇಕ ಉದ್ದೇಶ ಶೀರ್ಷಿಕೆಯ ಅನುಪಸ್ಥಿತಿಯು ರಾಜ್ಯದಲ್ಲಿ ಭರಿಸಿದ ವೆಚ್ಚದೊಂದಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಭರಿಸಿದ ವೆಚ್ಚದ ಬೇರ್ಪಡಿಸುವಿಕೆಯನ್ನು ತಡೆಹಿಡಿಯುತ್ತದೆ. ಇದನ್ನು ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ತೋರಿಸಿದ್ದರೂ ಸಹ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಂಡಿಲ್ಲ.

ಭವಿಷ್ಯದಲ್ಲಿ ಈ ಸಮಸ್ಯೆಯನ್ನು ಪರಿಶೀಲಿಸಲಾಗುವುದು ಎಂದು ನಿರ್ಗಮನ ಸಭೆಯ ನಂತರ ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### 2.4.5 ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಹಿಂದಿನ ವರ್ಷದ ವೆಚ್ಚಕ್ಕೆ ಅವಕಾಶ ಕಲ್ಪಿಸಿರುವುದು

ಲೆಕ್ಕಶೀರ್ಷಿಕೆ 6801–00–205–1–80–394–ಸಾಲಗಳು ಅಡಿಯಲ್ಲಿ ಬೆಂಗಳೂರು ಉನ್ನತೀಕರಣ ಯೋಜನೆಯ ಸಾಲ ಹೊಂದಾಣಿಕೆಗೆ 2018–19ರಲ್ಲಿ ಪೂರಕ ಅಂದಾಜಿನಲ್ಲಿ ₹12.95 ಕೋಟಿಗಳ ಅವಕಾಶವನ್ನು (ಎರಡನೇ ಕಂತು) ಮಾಡಲಾಗಿತ್ತು. ಅವಕಾಶವನ್ನು ಒದಗಿಸುವಾಗ 2017–18ರಲ್ಲಿ ಹೊರಡಿಸಿದ್ದ ಹೊಂದಾಣಿಕೆ ಆದೇಶವನ್ನು ಆಯವ್ಯಯ ಅವಕಾಶವು ಲಭ್ಯವಿರದ ಕಾರಣ ಜಾರಿಗೊಳಿಸಿರಲಿಲ್ಲವಾದ್ದರಿಂದ ಮೊತ್ತವನ್ನು ಒದಗಿಸಲಾಯಿತು ಎಂದು ಹೇಳಲಾಗಿತ್ತು. ಆದರೆ, ದಿನಾಂಕ 31 ಮಾರ್ಚ್ 2018ರ ಸರ್ಕಾರಿ ಆದೇಶದಲ್ಲಿ ಒದಗಿಸಿದ್ದ ವರ್ಗೀಕರಣದ ಆಧಾರದ ಮೇಲೆ ಪುಸ್ತಕ ಹೊಂದಾಣಿಕೆಯನ್ನು ಅದಾಗಲೇ ಮಾಡಲಾಗಿತ್ತು ಮತ್ತು ಇದರ ಬಗ್ಗೆ 'ಹೊಸ ಸೇವೆಯನ್ನು' ಆಕರ್ಷಿಸುವ, ಸಕ್ರಮೀಕರಣದ ಅಗತ್ಯವಿರುವ ಅಧಿಕ ವೆಚ್ಚದ ಮೇಲೆ ಟೀಕೆಯನ್ನು ಸೇರಿಸಲಾಗಿದೆ ಎಂಬುದನ್ನು ಗಮನಿಸಲಾಯಿತು. ಇದರಿಂದ, ಪ್ರಸಕ್ತ ವರ್ಷದಲ್ಲಿ ಮಾಡಿದ ಅವಕಾಶವು ತಪ್ಪಾಗಿದ್ದಿತು ಮತ್ತು ಅನವಶ್ಯಕವಾಗಿದ್ದು ಆಯವ್ಯಯದಲ್ಲಿ ₹12.95 ಕೋಟಿಗಳನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. ಆರ್ಥಿಕ ಇಲಾಖೆಯು ಪೂರ್ಣ ಮೊತ್ತವನ್ನು ಅಧ್ಯರ್ಪಣೆ ಮಾಡಲಾಗಿದೆ ಎಂದು ತಿಳಿಸಿತು.

ಲೆಕ್ಕಪರಿಶೋಧನಾ ಆಕ್ಷೇಪಣೆಯು ಆಯವ್ಯಯದಲ್ಲಿನ ದೋಷಕ್ಕೆ ಸಂಬಂಧಿಸಿದ್ದರಿಂದ ಉತ್ತರವು ಅಪ್ರಸ್ತುತವಾಗುತ್ತದೆ.

ಭವಿಷ್ಯದಲ್ಲಿ ಅಂತಹ ತಪ್ಪುಗಳನ್ನು ನಿವಾರಿಸಲಾಗುವುದು ಎಂದು ನಿರ್ಗಮನ ಸಭೆಯ ನಂತರ ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### 2.4.6 ಬಹು ಉದ್ದೇಶ ಶೀರ್ಷಿಕೆ 059–ಇತರೆ ವೆಚ್ಚಗಳ ಅಡಿ ಅವಕಾಶ ಕಲ್ಪಿಸುವಲ್ಲಿ– ಆಯವ್ಯಯ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು

ಸರ್ಕಾರದ ಆಯವ್ಯಯ/ ವೆಚ್ಚಗಳನ್ನು ವಿಭಾಗ/ ಉಪವಿಭಾಗ/ ಕಾರ್ಯ/ ಉಪಕಾರ್ಯ/ ಕಾರ್ಯಕ್ರಮ / ಉಪ/ ಸವಿವರ/ ಉದ್ದೇಶ ಶೀರ್ಷಿಕೆಗಳಿಗೆ ಅನುಗುಣವಾಗಿ 15 ಅಂಕಿಗಳಲ್ಲಿ ವರ್ಗೀಕರಿಸಲಾಗಿದೆ. ವರ್ಗೀಕರಣದ ಕೊನೆಯ ಹಂತವಾದ ಉದ್ದೇಶ ಶೀರ್ಷಿಕೆಯಡಿ ತೋರಿಸಲಾಗುವ ವೆಚ್ಚವು ವೆಚ್ಚದ ಉದ್ದೇಶ/ ಸ್ವರೂಪವನ್ನು ತೋರಿಸುವುದರಿಂದ, ಇದನ್ನು ಅತಿ ಹೆಚ್ಚಿನ ನಿಖರತೆ/ ಸೂಕ್ಷ್ಮದೃಷ್ಟಿ/ ಸಕ್ಷಮತೆಗಳನ್ನು ಉಪಯೋಗಿಸಿ ತಯಾರಿಸಬೇಕಾಗಿರುತ್ತದೆ. ವೆಚ್ಚದ ವರ್ಗೀಕರಣವನ್ನು ಸರಳೀಕರಿಸುವ ದೃಷ್ಟಿಯಿಂದ 2003–04ರಲ್ಲಿ ಕೆಲವು ಉದ್ದೇಶ ಲೆಕ್ಕಶೀರ್ಷಿಕೆಗಳನ್ನು ಒಟ್ಟುಗೂಡಿಸಿ ಹೊಸ ಉದ್ದೇಶ ಶೀರ್ಷಿಕೆಗಳನ್ನು ರೂಪಿಸಲಾಯಿತು. ಉದ್ದೇಶ ಶೀರ್ಷಿಕೆ '059–ಇತರೆ ವೆಚ್ಚಗಳು' ಬಹು ಉದ್ದೇಶಿತ ಶೀರ್ಷಿಕೆಯಾಗಿದ್ದು, ಅವಕಾಶವನ್ನು/ ವೆಚ್ಚವನ್ನು ಇತರ ಯಾವುದೇ ಉದ್ದೇಶ ಶೀರ್ಷಿಕೆಯಡಿ ವರ್ಗೀಕರಿಸಲು ಸಾಧ್ಯವಾಗದಿದ್ದಲ್ಲಿ ಈ ಶೀರ್ಷಿಕೆಯಡಿ ದಾಖಲಿಸಲು ರೂಪಿಸಲಾಯಿತು. ಆಯವ್ಯಯ ಸುತ್ತೋಲೆಯ ಅನ್ವಯ ಈ ಶೀರ್ಷಿಕೆಯಡಿಯ ಅವಕಾಶವು ಅಗತ್ಯಕ್ಕೆ ಮಾತ್ರದಷ್ಟಿರಬೇಕು.

2018–19ರಲ್ಲಿ ₹2,901.92 ಕೋಟಿ ವೆಚ್ಚವನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಡಿ, ಅಂದರೆ 100 – ಹಣಕಾಸಿನ ನೆರವು, 200 – ನಿರ್ವಹಣೆ, 211 – ಹೂಡಿಕೆ, 103 – ಸಹಾಯಾನುದಾನ–ಸಾಮಾನ್ಯ, 386 – ನಿರ್ಮಾಣ, 117 – ವಿದ್ಯಾರ್ಥಿವೇತನಗಳು ಮತ್ತು ಪ್ರೋತ್ಸಾಹಕಗಳು, ಮುಂತಾದ ಸಂಬಂಧಪಟ್ಟ ಉದ್ದೇಶ ಶೀರ್ಷಿಕೆಗಳಡಿ ವರ್ಗೀಕರಿಸುವ ಬದಲಾಗಿ ಉದ್ದೇಶ ಶೀರ್ಷಿಕೆ '059–ಇತರೆ ವೆಚ್ಚಗಳು' ಅಡಿಯಲ್ಲಿ ತಪ್ಪಾಗಿ ವರ್ಗೀಕರಿಸಿರುವುದನ್ನು ಎಂಟು ಪ್ರಧಾನ ಲೆಕ್ಕಶೀರ್ಷಿಕೆಗಳಡಿಯಲ್ಲಿ (ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ) ಗಮನಿಸಲಾಯಿತು. ಅಂತಹ ತಪ್ಪು ವರ್ಗೀಕರಣದ ವಿವರಗಳನ್ನು **ಅನುಬಂಧ 2.3**ರಲ್ಲಿ ನೀಡಲಾಗಿದೆ.

**ಉದ್ದೇಶ ಶೀರ್ಷಿಕೆ '059–ಇತರೆ ವೆಚ್ಚಗಳು' ಅಡಿಯಲ್ಲಿ ತಪ್ಪಾಗಿ ವರ್ಗೀಕರಣ ಮಾಡಿರುವುದು ಗರಿಷ್ಠ ಮಟ್ಟಿಗೆ ಸಂಬಂಧಪಟ್ಟ ಶೀರ್ಷಿಕೆಯಡಿ ವೆಚ್ಚವನ್ನು ತೋರಿಸಬೇಕಾದ ತತ್ವಕ್ಕೆ ವಿರುದ್ಧವಾಗಿದೆ.**

ವೆಚ್ಚದ ಸ್ವರೂಪವನ್ನು ವಿವೇಚನಾಯುಕ್ತವಾಗಿ ಪರಿಶೀಲಿಸಬೇಕು ಮತ್ತು ಅದಕ್ಕೆ ಅನ್ವಯವಾಗಿ ಅವಕಾಶಗಳನ್ನು ಪ್ರಸ್ತಾವಿಸಬೇಕು ಹಾಗೂ '059–ಇತರೆ ವೆಚ್ಚಗಳು' ಅಡಿಯಲ್ಲಿನ ಅವಕಾಶವು ಕನಿಷ್ಠ ಮಟ್ಟದಲ್ಲಿಬೇಕು ಎಂದು ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). 2020–21ನೇ ಹಣಕಾಸು ವರ್ಷದಲ್ಲಿ ಸೂಕ್ತವಾದ ಉದ್ದೇಶ ಶೀರ್ಷಿಕೆಗಳಿಗೆ ಅವಕಾಶಗಳನ್ನು ವರ್ಗಾವಣೆ ಮಾಡಲು ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಕೂಡ ಆರ್ಥಿಕ ಇಲಾಖೆಯು ತಿಳಿಸಿತು.

## 2.5 ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ

ಹಣಕಾಸಿನ ಹೊಣೆಗಾರಿಕೆಯು ಆಯವ್ಯಯದ ತಯಾರಿಕೆಯನ್ನು ಅವಲಂಬಿಸಿದೆ ಮತ್ತು ಆ ಉದ್ದೇಶಕ್ಕೆ ಅಗತ್ಯವಿರುವ ಎಲ್ಲ ದತ್ತಾಂಶವನ್ನು ಪರಿಗಣಿಸಿ ಮತ್ತು ಒದಗಿಸಿದ ಅವಕಾಶಗಳಿಗೆ ಪ್ರತಿಯಾಗಿ ವೆಚ್ಚದ ಪ್ರಗತಿಯನ್ನು ಗಮನಿಸುವುದಾಗಿದೆ. ಈ ಕಾರ್ಯವು ಒಂದು ನಿರಂತರ ಪ್ರಕ್ರಿಯೆಯಾಗಬೇಕು. ಸತತವಾಗಿ ಹಣ ಬಳಕೆ ಮಾಡದಿರುವುದು ಮತ್ತು ನಿಯತವಾಗಿ ಪೂರಕ ಬೇಡಿಕೆಗಳನ್ನು ಸಲ್ಲಿಸುವುದು ಹಣಕಾಸು ಹೊಣೆಗಾರಿಕೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಪೂರಕ ಬೇಡಿಕೆಗಳನ್ನು ಸಲ್ಲಿಸುವ ಬದಲು ಅಗತ್ಯವಿರುವ ಶೀರ್ಷಿಕೆಗಳಿಗೆ ಬಳಕೆಯಾಗದೇ ಉಳಿದಿರುವ ಅವಕಾಶವನ್ನು ಪುನರ್ವಿನಿಯೋಗದ ಮೂಲಕ ಉಪಯೋಗಿಸಿಕೊಳ್ಳುವುದರ ಮೇಲೆ ನಿಕಟ ಗಮನ ಹರಿಸಬೇಕಿದೆ.

### 2.5.1 ಹಂಚಿಕೆಗೆ ಪ್ರತಿಯಾಗಿ ಬಳಕೆಯಾಗದ ಅವಕಾಶಗಳು

2018–19ರಲ್ಲಿ 23 ಅನುದಾನಗಳು/ವಿನಿಯೋಗಳಡಿಯಲ್ಲಿನ 37 ಪ್ರಕರಣಗಳಲ್ಲಿ ಪ್ರತಿ ಪ್ರಕರಣದಲ್ಲೂ ₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚು ಮೊತ್ತವು ಬಳಕೆಯಾಗದೇ ಉಳಿದಿದ್ದು, ಇದರ ಮೊತ್ತವು ₹24,335.20 ಕೋಟಿಗಳಷ್ಟಿತ್ತು. ಬೃಹತ್ ಮೊತ್ತದ ಅಂದರೆ ₹1,000 ಕೋಟಿಗೂ ಅಧಿಕವಾದ ಬಳಕೆಯಾಗದ ಅವಕಾಶಗಳು, **ಅನುಬಂಧ 2.4**ರಲ್ಲಿ ತೋರಿಸಿರುವಂತೆ, ಕೃಷಿ ಮತ್ತು ತೋಟಗಾರಿಕೆ, ಆರ್ಥಿಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಸಹಕಾರ, ಶಿಕ್ಷಣ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿದ್ದವು. ಅಲ್ಲದೆ, ಪುನರ್ವಿನಿಯೋಗದ ಮೊತ್ತವನ್ನು ಒಳಗೊಂಡಂತೆ ₹25 ಕೋಟಿಗೂ ಅಧಿಕವಾಗಿ ಬಳಕೆಯಾಗದ ಅವಕಾಶಗಳನ್ನು ಒಳಗೊಂಡ ಪ್ರಧಾನ ಲೆಕ್ಕಶೀರ್ಷಿಕೆಗಳನ್ನು **ಅನುಬಂಧ–2.5**ರಲ್ಲಿ ವಿವರಿಸಲಾಗಿದೆ.

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 264ರ ಅನ್ವಯ ನಿಯಂತ್ರಣಾಧಿಕಾರಿಗಳಿಂದ ನಿರೀಕ್ಷಿಸಲ್ಪಟ್ಟ ಎಲ್ಲಾ ಉಳಿತಾಯಗಳನ್ನು, ಪೂರ್ಣ ವಿವರಗಳು ಮತ್ತು ಕಾರಣಗಳೊಂದಿಗೆ ಆರ್ಥಿಕ ಇಲಾಖೆಗೆ ವರದಿ ಮಾಡಬೇಕು. ಆದರೆ, ಇಲಾಖೆಗಳು ಕಾರಣಗಳನ್ನು ಸೂಕ್ತವಾಗಿ ವಿವರಿಸಿಲ್ಲದಿರುವುದನ್ನು ಅಥವಾ ಸಲ್ಲಿಸದಿರುವುದನ್ನು ಧನವಿನಿಯೋಗ ಲೆಕ್ಕಗಳಲ್ಲಿ ಗಮನಿಸಲಾಯಿತು.

ಅವಕಾಶ/ವೆಚ್ಚದ ಮೇಲೆ ನಿಯಂತ್ರಣವನ್ನು ಸಾಧಿಸಲು ಬಳಕೆಯಾಗದ ಉಳಿದ ಅವಕಾಶಗಳನ್ನು, ಅದು ಅನುದಾನ ನಿಯಂತ್ರಣಾಧಿಕಾರಿಗಳ ಗಮನಕ್ಕೆ ಬಂದ ತಕ್ಷಣ ಅಧ್ಯರ್ಪಣೆ ಮಾಡಬೇಕು ಮತ್ತು ಈ ಸಂಬಂಧವಾಗಿ ನಿರ್ದಿಷ್ಟ ಸೂಚನೆಗಳನ್ನು ಜಾರಿ ಮಾಡಬೇಕು ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಶಾಸನಸಭೆಗೆ ಸಲ್ಲಿಸಿದ ತನ್ನ 13ನೇ ವರದಿಯಲ್ಲಿ (ಡಿಸೆಂಬರ್ 2011) ಗಮನಿಸಿತ್ತು. ಬಳಕೆ ಮಾಡಲಾಗದ ಅವಕಾಶಗಳನ್ನು ವರ್ಷದ ಕೊನೆಯವರೆಗೆ ಕಾಯದೇ ನಿರೀಕ್ಷಿಸಿದ ತಕ್ಷಣವೇ ಪೂರ್ಣವಾಗಿ ಅಧ್ಯರ್ಪಣೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಆರ್ಥಿಕ ಇಲಾಖೆಯು 19 ಡಿಸೆಂಬರ್ 2013ರ ಸುತ್ತೋಲೆಯಲ್ಲಿ ಎಲ್ಲ ಆಡಳಿತಾತ್ಮಕ ಇಲಾಖೆಗಳಿಗೆ ಮತ್ತು ಇಲಾಖಾ ಮುಖ್ಯಸ್ಥರುಗಳಿಗೆ ಸೂಚನೆ ನೀಡಿತ್ತು. ಆದರೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ಹೊರತಾಗಿಯೂ, ಹೆಚ್ಚಿನ ಮೊತ್ತಗಳು ಬಳಕೆಯಾಗದೇ ಉಳಿದಿರುವುದು/ಅಧ್ಯರ್ಪಣೆ ಮಾಡದಿರುವುದನ್ನು ಗಮನಿಸಲಾಯಿತು. ಇದು ವೆಚ್ಚದ ಮೇಲಿನ ನಿಯಂತ್ರಣದಲ್ಲಿನ ನ್ಯೂನತೆಯನ್ನು ತೋರಿಸುತ್ತದೆ.

ಶಿಫಾರಸು ಮಾಡಿದಂತೆ ಮುಂದಿನ ವರ್ಷಗಳಲ್ಲಿ ಬಳಕೆಯಾಗದ ಅವಕಾಶಗಳನ್ನು ಕಡ್ಡಾಯವಾಗಿ ಅಧ್ಯರ್ಪಣೆ ಮಾಡಲು ಅಗತ್ಯವಾದ ಸೂಚನೆಗಳನ್ನು ಇಲಾಖೆಗಳಿಗೆ ಜಾರಿ ಮಾಡಲಾಗುವುದು ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020).

### 2.5.2 ಪೂರಕ ಅವಕಾಶಗಳು

ಭಾರತ ಸಂವಿಧಾನದ 205ನೇ ವಿಧಿ ಮತ್ತು ಕರ್ನಾಟಕ ಆಯವ್ಯಯ ಕೈಪಿಡಿಯ 282ರಿಂದ 292ರವರೆಗಿನ ಕಲಮುಗಳು ಪೂರಕ ಆಯವ್ಯಯ ಅಥವಾ ಪೂರಕ ಅಂದಾಜುಗಳಿಗೆ ಒಂದು ಕಾನೂನಾತ್ಮಕ ಆಧಾರವನ್ನು ಒದಗಿಸುತ್ತವೆ. ಕರ್ನಾಟಕ ಸರ್ಕಾರವು ಒಂದು ವರ್ಷದಲ್ಲಿ ಸಾಮಾನ್ಯವಾಗಿ ಎರಡು ಅಥವಾ ಮೂರು ಪೂರಕ ಅಂದಾಜುಗಳನ್ನು ಪ್ರಸ್ತುತಪಡಿಸುತ್ತದೆ.

2018–19ರಲ್ಲಿ ಪೂರಕ ಅಂದಾಜುಗಳ ಎರಡು ಕಂತುಗಳನ್ನು ಶಾಸಕಾಂಗದ ಮುಂದೆ ಮಂಡಿಸಲಾಯಿತು. ಪೂರಕ ಅಂದಾಜುಗಳು (₹21,562.30 ಕೋಟಿ) ಮೂಲ ಅಂದಾಜುಗಳ (₹2,24,110.77 ಕೋಟಿ) ಶೇಕಡಾ 10ರಷ್ಟಿದ್ದಿತು.

#### 2.5.2.1 ಪೂರಕ ಅವಕಾಶಗಳ ವಿತ್ತೀಯ ಅಸಮತೆ

ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ, 2002ರ (ಕೆಎಫ್ಆರ್ಎ) ಅಗತ್ಯದಂತೆ ಪೂರಕ ಅವಕಾಶಗಳು ವಿತ್ತೀಯ ಸಮತೆಯಾಗಿರಬೇಕಿದ್ದು[17] ಹೆಚ್ಚುವರಿ ವೆಚ್ಚದ ಸಾಕಷ್ಟು ಭಾಗಕ್ಕೆ ಅವಕಾಶ ಮಾಡಿರಲಿಲ್ಲವಾದ್ದರಿಂದ ವಿತ್ತೀಯ ಅಸಮತೆಯಾಗಿತ್ತು. ಅಲ್ಲದೆ, ಗಮನಾರ್ಹ ಬದ್ಧ ಮೊತ್ತಗಳನ್ನು ಪೂರಕ ಅಂದಾಜುಗಳ ಭಾಗವನ್ನಾಗಿ ಸೇರಿಸಲಾಗಿದ್ದು, ಇದು ಆಯವ್ಯಯ ನಿರ್ವಹಣೆ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ.

ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರ ವಿಭಾಗ (6)–ಉಪವಿಭಾಗ (5)ರ ಅನ್ವಯ ಒಂದು ಅಥವಾ ಹೆಚ್ಚಿನ ಪೂರಕ ಅಂದಾಜುಗಳನ್ನು ಶಾಸಕಾಂಗದ ಅನುಮೋದನೆಗೆ ಮಂಡಿಸುವಾಗಲೆಲ್ಲಾ, ರಾಜ್ಯ ಸರ್ಕಾರವು ಪ್ರಸಕ್ತ ವರ್ಷದ ಆಯವ್ಯಯ ಗುರಿಗಳು ಹಾಗೂ ಮಧ್ಯಮಾವಧಿ ವಿತ್ತೀಯ ಯೋಜನೆಯ ಉದ್ದೇಶ ಮತ್ತು ಮುಂದಿನ ವರ್ಷದ ಗುರಿಗಳಿಗೆ ಸಂಬಂಧಿಸಿದಂತೆ ಪೂರಕ ಅಂದಾಜುಗಳ ವಿತ್ತೀಯ ಪರಿಣಾಮವನ್ನು ಪೂರ್ಣವಾಗಿ ಸರಿದೂಗಿಸಲು ಸಂವಾದಿಯಾಗಿ ವೆಚ್ಚಕಡಿತ ಮತ್ತು/ಅಥವಾ ಆದಾಯ ವರ್ಧನೆಯನ್ನು ಸೂಚಿಸುವ ಒಂದು ವಿವರಣಾ ಪಟ್ಟಿಯನ್ನು ಸಲ್ಲಿಸಬೇಕಾಗಿದೆ.

ಪೂರಕ ಅಂದಾಜುಗಳ ದಸ್ತಾವೇಜುಗಳು ಪೂರಕ ಅಂದಾಜುಗಳನ್ನು ಪೂರೈಸಲು ಹಣದ ಆಕರಗಳ ಬಗ್ಗೆ ಲಿಖಿತ ವರದಿಯನ್ನು ನೀಡುತ್ತವೆಯಾದರೂ ವಿತ್ತೀಯ ಪರಿಣಾಮವನ್ನು ಸಂಪೂರ್ಣವಾಗಿ ಸರಿದೂಗಿಸಲು ಅನುಗುಣವಾದ ವೆಚ್ಚದ ಕಡಿತ ಮತ್ತು/ಅಥವಾ ಆದಾಯದ ಹೆಚ್ಚಳಕ್ಕೆ ಸಂಬಂಧಿಸಿದ ವಿವರಗಳನ್ನು ಅದು ಒದಗಿಸಿಲ್ಲ. **ಕೋಷ್ಟಕ 2.7** ಪೂರಕ ಅಂದಾಜುಗಳು ಮತ್ತು ಅವುಗಳಿಗೆ ಹಣ ಒದಗಿಸುವಿಕೆಯನ್ನು ಸೂಚಿಸುತ್ತದೆ.

**ಕೋಷ್ಟಕ 2.7: 2018–19ರ ಅವಧಿಯಲ್ಲಿ ಪೂರಕ ಅಂದಾಜುಗಳಿಗೆ ಹಣ ಒದಗಿಸುವಿಕೆ**

**(₹ ಕೋಟಿಗಳಲ್ಲಿ)**

| | ಮೊದಲ ಪೂರಕ ಅಂದಾಜು | ಎರಡನೇ ಪೂರಕ ಅಂದಾಜು |
|---|---|---|
| ಮೀಸಲು ನಿಧಿಗಳಿಂದ (ವಸೂಲಾತಿಗಳು) ಭರಿಸಿದ ಮೊತ್ತ | 0 | 525.22 |
| ಕೇಂದ್ರದ ನೆರವಿನಿಂದ ಭರಿಸಿದ ಮೊತ್ತ | 334.75 | 402.66 |
| ಹೊಂದಾಣಿಕೆಗಳಿಂದ ಭರಿಸಿದ ಮೊತ್ತ | 5.93 | 27.88 |
| ನಗದು ಹೊರಹರಿವು | 6,640.20 | 13,625.67 |
| ಒಟ್ಟು | **6,980.88** | **14,581.43** |

*ಆಕರ: ಪೂರಕ ಅಂದಾಜುಗಳು*

[17] ಪೂರಕ ಅಂದಾಜುಗಳ ವಿತ್ತೀಯ ಪರಿಣಾಮವು ವೆಚ್ಚ ಕಡಿತ ಮತ್ತು/ಅಥವ ಆದಾಯ ವರ್ಧನೆಯಿಂದ ಸಂಪೂರ್ಣವಾಗಿ ಸರಿತೂಗಿಸಲ್ಪಟ್ಟರೆ ಪೂರಕ ಅವಕಾಶವು ವಿತ್ತೀಯ ಸಮತೆಯಾಗುತ್ತದೆ.

ಆಯವ್ಯಯ ಗುರಿಗಳಿಗೆ ಅನುಗುಣವಾಗಿ ಪೂರಕ ಅವಕಾಶವನ್ನು ಸಂಪೂರ್ಣ ಸಮತೆಯ ವೆಚ್ಚವನ್ನಾಗಿ ಮಾಡಲಿಲ್ಲ ಎಂಬುದನ್ನು ಕೋಷ್ಟಕದಿಂದ ಗಮನಿಸಬಹುದು.

ಪೂರಕ ಅಂದಾಜುಗಳ ಪರಿಚಯಾತ್ಮಕ ಟಿಪ್ಪಣಿಯಲ್ಲಿ ಪೂರಕ ಅವಕಾಶಗಳ ವಿಘಟನೆಯನ್ನು ವಿವರಿಸುವ ಒಂದು ವಿವರಣಾತ್ಮಕ ಟಿಪ್ಪಣಿಯನ್ನು ಒದಗಿಸಲಾಗಿದೆ ಮತ್ತು ಅದರಲ್ಲಿ ನಿವ್ವಳ ನಗದು ಹೊರಹರಿವನ್ನು ವೆಚ್ಚದ ಮರು ಆದ್ಯತಾ ನಿರ್ಧಾರಣದಿಂದ ಭರಿಸುವುದನ್ನು ನಿರ್ದಿಷ್ಟಪಡಿಸಲಾಗಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020). ಪೂರಕ ಅಂದಾಜುಗಳ ಹಣಕಾಸಿನ ಪ್ರಭಾವವನ್ನು ಸಂಪೂರ್ಣವಾಗಿ ಸರಿದೂಗಿಸಲು ಅನುಗುಣವಾದ ವೆಚ್ಚದ ಕಡಿತ ಮತ್ತು/ಅಥವಾ ಆದಾಯದ ವೃದ್ಧಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸಬೇಕಿದ್ದರಿಂದ ಉತ್ತರವು ತೃಪ್ತಿದಾಯಕವಾಗಿಲ್ಲ.

***ಕೆಎಫ್‌ಆರ್‌ಎ ಅಡಿಯಲ್ಲಿ ಹೇಳಿರುವಂತೆ ಆಯವ್ಯಯ ಅವಕಾಶದಲ್ಲಿ ಉಳಿತಾಯ/ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆ ಇತ್ಯಾದಿಗಳ ವಿವರಗಳ ಪಟ್ಟಿಯನ್ನು ಪ್ರಕಟಿಸುವ ಮೂಲಕ ಪೂರಕ ಅವಕಾಶಗಳನ್ನು ವಿತ್ತೀಯ ಸಮತೆಯಾಗಿಸಬೇಕಾಗಿದೆ.***

### 2.5.2.2 ಅನವಶ್ಯಕವಾದ/ಅಧಿಕ[18]/ಅಸಮರ್ಪಕ ಪೂರಕ ಅವಕಾಶಗಳು

**ನಕ್ಷೆ–2.1**ರಲ್ಲಿ ವಿವರಿಸಿರುವಂತೆ ಒದಗಿಸಿದ್ದ ಕೆಲವು ಪೂರಕ ಅವಕಾಶಗಳು ಅನವಶ್ಯಕವಾಗಿದ್ದವು ಅಥವಾ ಅಧಿಕ ಅಥವಾ ಸಾಕಷ್ಟಿರಲಿಲ್ಲ ಎಂಬುದನ್ನು ವಿಶದಪಡಿಸುತ್ತದೆ.

**ನಕ್ಷೆ 2.1: ಅನವಶ್ಯಕ/ಅಧಿಕ/ಸಾಕಷ್ಟಿಲ್ಲದ ಪೂರಕ ಅವಕಾಶಗಳು**

**(₹ ಕೋಟಿಗಳಲ್ಲಿ)**




[18] ಬಳಕೆಯಾಗದ ಅವಕಾಶವು ಆ ಉದ್ದೇಶಕ್ಕೆ ಪಡೆದ ಪೂರಕ ಅವಕಾಶಕ್ಕಿಂತ ಕಡಿಮೆಯಾದರೆ.

**ಅವಕಾಶದ ಬಳಕೆಯಾಗದಿರುವುದು/ಅಧಿಕ ಅವಕಾಶ ಒದಗಿಸಿರುವುದು/ಒದಗಿಸಿದ ಅವಕಾಶ ಸಾಕಷ್ಟಿಲ್ಲದಿರುವುದು, ವಿವೇಚನೆಯಿಲ್ಲದ ಆಯವ್ಯಯ ತಯಾರಿಕೆಯನ್ನು ಪ್ರತಿಬಿಂಬಿಸುತ್ತದೆ. ಅಂತಹವುಗಳನ್ನು ನಿವಾರಿಸಲು ಅವಶ್ಯಕವಾದ ತಪಾಸಣೆಗಳನ್ನು ನಡೆಸಬೇಕು.**

ಮುಂದಿನ ವರ್ಷಗಳಲ್ಲಿ ಅಗತ್ಯ ತಪಾಸಣೆಗಳನ್ನು ನಡೆಸುವ ಮೂಲಕ ಅವಕಾಶವನ್ನು ಒದಗಿಸುವ ಅಂತಹ ಪ್ರಕರಣಗಳನ್ನು ತಪ್ಪಿಸಲು ಎಚ್ಚರಿಕೆ ವಹಿಸಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

### 2.5.3 ಮೊತ್ತಗಳ ಪುನರ್ವಿನಿಯೋಗಗಳು

ವಿತರಣೆಗೆ ಬೇಕಾದ ಅನುದಾನ ಅಥವಾ ವಿನಿಯೋಗಗಳು ಆಯಾ ಲೆಕ್ಕಗಳಡಿಯಲ್ಲಿನ ಕ್ರಿಯಾಶೀರ್ಷಿಕೆ/ಉಪಶೀರ್ಷಿಕೆ/ಸವಿವರಶೀರ್ಷಿಕೆ/ಉದ್ದೇಶಶೀರ್ಷಿಕೆಗಳ ಪ್ರಕಾರ ಹಂಚಿಕೆಯಾಗಿರುತ್ತದೆ. ಸಕ್ಷಮ ಕಾರ್ಯಪಾಲಕ ಅಧಿಕಾರಿಗಳು ಸಂಬಂಧಿಸಿದ ಹಣಕಾಸು ವರ್ಷದ ಅಂತ್ಯದೊಳಗೆ, ಆಯಾ ಅನುದಾನ ಅಥವಾ ವಿನಿಯೋಗಗಳೊಳಗೆ, ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ಮೊತ್ತಗಳ ಪುನರ್ವಿನಿಯೋಗಕ್ಕೆ ಅನುಮೋದನೆ ನೀಡಬಹುದಾಗಿದೆ. ಸಕ್ಷಮ ಅಧಿಕಾರಿಯು ಒಂದು ಅನುದಾನ/ವಿನಿಯೋಗದ ಒಂದು ಘಟಕದಲ್ಲಿನ ಉಳಿಕೆಯನ್ನು ಅದೇ ಪುರಸ್ಕೃತ ಅನುದಾನ ಅಥವಾ ಪ್ರಭೃತ ವಿನಿಯೋಗದಲ್ಲಿನ ಮತ್ತೊಂದು ಘಟಕದಲ್ಲಿನ ಹೆಚ್ಚಳವನ್ನು ಭರಿಸಲು ವರ್ಗಾವಣೆ ಮಾಡುವುದು ಪುನರ್ವಿನಿಯೋಗವೆನಿಸುತ್ತದೆ. ಅನುದಾನದ ಯಾವ ಘಟಕದಿಂದ ಮೊತ್ತಗಳನ್ನು ವರ್ಗಾವಣೆ ಮಾಡಲಾಗುವುದೋ ಆ ಘಟಕದಲ್ಲಿನ ಮೊತ್ತಗಳು ಪೂರ್ಣವಾಗಿ ಬಳಕೆಯಾಗುವುದಿಲ್ಲ ಅಥವಾ ಅದು ಉಳಿತಾಯದಲ್ಲಿ ಪರಿಣಮಿಸುತ್ತದೆ ಎಂದು ನಿರೀಕ್ಷಿಸಿದ್ದರೆ ಅಥವಾ ತಿಳಿದಿದ್ದರೆ ಮಾತ್ರ ಮೊತ್ತಗಳ ಪುನರ್ವಿನಿಯೋಗವನ್ನು ಮಾಡಬಹುದಾಗಿದೆ.

2017–18ರಲ್ಲಿ ₹4,749.37 ಕೋಟಿ ಮೊತ್ತಕ್ಕೆ ಹೊರಡಿಸಲಾಗಿದ್ದ 351 ಪುನರ್ವಿನಿಯೋಗ ಆದೇಶಗಳಿಗೆ ಪ್ರತಿಯಾಗಿ 2018–19ರಲ್ಲಿ ₹9,611.05 ಕೋಟಿ ಮೊತ್ತಕ್ಕೆ 350 ಪುನರ್ವಿನಿಯೋಗ ಆದೇಶಗಳನ್ನು ಹೊರಡಿಸಲಾಗಿದೆ. ಆದೇಶಗಳ/ಪ್ರಕರಣಗಳ ಸಮೀಕ್ಷೆಯಿಂದ ಕೆಳಕಂಡ ಅಂಶಗಳು ತಿಳಿದು ಬಂದಿದೆ.

#### 2.5.3.1 ಅನಗತ್ಯ/ಅಧಿಕ/ಅಪರ್ಯಾಪ್ತ ಮೊತ್ತದ ಪುನರ್ವಿನಿಯೋಗಗಳು

2017–18ರಲ್ಲಿನ 44 ಪ್ರಕರಣಗಳಿಗೆ ಹೋಲಿಸಿದರೆ 2018–19ರಲ್ಲಿ 27 ಪುನರ್ವಿನಿಯೋಗ ಪ್ರಕರಣಗಳನ್ನು ದೋಷಪೂರಿತವಾಗಿ ಮಾಡಲಾಗಿದ್ದು, ಇದು, ಕೆಳಗೆ ತೋರಿಸಿರುವಂತೆ, ಪ್ರತಿಯೊಂದು ಪ್ರಕರಣದಲ್ಲಿಯೂ ಬಳಕೆಮಾಡದ ಅವಕಾಶ ಅಥವಾ ಅಧಿಕ ಅವಕಾಶದಲ್ಲಿ ಪರಿಣಮಿಸಿತು (**ಅನುಬಂಧ 2.9**):

- 18 ಪ್ರಕರಣಗಳಲ್ಲಿ ಬಳಕೆ ಮಾಡಲಾಗದ ಅವಕಾಶವನ್ನು ಸೂಕ್ತವಾಗಿ ನಿರ್ಧರಣೆ ಮಾಡಿರಲಿಲ್ಲ ಇದರಿಂದ ಪುನರ್ವಿನಿಯೋಗದ ಮೂಲಕ ಸೆಳೆದ ₹2,224.11 ಕೋಟಿಗಳ ನಂತರ ₹2,777.22 ಕೋಟಿಗಳು ಬಳಕೆಯಾಗಿದೆ ಉಳಿದಿತ್ತು;
- ಐದು ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ಒದಗಿಸಲಾದ ಹೆಚ್ಚುವರಿ ₹797.18 ಕೋಟಿಗಳು ಒಟ್ಟಾರೆ ₹535.44 ಕೋಟಿಗಳ ಬಳಕೆಯಾಗದ ಅವಕಾಶದಲ್ಲಿ ಪರಿಣಮಿಸಿತು.
- ಒಂದು ಪ್ರಕರಣದಲ್ಲಿ ₹30 ಕೋಟಿಗಳನ್ನು ಹಿಂಪಡೆದಿದ್ದು ಅಂತಿಮವಾಗಿ ₹55.99 ಕೋಟಿಗಳ ಅಧಿಕ ವೆಚ್ಚದಲ್ಲಿ ಪರಿಣಮಿಸಿತು; ಮತ್ತು
- ಮೂರು ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ಒದಗಿಸಲಾದ ಹೆಚ್ಚುವರಿ ₹33.55 ಕೋಟಿಗಳು ಸಾಕಾಗಿರಲಿಲ್ಲವೆಂದು ಸಾಬೀತಾಯಿತು. ಅಂತಿಮ ವೆಚ್ಚವು ಅವಕಾಶಕ್ಕಿಂತ ₹87.27 ಕೋಟಿಗಳಷ್ಟು ಅಧಿಕವಾಗಿದ್ದಿತು.

ಆಡಳಿತಾತ್ಮಕ ಇಲಾಖೆಗಳ ಪ್ರಸ್ತಾವನೆಗಳ ಆಧಾರದ ಮೇಲೆ ಪುನರ್ವಿನಿಯೋಗ ಆದೇಶಗಳನ್ನು ಹೊರಡಿಸಲಾಯಿತು ಎಂದು ನಿರ್ಗಮ ಸಭೆಯ ನಂತರ ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಆದರೆ, ಅನಿವಾರ್ಯ ಸಂದರ್ಭಗಳಿಂದಾಗಿ ಕೆಲವು ಪುನರ್ವಿನಿಯೋಗ ಆದೇಶಗಳು ಅನವಶ್ಯಕ/ಅಧಿಕ/ಸಾಕಷ್ಟಿಲ್ಲವಾಯಿತು ಎಂದೂ ಕೂಡ ತಿಳಿಸಿದೆ.

### 2.5.3.2 ದೋಷಪೂರ್ಣ ಪುನರ್ವಿನಿಯೋಗಗಳು

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 309, 312 ಹಾಗೂ 315(ಎ)ರ ಉಪಬಂಧಗಳಲ್ಲಿ ಪುನರ್ವಿನಿಯೋಗವು ಸ್ವಯಂ ಸಮತೋಲನ ಹೊಂದಿಲ್ಲದಿದ್ದರೆ ಹಾಗೂ ನಿಗದಿತ ನಮೂನೆಯಲ್ಲಿ (ನಮೂನೆ ಸಂ.22ಎ – ಕ.ಆ.ಸಂ.) ಇರದಿದ್ದಲ್ಲಿ, ಶಾಸನಸಭೆ ಅನುಮೋದಿಸಿರುವ ಒಂದು ಪುರಸ್ಕೃತ ಅನುದಾನದಿಂದ ಮತ್ತೊಂದು ಅನುದಾನಕ್ಕೆ, ಪುರಸ್ಕೃತ ವೆಚ್ಚ ಬಾಬ್ತುಗಳಿಂದ ಪ್ರಭೃತ ವೆಚ್ಚ ಬಾಬ್ತುಗಳಿಗೆ, ಬಂಡವಾಳದಿಂದ ರಾಜಸ್ವಕ್ಕೆ, ರಾಜಸ್ವದಿಂದ ಬಂಡವಾಳಕ್ಕೆ, ಹಾಗೂ ಪುನರ್ವಿನಿಯೋಗ ವಿವರಣಾ ಪಟ್ಟಿಯು ಸಮತೋಲನವಾಗದಿದ್ದರೆ, ಪುರ್ನವಿನಿಯೋಗ ಮಾಡದಂತೆ ನಿಯಮಗಳನ್ನು ವಿಧಿಸಿರುತ್ತದೆ. 2018–19ರಲ್ಲಿ, ₹282.56 ಕೋಟಿ ಮೊತ್ತದ 35 ಪುನರ್ವಿನಿಯೋಗ ಆದೇಶಗಳನ್ನು (**ಅನುಬಂಧ 2.10**), **ನಕ್ಷೆ 2.2**ರಲ್ಲಿ ನೀಡಿರುವ ಕಾರಣಗಳಿಂದ ಲೆಕ್ಕಗಳಲ್ಲಿ ಪರಿಗಣಿಸಲಾಗಿಲ್ಲ.

**ನಕ್ಷೆ–2.2: ದೋಷಪೂರ್ಣ ಪುನರ್ವಿನಿಯೋಗಗಳು**

**(₹ ಕೋಟಿಗಳಲ್ಲಿ)**




ಪುನರ್ವಿನಿಯೋಗ ಆದೇಶಗಳನ್ನು ಸ್ವೀಕಾರಕ್ಕಾಗಿ ಪ್ರಧಾನ ಮಹಾಲೇಖಪಾಲರಿಗೆ (ಲೆ ಮತ್ತು ಹ) ಸಲ್ಲಿಸುವ ಮೊದಲು ಆಡಳಿತಾತ್ಮಕ ಇಲಾಖೆಗಳು ಸೂಕ್ತವಾದ ತಪಾಸಣೆಗಳನ್ನು ಮಾಡಬೇಕಾದ ಅವಶ್ಯಕತೆಯಿದೆ.

**ನಿಧಿಗಳ ಪುನರ್ವಿನಿಯೋಗವು ಆಯವ್ಯಯ/ವೆಚ್ಚವನ್ನು ಉಲ್ಲೇಖಿಸಿ ಅನುದಾನ ನಿಯಂತ್ರಣಾಧಿಕಾರಿಗಳು ಮಾಡುವ ಪರಿಶೀಲನೆಯಾಗಿರುವುದಿರಂದ ಅದನ್ನು ನಿಷ್ಕೃಷ್ಟ ರೀತಿಯಲ್ಲಿ ನಡೆಸಬೇಕಿದೆ.**

ಇಲಾಖೆಗಳು ಪುನರ್ವಿನಿಯೋಗ ಆದೇಶಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಜಾರಿಗೊಳಿಸುತ್ತವೆ ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಭವಿಷ್ಯದಲ್ಲಿ ದೋಷಯುಕ್ತ ಆದೇಶಗಳ ಅಂತಹ ಪ್ರಕರಣಗಳನ್ನು ತಪ್ಪಿಸಲು ಜಾಗ್ರತೆ ವಹಿಸಲಾಗುವುದು ಎಂದೂ ಕೂಡ ತಿಳಿಸಿತು.

### 2.5.4 ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ

ಇಲಾಖೆಗಳು ತಮ್ಮ ನಿಯಂತ್ರಣದಲ್ಲಿರುವ ಅನುದಾನಗಳು/ವಿನಿಯೋಗಗಳಲ್ಲಿ ಗಮನಿಸಿದ ನಿರೀಕ್ಷೆ ಮಾಡಿದ ಎಲ್ಲ ಬಳಕೆಯಾಗದ ಅವಕಾಶಗಳನ್ನು ನಿರ್ದಿಷ್ಟ ದಿನಾಂಕದೊಳಗೆ ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕೆಂದು ಸಾಮಾನ್ಯ ಹಣಕಾಸು ನಿಯಮ, 2017ರ ನಿಯಮ 66(1) ತಿಳಿಸುತ್ತದೆ. 2018–19ರ ಅವಧಿಯಲ್ಲಿ ₹25,138.97 ಕೋಟಿಗಳಷ್ಟು ಬಳಕೆ ಮಾಡದ ಅವಕಾಶಗಳಿದ್ದವು ಮತ್ತು ಅದು ಒಟ್ಟು ಅವಕಾಶದ ಸುಮಾರು ಶೇಕಡಾ 10ರಷ್ಟಿತ್ತು.

#### 2.5.4.1 ಬಳಕೆ ಮಾಡದ ಅವಕಾಶಗಳನ್ನು ಅಧ್ಯರ್ಪಣೆ ಮಾಡದಿರುವುದು

13 ಅನುದಾನಗಳು/ವಿನಿಯೋಗಗಳಲ್ಲಿ ಸಂಪೂರ್ಣ ₹2,941.72 ಕೋಟಿಗಳ ಬಳಕೆಯಾಗದ ಅವಕಾಶವನ್ನು ಅಧ್ಯರ್ಪಣೆ ಮಾಡಿರಲಿಲ್ಲ (**ಅನುಬಂಧ 2.11**).

ಇದಲ್ಲದೆ, 26 ಅನುದಾನಗಳು/ವಿನಿಯೋಗಗಳಲ್ಲಿ ಕೇವಲ ಭಾಗಶ: ಅಧ್ಯರ್ಪಣೆಯನ್ನು ಮಾಡಲಾಗಿತ್ತು ಮತ್ತು ಬಳಕೆಯಾಗದ ಉಳಿದ ಒಟ್ಟು ಅವಕಾಶದಲ್ಲಿ (₹22,197.26 ಕೋಟಿ) ಶೇಕಡಾ 53ರಷ್ಟನ್ನು (₹11,826.59 ಕೋಟಿ) ಅಧ್ಯರ್ಪಣೆ ಮಾಡಿರಲಿಲ್ಲ (**ಅನುಬಂಧ 2.12**).

ಇಲಾಖೆಗಳಿಗೆ ಈ ಸಂಬಂಧವಾಗಿ ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ ಮತ್ತು ಸೂಚನೆಗಳ ಅನುಸರಣೆಯನ್ನು ಕಾಲಕಾಲಕ್ಕೆ ಬಲಪಡಿಸಲಾಗುವುದು ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020).

#### 2.5.4.2 ಗಣನೀಯ ಅಧ್ಯರ್ಪಣೆಗಳು

₹3,041.72 ಕೋಟಿಗಳ ಒಟ್ಟು ಅವಕಾಶದ 41 ಪ್ರಕರಣಗಳಲ್ಲಿ ₹2,837.79 ಕೋಟಿಗಳನ್ನು ಅಧ್ಯರ್ಪಣೆ ಮಾಡಲಾಗಿದೆ. ಅಧ್ಯರ್ಪಣೆಯು ಗಣನೀಯವಾಗಿದ್ದು, ಪ್ರತಿಯೊಂದು ಪ್ರಕರಣದಲ್ಲಿಯೂ ಶೇಕಡಾ 50 ಮತ್ತು ಅದಕ್ಕಿಂತ ಹೆಚ್ಚಿನ ಅವಕಾಶವನ್ನು ಅಧ್ಯರ್ಪಣೆ ಮಾಡಲಾಗಿದೆ. ಇದರಲ್ಲಿ 23 ಪ್ರಕರಣಗಳು ಶೇಕಡಾ 100ರಷ್ಟು ಅಧ್ಯರ್ಪಣೆಯನ್ನು ಒಳಗೊಂಡಿತ್ತು (₹2,365.59 ಕೋಟಿ) (**ಅನುಬಂಧ 2.13**). ಮಾರ್ಚ್ ಕೊನೆಯಲ್ಲಿ ಸಲ್ಲಿಸಿದ ಬಿಲ್ಲುಗಳನ್ನು ಖಜಾನೆಯು ಅನುಮೋದಿಸದಿರುವುದು, ಮಿತವ್ಯಯ ಕ್ರಮಗಳು, ನೀತಿ ಸಂಹಿತೆಯ ಜಾರಿ, ಕಾಮಗಾರಿಯನ್ನು ಪ್ರಾರಂಭಿಸುವಲ್ಲಿ ವಿಳಂಬ, ಟೆಂಡರ್ ನಿಯಮಗಳನ್ನು ಉಲ್ಲಂಘಿಸಿರುವುದು ಇತ್ಯಾದಿಗಳನ್ನು ಅಧ್ಯರ್ಪಣೆಗೆ ಕಾರಣಗಳನ್ನಾಗಿ ಅಧ್ಯಾರೋಪಿಸಲಾಯಿತು.

ಇದಲ್ಲದೆ, ₹ಐದು ಕೋಟಿಗಿಂತಲೂ ಅಧಿಕವಾಗಿದ್ದ 19 ಅನುದಾನಗಳಲ್ಲಿ ₹7,667.67 ಕೋಟಿಗಳನ್ನು ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಂದು ಅಧ್ಯರ್ಪಣೆ ಮಾಡಲಾಗಿತ್ತು. ಇದು ಅಸಮರ್ಪಕ ಹಣಕಾಸು ನಿಯಂತ್ರಣವನ್ನು ಸೂಚಿಸುತ್ತದೆ (**ಅನುಬಂಧ 2.14**).

## 2.6 ಸಾದಿಲ್ವಾರು ನಿಧಿ

ಭಾರತದ ಸಂವಿಧಾನದ ಅನುಚ್ಛೇದ 267(2) ಮತ್ತು 283(2)ಗಳಡಿಯಲ್ಲಿ, ರಾಜ್ಯ ಸರ್ಕಾರದ ಸಾದಿಲ್ವಾರು ನಿಧಿ ಅಧಿನಿಯಮ, 1957ರಡಿ ರಾಜ್ಯದ ಸಾದಿಲ್ವಾರು ನಿಧಿಯನ್ನು ಸ್ಥಾಪಿಸಲಾಗಿದೆ. ಶಾಸನ ಸಭೆಯ ಅನುಮೋದನೆಯನ್ನು ಪಡೆಯುವವರೆಗೂ ವೆಚ್ಚ ಮುಂದೂಡಿಕೆಯು ಅನಪೇಕ್ಷಣೀಯವಾದ, ಅನಿರೀಕ್ಷಿತ–ತುರ್ತುಸ್ವರೂಪದ ವೆಚ್ಚಗಳನ್ನು ಭರಿಸಲು ಮಾತ್ರ ಈ ನಿಧಿಯಿಂದ ಮುಂಗಡಗಳನ್ನು ಪಡೆಯಬಹುದಾಗಿದೆ. ಈ ನಿಧಿಯು ಮುಂಗಡ ಹಣದ ಸ್ವರೂಪದಲ್ಲಿದ್ದು, ಇದರ ಮೂಲಧನವು ₹80 ಕೋಟಿಗಳಷ್ಟಿದೆ. ಸಾದಿಲ್ವಾರು ನಿಧಿಯಿಂದ ಸೆಳೆದ ಹಣವನ್ನು ಮುಂದೆ ಪೂರಕ ಅವಕಾಶಗಳ ಮೂಲಕ ನಿಧಿಗೆ ಪುನರ್ಭರ್ತಿ ಮಾಡಲಾಗುವುದು.

2018–19ರ ಅವಧಿಯಲ್ಲಿ ಸಾದಿಲ್ವಾರು ನಿಧಿಯಿಂದ ಹಣವನ್ನು ಸೆಳೆಯಲು ₹59.64 ಕೋಟಿಗಳಷ್ಟು ಮೊತ್ತದ ಐದು ಮಂಜೂರಾತಿಗಳನ್ನು ಜಾರಿ ಮಾಡಲಾಗಿತ್ತು.

**ಕೋಷ್ಟಕ 2.8**ರಲ್ಲಿ ತಿಳಿಸಿರುವಂತೆ, ಎರಡು ಸಂದರ್ಭಗಳಲ್ಲಿ ನಿಧಿಯ ಪುನರ್ಭರ್ತಿಗಾಗಿ ಶಾಸಕಾಂಗವು ಪೂರಕ ಬೇಡಿಕೆಯನ್ನು ಅನುಮೋದಿಸಿದ ನಂತರ 2019ರ ಜನವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ₹2.82 ಕೋಟಿಗಳನ್ನು ಸಾದಿಲ್ವಾರು ನಿಧಿಯಿಂದ ಸೆಳೆಯಲಾಗಿತ್ತು ಎಂಬುದನ್ನು ಸಾದಿಲ್ವಾರು ನಿಧಿಯ ನಿರ್ವಹಣೆಯ ಸಮೀಕ್ಷೆಯು ತಿಳಿಯಪಡಿಸಿತು. ಇದು ಅನಿರೀಕ್ಷಿತ/ತುರ್ತು ಉದ್ದೇಶಕ್ಕಾಗಿ ವೆಚ್ಚವನ್ನು ಮಾಡಲಾಗಿಲ್ಲ ಎಂಬುದನ್ನು ಸೂಚಿಸುತ್ತದೆ. ಶಾಸಕಾಂಗವು ಪೂರಕ ಬೇಡಿಕೆಯನ್ನು ಅನುಮೋದನೆ ಮಾಡಿದ ನಂತರ ಸಾದಿಲ್ವಾರು ನಿಧಿಯಿಂದ ಹಣವನ್ನು ತೆಗೆಯುವುದು ಸಾದಿಲ್ವಾರು ನಿಧಿಯ ವ್ಯವಸ್ಥೆಯ ನಿಯಮಗಳಿಗೆ ವಿರುದ್ಧವಾಗಿದೆ.

**ಕೋಷ್ಟಕ 2.8: ಶಾಸಕಾಂಗವು ಧನವಿನಿಯೋಗ ಅಧಿನಿಯಮವನ್ನು ಅನುಮೋದಿಸಿದ ನಂತರ ಸಾದಿಲ್ವಾರು ನಿಧಿಯಿಂದ ಹಣವನ್ನು ತೆಗೆದಿರುವ ವಿವರಗಳು**

(₹ ಕೋಟಿಗಳಲ್ಲಿ)

| ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ | ಲೆಕ್ಕಶೀರ್ಷಿಕೆ | ಅಂತಿಮ ಲೆಕ್ಕಶೀರ್ಷಿಕೆ | ಶಾಸಕಾಂಗದಿಂದ ಅನುಮೋದನೆ | ಮೊತ್ತ | ಹಣ ತೆಗೆದ ದಿನಾಂಕ |
|---|---|---|---|---|---|
| ಎಫ್‌ಡಿ 02 ಬಿಸಿಎಫ್ 2018 ದಿನಾಂಕ 27.08.2018 | 8000–00–231–0–00 | 2210–011–110–2–85 | ಡಿಸೆಂಬರ್ 2018 | 0.76 | ಜನವರಿ 2019ರಲ್ಲಿ |
| ಎಫ್‌ಡಿ 02 ಬಿಸಿಎಫ್ 2018 ದಿನಾಂಕ 17.08.2018 | 8000–00–205–0–00 | 2015–00–105–0–01–059<br>2015–00–105–0–02–059 | ಫೆಬ್ರವರಿ 2019 | 2.06 | ಮಾರ್ಚ್ 2019ರಲ್ಲಿ |

ಸಾದಿಲ್ವಾರು ನಿಧಿಯಿಂದ ವಿವೇಚನಾಯುಕ್ತವಾಗಿ ಹಣವನ್ನು ತೆಗೆಯುವುದನ್ನು ರೂಢಿಸಿಕೊಳ್ಳಲು ಇಲಾಖೆಗಳಿಗೆ ಸೂಚನೆಗಳನ್ನು ಜಾರಿ ಮಾಡಲಾಗಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020).

## 2.7 ಅನುದಾನ ಸಂಖ್ಯೆ – 23ರ ಸಮೀಕ್ಷೆ – ಕಾರ್ಮಿಕ, ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ

### 2.7.1 ಪರಿಚಯ

ಕರ್ನಾಟಕದಲ್ಲಿ ಕಾರ್ಮಿಕ ಹಕ್ಕುಗಳ ರಕ್ಷಣೆ ಮತ್ತು ಕೌಶಲ್ಯ ಅಭಿವೃದ್ಧಿಯ ಜವಾಬ್ದಾರಿಯನ್ನು ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆಯು ಹೊಂದಿದೆ. ಈ ಅನುದಾನವು ಕೆಳಗಿನ ಪ್ರಮುಖ ಶೀರ್ಷಿಕೆಗಳನ್ನು ಒಳಗೊಂಡಿದೆ.

(i) 2210–ವೈದ್ಯಕೀಯ ಮತ್ತು ಸಾಮಾಜಿಕ ಆರೋಗ್ಯ
(ii) 2230–ಕಾರ್ಮಿಕ, ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ
(iii) 2501–ಗ್ರಾಮೀಣಾಭಿವೃದ್ಧಿಗೆ ವಿಶೇಷ ಕಾರ್ಯಕ್ರಮ
(iv) 2851–ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು
(v) 3604–ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಪರಿಹಾರ ಮತ್ತು ನಿಯೋಜನೆಗಳು
(vi) 4250–ಇತರೆ ಸಾಮಾಜಿಕ ಸೇವೆಗಳ ಮೇಲೆ ಬಂಡವಾಳ ವೆಚ್ಚ
(vii) 4851–ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ಮೇಲಿನ ಬಂಡವಾಳ ವೆಚ್ಚ

2016–17ರಿಂದ 2018–19ರ ಅವಧಿಯಲ್ಲಿ ಶೇಕಡಾ 70ಕ್ಕೂ ಹೆಚ್ಚಿನ ಆಯವ್ಯಯ ಹಂಚಿಕೆ ಮತ್ತು ವೆಚ್ಚವು ಪ್ರಧಾನ ಶೀರ್ಷಿಕೆ 2230 ಮತ್ತು 4250–ಕಾರ್ಮಿಕ, ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ಇತರೆ ಸಾಮಾಜಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚದ ಮೇಲಿದ್ದಿತು. ಇದರಿಂದ ಅನುದಾನ ಸಮೀಕ್ಷೆಯನ್ನು ಮೇಲೆ ಹೇಳಿದ ಎರಡು ಕಾರ್ಯಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ನಡೆಸಲಾಯಿತು.

### 2.7.2 ಆಯವ್ಯಯ ಮತ್ತು ವೆಚ್ಚ

ಆಯ್ದ ಪ್ರಧಾನ ಶೀರ್ಷಿಕೆಗಳಡಿಯಲ್ಲಿ ಕಳೆದ ಮೂರು ವರ್ಷಗಳ (2016–17ರಿಂದ 2018–19) ಆಯವ್ಯಯ ಅವಕಾಶಗಳು, ವಾಸ್ತವಿಕ ವಿತರಣೆ ಮತ್ತು ಉಳಿತಾಯಗಳ ಸಮಗ್ರ ಸ್ಥಿತಿಯನ್ನು **ಕೋಷ್ಟಕ 2.9**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.9: ಆಯ್ದ ಪ್ರಧಾನ ಶೀರ್ಷಿಕೆಗಳಡಿಯಲ್ಲಿ ಆಯವ್ಯಯ ಮತ್ತು ವೆಚ್ಚ**

(ಕೋಟಿ ₹ಗಳಲ್ಲಿ)

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆಯಾಗದ ಅವಕಾಶ ಮತ್ತು ಅದರ ಶತಾಂಶ |
|---|---|---|---|---|---|
| 2016–17 | ರಾಜಸ್ವ–ಮೂಲ (ಪುರಸ್ಕೃತ) | 560.24 | 573.45 | 494.64 | 78.81(14) |
| | ಪೂರಕ | 13.21 | | | |
| | ಬಂಡವಾಳ–ಮೂಲ (ಪುರಸ್ಕೃತ) | 120.11 | 120.11 | 95.52 | 24.59(20) |
| | ಪೂರಕ | 0.00 | | | |
| 2017–18 | ರಾಜಸ್ವ–ಮೂಲ (ಪುರಸ್ಕೃತ) | 932.26 | 970.62 | 559.17 | 411.45(42) |
| | ಪೂರಕ | 38.36 | | | |
| | ಬಂಡವಾಳ–ಮೂಲ (ಪುರಸ್ಕೃತ) | 90.42 | 90.42 | 83.43 | 6.99(8) |
| | ಪೂರಕ | 0.00 | | | |
| 2018–19 | ರಾಜಸ್ವ–ಮೂಲ (ಪುರಸ್ಕೃತ) | 601.25 | 673.94 | 511.69 | 162.25(24) |
| | ಪೂರಕ | 72.69 | | | |
| | ಬಂಡವಾಳ–ಮೂಲ (ಪುರಸ್ಕೃತ) | 50.51 | 50.51 | 20.42 | 30.09(60) |
| | ಪೂರಕ | 0.00 | | | |

*ಆಕರ: ಅನುದಾನ ವಹಿಗಳು*

2016–17ರಿಂದ 2018–19ರ ಅವಧಿಯಲ್ಲಿ ಒಟ್ಟು ಅವಕಾಶಕ್ಕೆ ಶತಾಂಶವಾಗಿ ಬಳಕೆಯಾಗದ ಅವಕಾಶವು ರಾಜಸ್ವ ವಿಭಾಗದಡಿ ಶೇಕಡಾ 14 ಮತ್ತು 42ರ ನಡುವಿನ ವ್ಯಾಪ್ತಿಯಲ್ಲಿದ್ದಿತು ಮತ್ತು ಬಂಡವಾಳ ವಿಭಾಗದಡಿ ಶೇಕಡಾ 8 ಮತ್ತು 60ರ ವ್ಯಾಪ್ತಿಯಲ್ಲಿದ್ದಿತು.

### 2.7.3 ಆಂತರಿಕ ಆರ್ಥಿಕ ಸಲಹೆಗಾರರ ಪಾತ್ರ

ಜುಲೈ 1982ರಲ್ಲಿ ಕರ್ನಾಟಕ ಸರ್ಕಾರ ಹೊರಡಿಸಿದ ಅಧಿಸೂಚನೆಯ ಅನ್ವಯ ಆಂತರಿಕ ಆರ್ಥಿಕ ಸಲಹೆಗಾರರು (ಐಎಫ್ಎ) ನೇಮಗೊಂಡಿರುವ ಇಲಾಖೆಯ ಹಣಕಾಸು, ಆಯವ್ಯಯ ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಕೆಲಸದ ಒಟ್ಟಾರೆ ಪ್ರಭಾರಿಯಾಗಿರುತ್ತಾರೆ. ಆಯವ್ಯಯ ಅಂದಾಜುಗಳನ್ನು ಸೂಕ್ತವಾಗಿ ರೂಪಿಸುವುದು, ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವುದು, ಆಯವ್ಯಯ ಅಂದಾಜುಗಳನ್ನು ಪರಿಶೀಲಿಸುವುದು ಮತ್ತು ಆಯವ್ಯಯ ಪ್ರಸ್ತಾವನೆ ತಯಾರಿಸುವಲ್ಲಿ ಕಾರ್ಯದರ್ಶಿಯವರಿಗೆ ನೆರವು ನೀಡುವುದು, ಹೊಸ ಯೋಜನೆಗಳಿಗೆ ಆಯವ್ಯಯ ತಯಾರಿಕೆಯಲ್ಲಿ ಸಲಹೆ ನೀಡುವುದು ಐಎಫ್ಎರವರ ಹೊಣೆಗಾರಿಕೆಯಾಗಿರುತ್ತದೆ. ಇದಲ್ಲದೆ, ಹಣಕಾಸಿನ ವಿವೇಚನೆ,

ಲೆಕ್ಕಪರಿಶೋಧನಾ ವರದಿಗಳ ಹಾಗೂ ಕ್ರಮ ತೆಗೆದುಕೊಂಡ ವರದಿಗಳ ಅನುಸರಣೆ, ಮುಂತಾದವುಗಳಲ್ಲಿಯೂ ಐಎಫ್ಎರವರು ಸಲಹೆ ನೀಡುತ್ತಾರೆ.

ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆಯ ದಾಖಲೆಗಳ ಪರಿಶೀಲನೆಯಲ್ಲಿ ಆಯವ್ಯಯ ಪ್ರಸ್ತಾವನೆಗಳಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲನೆಗಾಗಿ ಐಎಫ್ಎರವರಿಗೆ ಸಲ್ಲಿಸದಿರುವುದನ್ನು ಗಮನಿಸಲಾಯಿತು. ಹೀಗೆ, ಆಯವ್ಯಯ ಪ್ರಸ್ತಾವನೆಗಳನ್ನು ತಯಾರಿಸುವಲ್ಲಿ ಐಎಫ್ಎರವರನ್ನು ತೊಡಗಿಸಿಕೊಂಡಿರಲಿಲ್ಲ ಮತ್ತು ಆಯವ್ಯಯ ಪ್ರಸ್ತಾವನೆಗಳನ್ನು ಅವರ ಮೇಲ್ವಿಚಾರಣೆಯಲ್ಲಿ ರೂಪಿಸಿರಲಿಲ್ಲ.

ಇಲಾಖೆಯು ಹಿಂದಿನ ವರ್ಷಗಳಿಗೆ ಆಯವ್ಯಯ ಪ್ರಸ್ತಾವನೆಗಳನ್ನು ನೇರವಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು ಎಂದು ಒಪ್ಪಿಕೊಳ್ಳುತ್ತಾ (ಡಿಸೆಂಬರ್ 2019), 2018–19ರ ಆಯವ್ಯಯ ಪ್ರಸ್ತಾವನೆಯನ್ನು ಐಎಫ್ಎ ರವರ ಮೂಲಕ ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ ಎಂದು ತಿಳಿಸಿತು. 2018–19ರಲ್ಲಿ ಆಯವ್ಯಯ ಪ್ರಸ್ತಾವನೆಗಳನ್ನು ಐಎಫ್ಎರವರ ಮೂಲಕ ಕಳುಹಿಸಲಾದರೂ ಆಯವ್ಯಯ ಪ್ರಸ್ತಾವನೆಗಳನ್ನು ರೂಪಿಸುವಲ್ಲಿ ಐಎಫ್ಎರವರ ಪಾತ್ರವಿರಲಿಲ್ಲ ಎಂಬುದನ್ನು ಲಭ್ಯಗೊಳಿಸಿದ ದಾಖಲೆಗಳಿಂದ ಗಮನಿಸಲಾಯಿತು.

### 2.7.4 ನಿರಂತರ ಉಳಿತಾಯಗಳು

2016–17ರಿಂದ 2018–19ರ ವರ್ಷಗಳ ಧನವಿನಿಯೋಗ ಲೆಕ್ಕಗಳ ಪರಿಶೀಲನೆಯಲ್ಲಿ ನಾಲ್ಕು ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ನಿರಂತರ ಉಳಿತಾಯಗಳನ್ನು ಗಮನಿಸಲಾಯಿತು. ಇದು ಅಪರ್ಯಾಪ್ತ ಆಯವ್ಯಯ ಮೇಲ್ವಿಚಾರಣೆ ಅಥವಾ ಕಾರ್ಯ ನಿರ್ವಹಣೆಯಲ್ಲಿನ ಕೊರತೆ ಅಥವಾ ಎರಡನ್ನೂ ಸೂಚಿಸುತ್ತದೆ.

ಆಯವ್ಯಯ ಹಂಚಿಕೆಗಳು ಪ್ರತಿ ವರ್ಷವೂ ಬಳಕೆಯಾಗದೇ ಉಳಿದಿರುವುದನ್ನು ಗಮನಿಸಲಾಗಿದ್ದು, ಇದು ಸಂಬಂಧಿತ ವರ್ಷದಲ್ಲಿ ಪ್ರಕ್ಷೇಪಿತ ವಿತ್ತೀಯ ಗುರಿಗಳನ್ನು ಸಾಧಿಸದಿರುವುದನ್ನು ಸೂಚಿಸುತ್ತದೆ. ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 110ರಲ್ಲಿ ಅಗತ್ಯವಿರುವಂತೆ, ಹಿಂದಿನ ವರ್ಷದ ವೆಚ್ಚವನ್ನು ಪರಿಗಣಿಸದೆ ಆಯವ್ಯಯ ಹಂಚಿಕೆಗಳನ್ನು ಮಾಡಲಾಗಿದೆ ಹಾಗೂ ಇದು ಸಂಬಂಧಿತ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ನಿರಂತರ ಉಳಿತಾಯಗಳಲ್ಲಿ ಪರಿಣಮಿಸಿದೆ. ವಿವರಗಳನ್ನು **ಕೋಷ್ಟಕ 2.10**ಯಲ್ಲಿ ನೀಡಲಾಗಿದೆ.

**ಕೋಷ್ಟಕ 2.10: ನಿರಂತರ ಉಳಿತಾಯಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಉಳಿತಾಯಗಳು | | |
|---|---|---|---|---|
| | | 2016–17 | 2017–18 | 2018–19 |
| 1 | 2230–02–001–0–01/03*–059 – ಇತರೆ ವೆಚ್ಚಗಳು | 9.71 | 127.20 | 7.34 |
| 2 | 2230–02–001–0–01/03*–071 – ಕಟ್ಟಡ ವೆಚ್ಚಗಳು | 1.54 | 2.02 | 0.91 |
| 3 | 2230–02–001–0–01/03*–422 – ಪರಿಶಿಷ್ಟ ಜಾತಿ ಉಪಯೋಜನೆ | 12.34 | 18.88 | 10.11 |
| 4 | 2230–02–001–0–01/03*–423 – ಗಿರಿಜನ ಉಪಯೋಜನೆ | 4.59 | 7.69 | 4.27 |

* 2016–17ರ ಅವಧಿಯಲ್ಲಿ ವೆಚ್ಚವು ಉಪಶೀರ್ಷಿಕೆ 01–ಉದ್ಯೋಗ ಮತ್ತು ತರಬೇತಿ ಅಡಿಯಲ್ಲಿತ್ತು . ಅದನ್ನು 2018–19ರಲ್ಲಿ ಉಪಶೀರ್ಷಿಕೆ 03ಕ್ಕೆ ವರ್ಗಾವಣೆ ಮಾಡಲಾಗಿದೆ.

ಭವಿಷ್ಯದಲ್ಲಿ ಅಂತಹ ಪ್ರಕರಣಗಳು ಮರುಕಳಿಸುವುದನ್ನು ತಪ್ಪಿಸಲು ಕ್ರಮಗಳನ್ನು ಕೈಗೊಳ್ಳುವುದಾಗಿ ಹಣಕಾಸು ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು (ಮಾರ್ಚ್ 2020).

### 2.7.5 ರಾಜಸ್ವ ವೆಚ್ಚವನ್ನು ಭರಿಸುವುದಕ್ಕಾಗಿ ಬಂಡವಾಳ ವೆಚ್ಚಕ್ಕೆ ಒದಗಿಸಿದ್ದ ಹಣದ ಮಾರ್ಗಪಲ್ಲಟ

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 8ರ ಅನ್ವಯ ಕಟ್ಟಡಗಳ ನಿರ್ಮಾಣ, ನೀರಾವರಿ ಯೋಜನೆಗಳು ಮುಂತಾದ ಭೌತಿಕ ಮತ್ತು ಶಾಶ್ವತ ಸ್ವರೂಪವುಳ್ಳ ಸ್ಥಿರಾಸ್ತಿಗಳ ವರ್ಧನೆ ಅಥವಾ ಹೊಣೆಗಾರಿಕೆಗಳನ್ನು ಕಡಿಮೆಯಾಗಿಸಲು ಭರಿಸುವ ವೆಚ್ಚವು ಬಂಡವಾಳ ವೆಚ್ಚವಾಗುತ್ತದೆ. ಆದ್ದರಿಂದ ಬಂಡವಾಳ ಶೀರ್ಷಿಕೆಯಡಿ ಆಸ್ತಿ ನಿರ್ಮಾಣಕ್ಕೆ ಮಾತ್ರ ವೆಚ್ಚವನ್ನು ಮಾಡಬೇಕು.

2018–19ರಲ್ಲಿ ಐದು ನಗರಗಳಲ್ಲಿ ಕಾರ್ಮಿಕ ಭವನಗಳ ನಿರ್ಮಾಣಕ್ಕಾಗಿ ಲೆಕ್ಕಶೀರ್ಷಿಕೆ 4250–00–201–0–04–386 ಅಡಿಯಲ್ಲಿ ₹6.36 ಕೋಟಿಗಳ ಅವಕಾಶವನ್ನು ಒದಗಿಸಲಾಗಿತ್ತು. ಇದರಲ್ಲಿ ಸರ್ಕಾರವು ₹0.90 ಕೋಟಿಗಳನ್ನು ಶೌಚಾಲಯಗಳ ದುರಸ್ತಿ, ದೀಪಗಳ ದುರಸ್ತಿ/ಅಳವಡಿಕೆ, ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾರ್ಮಿಕ ಭವನದ ಮೂರನೇ ಮಹಡಿಯ ದುರಸ್ತಿ ಮತ್ತು ವರ್ಣಲೇಪನಕ್ಕಾಗಿ ರಾಜಸ್ವ ವೆಚ್ಚ ಮಾಡಲು ಅನುಮೋದನೆ ನೀಡಿತು (ಜನವರಿ 2019ರಿಂದ ಮಾರ್ಚ್ 2019ರ ನಡುವೆ). ಹೀಗೆ, ರಾಜಸ್ವ ಸ್ವರೂಪದ ವೆಚ್ಚವನ್ನು ಬಂಡವಾಳ ಕಾಮಗಾರಿಯಡಿ ಭರಿಸಲಾಗಿದ್ದುದು ತಪ್ಪಾಗಿದ್ದಿತು.

ಸರ್ಕಾರವು ಲೆಕ್ಕಪರಿಶೋಧನಾ ಆಕ್ಷೇಪಣೆಯನ್ನು ಒಪ್ಪಿಕೊಂಡಿತು (ಡಿಸೆಂಬರ್ 2019) ಮತ್ತು ಭವಿಷ್ಯದಲ್ಲಿ ಅಂತಹ ಮಾರ್ಗಪಲ್ಲಟಗಳನ್ನು ನಿವಾರಿಸಲಾಗುವುದು ಎಂದು ತಿಳಿಸಿತು.

### 2.7.6 ಸರ್ಕಾರದ ಹಣವನ್ನು ಸರ್ಕಾರದ ಲೆಕ್ಕಗಳಿಂದ ಹೊರಗೆ ನಿರ್ಬಂಧಗೊಳಿಸಿರುವುದು

ವಾಸ್ತವವಾಗಿ ಅಗತ್ಯತೆಯಿಲ್ಲದೆ, ರಾಜ್ಯದ ಸಂಚಿತ ನಿಧಿಯಿಂದ ಹಣ ತೆಗೆಯುವುದು ವಿವೇಚನಾಯುಕ್ತ ವಿತ್ತೀಯ ಕ್ರಮವಲ್ಲ. ಬಿಡುಗಡೆಯಾದ ಉದ್ದೇಶಕ್ಕೆ ವಾಸ್ತವವಾಗಿ ಹಣವನ್ನು ಉಪಯೋಗಿಸದೆ ಅದನ್ನು ವೆಚ್ಚವೆಂದು ತೋರಿಸುವುದು ಸಂಬಂಧಿತ ವರ್ಷಗಳಲ್ಲಿ ವಿತ್ತೀಯ ಸೂಚಕಗಳನ್ನು ವಿರೂಪನಗೊಳಿಸುವಲ್ಲಿ ಪರಿಣಮಿಸುತ್ತದೆ.

ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆಯು ಕರ್ನಾಟಕ ಸರ್ಕಾರವು ಸ್ಥಾಪಿಸಿದ ಮಂಡಳಿಗಳು/ ನಿಗಮಗಳು/ಸೊಸೈಟಿಗಳು ಮುಂತಾದ ಅನುಷ್ಠಾನ ಏಜೆನ್ಸಿಗಳ ಮೂಲಕ ಅನೇಕ ಯೋಜನೆಗಳನ್ನು

ಅನುಷ್ಠಾನಗೊಳಿಸುತ್ತದೆ. ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಮಾಡಿದ ಆಯವ್ಯಯ ಹಂಚಿಕೆಗಳಿಂದ ಆಯಾ ನಿಗಮಗಳಿಗೆ/ಮಂಡಳಿಗಳಿಗೆ ಅದು ಹಣವನ್ನು ಬಿಡುಗಡೆ ಮಾಡುತ್ತದೆ.

2015–16ರಿಂದ 2018–19ರ ಅವಧಿಯಲ್ಲಿ ಸಂಚಿತ ನಿಧಿಗೆ ವೆಚ್ಚವೆಂದು ತೋರಿಸಿದ ₹87.59 ಕೋಟಿಗಳನ್ನು ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆಯ ನಿಯಂತ್ರಣದಲ್ಲಿರುವ ಅನುಷ್ಠಾನ ಏಜೆನ್ಸಿಗಳ ಉಳಿತಾಯ ಬ್ಯಾಂಕ್ ಖಾತೆಗಳಲ್ಲಿ ಇಟ್ಟಿರುವುದನ್ನು ಐದು ಮಂಡಳಿಗಳು/ಸೊಸೈಟಿಗಳಿಗೆ ಬಿಡುಗಡೆ ಮಾಡಿದ ಮತ್ತು ವೆಚ್ಚ ಮಾಡಿದ ಹಣದ ಪರಿಶೀಲನೆಯಲ್ಲಿ ಗಮನಿಸಲಾಯಿತು. ಇದು ₹87.59 ಕೋಟಿಗಳಷ್ಟು ವೆಚ್ಚವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. ಪ್ರತ್ಯೇಕ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ.

- **ಮೈಸೂರಿನಲ್ಲಿ ಕಾರ್ಮಿಕ ಭವನದ ನಿರ್ಮಾಣ**

2017–18 ಮತ್ತು 2018–19ರ ಅವಧಿಯಲ್ಲಿ ಕಾರ್ಮಿಕ ಆಯುಕ್ತರು, ಮೈಸೂರಿನಲ್ಲಿ ಕಾರ್ಮಿಕ ಭವನದ ನಿರ್ಮಾಣಕ್ಕಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮೈಸೂರು ಅವರಿಗೆ ₹10 ಕೋಟಿಯನ್ನು ಬಿಡುಗಡೆ ಮಾಡಿದರು.

ಟೆಂಡರನ್ನು ಅಂತಿಮಗೊಳಿಸಿಲ್ಲವಾದ್ದರಿಂದ ಕಾರ್ಮಿಕ ಭವನದ ನಿರ್ಮಾಣವನ್ನು ಪ್ರಾರಂಭಿಸಿಲ್ಲ ದಿರುವುದನ್ನು ಗಮನಿಸಲಾಯಿತು (22 ಆಗಸ್ಟ್ 2019). ಹೀಗೆ ಬಿಡುಗಡೆ ಮಾಡಿದ ₹10 ಕೋಟಿಗಳು ಬಳಕೆಯಾಗದೆ ಉಳಿದಿತ್ತು.

- **ಆಶಾದೀಪ ಯೋಜನೆ**

ಖಾಸಗಿ ಉದ್ಯಮಗಳಲ್ಲಿ ಎಸ್ಸಿ/ಎಸ್ಟಿ ಗೆ ಸೇರಿದ ಕಾರ್ಮಿಕರಿಗೆ ಉದ್ಯೋಗ ಒದಗಿಸುವ ಉದ್ದೇಶದಿಂದ 2017–18ರ ರಾಜ್ಯ ಆಯವ್ಯಯದಲ್ಲಿ 'ಆಶಾದೀಪ ಯೋಜನೆ'ಯನ್ನು ಘೋಷಿಸಲಾಯಿತು. ಈ ಯೋಜನೆಯಡಿಯಲ್ಲಿ ಹೊಸದಾಗಿ ಉದ್ಯೋಗ ಪಡೆದ ಎಸ್‌ಸಿ ಮತ್ತು ಎಸ್‌ಟಿ ಉದ್ಯೋಗಿಗಳ ಇಎಸ್‌ಐ (ಶೇಕಡಾ 4.75) ಮತ್ತು ಭವಿಷ್ಯನಿಧಿ (ಶೇಕಡಾ 12) ಪಾಲನ್ನು ಸರ್ಕಾರವು ಭರಿಸಬೇಕಿತ್ತು. ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆ (ಆಶಾದೀಪ) ಸೊಸೈಟಿಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರವು ಅನುಮತಿ ನೀಡಿತು (ಜುಲೈ 2017). 2017–18 ಮತ್ತು 2018–19ರ ಅವಧಿಯಲ್ಲಿ ಸೊಸೈಟಿಗೆ ₹43.25 ಕೋಟಿಗಳನ್ನು ಬಿಡುಗಡೆ ಮಾಡಲಾಯಿತು. ಈ ಬಿಡುಗಡೆಗೆ ಪ್ರತಿಯಾಗಿ ₹0.10 ಕೋಟಿಯನ್ನು ಮಾತ್ರ ವೆಚ್ಚ ಮಾಡಲಾಗಿತ್ತು.

ಭಾರತ ಸರ್ಕಾರದಿಂದ ಅನುಷ್ಠಾನಗೊಳ್ಳುತ್ತಿದ್ದ ಇದೇ ರೀತಿಯ ಇನ್ನೊಂದು ಯೋಜನೆಯಾದ 'ಪ್ರಧಾನಮಂತ್ರಿ ರೋಜ್‌ಗಾರ್ ಪ್ರೋತ್ಸಾಹನ್ ಯೋಜನೆ' ಮತ್ತು ಖಾಸಗಿ ಉದ್ಯಮಗಳಲ್ಲಿ ಉದ್ಯೋಗಿಗಳ ವರ್ಗಾವಾರು ದತ್ತಾಂಶವು ಲಭ್ಯವಿಲ್ಲದ ಕಾರಣದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಲಿಲ್ಲ. 2017–18ರಲ್ಲಿ ಬಿಡುಗಡೆಯಾದ ₹40 ಕೋಟಿಗಳು ಲಭ್ಯವಿದ್ದಾಗ್ಯೂ ಸಹ 2018–19ರಲ್ಲಿ ₹4.33 ಕೋಟಿಗಳ ಅವಕಾಶವನ್ನು ಮಾಡಲಾಗಿತ್ತು ಹಾಗೂ ₹3.25 ಕೋಟಿಗಳನ್ನು ಸರ್ಕಾರವು ಬಿಡುಗಡೆ ಮಾಡಿತ್ತು. ₹1.87 ಕೋಟಿಯ ಬಡ್ಡಿಯ ಜೊತೆಗೆ ಸಂಪೂರ್ಣ ಮೊತ್ತವನ್ನು ಸೊಸೈಟಿಯ ಉಳಿತಾಯ ಖಾತೆಯಲ್ಲಿ ಇಡಲಾಗಿತ್ತು.

ಯೋಜನೆಯನ್ನು ಜನಪ್ರಿಯಗೊಳಿಸಲು ಎಷ್ಟು ಪ್ರಯತ್ನಿಸಿದರೂ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಲಿಲ್ಲ ಎಂದು ಸರ್ಕಾರವು ಉತ್ತರಿಸಿತು (ಡಿಸೆಂಬರ್ 2019). ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಉದ್ಯೋಗದಾತರಿಗೆ ಪ್ರತಿ ಅಭ್ಯರ್ಥಿಗೆ ಪ್ರತಿ ತಿಂಗಳಿಗೆ ₹3000

ದಂತೆ ಶಿಷ್ಯವೇತನ ಮತ್ತು ಸಂಬಳ ಮೊತ್ತದ ಮರುಪಾವತಿ ಮಾಡುವುದನ್ನು ಒಳಗೊಂಡ ಪರಿಷ್ಕೃತ ಯೋಜನೆಗೆ ಪ್ರಸ್ತಾವನೆಯನ್ನು ಸೊಸೈಟಿಯು ಸಲ್ಲಿಸಿರುವುದಾಗಿ ಸಹ ಸರ್ಕಾರವು ತಿಳಿಸಿತು.

- **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ**

ಸ್ಮಾರ್ಟ್‌ಕಾರ್ಡ್‌ಗಳನ್ನು ಒದಗಿಸುವ ಮೂಲಕ ಅಪಘಾತ ಪರಿಹಾರ ಯೋಜನೆಯಡಿ ಅಸಂಘಟಿತ ಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡುವ ಉದ್ದೇಶದಿಂದ 2017–18ರಲ್ಲಿ 'ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ' ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯನ್ನು ಕರ್ನಾಟಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅನುಷ್ಠಾನಗೊಳಿಸಬೇಕಿತ್ತು.

2017–18 ಮತ್ತು 2018–19ರ ಅವಧಿಯಲ್ಲಿ ₹37.78 ಕೋಟಿ ಒಟ್ಟು ಆಯವ್ಯಯ ಹಂಚಿಕೆಗೆ ಪ್ರತಿಯಾಗಿ ₹30.83 ಕೋಟಿಗಳನ್ನು ಬಿಡುಗಡೆ ಮಾಡಲಾಯಿತು ಮತ್ತು ಸ್ಮಾರ್ಟ್‌ಕಾರ್ಡ್‌ಗಳನ್ನು ಮುದ್ರಿಸಲು ಹಾಗೂ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ₹6.39 ಕೋಟಿಗಳನ್ನು ವೆಚ್ಚ ಮಾಡಲಾಯಿತು. ಉಳಿದ ₹24.44 ಕೋಟಿಗಳನ್ನು ಮಂಡಳಿಯ ಬ್ಯಾಂಕ್ ಉಳಿತಾಯ ಖಾತೆಯಲ್ಲಿ ಇಡಲಾಗಿದ್ದು ಅದು ಸರ್ಕಾರದ ಹಣವನ್ನು ನಿರ್ಬಂಧಿಸುವಲ್ಲಿ ಪರಿಣಮಿಸಿತು.

ಮಂಡಳಿಯು ಹಣವನ್ನು ಬಳಕೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಿದೆ ಮತ್ತು ತನ್ನ ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ ವಂತಿಗೆ ಭವಿಷ್ಯ ನಿಧಿಗೆ ₹14 ಕೋಟಿಗಳನ್ನು ಮೀಸಲಾಗಿಟ್ಟಿದೆ ಎಂದು ಸರ್ಕಾರವು ಉತ್ತರಿಸಿತು. ಉಳಿದ ಮೊತ್ತದಲ್ಲಿ ₹8.61 ಕೋಟಿಗಳನ್ನು ಅಧ್ಯರ್ಪಣೆ ಮಾಡಲು ಪ್ರಸ್ತಾವನೆಗಳನ್ನು ಸಲ್ಲಿಸಿದೆ ಎಂದೂ ಕೂಡ ತಿಳಿಸಿತು.

- **ಸರ್ವರಿಗೂ ಕೌಶಲ್ಯಕ್ಕಾಗಿ ಭಾರತ ರತ್ನ ಸರ್ ಎಮ್.ವಿಶ್ವೇಶ್ವರಯ್ಯ ರಾಷ್ಟ್ರೀಯ ತರಬೇತಿ ಸೌಕರ್ಯ**

ಕೇಂದ್ರ ಕೌಶಲ್ಯ ಅಭಿವೃದ್ಧಿಯಲ್ಲಿ ಮಾಸ್ಟರ್ ತರಬೇತುದಾರರಿಗಾಗಿ ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಯೋಜನೆ (ಪಿಪಿಪಿ) ಮಾದರಿ ಅಡಿಯಲ್ಲಿ 2015–16ರಲ್ಲಿ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಕೇಂದ್ರವನ್ನು ಸ್ಥಾಪಿಸಲಾಯಿತು. ವೃತ್ತಿಪರ ತಂತ್ರಜ್ಞಾನದಲ್ಲಿನ ವಿಶ್ವದರ್ಜೆಯ ಶ್ರೇಷ್ಠ ತರಬೇತುದಾರರ ಮೂಲಕ ಭಾರತದಲ್ಲಿ ಅತ್ಯುಚ್ಚ ಮಟ್ಟದ ಮಾಸ್ಟರ್ ತರಬೇತುದಾರರನ್ನು ರೂಪಿಸಲು ಮತ್ತು ದೇಶದಲ್ಲಿ ತಂತ್ರಜ್ಞರ ಕಾರ್ಯಪಡೆಯ ಕೌಶಲವನ್ನು ವೃದ್ಧಿಸಲು 'ಭಾರತ ರತ್ನ ಸರ್ ಎಮ್ ವಿಶ್ವೇಶ್ವರಯ್ಯ ರಾಷ್ಟ್ರೀಯ ತರಬೇತಿ ಸೌಕರ್ಯ' ಎಂಬ ಸೊಸೈಟಿಯನ್ನು ಸ್ಥಾಪಿಸಲಾಯಿತು. ಲೆಕ್ಕಶೀರ್ಷಿಕೆ 4250–00–203–0–05–386 ಅಡಿಯಲ್ಲಿ 2015–16 ಮತ್ತು 2016–17ರ ಅವಧಿಯಲ್ಲಿ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ₹10 ಕೋಟಿಗಳ ಒಟ್ಟು ಮೊತ್ತವನ್ನು ಬಿಡುಗಡೆ ಮಾಡಲಾಯಿತು.

ಆದರೆ, ಆ ಸಂಪೂರ್ಣ ಮೊತ್ತವಾದ ₹10 ಕೋಟಿಗಳನ್ನು ಬಳಕೆ ಮಾಡದೆ ಎರಡು ವರ್ಷಗಳಿಗೂ ಹೆಚ್ಚು ಕಾಲ ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಇಟ್ಟಿರುವುದನ್ನು ಗಮನಿಸಲಾಯಿತು. ಕಟ್ಟಡ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಇನ್ನೂ ಪಡೆಯಬೇಕಿದೆ. ಇದರಿಂದ ಸೊಸೈಟಿಗೆ ಬಿಡುಗಡೆ ಮಾಡಿದ ಮೊತ್ತವು ಬಳಕೆಯಾಗದೇ ಉಳಿದು ಸರ್ಕಾರಿ ಹಣದ ನಿರ್ಬಂಧದಲ್ಲಿ ಪರಿಣಮಿಸಿತು.

- **ಕರ್ನಾಟಕ ರಾಜ್ಯ ಕಾರ್ಮಿಕ ಸಂಸ್ಥೆ**

ಕಾರ್ಮಿಕ ನಿರ್ವಹಣೆ ಮತ್ತು ಕೈಗಾರಿಕಾ ಸಂಬಂಧಗಳಲ್ಲಿನ ಎಲ್ಲಾ ಪಾಲುದಾರರಿಗೆ ಜಾಗೃತಿ ಮೂಡಿಸುವ ಮತ್ತು ತರಬೇತಿ ನೀಡುವ ವೇದಿಕೆಯ ಜೊತೆಗೆ ಮಾಹಿತಿ ಪ್ರಸಾರ ಉದ್ದೇಶದಿಂದ ಕರ್ನಾಟಕ ರಾಜ್ಯ ಕಾರ್ಮಿಕ ಸಂಸ್ಥೆಯನ್ನು ಒಂದು ಸೊಸೈಟಿಯನ್ನಾಗಿ ನೋಂದಣಿ ಮಾಡಲಾಗಿದೆ (ಫೆಬ್ರವರಿ 2009). ಸಂಸ್ಥೆಯ ಮುಖ್ಯ ಉದ್ದೇಶವೆಂದರೆ ಪ್ರಮಾಣಪತ್ರ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸುವುದು, ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳನ್ನು ಸುಧಾರಿಸಲು ಮತ್ತು ಪರಿಷ್ಕರಿಸಲು ಪರಿಣಾಮಕಾರಿ ಮೌಲ್ಯಮಾಪನ ಅಧ್ಯಯನಗಳನ್ನು ನಡೆಸುವುದು, ಉಪ–ನಿಯಮಗಳ ಉದ್ದೇಶದನ್ವಯ ತರಬೇತಿಗಳು/ ಕಾರ್ಯಾಗಾರಗಳು/ವಿಚಾರ ಸಂಕೀರಣಗಳನ್ನು ನಡೆಸುವುದು, ಮುಂತಾದವುಗಳಾಗಿದ್ದವು. ಸಂಸ್ಥೆಯು ಸರ್ಕಾರದಿಂದ ಅನುದಾನಗಳನ್ನು ಪಡೆಯುತ್ತಿತ್ತು.

2013ನೇ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ (ವರದಿ ಸಂಖ್ಯೆ.2) ಕಂಡಿಕೆ 3.4.1 ರಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕ ಸಂಸ್ಥೆಯಿಂದ ಮಾರ್ಚ್ 2012ರಲ್ಲಿದ್ದಂತೆ ₹3.14 ಕೋಟಿ ಸರ್ಕಾರದ ಅನುದಾನಗಳನ್ನು ಬಳಕೆ ಮಾಡದೆ ಉಳಿಸಿಕೊಂಡಿದ್ದರ ಬಗ್ಗೆ ಉಲ್ಲೇಖಿಸಲಾಗಿತ್ತು. ಸಂಸ್ಥೆಯು ಜನವರಿ 2013ರಲ್ಲಿ ₹3.19 ಕೋಟಿಗಳನ್ನು ಖಜಾನೆಗೆ ಜಮೆ ಮಾಡಿತ್ತು.

ಆದರೆ, 2012–13ರಿಂದ 2018–19ರ ಅವಧಿಯಲ್ಲಿಯೂ ಸಹ ಸಂಸ್ಥೆಯಿಂದ ಅನುದಾನಗಳ ಬಳಕೆಯಾಗದಿರುವುದು ಮುಂದುವರೆದಿರುವುದನ್ನು ಗಮನಿಸಲಾಗಿದೆ. ₹5.35 ಕೋಟಿಗಳ ಬಿಡುಗಡೆಗೆ ಪ್ರತಿಯಾಗಿ ₹1.62 ಕೋಟಿಗಳನ್ನು ವೆಚ್ಚ ಮಾಡಲಾಗಿದ್ದು ₹3.63 ಕೋಟಿಗಳನ್ನು ಸರ್ಕಾರದ ಲೆಕ್ಕದಿಂದ ಹೊರಗಿಟ್ಟು ಹಣವನ್ನು ನಿರ್ಬಂಧಿಸಿದಂತಾಯಿತು. ಲೆಕ್ಕಶೀರ್ಷಿಕೆ 2230–01–277–0–01 ಅಡಿಯಲ್ಲಿ ಸಂಸ್ಥೆಗೆ ಬಿಡುಗಡೆ ಮಾಡಿದ ವರ್ಷಾವಾರು ವಿವರಗಳು ಮತ್ತು ಅದಕ್ಕೆ ಪ್ರತಿಯಾಗಿ ವೆಚ್ಚಗಳನ್ನು **ಕೋಷ್ಟಕ 2.11**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.11: ಸಂಸ್ಥೆಗೆ ಬಿಡುಗಡೆ ಮಾಡಿದ ನಿಧಿಗಳ ಮತ್ತು ವೆಚ್ಚದ ವರ್ಷಾವಾರು ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಬಿಡುಗಡೆ ಮಾಡಿದ ಮೊತ್ತ | ವೆಚ್ಚ | ಬಳಕೆಮಾಡದ ಮೊತ್ತ |
|---|---|---|---|
| **2012–13** | 0.50 | 0.21 | 0.29 |
| **2013–14** | 0.50 | 0.24 | 0.26 |
| **2014–15** | 1.00 | 0.19 | 0.81 |
| **2015–16** | 0.75 | 0.22 | 0.53 |
| **2016–17** | 0.75 | 0.22 | 0.53 |
| **2017–18** | 1.00 | 0.11 | 0.89 |
| **2018–19** | 0.75 | 0.43* | 0.32 |
| **ಒಟ್ಟು** | **5.25** | **1.62** | **3.63** |

* ಅಕ್ಟೋಬರ್ 2018ರವರೆಗಿನ ವೆಚ್ಚ

ಹಿಂದಿನ ವರ್ಷದ ಅನುದಾನಗಳ ಬಳಕೆಯನ್ನು ಪರಿಶೀಲಿಸದೆ ಸಂಸ್ಥೆಗೆ ಸರ್ಕಾರವು ಅನುದಾನಗಳನ್ನು ಬಿಡುಗಡೆ ಮಾಡಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ತರಬೇತಿ ಸಂಪನ್ಮೂಲಗಳು/ವ್ಯಕ್ತಿಗಳು/ಸಿಬ್ಬಂದಿ ಮತ್ತು ಸಾಕಷ್ಟು ಮೂಲಸೌಕರ್ಯಗಳ ಅಲಭ್ಯತೆಯಿಂದ ಉದ್ದೇಶಗಳನ್ನು ಸಾಧಿಸಲಾಗಲಿಲ್ಲ ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2019). ಸಂಸ್ಥೆಯು ಬೆಂಗಳೂರಿನ ಪೀಣ್ಯದಲ್ಲಿ ಸಾಕಷ್ಟು ಮೂಲಸೌಕರ್ಯಗಳೊಂದಿಗೆ ತನ್ನದೇ ಆದ ಕಟ್ಟಡವನ್ನು ಸ್ಥಾಪಿಸಿದ್ದು

ನಂತರ ಎರಡು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಮತ್ತು ಹೀಗೆ ಉದ್ದೇಶಗಳನ್ನು ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ ಎಂದೂ ಸಹ ಅದು ತಿಳಿಸಿತು.

ಅನುಷ್ಠಾನ ಏಜೆನ್ಸಿಗಳಿಗೆ ಮುಂದಿನ ಆಯವ್ಯಯ ಹಂಚಿಕೆಗಳನ್ನು ಬಿಡುಗಡೆ ಮಾಡುವ ಮೊದಲು ಬಳಕೆಯನ್ನು ಪರಿಶೀಲಿಸಲು ಮಾರ್ಚ್ 2018ರಲ್ಲಿ ಆಡಳಿತಾತ್ಮಕ ಇಲಾಖೆಗಳಿಗೆ ಸುತ್ತೋಲೆಯ ಮೂಲಕ ಸೂಚನೆಗಳನ್ನು ಜಾರಿಗೊಳಿಸಲಾಗಿದೆ ಎಂದು ನಿರ್ಗಮನ ಸಭೆಯ ನಂತರ ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020). ಜೊತೆಗೆ, ಅನಗತ್ಯವಾಗಿ ನಿಧಿಗಳನ್ನು ಉಳಿಸಿಕೊಳ್ಳುವುದನ್ನು ತಡೆಯಲು ಎಲ್ಲ ನಿಗಮಗಳು, ಮಂಡಳಿಗಳು ಮತ್ತು ಇಲಾಖೆಗಳ ಬ್ಯಾಂಕ್ ಶಿಲ್ಕುಗಳನ್ನು ಮೇಲ್ವಿಚಾರಣೆ ಮಾಡುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದೂ ತಿಳಿಸಿತು.

### 2.7.7 ವೆಚ್ಚದ ಒತ್ತಡ

ಸಾಮಾನ್ಯ ಹಣಕಾಸಿನ ನಿಯಮಗಳು, 2017ರ ನಿಯಮ 62(3) ಅನ್ವಯ ವೆಚ್ಚದ ಒತ್ತಡವನ್ನು, ವಿಶೇಷವಾಗಿ ಹಣಕಾಸು ವರ್ಷದ ಕೊನೆಯ ತಿಂಗಳಿನಲ್ಲಿ, ತಪ್ಪಿಸಬೇಕು, ಏಕೆಂದರೆ ಅದನ್ನು ವಿತ್ತೀಯ ಯುಕ್ತತೆಯ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ. ಇದಲ್ಲದೆ, ನಿಧಿಗಳ ಬಿಡುಗಡೆ, ಸೆಳೆಯುವುದು ಮತ್ತು ಲೆಕ್ಕವಿಡುವಿಕೆಯ ಬಗ್ಗೆ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು ಹೊರಡಿಸಿರುವ ದಿನಾಂಕ 9 ಸೆಪ್ಟಂಬರ್ 2004ರ ಸೂಚನೆಗಳ ಕಂಡಿಕೆ 6ರ ಅನ್ವಯ ಆಡಳಿತಾತ್ಮಕ ಇಲಾಖೆ ಮತ್ತು ಇಲಾಖಾ ಮುಖ್ಯಸ್ಥರುಗಳು ಸರಿಯಾದ ಪರಿಶ್ರಮದಿಂದ ಮತ್ತು ಲಭ್ಯವಿರುವ ಅನುದಾನದೊಳಗೆ ಹಣಕಾಸು ವರ್ಷದ ಉಳಿದ ಭಾಗಕ್ಕೆ ವೆಚ್ಚ ಮಾಡುವ ಬಗ್ಗೆ ಯೋಜನೆಯನ್ನು ತಯಾರಿಸಬೇಕು. ಮಾರ್ಚ್ ತಿಂಗಳಿನಲ್ಲಿ ಬಿಲ್ಲುಗಳನ್ನು ಒಟ್ಟು ಮಾಡುವುದನ್ನು ಮತ್ತು ವೆಚ್ಚದ ಒತ್ತಡವನ್ನು ತಪ್ಪಿಸಬೇಕು. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಭರಿಸಬೇಕಿರುವ ವೆಚ್ಚಕ್ಕೆ ಸಕ್ಷಮ ಮಟ್ಟದ ಅಗತ್ಯ ಅನುಮೋದನೆಯನ್ನು ಪಡೆದು ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿಯೇ ನೀಡಬೇಕು. ಆದಾಗ್ಯೂ 2018-19ರಲ್ಲಿ ಮಾರ್ಚ್ ತಿಂಗಳಿನ ವೆಚ್ಚವು ಶೇಕಡಾ 51ರಿಂದ 100ರಷ್ಟಿರುವುದನ್ನು ಮತ್ತು ವರ್ಷದ ಕೊನೆಯ ತ್ರೈಮಾಸಿಕದ ವೆಚ್ಚವು ಶೇಕಡಾ 84ರಿಂದ 100ರಷ್ಟಿರುವುದನ್ನು ಗಮನಿಸಲಾಯಿತು. ವೆಚ್ಚದ ಉದ್ದೇಶ ಶೀರ್ಷಿಕಾವಾರು ವಿವರಗಳನ್ನು **ಕೋಷ್ಟಕ 2.12**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.12: ವೆಚ್ಚದ ಒತ್ತಡ**

(₹ ಕೋಟಿಗಳಲ್ಲಿ)

| ಲೆಕ್ಕಶೀರ್ಷಿಕೆ | ಒಟ್ಟು ವೆಚ್ಚ | ಕೊನೆಯ ತ್ರೈಮಾಸಿಕದಲ್ಲಿನ ವೆಚ್ಚ ಮತ್ತು ಅದರ ಶೇಕಡಾವಾರು | ಮಾರ್ಚ್‌ನಲ್ಲಿನ ವೆಚ್ಚ ಮತ್ತು ಅದರ ಶೇಕಡಾವಾರು |
|---|---|---|---|
| **2230-01-112-0-01-059 – ಇತರೆ ವೆಚ್ಚಗಳು** | 2.32 | 1.95 (84) | 1.95 (84) |
| **2230-02-001-0-03-051 – ಸಾಮಾನ್ಯ ವೆಚ್ಚಗಳು** | 2.18 | 2.12 (97) | 2.02 (93) |
| **2230-02-001-0-03-125 – ಆಧುನೀಕರಣ** | 0.64 | 0.63 (98) | 0.63 (98) |
| **2230-02-001-0-03-221 – ಸಾಮಗ್ರಿಗಳು ಮತ್ತು ಸರಬರಾಜು** | 1.58 | 1.37 (86) | 0.83 (53) |
| **2230-02-001-0-03-422 – ಪರಿಶಿಷ್ಟ ಜಾತಿ ಉಪಯೋಜನೆ** | 6.21 | 6.21 (100) | 6.21 (100) |

| ಲೆಕ್ಕಶೀರ್ಷಿಕೆ | ಒಟ್ಟು ವೆಚ್ಚ | ಕೊನೆಯ ತ್ರೈಮಾಸಿಕದಲ್ಲಿನ ವೆಚ್ಚ ಮತ್ತು ಅದರ ಶೇಕಡಾವಾರು | ಮಾರ್ಚ್‌ನಲ್ಲಿನ ವೆಚ್ಚ ಮತ್ತು ಅದರ ಶೇಕಡಾವಾರು |
|---|---|---|---|
| 2230–02–001–0–03–422 – ಗಿರಿಜನ ಉಪಯೋಜನೆ | 2.48 | 2.48 (100) | 2.48 (100) |
| 2230–02–101–0–11–015 – ಪೂರಕ ವೆಚ್ಚಗಳು | 2.00 | 2.00 (100) | 2.00 (100) |
| 2230–02–800–0–02 –422 – ಪರಿಶಿಷ್ಟ ಜಾತಿ ಉಪಯೋಜನೆ | 8.47 | 8.47 (100) | 4.29 (51) |
| 2230–02–800–0–02 –423 – ಗಿರಿಜನ ಉಪಯೋಜನೆ | 3.15 | 3.15 (100) | 2.07 (66) |
| 2230–03–101–0–49 –125 – ಆಧುನೀಕರಣ | 1.75 | 1.75 (100) | 1.75 (100) |

*ಆಕರ: ಅನುದಾನ ವಹಿ*

ವರ್ಷದ ಕೊನೆಯಲ್ಲಿ ವೆಚ್ಚದ ಒತ್ತಡವನ್ನು ತಪ್ಪಿಸಲು ಸಮತೋಲಿತ ವೆಚ್ಚವನ್ನು ಯೋಜಿಸಲು ಇಲಾಖೆಗಳಿಗೆ ನಿಯತವಾಗಿ ಸೂಚನೆಗಳನ್ನು ನೀಡಲಾಗುತ್ತಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020).

## 2.8 ನಿರ್ಣಯ

2018–19ರ ಅವಧಿಯಲ್ಲಿ ₹2,45,673.07 ಕೋಟಿಗಳ ಒಟ್ಟು ಅವಕಾಶಕ್ಕೆ ಪ್ರತಿಯಾಗಿ ₹2,20,534.10 ಕೋಟಿ ವೆಚ್ಚವನ್ನು ಭರಿಸಲಾಯಿತು. ಇದು ₹25,138.97 ಕೋಟಿಗಳ (ಶೇಕಡಾ 10) ಬಳಕೆಯಾಗದ ಅವಕಾಶದಲ್ಲಿ ಪರಿಣಮಿಸಿತು. ಬಳಕೆಯಾಗದ ಅವಕಾಶದಲ್ಲಿ, 19 ಅನುದಾನಗಳಲ್ಲಿ ₹7,667.67 ಕೋಟಿಗಳನ್ನು ಹಣಕಾಸು ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ಅಧ್ಯರ್ಪಣೆ ಮಾಡಲಾಯಿತು.

ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರುವ ಬಂಡವಾಳ/ರಾಜಸ್ವ ವಿಭಾಗದಡಿಯಲ್ಲಿ ₹108.40 ಕೋಟಿಗಳ ತಪ್ಪು ವರ್ಗೀಕರಣ ಮಾಡಿದ್ದರಿಂದ ಆಯವ್ಯಯ ಪ್ರಕ್ರಿಯೆಯು ಹೆಚ್ಚು ಕಠಿಣವಾಗಿರಬೇಕು.

ಶಾಸಕಾಂಗದ ಅನುಮೋದನೆಗೆ ಮೊದಲೇ ವೆಚ್ಚಕ್ಕಾಗಿ ₹3,940.35 ಕೋಟಿಗಳಿಗೆ ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸಲಾಯಿತು ಮತ್ತು ಅದು ಪೂರಕ ಅಂದಾಜಿನ ಶೇಕಡಾ 18ರಷ್ಟಿತ್ತು. ಸಂವಿಧಾನದ 205ನೇ ವಿಧಿಯಡಿ 2012–13ರಿಂದ 2017–18ರ ಅವಧಿಗೆ ಸಂಬಂಧಿಸಿದ ₹2,409.53 ಕೋಟಿ ಅಧಿಕ ವೆಚ್ಚವನ್ನು ಸಕ್ರಮೀಕರಣಗೊಳಿಸುವ ಅಗತ್ಯವಿದೆ. ಮೂರು ಅನುದಾನಗಳ ನಾಲ್ಕು ಪ್ರಕರಣಗಳಲ್ಲಿ 'ಹೊಸ ಸೇವೆ/ಹೊಸ ಸೇವಾ ಸಾಧನ' ಎಂದು ಪರಿಗಣಿಸಬೇಕಿದ್ದ ₹686.82 ಕೋಟಿ ಮೊತ್ತದ ವೆಚ್ಚವನ್ನು ಶಾಸಕಾಂಗದ ಅನುಮೋದನೆಯನ್ನು ಪಡೆಯದೇ ಭರಿಸಲಾಗಿತ್ತು.

ಕೆಎಫ್‌ಆರ್‌ಎಯಲ್ಲಿ ಅಗತ್ಯವಿರುವಂತೆ ಪೂರಕ ಅಂದಾಜುಗಳ ಹಣಕಾಸಿನ ಪ್ರಭಾವವನ್ನು ಸಂಪೂರ್ಣವಾಗಿ ಸರಿದೂಗಿಸಲು ಅನುಗುಣವಾದ ವೆಚ್ಚದ ಕಡಿತ ಮತ್ತು/ಅಥವಾ ಆದಾಯದ ಹೆಚ್ಚಳವನ್ನು ತೋರಿಸುವ ವಿವರಣೆಯನ್ನು ಒದಗಿಸದ ಕಾರಣ ಪೂರಕ ಅವಕಾಶಗಳು 'ವಿತ್ತೀಯ ಸಮತೆ'ಯಾಗಿಲ್ಲ. 13 ಉದ್ದೇಶ ಶೀರ್ಷಿಕೆಗಳಡಿಯಲ್ಲಿನ ₹1,319.88 ಕೋಟಿಗಳ ಪೂರಕ ಅವಕಾಶವು ಅನವಶ್ಯಕವಾಗಿತ್ತು ಮತ್ತು ಏಳು ಉದ್ದೇಶ ಶೀರ್ಷಿಕೆಗಳ ಅಡಿಯಲ್ಲಿ ಮಾಡಿದ ₹4,291.43 ಕೋಟಿಗಳ ಪೂರಕ ಅವಕಾಶವು ಅಧಿಕವಾಗಿತ್ತೆಂದು ಸಾಬೀತಾಯಿತು.

27 ಪ್ರಕರಣಗಳಲ್ಲಿ ಪುನರ್ವಿನಿಯೋಗಗಳನ್ನು ದೋಷಪೂರಿತವಾಗಿ ಮಾಡಲಾಗಿದ್ದು ಅದು ಬಳಕೆಮಾಡದ ಅವಕಾಶ ಅಥವಾ ಅಧಿಕ ಅವಕಾಶದಲ್ಲಿ ಪರಿಣಮಿಸಿದರೆ, 35 ಪ್ರಕರಣಗಳಲ್ಲಿ ದೋಷಪೂರಿತ ಪುನರ್ವಿನಿಯೋಗ ಆದೇಶಗಳ ಕಾರಣದಿಂದ ಪುನರ್ವಿನಿಯೋಗವನ್ನು ಮಾಡಲಾಗಲಿಲ್ಲ.

## 2.9 ಶಿಫಾರಸುಗಳು

- **ಅವಕಾಶಗಳು ಬಳಕೆಯಾಗದೆ ಉಳಿಯುವ ಪ್ರಕರಣಗಳನ್ನು ಮತ್ತು ಆರ್ಥಿಕ ವರ್ಷದ ಕೊನೆಯಲ್ಲಿ ಬಳಕೆಯಾಗದ ಅವಕಾಶವನ್ನು ಅಧ್ಯರ್ಪಣೆ ಮಾಡುವುದನ್ನು ತಪ್ಪಿಸಲು ಆಯವ್ಯಯ ಅಂದಾಜಿನ ನಿಯಂತ್ರಣವನ್ನು ಎಲ್ಲಾ ಇಲಾಖೆಗಳಲ್ಲೂ ಬಲಪಡಿಸಬೇಕಾಗಿದೆ.**
- **ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಮಂಡಿಸುವ ಮೂಲಕ, 2012–13ನೇ ವರ್ಷದಿಂದ ಅಧಿಕ ವೆಚ್ಚವನ್ನು ಸಕ್ರಮೀಕರಣಗೊಳಿಸಲು ಹೆಚ್ಚಿನ ಆದ್ಯತೆ ನೀಡಬೇಕು.**
- **ಕೆಎಫ್‌ಆರ್‌ಎಯಲ್ಲಿ ಅಗತ್ಯವಿರುವಂತೆ ಹಣಕಾಸಿನ ಪ್ರಭಾವವನ್ನು ಸಂಪೂರ್ಣವಾಗಿ ಸರಿದೂಗಿಸಲು ಅನುಗುಣವಾದ ವೆಚ್ಚದ ಕಡಿತ ಮತ್ತು/ಅಥವಾ ಆದಾಯದ ಹೆಚ್ಚಳಗಳ ವಿವರಗಳನ್ನು ಪೂರಕ ಅವಕಾಶಗಳು ಸೂಚಿಸಬೇಕು.**
- **ದೋಷಪೂರಿತ ಪುನರ್ವಿನಿಯೋಗ ಆದೇಶಗಳು ಜಾರಿಯಾಗುವುದನ್ನು ನಿಯಂತ್ರಿಸಲು ಕಾರ್ಯತಂತ್ರವೊಂದನ್ನು ಅಭಿವೃದ್ಧಿಗೊಳಿಸಲು ಪುನರ್ವಿನಿಯೋಗ ಆದೇಶಗಳನ್ನು ಅದರಲ್ಲೂ ವಿಶೇಷವಾಗಿ ಅನುಚಿತ ಮತ್ತು ದೋಷಪೂರಿತ ಆದೇಶಗಳನ್ನು ಜಾರಿಮಾಡಲು ಕಾರಣಗಳನ್ನು ಖಚಿತಪಡಿಸಿಕೊಳ್ಳಬೇಕು.**

# ಅಧ್ಯಾಯ - III

# ಆರ್ಥಿಕ ನಿರೂಪಣೆ

# 3 ಅಧ್ಯಾಯ–III

## ಆರ್ಥಿಕ ನಿರೂಪಣೆ

ಹಣಕಾಸು ನಿಯಮಗಳ ಅನುಸರಣೆಯನ್ನು ಆಧರಿಸಿದ ಸ್ವಸ್ಥ ಆಂತರಿಕ ಆರ್ಥಿಕ ನಿರೂಪಣಾ ವ್ಯವಸ್ಥೆಯು ಉತ್ತಮ ಆಡಳಿತದ ಲಕ್ಷಣಗಳಲ್ಲಿ ಒಂದಾಗಿದೆ. ಈ ಅಧ್ಯಾಯವು ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರದ ಇಲಾಖೆಗಳ, ವಿವಿಧ ಹಣಕಾಸು ನಿಯಮಗಳ, ಕಾರ್ಯ ವಿಧಾನಗಳ ಮತ್ತು ನಿರ್ದೇಶನಗಳ ಅನುಸರಣೆಯ ಸ್ಥಿತಿಯನ್ನು ಮತ್ತು ಸ್ಥೂಲ ನೋಟವನ್ನು ನೀಡುತ್ತದೆ

### 3.1 ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವಿಕೆ

ಇಲಾಖಾ ಅಧಿಕಾರಿಗಳು ನೀಡಿದ ಅನುದಾನಗಳಿಗೆ ಅನುದಾನಿತ ಸಂಸ್ಥೆಗಳಿಂದ ಬಳಕೆ ಪ್ರಮಾಣಪತ್ರಗಳನ್ನು ಪಡೆಯಬೇಕು ಹಾಗೂ ಪರಿಶೀಲನೆಯ ನಂತರ ಅವುಗಳನ್ನು ಮಂಜೂರಾದ ದಿನಾಂಕದಿಂದ 18 ತಿಂಗಳುಗಳೊಳಗೆ (ಬೇರೆ ರೀತಿ ನಿಗದಿಪಡಿಸಿದ್ದರ ಹೊರತಾಗಿ) ಮಹಾಲೇಖಾಪಾಲರಿಗೆ (ಲೆ ಮತ್ತು ಹ) ಕಳುಹಿಸಬೇಕೆಂದು ಆರ್ಥಿಕ ನಿಯಮಗಳು ವಿಧಿಸುತ್ತವೆ. ಕಳೆದ ಐದು ವರ್ಷಗಳ ಬಾಕಿ ಇರುವ ಪ್ರಮಾಣಪತ್ರಗಳ ತುಲನೆಯನ್ನು **ಕೋಷ್ಟಕ 3.1**ರಲ್ಲಿ ನೀಡಲಾಗಿದೆ. ಕೋಷ್ಟಕದಲ್ಲಿ ತೋರಿಸಿರುವಂತೆ, ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ಸ್ಥಿತಿಯು, ಅಂತರ್ ವರ್ಷಗಳ ವ್ಯತ್ಯಾಸಗಳೊಂದಿಗೆ, ಇಳಿಮುಖ ಪ್ರಗತಿ ಸಾಧಿಸಿದೆ. 2018–19ರಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳ ಪರಿಣಾಮವಾಗಿ, ಕಳೆದ ವರ್ಷದ ಅಂತ್ಯಕ್ಕೆ ಬಾಕಿ ಇದ್ದ 303 ಬಳಕೆ ಪ್ರಮಾಣ ಪತ್ರಗಳ ಪೈಕಿ 216 ಬಳಕೆ ಪ್ರಮಾಣಪತ್ರಗಳು ಸ್ವೀಕೃತಿಯಾಗಿವೆ. 2018–19ರ ಅಂತ್ಯಕ್ಕೆ ಬಾಕಿ ಇದ್ದು ಸಲ್ಲಿಸಬೇಕಿದ್ದ ₹764.81 ಕೋಟಿಗಳ 110 ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು **ಅನುಬಂಧ 3.1**ರಲ್ಲಿ ತೋರಿಸಲಾಗಿದೆ. ವರ್ಷಾವಾರು ಬಾಕಿಯಿರುವ ಬಳಕೆ ಪ್ರಮಾಣಪತ್ರಗಳನ್ನು **ಕೋಷ್ಟಕ 3.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.1 : ಕಳೆದ ಐದು ವರ್ಷಗಳ ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ತುಲನೆ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಬಾಕಿ ಇರುವ ಬಳಕೆಪ್ರಮಾಣ ಪತ್ರಗಳ ಸಂಖ್ಯೆ | ಮೊತ್ತ |
|---|---|---|---|
| 1 | 2014–15 | 182 | 740.77 |
| 2 | 2015–16 | 124 | 487.91 |
| 3 | 2016–17 | 173 | 723.94 |
| 4 | 2017–18 | 303 | 2,585.26 |
| 5 | 2018–19 | 110 | 764.81 |

**ಕೋಷ್ಟಕ 3.2: ವರ್ಷವಾರು ಬಾಕಿಯಿರುವ ಬಳಕೆ ಪ್ರಮಾಣ ಪತ್ರಗಳು**

**(₹ ಕೋಟಿಗಳಲ್ಲಿ)**

| ಬಾಕಿ ಇರುವ ವರ್ಷ | ಸಲ್ಲಿಸಬೇಕಿದ್ದ ಬಳಕೆ ಪ್ರಮಾಣ ಪತ್ರಗಳ ಸಂಖ್ಯೆ | ಮೊತ್ತ |
|---|---|---|
| **2016–17ರವರೆಗೆ** | 55 | 195.91 |
| **2017–18** | 32 | 223.14 |
| **2018–19** | 23 | 345.76 |
| **ಒಟ್ಟು** | **110** | **764.81** |

*ಆಕರ: ಹಣಕಾಸು ಲೆಕ್ಕಗಳು*

ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿರುವ ಪ್ರಕರಣಗಳಲ್ಲಿ ಹೆಚ್ಚಿನ ಪಾಲು ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ (ಶೇಕಡ 56) ಮತ್ತು ನಗರಾಭಿವೃದ್ಧಿ ಇಲಾಖೆಗೆ (ಶೇಕಡ 43) ಸಂಬಂಧಿಸಿವೆ. ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಲ್ಲಿನ ಬಾಕಿಯು ಯಾವ ಉದ್ದೇಶಕ್ಕಾಗಿ ಅನುದಾನಗಳು ಬಿಡುಗಡೆಯಾಗಿವೆಯೋ ಅದರ ಬಳಕೆಯ ಬಗ್ಗೆ ಆಶ್ವಾಸನೆಯ ಅನುಪಸ್ಥಿತಿಯನ್ನು ಸೂಚಿಸುತ್ತವಲ್ಲದೆ ಇಲಾಖೆಗಳಿಂದ ಅನುದಾನಿತರಿಗೆ ಬಿಡುಗಡೆಯಾದ ಅನುದಾನಗಳ ಬಳಕೆಯ ಮೇಲ್ವಿಚಾರಣೆಯಲ್ಲಿನ ಕೊರತೆಯನ್ನೂ ಸಹ ಸೂಚಿಸುತ್ತವೆ. ಬಳಕೆಪ್ರಮಾಣ ಪತ್ರಗಳ ಸಲ್ಲುವಿಕೆಯ ಬಾಕಿಯು, ಅವ್ಯವಹಾರ ಮತ್ತು ಹಣ ದುರುಪಯೋಗಗಳ ಅಪಾಯವನ್ನು ಹೊಂದಿರುತ್ತದೆ.

ಸೆಳೆದ ಹಣಗಳಿಗೆ ಪ್ರತಿಯಾಗಿ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವುದು ನಿಯತಕಾಲಿಕವಾಗಿ ನಡೆಯುವ ಆಯವ್ಯಯ ನಿಯಂತ್ರಣದ ಭಾಗವಾಗಿರಬೇಕು.

ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದ್ದರೂ ಸಹ, ಎಲ್ಲಾ ಕರ್ತವ್ಯಲೋಪ ಇಲಾಖೆಗಳಿಗೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಲು ನೆನಪೋಲೆಗಳನ್ನು ಜಾರಿ ಮಾಡಲಾಗುವುದು ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020).

## 3.2 ಸರ್ಕಾರದಿಂದ ಗಣನೀಯವಾಗಿ ಆರ್ಥಿಕ ಬೆಂಬಲ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವಿಕೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳು) ಅಧಿನಿಯಮ, 1971ರ 14 ಮತ್ತು 15ನೇ ಪರಿಚ್ಛೇದಗಳಡಿ, ಲೆಕ್ಕ ಪರಿಶೋಧನೆಗೆ ಒಳಪಡುವ ಸಂಸ್ಥೆಗಳನ್ನು ಗುರುತಿಸಲು ಅನುವಾಗುವಂತೆ, ಸರ್ಕಾರದ ಇಲಾಖಾ ಮುಖ್ಯಸ್ಥರುಗಳು ಪ್ರತಿ ವರ್ಷವೂ ₹25 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಆರ್ಥಿಕ ಸಹಾಯ ಪಡೆದಿರುವ ಸಂಸ್ಥೆಗಳ, ಸಹಾಯ ನೀಡಿದ ಉದ್ದೇಶ ಮತ್ತು ಒಟ್ಟು ವೆಚ್ಚದ ವಿವರಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಬೇಕಾಗಿರುತ್ತದೆ.

ಹತ್ತು ಇಲಾಖೆಗಳು 2 ರಿಂದ 20 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ₹25 ಲಕ್ಷ ಅಥವಾ ಅದಕ್ಕಿಂತಲೂ ಹೆಚ್ಚಿನ ಅನುದಾನ ಪಡೆದಿರುವ 484 ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ವಿವರಗಳನ್ನು **ಅನುಬಂಧ 3.2**ರಲ್ಲಿ ನೀಡಲಾಗಿದೆ. ಅನುಬಂಧದಲ್ಲಿ ಕಂಡುಬರುವಂತೆ, ಶಿಕ್ಷಣ ಇಲಾಖೆಯು ಪ್ರಮುಖ ಕರ್ತವ್ಯಲೋಪ ಇಲಾಖೆಯಾಗಿತ್ತು.

ಅಗತ್ಯ ಮಾಹಿತಿಯನ್ನು ನೇರವಾಗಿ ಮಹಾಲೇಖಾಪಾಲರಿಗೆ ಸಲ್ಲಿಸಬೇಕು ಎಂದು ಎಲ್ಲಾ ಆಡಳಿತ ಇಲಾಖೆಗಳ ಕಾರ್ಯದರ್ಶಿಗಳಿಗೆ ಆರ್ಥಿಕ ಇಲಾಖೆಯು ಸೂಚನೆಗಳನ್ನು ಹೊರಡಿಸಿತ್ತು (ಡಿಸೆಂಬರ್ 2017). ಆದರೆ, ಅನುಸರಣೆಯಲ್ಲಿ ಯಾವುದೇ ಸುಧಾರಣೆ ಕಂಡುಬಂದಿಲ್ಲ.

ಮಹಾಲೇಖಾಪಾಲರಿಗೆ ಅಗತ್ಯ ಮಾಹಿತಿಯನ್ನು ಶೀಘ್ರವಾಗಿ ಸಲ್ಲಿಸಲು ಇಲಾಖೆಗಳಿಗೆ ಸೂಚನೆ ನೀಡಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿದೆ (ಮಾರ್ಚ್ 2020).

## 3.3 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆಯ ಮತ್ತು ರಾಜ್ಯ ಶಾಸಕಾಂಗದ ಮುಂದೆ ಲೆಕ್ಕ ಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ

ರಾಜ್ಯ ಸರ್ಕಾರವು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಹಲವು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳು) ಅಧಿನಿಯಮ, 1971ರ 19 ಮತ್ತು 20ನೇ ಪರಿಚ್ಛೇದಗಳಡಿ ರಾಜ್ಯದಲ್ಲಿನ 12 ಸ್ವಾಯುತ್ತ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ. ಈ ಸಂಸ್ಥೆಗಳ ವ್ಯವಹಾರಗಳು, ಕಾರ್ಯಚಟುವಟಿಕೆಗಳು ಮತ್ತು ಲೆಕ್ಕಗಳ, ಕ್ರಮಬದ್ಧ ಲೆಕ್ಕ ಪರಿಶೋಧನೆ/ಅನುಸರಣೆ, ಆಂತರಿಕ ನಿರ್ವಹಣೆ ಮತ್ತು ಆರ್ಥಿಕ ನಿಯಂತ್ರಣದ ಸಮೀಕ್ಷೆ, ವ್ಯವಸ್ಥೆ ಹಾಗೂ ಕಾರ್ಯವಿಧಾನಗಳ ಸಮೀಕ್ಷೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯನ್ನು ನಡೆಸಲಾಗುತ್ತದೆ.

ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ವಹಿಸಿರುವಿಕೆ, ಲೆಕ್ಕಪತ್ರಗಳ ಸಲ್ಲಿಕೆ, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಜಾರಿ ಮತ್ತು ರಾಜ್ಯವಿಧಾನಮಂಡಲದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು **ಅನುಬಂಧ 3.3ರಲ್ಲಿ** ನೀಡಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯು ಮೊದಲ ಬಾರಿಗೆ 2006–07ನೇ ವರ್ಷದ ಲೆಕ್ಕಪತ್ರಗಳನ್ನು ಸಲ್ಲಿಸಿದೆ.

## 3.4 ಇಲಾಖಾ ವಾಣಿಜ್ಯ ಉದ್ದಿಮೆಗಳು

ಕೆಲವು ಸರ್ಕಾರಿ ಇಲಾಖೆಗಳ ಇಲಾಖಾ ಉದ್ದಿಮೆಗಳು ವಾಣಿಜ್ಯ ಮತ್ತು ಅರೆವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಡೆಸುತ್ತಿದ್ದು, ಈ ಉದ್ದಿಮೆಗಳು ಪ್ರತಿ ವರ್ಷವೂ, ಸರ್ಕಾರವು ಈ ಉದ್ದಿಮೆಗಳ ಕಾರ್ಯ ವೈಖರಿಯನ್ನು ಅಳೆಯಲು ಸಹಕಾರಿಯಾಗುವಂತೆ, ಹಣಕಾಸು ನಿರ್ವಹಣೆಯ ಕಾರ್ಯಫಲಗಳನ್ನು ತೋರಿಸುವಂತಹ ಪ್ರಪತ್ರ ಲೆಕ್ಕಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಬೇಕಾಗಿದೆ. ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ದಿಮೆಗಳ ಅಂತಿಮಗೊಳಿಸಿದ ಲೆಕ್ಕಗಳು ಈ ಉದ್ದಿಮೆಗಳ ಸಮಗ್ರ ಆರ್ಥಿಕ ಸ್ವಾಸ್ಥ್ಯವನ್ನು ಮತ್ತು ಅವುಗಳ ವ್ಯವಹಾರಗಳನ್ನು ನಿರ್ವಹಿಸುವಲ್ಲಿನ ಸಮರ್ಥತೆಯನ್ನು ಪ್ರತಿಬಿಂಬಿಸುತ್ತದೆ. ಸಕಾಲದಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸುವಲ್ಲಿನ ಅನುಪಸ್ಥಿತಿಯು ಸರ್ಕಾರದ ಹೂಡಿಕೆಯು ಲೆಕ್ಕಪರಿಶೋಧನೆಯ/ಶಾಸಕಾಂಗದ ಪರಿಶೀಲನೆಯಿಂದ ಹೊರಗೆ ಉಳಿಯುತ್ತವೆ. ತತ್ಪರಿಣಾಮವಾಗಿ ಇವುಗಳ ಹೊಣೆಗಾರಿಕೆಗಳನ್ನು ಖಚಿತಪಡಿಸಿಕೊಳ್ಳುವ ಮತ್ತು ದಕ್ಷತೆಯನ್ನು ಹೆಚ್ಚಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದಲ್ಲಿ, ಅವುಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ, ಇಂತಹ ವಿಳಂಬಗಳಿಂದ, ಸಂಭಾವ್ಯ ವಂಚನೆಯ ಅಪಾಯ ಮತ್ತು ಸಾರ್ವಜನಿಕ ಹಣದ ಸೋರುವಿಕೆಯ ಸಾಧ್ಯತೆ ಇರುತ್ತದೆ.

ಸರ್ಕಾರದ ಇಲಾಖಾ ಮುಖ್ಯಸ್ಥರು, ಈ ಉದ್ದಿಮೆಗಳು ತಮ್ಮ ಲೆಕ್ಕಗಳನ್ನು ನಿಗದಿತ ಸಮಯದಲ್ಲಿ ತಯಾರಿಸಿ ಮಹಾಲೇಖಾಪಾಲರ ಪರಿಶೋಧನೆಗೆ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಮುಚ್ಚಿ ಹೋಗಿರುವ/ವರ್ಗವಾಗಿರುವ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿತವಾಗಿರುವ ಒಂಭತ್ತು ಉದ್ದಿಮೆಗಳಲ್ಲಿ ಎರಡು ಉದ್ದಿಮೆಗಳ ಪ್ರಪತ್ರ ಲೆಕ್ಕಗಳು 1969–70ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿ ಬಾಕಿ ಇರುವ ಸ್ಥಿತಿಯನ್ನು **ಅನುಬಂಧ 3.4ರಲ್ಲಿ** ನೀಡಲಾಗಿದೆ.

ಮಾರ್ಚ್ 2016ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ಮೇಲಿನ ಲೆಕ್ಕಪರಿಶೋಧನಾ ವರದಿಯ **ಕಂಡಿಕೆ 3.4**ಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು (ಮಾರ್ಚ್ 2018) ಪ್ರಪತ್ರ ಲೆಕ್ಕಪತ್ರಗಳನ್ನು ಮಹಾಲೇಖಪಾಲರಿಗೆ ಸಲ್ಲಿಸುವ ವಿಷಯವಾಗಿ 18 ಆಗಸ್ಟ್ 2015ರಂದು ನಡೆದ ಸಭೆಯಲ್ಲಿ ಮಹಾಲೇಖಪಾಲರಿಗೆ ಪ್ರಪತ್ರ ಲೆಕ್ಕಪತ್ರಗಳನ್ನು ಸಲ್ಲಿಸುವುದನ್ನು ಮುಂದುವರೆಸುವಂತೆ ಮತ್ತು ಘಟಕಗಳನ್ನು ಮುಚ್ಚಲು ಸಮಗ್ರ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಗೆ ಕಳುಹಿಸುವಂತೆ ಇಲಾಖೆಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿತು.

ಪ್ರಪತ್ರ ಲೆಕ್ಕಗಳ ತಯಾರಿಕೆ ಮತ್ತು ಸಲ್ಲಿಸುವಿಕೆಯಲ್ಲಿನ ಬಾಕಿಗಳನ್ನು ಇತ್ಯರ್ಥಗೊಳಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳುವಂತೆ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

## 3.5 ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು ಸ್ವೀಕೃತವಾಗದಿರುವುದು

ವಿವಿಧ ಇಲಾಖೆಗಳ ಉಗ್ರಾಣ ಮತ್ತು ದಾಸ್ತಾನಿನ ಕ್ರೋಢೀಕೃತ ವಾರ್ಷಿಕ ಲೆಕ್ಕಪತ್ರಗಳನ್ನು ಮುಂದಿನ ವರ್ಷದ ಜೂನ್ 15ರ ವೇಳೆಗೆ ಲೆಕ್ಕಪರಿಶೋಧನೆಗೆ ಸಲ್ಲಿಸಬೇಕು. ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ, ಜಲಸಂಪನ್ಮೂಲಗಳು ಮತ್ತು ಸಣ್ಣ ನೀರಾವರಿ ಇಲಾಖೆಗಳ ಅರ್ಧವಾರ್ಷಿಕ ಲೆಕ್ಕಗಳು 15ನೇ ಡಿಸೆಂಬರ್ ಮತ್ತು ಮರು ವರ್ಷದ 15ನೇ ಜೂನ್ ಒಳಗೆ ಸ್ವೀಕೃತವಾಗಬೇಕಾಗಿದೆ. ಉಗ್ರಾಣ ಮತ್ತು ದಾಸ್ತಾನಿನ ಲೆಕ್ಕಪತ್ರಗಳ ಸ್ವೀಕೃತಿಯಲ್ಲಿನ ವಿಳಂಬಗಳನ್ನು ಲೆಕ್ಕಪರಿಶೋಧನಾ ವರದಿಗಳಲ್ಲಿ ಸತತವಾಗಿ ವ್ಯಾಖ್ಯಾನಿಸಲಾಗುತ್ತಿದೆ.

ಒಂಬತ್ತು ಇಲಾಖೆಗಳ 164 ಕಛೇರಿಗಳು ಸಲ್ಲಿಸಬೇಕಾದ ಉಗ್ರಾಣ ಮತ್ತು ದಾಸ್ತಾನು ಲೆಕ್ಕಗಳಿಗೆ ಸಂಬಂಧಿಸಿದ ಬಾಕಿಯ ವಿವರಗಳನ್ನು **ಅನುಬಂಧ 3.5**ರಲ್ಲಿ ನೀಡಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ 10 ವರ್ಷಗಳಿಗೂ ಹೆಚ್ಚು ಸಮಯದಿಂದ ಲೆಕ್ಕಪತ್ರಗಳ ಸಲ್ಲಿಕೆಯು ಬಾಕಿ ಇದ್ದವು (2008–09ರಿಂದ 2018–19ರವರೆಗೆ).

## 3.6 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಕರ್ನಾಟಕ ಸರ್ಕಾರದ ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 36ರಲ್ಲಿ ವಿಧಿಸಿರುವಂತೆ, ನಿಯಂತ್ರಣಾಧಿಕಾರಿಗಳು ಮತ್ತು ವಿತರಣಾಧಿಕಾರಿಗಳು ಸೇವಾ ಲೆಕ್ಕಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಸೆಳೆಯಬಹುದಾಗಿದ್ದು, ಅದಕ್ಕೆ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು (ಅಂತಿಮ ವೆಚ್ಚಕ್ಕೆ ಸಮರ್ಥನೆಯಾಗಿ ವೋಚರುಗಳು) ಸಂಕ್ಷಿಪ್ತ ಸಾದಿಲ್ವಾರು ಬಿಲ್ಲು ಸೆಳೆದ ತಿಂಗಳಿನ ಮುಂದಿನ ತಿಂಗಳ 15ನೇ ದಿನಾಂಕಕ್ಕಿಂತ ಮೊದಲು ಖಜಾನೆಗಳ ಮೂಲಕ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಕಳುಹಿಸಬೇಕಾಗಿದೆ. ತಕ್ಷಣದ ವಿತರಣೆಗೆ ಅಗತ್ಯವಿದ್ದ ಹೊರತು ಖಜಾನೆಯಿಂದ ಹಣವನ್ನು ಸೆಳೆಯದಿರುವುದನ್ನು ಸಹ ನಿಯಂತ್ರಣಾಧಿಕಾರಿಗಳು ಖಚಿತಪಡಿಸಿ ಕೊಳ್ಳಬೇಕಾಗಿದೆ. ಮಾರ್ಚ್ 2019ರ ಅಂತ್ಯಕ್ಕೆ ₹93.27 ಕೋಟಿಗಳ ಮೊತ್ತದ 2,095 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು, **ಕೋಷ್ಟಕ 3.3** ಮತ್ತು **ಕೋಷ್ಟಕ 3.4**ರಲ್ಲಿ ವಿವರಿಸಿರುವಂತೆ, ಸವಿವರ ಬಿಲ್ಲುಗಳು ಸಲ್ಲಿಕೆಯಾಗದೆ ಬಾಕಿ ಉಳಿದಿವೆ.

### ಕೋಷ್ಟಕ 3.3: ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

(₹ ಕೋಟಿಗಳಲ್ಲಿ)

| | ಸಂಖ್ಯೆ | ಮೊತ್ತ |
|---|---|---|
| 01.04.2018ರಲ್ಲಿದ್ದಂತೆ ಪ್ರಾರಂಭಿಕ ಶಿಲ್ಕು | 3,276 | 84.00 |
| ವರ್ಷದ ಅವಧಿಯಲ್ಲಿ ಸೆಳೆದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು * | 2,286 | 188.64 |
| ಒಟ್ಟು | 5,562 | 272.64 |
| ಬಾಕಿಯಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಪ್ರತಿಯಾಗಿ ಸಲ್ಲಿಸಿರುವ ಎನ್‌ಡಿಸಿ ಬಿಲ್ಲುಗಳು | 3,467 | 179.37 |
| **31.03.2019 ರಲ್ಲಿದ್ದಂತೆ ಬಾಕಿಯಿರುವ ಎಸಿ ಬಿಲ್ಲುಗಳ ಅಂತಿಮ ಶಿಲ್ಕು*** | **2,095** | **93.27** |

*ಆಕರ: ಹಣಕಾಸು ಲೆಕ್ಕಗಳು*

* ಮಾರ್ಚ್ 2019ರಲ್ಲಿ ಸೆಳೆದ ಬಿಲ್ಲುಗಳನ್ನು ಹೊರತುಪಡಿಸ,

### ಕೋಷ್ಟಕ 3.4 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವರ್ಷಾವಾರು ಬಾಕಿಯ ಸ್ಥಿತಿ

(₹ ಕೋಟಿಗಳಲ್ಲಿ)

| ವರ್ಷ | ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆ | ಮೊತ್ತ |
|---|---|---|
| 2016–17ರ ವರೆಗೆ | 840 | 26.55 |
| 2017–18 | 648 | 14.35 |
| 2018–19* | 607 | 52.37 |
| ಒಟ್ಟು | **2,095** | **93.27** |

*ಆಕರ: ಹಣಕಾಸು ಲೆಕ್ಕಗಳು*

ಬಾಕಿ ಇರುವ ಎನ್‌ಡಿಸಿ ಬಿಲ್ಲುಗಳಲ್ಲಿ ಶೇಕಡಾ 36ರಷ್ಟು ಚುನಾವಣೆಗಳು–ಪ್ರಧಾನ ಶೀರ್ಷಿಕೆ 2015ಕ್ಕೆ (₹33.22 ಕೋಟಿ), ಶೇಕಡಾ 36ರಷ್ಟು ಪೊಲೀಸ್–ಪ್ರಧಾನ ಶೀರ್ಷಿಕೆ 2055 (₹32.93 ಕೋಟಿ) ಮತ್ತು ಶೇಕಡಾ ಏಳರಷ್ಟು ಅರಣ್ಯ ಮತ್ತು ವನ್ಯಜೀವಿ–ಪ್ರಧಾನ ಶೀರ್ಷಿಕೆ 2206 (₹6.80 ಕೋಟಿ) ಇವುಗಳಿಗೆ ಸಂಬಂಧಪಟ್ಟಿದ್ದವು.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೇಲೆ ಸೆಳೆದ ಮೊತ್ತವನ್ನು ಸಂಚಿತ ನಿಧಿಯಲ್ಲಿನ ಆಯಾ ಸೇವಾ ಪ್ರಧಾನ ಶೀರ್ಷಿಕೆಯಡಿ ಖರ್ಚು ಹಾಕಲಾಗುತ್ತದೆ. ನಿಗದಿತ ಸಮಯದೊಳಗೆ ಈ ಲೆಕ್ಕವನ್ನು ಇತ್ಯರ್ಥ ಮಾಡದಿದ್ದಲ್ಲಿ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ, ನಿಗದಿತ ಸಮಯದೊಳಗೆ ಲೆಕ್ಕಗಳನ್ನು ತೀರುವಳಿ ಮಾಡಲು, ಇಲ್ಲದಿದ್ದಲ್ಲಿ ಬಟವಾಡೆ ಅಧಿಕಾರಿಗಳ ಸಂಬಳವನ್ನು ನಿಲ್ಲಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚನೆಗಳನ್ನು ನೀಡಿದೆ (ಆಗಸ್ಟ್ 2012). ಆದಾಗ್ಯೂ, ಗಮನಾರ್ಹ ಸಂಖ್ಯೆಯ ಬಿಲ್ಲುಗಳು ಬಾಕಿಯಿದ್ದ ಬಟವಾಡೆ ಅಧಿಕಾರಿಗಳಿಗೆ ಸಂಬಳ ಸೆಳೆಯುವ ಪರಿಪಾಠವು ಮುಂದುವರೆದಿದ್ದು, ಆರ್ಥಿಕ ಇಲಾಖೆಯ ಸೂಚನೆಯ ಅನುಸರಣೆಯಲ್ಲಿರುವ ಕೊರತೆಯನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಐದನೆಯ ವರದಿಯಲ್ಲಿ (ಜುಲೈ 2015) ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸದ ಬಟವಾಡೆ ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆದ ಮೊತ್ತಗಳ ಕ್ಲೈಮ್‌ಗಳಿಗೆ ಬೆಂಬಲವಾಗಿ ವೋಚರುಗಳನ್ನು ಸಾದಿಲ್ವಾರು ವೆಚ್ಚ ಕೈಪಿಡಿಯಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಸಲ್ಲಿಸಬೇಕು.

ಮುಂದಿನ ವರ್ಷಗಳಲ್ಲಿ ನಿಗದಿತ ಸಮಯದೊಳಗೆ ಬಿಲ್ಲುಗಳನ್ನು ಇತ್ಯರ್ಥಗೊಳಿಸಲು ಅಗತ್ಯವಾದ ತಪಾಸಣೆಗಳನ್ನು ನಡೆಸುವುದಾಗಿ ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

## 3.7 ವೈಯಕ್ತಿಕ ಠೇವಣಿ ಲೆಕ್ಕಗಳು

ಕರ್ನಾಟಕ ಆರ್ಥಿಕ ಸಂಹಿತೆಯು, ವಹಿವಾಟುಗಳ ಲೆಕ್ಕಾಚಾರಕ್ಕೆ ರೂಢಿಯಲ್ಲಿನ ವಿಧಾನವು ಸೂಕ್ತವಲ್ಲವೆಂದು ಕಂಡು ಬಂದ ಪ್ರಸಂಗಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ (ಪಿಡಿ) ಲೆಕ್ಕಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸಿದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕಿ ಪ್ರಾರಂಭಿಸಿದ ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಆರ್ಥಿಕ ವರ್ಷಾಂತ್ಯದಲ್ಲಿ ಮುಕ್ತಾಯಗೊಳಿಸಬೇಕಾಗಿದೆ. ಆದರೆ, ಈ ನಿಯಮವನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಪಾಲಿಸದೆ ನಂತರದ ವರ್ಷಕ್ಕೆ ಗಣನೀಯವಾದ ಶಿಲ್ಕುಗಳನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದ್ದು ಅವುಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳ ಆಡಳಿತಾಧಿಕಾರಿಗಳು ಆರ್ಥಿಕ ವರ್ಷದ ಕೊನೆಯಲ್ಲಿ ಸಂಚಿತನಿಧಿಗೆ ವರ್ಗಾಯಿಸಬೇಕಾದ ಮೊತ್ತಗಳನ್ನು ಖಜಾನಾಧಿಕಾರಿಗೆ ತಿಳಿಸಬೇಕಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಚಾಲ್ತಿಯ ಅವಧಿ ಮುಗಿದ ನಂತರವೂ ಮುಂದುವರೆಸಬೇಕಾದ ಸಂದರ್ಭದಲ್ಲಿ ಆಡಳಿತಾಧಿಕಾರಿಗಳು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗಿದೆ. ಕಾಲಕಾಲಕ್ಕೆ ವೈಯಕ್ತಿಕ ಲೆಕ್ಕಗಳನ್ನು ಖಜಾನೆಯ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡುವುದು ಆಯಾ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

### 3.7.1 ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಇಟ್ಟಿರುವ ಮೊತ್ತಗಳು

2014–15ರಿಂದ 2018–19ರ ಅವಧಿಯ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು **ಕೋಷ್ಟಕ 3.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.5: ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮೊತ್ತಗಳು**

**(₹ ಕೋಟಿಗಳಲ್ಲಿ)**

| ವರ್ಷ | ಪ್ರಾರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ಅಂತಿಮ ಶಿಲ್ಕು |
|---|---|---|---|---|
| **2014–15** | 2,297.10 | 3,915.81 | 3,784.62 | 2,428.29 |
| **2015–16** | 2,428.29 | 6,368.39 | 6,061.07 | 2,735.61 |
| **2016–17** | 2,735.61 | 5,516.51 | 5,310.01 | 2,942.12 |
| **2017–18** | 2,942.12 | 4,194.46 | 4,395.06 | 2,741.52 |
| **2018–19** | 2,741.52 | 5,350.98 | 4,007.36 | 4,085.14 |

*ಆಕರ: ಹಣಕಾಸು ಲೆಕ್ಕಗಳು*

2018–19ರ ಅವಧಿಯಲ್ಲಿ ವೈಯಕ್ತಿಕ ಠೇವಣಿ ಖಾತೆಗಳಿಗೆ ಜಮೆ ಮಾಡಿದ ₹5,350.98 ಕೋಟಿಗಳಲ್ಲಿ ₹1,208.55 ಕೋಟಿಗಳನ್ನು ಮಾರ್ಚ್ 2019ರಲ್ಲಿ ವರ್ಗಾವಣೆ ಮಾಡಲಾಗಿದೆ. ಅಲ್ಲದೆ, ಮೇಲಿನ ಕೋಷ್ಟಕದಿಂದ ಗಮನಿಸಿದಂತೆ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳು 2016–17ರ ಅವಧಿಗೆ ಹೋಲಿಸಿದರೆ ಸ್ವಲ್ಪ ಮಟ್ಟಿನ ಇಳಿಕೆಯನ್ನು ತೋರಿಸಿದರೂ ಸಹ ಅದು 2018–19ರ ಅವಧಿಯಲ್ಲಿ ₹4,085.14 ಕೋಟಿಗಳಿಗೆ ಏರಿತ್ತು (ಶೇಕಡ 49).

ಅಧಿಕ ಶಿಲ್ಕುಗಳಿರುವ ಕೆಲವು ಆಡಳಿತಗಾರರ ವೈಯಕ್ತಿಕ ಠೇವಣಿ ಲೆಕ್ಕಗಳ ನಿವ್ವಳ ಅಂತಿಮ ಶಿಲ್ಕುಗಳನ್ನು **ಕೋಷ್ಟಕ 3.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.6: ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಅಂತಿಮ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಆಡಳಿತಗಾರರು | ಮೊತ್ತ |
|---|---|---|
| 1 | ವೈಯಕ್ತಿಕ ಠೇವಣಿಗಳು – ಸಾಮಾನ್ಯ | 555.50 |
| 2 | ಜಿಲ್ಲಾಧಿಕಾರಿಗಳ ಠೇವಣಿ ಖಾತೆಗಳು | 7,198.33 |
| 3 | ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಇಲಾಖೆ, ಇವರ ವೈಯಕ್ತಿಕ ಠೇವಣಿ ಲೆಕ್ಕ | 409.75 |
| 4 | ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಇವರ ವೈಯಕ್ತಿಕ ಠೇವಣಿ ಲೆಕ್ಕ | 215.70 |

*ಆಕರ: ಋಣ, ಠೇವಣಿ ಮತ್ತು ಇರಸಾಲು ಲೆಡ್ಜರು*

ವೈಯಕ್ತಿಕ ಠೇವಣಿ ಖಾತೆಗಳಲ್ಲಿರುವ ಬಳಕೆಯಾಗದ ಹಣವನ್ನು ರಾಜ್ಯದ ಸಂಚಿತ ನಿಧಿಗೆ ವರ್ಗಾವಣೆ ಮಾಡದಿರುವುದು, ಸಾರ್ವಜನಿಕ ಹಣ ದುರ್ಬಳಕೆ ಮತ್ತು ಅವ್ಯವಹಾರಗಳು ಸಂಭವಿಸುವ ಅಪಾಯವನ್ನು ಹೊಂದಿರುತ್ತದೆ. ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಅಧಿಕಮೊತ್ತದ ಶಿಲ್ಕುಗಳಿರುವುದರ ಮೇಲೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯೂ ಸಹ ತನ್ನ ಕಳವಳವನ್ನು ವ್ಯಕ್ತಪಡಿಸಿತ್ತು (ಜನವರಿ 2012 ಮತ್ತು ಜುಲೈ 2015).

ತಮ್ಮ ಅಗತ್ಯತೆಯನ್ನು ಮೀರಿದ ಹಣದ ಶಿಲ್ಕುಗಳನ್ನು ವಾಪಸ್ಸು ಮಾಡಲು/ಲೆಕ್ಕಗಳನ್ನು ಶುದ್ಧಗೊಳಿಸಲು ಕರ್ನಾಟಕ ಆರ್ಥಿಕ ಸಂಹಿತೆಯ ನಿಬಂಧನೆಗಳ ಅನ್ವಯ ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯವಿದೆ.

283 ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಚ್ಚಲು 2016ರಲ್ಲಿ ಪ್ರಯತ್ನ ಮಾಡಲಾಗಿದ್ದರೂ ಸಹ ಮಹಾಲೇಖಾಪಾಲರ (ಲೆ ಮತ್ತು ಹ) ಪುಸ್ತಕಗಳೊಂದಿಗೆ ಶಿಲ್ಕುಗಳನ್ನು ಹೊಂದಾಣಿಕೆ ಮಾಡದ ಕಾರಣ ಅವುಗಳನ್ನು ಅಂತಿಮಗೊಳಿಸಲಾಗಿಲ್ಲ ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020). ಆದ್ದರಿಂದ, ವೈಯಕ್ತಿಕ ಠೇವಣಿ ಖಾತೆಗಳ ಶಿಲ್ಕುಗಳನ್ನು ಮಹಾಲೇಖಾಪಾಲರ (ಲೆ ಮತ್ತು ಹ) ಪುಸ್ತಕದೊಂದಿಗೆ ಹೊಂದಾಣಿಕೆ ಮಾಡಲು ಮತ್ತೆ ಇಲಾಖೆಗಳನ್ನು ಕೋರಲಾಗುವುದು ಎಂದೂ ಸಹ ತಿಳಿಸಿತು.

### 3.7.2 ವೈಯಕ್ತಿಕ ಠೇವಣಿ ಲೆಕ್ಕಗಳ ಹೊಂದಾಣಿಕೆ

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286 ಅನ್ವಯ ವೈಯಕ್ತಿಕ ಠೇವಣಿ ಖಾತೆಗಳ ಆಡಳಿತಾಧಿಕಾರಿಗಳು ತಮ್ಮ ನಗದು ಪುಸ್ತಕದ ಶಿಲ್ಕುಗಳನ್ನು ಖಜಾನೆ ದಾಖಲೆಗಳಲ್ಲಿ ತೋರಿಸಿರುವ ಮಾಸಿಕ ಲೆಕ್ಕದೊಂದಿಗೆ ಮುಂದಿನ ತಿಂಗಳ 5ನೇ ತಾರೀಖಿನಂದು ಹೊಂದಾಣಿಕೆ ಮಾಡುವ ಅಗತ್ಯವಿದೆ. ಆಡಳಿತಾಧಿಕಾರಿಗಳು ಖಜಾನೆಗಳೊಂದಿಗೆ ಹೊಂದಾಣಿಕೆ ಮಾಡಿರುವ ಬಗ್ಗೆ ಮಾಹಿತಿಯು ಲಭ್ಯವಿರಲಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286ಎ ಅನ್ವಯ ಮೂರು ವರ್ಷಗಳಿಗೂ ಮೇಲ್ಪಟ್ಟ ಅವಧಿಯವರೆಗೆ ನಿಷ್ಕ್ರಿಯವಾಗಿರುವ ಎಲ್ಲ ವೈಯಕ್ತಿಕ ಠೇವಣಿ ಖಾತೆಗಳನ್ನು ರಾಜ್ಯ ಸರ್ಕಾರವು ಮುಕ್ತಾಯ ಗೊಳಿಸಬೇಕಾಗಿರುತ್ತದೆ. 2019ರ ಹಣಕಾಸು ಲೆಕ್ಕಗಳ ಟಿಪ್ಪಣಿಗಳಲ್ಲಿ ಸೂಚಿಸಿರುವಂತೆ 73 ವೈಯಕ್ತಿಕ ಠೇವಣಿ ಖಾತೆಗಳಲ್ಲಿ 21 ವೈಯಕ್ತಿಕ ಠೇವಣಿ ಖಾತೆಗಳು (11 ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹4.75 ಕೋಟಿ ಧನಾತ್ಮಕ ಶಿಲ್ಕು ಮತ್ತು ಎಂಟು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹1.24 ಕೋಟಿ ಋಣಾತ್ಮಕ ಶಿಲ್ಕು ಹಾಗೂ ಎರಡು ವೈಯಕ್ತಿಕ ಠೇವಣಿ ಖಾತೆಗಳ ಶಿಲ್ಕು ಶೂನ್ಯ) ನಿಷ್ಕ್ರಿಯವಾಗಿರುತ್ತವೆ (**ಅನುಬಂಧ 3.6**). ಶಿಲ್ಕನ್ನು ವಿಶ್ಲೇಷಣೆ ಮತ್ತು ಹೊಂದಾಣಿಕೆ ಮಾಡಲು, ಮುಕ್ತಾಯಗೊಳಿಸಲು ಮತ್ತು ರಾಜ್ಯದ ಸಂಚಿತ ನಿಧಿಗೆ ವಹಿವಾಟುಗಳನ್ನು ವಾಪಸ್ಸು ಮಾಡಲು ಆಡಳಿತಾಧಿಕಾರಿಗಳು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

## 3.8 ಸ್ವೀಕೃತಿಗಳ ಮತ್ತು ವೆಚ್ಚಗಳ ಹೊಂದಾಣಿಕೆ

ವೆಚ್ಚದ ಮೇಲಿನ ಪರಿಣಾಮಕಾರಿ ಆಯವ್ಯಯ ನಿಯಂತ್ರಣವನ್ನು ಸಾಧಿಸಲು ಮತ್ತು ಲೆಕ್ಕಪತ್ರಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಪುಸ್ತಕಗಳಲ್ಲಿನ ವೆಚ್ಚ ಮತ್ತು ಸ್ವೀಕೃತಿಗಳ ಅಂಕಿಗಳನ್ನು ಪ್ರಧಾನ ಮಹಾಲೇಖಾಪಾಲರ (ಲೆಕ್ಕ ಮತ್ತು ಹಕ್ಕುಗಳು) ಲೆಕ್ಕ ಪುಸ್ತಕಗಳಲ್ಲಿ ದಾಖಲು ಮಾಡಿರುವ ಅಂಕಿಗಳೊಂದಿಗೆ ಪ್ರತಿ ತಿಂಗಳೂ ಹೊಂದಾಣಿಕೆ ಮಾಡಬೇಕಾಗಿರುತ್ತದೆ. ಸ್ವೀಕೃತಿಗಳ ಹೊಂದಾಣಿಕೆಯನ್ನು ₹1,64,817.41 ಕೋಟಿ ಮೌಲ್ಯಕ್ಕೆ ಪೂರ್ಣಗೊಳಿಸಲಾಗಿದೆ (₹1,64,973.15 ಕೋಟಿಗಳ ಒಟ್ಟು ಸ್ವೀಕೃತಿಗಳ ಶೇಕಡಾ 99.91). ವೆಚ್ಚಗಳ ಹೊಂದಾಣಿಕೆಯನ್ನು ₹1,97,933.22 ಕೋಟಿಗಳ ಮೌಲ್ಯಕ್ಕೆ ಪೂರ್ಣಗೊಳಿಸಲಾಗಿದೆ (₹1,98,959.17 ಕೋಟಿಗಳ ಒಟ್ಟು ವೆಚ್ಚದ ಶೇಕಡಾ 99.48). ಸಾಲಗಳು ಮತ್ತು ಮುಂಗಡಗಳಡಿಯಲ್ಲಿ ಸ್ವೀಕೃತಿಗಳು (₹31.23 ಕೋಟಿ) ಹಾಗೂ ವಿತರಣೆಗಳಿಗೆ (₹4,487.23 ಕೋಟಿ) ಸಂಬಂಧಿಸಿದಂತೆ ಹೊಂದಾಣಿಕೆಯನ್ನು ಮಾಡಿರುವುದಿಲ್ಲ. ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದ ಶೀರ್ಷಿಕೆಗಳಡಿಯ ಸ್ವೀಕೃತಿಗಳು ಮತ್ತು ವೆಚ್ಚಗಳ ಹೊಂದಾಣಿಕೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

ಸಾಲಗಳು ಮತ್ತು ಮುಂಗಡಗಳ ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆಯನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಕ್ರಮ ತೆಗೆದುಕೊಳ್ಳುತ್ತದೆ ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಮಾರ್ಚ್ 2020).

## 3.9 ಲೆಕ್ಕಪತ್ರಗಳ ಮೇಲಿನ ವ್ಯಾಖ್ಯಾನಗಳು

### 3.9.1 ಅರ್ಹ ಕೈಗಾರಿಕೆಗಳಿಗೆ ಮಾರಾಟ ತೆರಿಗೆಯ ಮರುಪಾವತಿಗಾಗಿ ಅಳವಡಿಸಿಕೊಂಡ ತಪ್ಪಾದ ಕಾರ್ಯವಿಧಾನ

ಪ್ರಧಾನ ಶೀರ್ಷಿಕೆಗಳು ಮತ್ತು ಕಿರು ಶೀರ್ಷಿಕೆಗಳ ಪಟ್ಟಿಯ ಸಂಕಲನದಲ್ಲಿರುವ (ಎಲ್ಎಮ್ಎಮ್ಹೆಚ್) ಸಾಮಾನ್ಯ ಸೂಚನೆಗಳಡಿಯ ಕಂಡಿಕೆ 2.2ರ ಅನ್ವಯ ರಾಜಸ್ವ ಮರುಪಾವತಿಯನ್ನು ಸಾಮಾನ್ಯ ನಿಯಮದಂತೆ ರಾಜಸ್ವ ಸ್ವೀಕೃತಿಗಳಲ್ಲಿನ ಕಡಿತವೆಂದು ತೆಗೆದುಕೊಳ್ಳಬೇಕು (ಶೀರ್ಷಿಕೆ 900–"ಕಡಿತ–ಮರುಪಾವತಿಗಳು"). 'ಎ ತೆರಿಗೆ ರಾಜಸ್ವ' ವರ್ಗದಡಿಯಲ್ಲಿನ ಪ್ರಧಾನ/ಉಪ–ಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ 'ಕಡಿತ–ಮರುಪಾವತಿಗಳು' ಶೀರ್ಷಿಕೆಯನ್ನು ಸೂಕ್ತ ಕಿರು ಶೀರ್ಷಿಕೆಗಳ ಅಡಿಯಲ್ಲಿ ಒಂದು ಪ್ರತ್ಯೇಕ ಉಪ–ಶೀರ್ಷಿಕೆಯಾಗಿ ತೆರೆಯಬೇಕು, ಇದರಿಂದ ಲೆಕ್ಕಪತ್ರಗಳಲ್ಲಿ ತೆರಿಗೆ/ಸುಂಕದ ನಿವ್ವಳ

ಸಂಗ್ರಹಣೆಯನ್ನು ಸುಲಭವಾಗಿ ಖಚಿತಪಡಿಸಿಕೊಳ್ಳಬಹುದು. ಅಲ್ಲದೆ, ಸಾಮಾನ್ಯ ಹಣಕಾಸು ನಿಯಮಗಳ ನಿಯಮ 301(4)ರ ಅನ್ವಯ ರಾಜಸ್ವ ಮರುಪಾವತಿಯನ್ನು ವೆಚ್ಚವೆಂದು ಪರಿಗಣಿಸಬಾರದು.

2018–19ರ ಅವಧಿಯಲ್ಲಿ ಲೆಕ್ಕಶೀರ್ಷಿಕೆ '2852–80–103–0–01–ಮಾರಾಟ ತೆರಿಗೆಯ ಮರುಪಾವತಿ' ಅಡಿಯಲ್ಲಿ ಅರ್ಹ ಕೈಗಾರಿಕೆಗಳಿಗೆ (ಟೊಯೊಟಾ ಇಂಡಸ್ಟ್ರೀಸ್, ಟಿವಿಎಸ್ ಮೋಟಾರ್ ಕಂಪನಿ, ಬಿಇಎಮ್ಎಲ್, ಟೊಯೋಟಾ ಕಿರ್ಲೋಸ್ಕರ್ ಆಟೋ ಪಾರ್ಟ್ಸ್ ಪ್ರೈವೇಟ್ ಲಿಮಿಟೆಡ್ ಮುಂತಾದವುಗಳು) ವಿಶೇಷ ಪ್ರೋತ್ಸಾಹಧನ ಹಾಗೂ ರಿಯಾಯಿತಿಗಳಿಗೆ ಅರ್ಹವಾಗಿದ್ದವು ಮತ್ತು ಹಿಂದಿನ ಅವಧಿಗೆ ಮೇಲೆ ತಿಳಿಸಿದ ತೆರಿಗೆಗಳನ್ನು ಪಾವತಿಸಿದ್ದವು–ವ್ಯಾಟ್/ಕಾಮಗಾರಿಗಳ ಗುತ್ತಿಗೆ ತೆರಿಗೆ/ಸಿಎಸ್‌ಟಿ/ಪ್ರವೇಶ ತೆರಿಗೆ ಮುಂತಾದವುಗಳ ಮರುಪಾವತಿಗಾಗಿ ₹299.46 ಕೋಟಿ ವೆಚ್ಚವನ್ನು ಭರಿಸಲಾಗಿತ್ತು.

ಮೇಲೆ ತಿಳಿಸಿದ ಎಲ್ಎಮ್ಎಮ್ಹೆಚ್‌ನಲ್ಲಿ ಅಡಕವಾಗಿರುವ ಸೂಚನೆಗಳ ಅನ್ವಯ ಇದು ರಾಜಸ್ವದ (ಮಾರಾಟ ತೆರಿಗೆ) ಮರುಪಾವತಿಯಾಗಿದ್ದರಿಂದ, ತೆರಿಗೆಯ ಮರುಪಾವತಿಗೆ ಅನುಸರಿಸುವ ಸಾಮಾನ್ಯ ವಿಧಾನದಂತೆ ಮೊತ್ತಗಳನ್ನು ಕಾರ್ಯಾದೇಶಗಳ ಮೂಲಕ ಮರುಪಾವತಿ ಮಾಡಬೇಕಿತ್ತು. ಮರುಪಾವತಿಗಾಗಿ ವೆಚ್ಚ ಮಾರ್ಗವನ್ನು ಅನುಸರಿಸಿದ್ದು, ಇದು ₹299.46 ಕೋಟಿಗಳ ಮಟ್ಟಿಗೆ ವೆಚ್ಚವನ್ನು ಹೆಚ್ಚಿಗೆ ಹೇಳುವಲ್ಲಿ ಪರಿಣಮಿಸಿತು. ಅಲ್ಲದೆ, ರಾಜಸ್ವ ಹೆಚ್ಚಳದಂತಹ ವಿತ್ತೀಯ ಸೂಚಕಗಳ ಮೇಲೂ ಪರಿಣಾಮ ಬೀರಿತ್ತು.

ಇದಕ್ಕೆ ಉತ್ತರವಾಗಿ, ಮರುಪಾವತಿಯು ಅರ್ಹ ಕೈಗಾರಿಕೆಗಳು ಪಾವತಿಸಿದ ಅಧಿಕ ತೆರಿಗೆಯಾಗಿರದೆ, ಅದು ರಾಜ್ಯದಲ್ಲಿ ಹೂಡಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರದ ವಿವಿಧ ನೀತಿಗಳ ಅಡಿಯಲ್ಲಿ ಒದಗಿಸಿರುವ ಪ್ರೋತ್ಸಾಹಧನಗಳ ವಿಶೇಷ ಪ್ಯಾಕೇಜ್ ಅನ್ವಯ ಪಾವತಿಸಿದ್ದ ತೆರಿಗೆಯ ಮರುಪಾವತಿಯಾಗಿತ್ತು ಎಂದು ಇಲಾಖೆಯು ತಿಳಿಸಿತು (ಮೇ 2019). ಈ ವಿಷಯವು ಶಾಸಕಾಂಗದ ಅನುಮೋದನೆಯ ಮೂಲಕ ವೆಚ್ಚ ಮಾರ್ಗವನ್ನು ಅಳವಡಿಸಿಕೊಂಡಿರುವ ತಪ್ಪು ವಿಧಾನಕ್ಕೆ ಸಂಬಂಧಿಸಿರುವುದರಿಂದ ಇಲಾಖೆಯ ಉತ್ತರವನ್ನು ಒಪ್ಪಲಾಗುವುದಿಲ್ಲ.

ಮೇಲಿನ ಮೊತ್ತವನ್ನು ಅರ್ಹ ಉದ್ಯಮಿಗಳಿಗೆ ಪ್ರೋತ್ಸಾಹಧನವನ್ನಾಗಿ ನೀಡಲಾಯಿತು ಎಂದು ನಿರ್ಗಮನ ಸಭೆಯ ನಂತರ ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020). ಆರ್ಥಿಕ ವರ್ಷ 2019–20ನೇ ಸಾಲಿಗೆ ಒಂದು ತಿದ್ದುಪಡಿಯನ್ನು ನೀಡಲಾಗಿದೆ. 2020–21ರ ಆಯವ್ಯಯದಲ್ಲಿ ಸವಿವರ ಶೀರ್ಷಿಕೆಯ ಹೆಸರನ್ನು 'ರಾಜಸ್ವದ ಮರುಪಾವತಿ' ಬದಲಿಗೆ 'ಅರ್ಹ ಕೈಗಾರಿಕೆಗಳಿಗೆ ಪ್ರೋತ್ಸಾಹಧನ' ಎಂದು ಸೂಚಿಸಲಾಗಿದೆ ಎಂದೂ ಸಹ ಇಲಾಖೆಯು ತಿಳಿಸಿತು.

### 3.9.2 ಸಾಲವನ್ನು ಅನುದಾನವನ್ನಾಗಿ ಪರಿವರ್ತಿಸಲು ಅನವಶ್ಯಕ ಅವಕಾಶ

ತನ್ನ ನಿಯಮದ ಪುಸ್ತಕಗಳಲ್ಲಿ ಸಾಲಗಳನ್ನು ಈಕ್ವಿಟಿಗಳನ್ನಾಗಿ ಪರಿವರ್ತಿಸಲು ನಿರ್ದಿಷ್ಟ ಅವಕಾಶಗಳ ಅನುಪಸ್ಥಿತಿಯಲ್ಲಿ ರಾಜ್ಯ ಸರ್ಕಾರವು ಸಾಧಾರಣವಾಗಿ ಅನುಸರಿಸುವ ಸಾಮಾನ್ಯ ಹಣಕಾಸು ನಿಯಮಗಳ ನಿಯಮ 103ರ ಅನ್ವಯ ಅಂತಹ ಪರಿವರ್ತನೆಗಳಿಗೆ ಒಂದು ಸಾಂಕೇತಿಕ ಅವಕಾಶವು ಸಾಕಾಗುತ್ತದೆ. ಅಂತಹ ಪ್ರಕರಣಗಳಲ್ಲಿ ಪ್ರಸಕ್ತ ವರ್ಷದ ಪುಸ್ತಕಗಳಲ್ಲಿ ವಹಿವಾಟುಗಳನ್ನು ಸೇರಿಸದೆ ಸಾಲಗಳು/ಈಕ್ವಿಟಿಗಳು ಅಡಿಯಲ್ಲಿನ ಪ್ರಪತ್ರವನ್ನು ಸರಿಪಡಿಸುವ ಮೂಲಕ ಲೆಕ್ಕಪತ್ರದ ಹೊಂದಾಣಿಕೆಯನ್ನು ಮಾಡಲಾಗುತ್ತದೆ.

ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸಾಲಗಳನ್ನು ಈಕ್ವಿಟಿಗಳನ್ನಾಗಿ ಪರಿವರ್ತಿಸಿರುವುದರ ಬಗ್ಗೆ ವ್ಯಾಖ್ಯಾನ ಮಾಡಲಾಗಿತ್ತು. 2018–19ರ ಅವಧಿಯಲ್ಲಿಯೂ ಸಹ ಅನುದಾನ ಸಂಖ್ಯೆ "09–ಸಹಕಾರ" ಅಡಿಯಲ್ಲಿ ಲೆಕ್ಕಶೀರ್ಷಿಕೆ "2425–00–108–0–75–100–ಹಾಸನದ ಇಂಡಿಯನ್ ಕಾಫೀ ಮಾರ್ಕೆಟಿಂಗ್ ಕೋಆಪರೇಟೀವ್ ಲಿಮಿಟೆಡ್ ಅನ್ನು ಪುನಶ್ಚೇತನಗೊಳಿಸಲು ನೀಡಿದ ಸಾಲವನ್ನು ಒಂದು ಬಾರಿಯ ಅನುದಾನವನ್ನಾಗಿ ಪರಿವರ್ತಿಸಲು ಹಣಕಾಸು ನೆರವು/ಪರಿಹಾರ" ಅಡಿಯಲ್ಲಿ ₹8.28 ಕೋಟಿಗಳ ಅವಕಾಶವನ್ನು ಮಾಡಲಾಗಿತ್ತು. ಅದು ಪುಸ್ತಕದ ಹೊಂದಾಣಿಕೆಯ ಮೂಲಕ ಸಾಲವನ್ನು ಸಹಾಯಾನುದಾನವನ್ನಾಗಿ ಪರಿವರ್ತನೆ ಮಾಡಲಾದ ಪ್ರಕರಣವಾಗಿದ್ದರಿಂದ ಸಾಂಕೇತಿಕ ಅವಕಾಶದ ಬದಲು ₹8.28 ಕೋಟಿಗಳ ಪೂರ್ಣ ಅವಕಾಶವನ್ನು ಮಾಡಿದ್ದು ಆಯವ್ಯಯದ ತತ್ವಗಳಿಗೆ ವಿರುದ್ಧವಾಗಿತ್ತು.

### 3.9.3 ಬಳಕೆ ಮಾಡದಿದ್ದ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡದಿರುವುದು

ಬೆಂಗಳೂರಿನ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ₹2.25 ಕೋಟಿಗಳ ಅಂದಾಜು ವೆಚ್ಚದಲ್ಲಿ ಎರಡು ಹೊಸ ವಾರ್ಡ್‌ಗಳು ಮತ್ತು ನಾಲ್ಕು ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿತು (ಅಕ್ಟೋಬರ್ 2014) ಮತ್ತು 2015–16ರಿಂದ 2017–18ರ ಅವಧಿಯಲ್ಲಿ ಹಣವನ್ನು ಸಂಸ್ಥೆಗೆ ಬಿಡುಗಡೆ ಮಾಡಿತು. ಕಾಮಗಾರಿಯನ್ನು ಡೆಪಾಸಿಟ್ ಕಾಂಟ್ರಿಬ್ಯೂಷನ್ ಕಾಮಗಾರಿಯನ್ನಾಗಿ ಲೋಕೋಪಯೋಗಿ ಇಲಾಖೆಗೆ ವಹಿಸಲಾಯಿತು (ನವೆಂಬರ್ 2014) ಮತ್ತು 2015–16 ಮತ್ತು 2016–17ರಲ್ಲಿ ಸಂಸ್ಥೆಯು ₹1.99 ಕೋಟಿಗಳನ್ನು ಲೋಕೋಪಯೋಗಿ ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಗೆ ಬಿಡುಗಡೆ ಮಾಡಿತು. ಕಾಮಗಾರಿಯನ್ನು ₹1.65 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಯಿತು (ಸೆಪ್ಟಂಬರ್ 2017) ಮತ್ತು ಉಳಿದ ₹0.34 ಕೋಟಿಯನ್ನು ಲೋಕೋಪಯೋಗಿ ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯು ಸಂಸ್ಥೆಗೆ ಹಿಂತಿರುಗಿಸಿತು (ನವೆಂಬರ್ 2018). ಇದಲ್ಲದೆ, 2017–18ರ ಅವಧಿಯಲ್ಲಿ ₹0.26 ಕೋಟಿಗಳನ್ನು ಸಂಸ್ಥೆಗೆ ಬಿಡುಗಡೆ ಮಾಡಲಾಯಿತು (ಡಿಸೆಂಬರ್ 2017) ಮತ್ತು ಅದನ್ನು ಸಂಸ್ಥೆಯ ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಇಡಲಾಯಿತು. ಹೀಗೆ, ಮೇ 2019ರಲ್ಲಿದ್ದಂತೆ, ಸಂಸ್ಥೆಯು ತನ್ನ ಬ್ಯಾಂಕ್ ಖಾತೆಯಲ್ಲಿ ಬಳಕೆ ಮಾಡದೆ ಉಳಿದಿದ್ದ ₹0.60 ಕೋಟಿಗಳನ್ನು ಹೊಂದಿತ್ತು ಮತ್ತು ಅದನ್ನು ಇನ್ನೂ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿರಲಿಲ್ಲ.

ಸಂಸ್ಥೆಯು ಸಂಬಂಧಪಟ್ಟ ಇಲಾಖೆಯ ಅನುಮೋದನೆಯನ್ನು ಪಡೆದ ನಂತರ ಉಳಿದಿರುವ ಮೊತ್ತವನ್ನು ಬಳಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಉತ್ತರಿಸಿತು. ಸರ್ಕಾರದಿಂದ ಬಿಡುಗಡೆಯಾದ ಹಣವು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿರುತ್ತದೆ ಮತ್ತು ಬಳಕೆ ಮಾಡದ ಹಣವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡುವುದು ಅವಶ್ಯಕವಾಗಿರುತ್ತದೆಯಾದ್ದರಿಂದ ಸಂಸ್ಥೆಯ ಉತ್ತರವನ್ನು ಒಪ್ಪಲಾಗುವುದಿಲ್ಲ. ಬಳಕೆ ಮಾಡದ ಮೊತ್ತವನ್ನು ಮರುಪಾವತಿಸದಿರುವುದು ಸರ್ಕಾರದ ಹಣವನ್ನು (₹0.60 ಕೋಟಿ) ಸರ್ಕಾರದ ಲೆಕ್ಕದಿಂದ ಹೊರಗೆ ಇಟ್ಟಿರುವಲ್ಲಿ ಪರಿಣಮಿಸಿದೆ.

ಬ್ಯಾಂಕ್ ಉಳಿತಾಯ ಖಾತೆಯಲ್ಲಿ ಇಟ್ಟಿರುವ ಬಳಕೆ ಮಾಡದ ಹಣವನ್ನು ವಸೂಲು ಮಾಡಲು ಪ್ರಯತ್ನಗಳನ್ನು ಮಾಡಲಾಗುವುದು ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2020). ಮುಂಬರುವ ವರ್ಷಗಳಲ್ಲಿ ಹಣದ ಸೂಕ್ತ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದೂ ಸಹ ಸರ್ಕಾರವು ತಿಳಿಸಿತು.

## 3.10 ಲೆಕ್ಕಗಳ ನಿಖರತೆಯ ಮೇಲೆ ಪರಿಣಾಮ ಬೀರುವ ಮುಖ್ಯ ಅಂಶಗಳು

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ನಿರ್ವಹಿಸಲಾಗುತ್ತದೆ. ಸರ್ಕಾರಿ ಲೆಕ್ಕದಲ್ಲಿ ಉದ್ಭವಿಸುವ ಕೆಲವು ವಹಿವಾಟುಗಳ ಸಂದರ್ಭದಲ್ಲಿ ಸ್ವೀಕೃತಿ ಮತ್ತು ಪಾವತಿಗಳನ್ನು ಸ್ವೀಕೃತಿಯ ಸ್ವರೂಪ ಅಥವಾ ಬೇರೆ ಯಾವುದೇ ಕಾರಣಗಳಿಂದಾಗಿ ಸ್ವೀಕೃತಿ ಅಥವಾ ವೆಚ್ಚ ಶೀರ್ಷಿಕೆಯಡಿ ಲೆಕ್ಕ ಮಾಡಲಾಗದಿದ್ದರೆ ಅವುಗಳನ್ನು ತಾತ್ಕಾಲಿಕವಾಗಿ ಅಮಾನತ್ತು ಶೀರ್ಷಿಕೆಯಡಿ ಇಡಲಾಗುತ್ತದೆ. ಸಂಬಂಧಪಟ್ಟ ವಿವರ/ಮಾಹಿತಿ ದೊರೆತ ನಂತರ ಈ ಲೆಕ್ಕ ಶೀರ್ಷಿಕೆಯನ್ನು ತೀರುವಳಿ ಮಾಡಲಾಗುತ್ತದೆ.

ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಗಳು (ಡಿಡಿಆರ್) ಇಂತಹ ವಹಿವಾಟುಗಳನ್ನು ಲೆಕ್ಕ ಮಾಡಲು ಇದ್ದು, ಸರ್ಕಾರವು ಸಾರ್ವಜನಿಕ ಹಣದ ಪಾಲಕನಾಗಿ ಈ ಹಣವನ್ನು ಸ್ವೀಕರಿಸುತ್ತದೆ ಮತ್ತು ವಿಶ್ವಾಸಾರ್ಹವಾಗಿ ನಿರ್ವಹಿಸುತ್ತದೆ.

2018–19ರ ರಾಜ್ಯದ ಹಣಕಾಸಿನ ಲೆಕ್ಕಗಳ ನಿಖರತೆಯ ಮೇಲೆ, (i) ಅಮಾನತ್ತು ಶೀರ್ಷಿಕೆಗಳಡಿ ಅಂತಿಮ ವರ್ಗೀಕರಣವನ್ನು ನಿರೀಕ್ಷಿಸುತ್ತಿರುವ ಹೆಚ್ಚಿನ ಸಂಖ್ಯೆಯ ವ್ಯವಹಾರಗಳು ಮತ್ತು (ii) ಋಣ, ಠೇವಣಿ ಮತ್ತು ಇರಸಾಲು ಲೆಕ್ಕಶೀರ್ಷಿಕೆಗಳಡಿ ಹೆಚ್ಚುತ್ತಿರುವ ವ್ಯತಿರಿಕ್ತ ಶಿಲ್ಕುಗಳ ಸಂಖ್ಯೆ ಮತ್ತು ಪ್ರಮಾಣಗಳಂತಹ ಅಂಶಗಳು ವ್ಯತಿರಿಕ್ತವಾಗಿ ಪರಿಣಾಮ ಬೀರಿದೆ. ಈ ವ್ಯವಹಾರಗಳ ಸಾಮಾನ್ಯ ಸಮೀಕ್ಷೆಯು ಕೆಳಕಂಡ ಅಂಶಗಳನ್ನು ತೋರಿಸಿದೆ.

### (ಎ) ಪ್ರಮುಖ ಅಮಾನತ್ತು ಲೆಕ್ಕಗಳಡಿ ಬಾಕಿ ಉಳಿದಿರುವ ಶಿಲ್ಕುಗಳು

ಸರ್ಕಾರದ ಲೆಕ್ಕಗಳಲ್ಲಿ 'ಅಮಾನತ್ತು ಶೀರ್ಷಿಕೆ'ಗಳೆಂದು ಕರೆಯಲ್ಪಡುವ ಕೆಲವು ಮಧ್ಯವರ್ತಿ/ಹೊಂದಾಣಿಕೆಯ ಲೆಕ್ಕಶೀರ್ಷಿಕೆಗಳನ್ನು ನಿರ್ವಹಿಸಲಾಗುತ್ತಿದ್ದು, ಇವು ವ್ಯವಹಾರದ ಸ್ವರೂಪದ ಬಗ್ಗೆ ಮಾಹಿತಿಯ ಕೊರತೆ ಅಥವಾ ಇತರೆ ಕಾರಣಗಳಿಂದಾಗಿ ಅಂತಿಮ ಲೆಕ್ಕಶೀರ್ಷಿಕೆಗೆ ದಾಖಲಿಸಿಲು ಆಗದ ಸ್ವೀಕೃತಿಗಳು ಮತ್ತು ಸಂದಾಯಗಳನ್ನು ಪ್ರತಿಬಿಂಬಿಸುತ್ತವೆ. ಈ ಲೆಕ್ಕಶೀರ್ಷಿಕೆಗಳನ್ನು ಅಂತಿಮವಾಗಿ ಅನುಕ್ರಮವಾಗಿ ಅವುಗಳ ಅಂತಿಮ ಲೆಕ್ಕಶೀರ್ಷಿಕೆಗಳಡಿ ದಾಖಲಿಸಿದಾಗ, ಅವುಗಳನ್ನು ಸ್ವೀಕೃತಿ ಅಥವಾ ವೆಚ್ಚದ ಕಡಿತದಿಂದ ತೀರುವಳಿ ಮಾಡಲಾಗುವುದು. ಒಂದು ವೇಳೆ ಈ ಮೊತ್ತಗಳು ತೀರುವಳಿಯಾಗದೆ ಉಳಿದರೆ, ಅಮಾನತ್ತು ಶೀರ್ಷಿಕೆಗಳಡಿ ಶಿಲ್ಕುಗಳ ಶೇಖರಣೆಯಾಗಿ ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಖರವಾಗಿ ಬಿಂಬಿಸುವುದಿಲ್ಲ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿರುವ ಲೆಡ್ಜರುಗಳಲ್ಲಿ ದಾಖಲಿಸಿರುವಂತೆ, ಕೆಲವು ಪ್ರಮುಖ ಅಮಾನತ್ತು ಲೆಕ್ಕಶೀರ್ಷಿಕೆಗಳಡಿಯ ಶಿಲ್ಕುಗಳನ್ನು **ಕೋಷ್ಟಕ 3.7**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.7: ಅಮಾನತ್ತು ಶೀರ್ಷಿಕೆ (8658–ಅಮಾನತ್ತು ಲೆಕ್ಕಗಳು)**

**(₹ ಕೋಟಿಗಳಲ್ಲಿ)**

| ಒಳ ಶೀರ್ಷಿಕೆಯ ಹೆಸರು | 2016–17 | | 2017–18 | | 2018–19 | |
|---|---|---|---|---|---|---|
| | **ಖರ್ಚು** | **ಜಮೆ** | **ಖರ್ಚು** | **ಜಮೆ** | **ಖರ್ಚು** | **ಜಮೆ** |
| **101– ವೇತನ ಮತ್ತು ಲೆಕ್ಕ ಕಛೇರಿ ಅಮಾನತ್ತು** | 118.86 | 0.45 | 189.66 | 0.25 | 288.08 | 16.93 |
| **ನಿವ್ವಳ** | **ಖರ್ಚು 118.41** | | **ಖರ್ಚು 189.41** | | **ಖರ್ಚು 271.15** | |
| **102– ಅಮಾನತ್ತು ಲೆಕ್ಕ (ಸಿವಿಲ್)** | 17.22 | 60.78 | 17.37 | 175.77 | 17.76 | 296.45 |
| **ನಿವ್ವಳ** | **ಜಮೆ 43.56** | | **ಜಮೆ 158.40** | | **ಜಮೆ 278.69** | |
| **110– ರಿಸರ್ವ್ ಬ್ಯಾಂಕ್ ಅಮಾನತ್ತು** | 41.02 | 148.41 | 44.53 | 151.18 | 91.41 | 183.28 |
| **ನಿವ್ವಳ** | **ಜಮೆ 107.39** | | **ಜಮೆ 106.65** | | **ಜಮೆ 91.87** | |

*ಆಕರ: ಹಣಕಾಸು ಲೆಕ್ಕಗಳು*

ಹಣಕಾಸು ಲೆಕ್ಕಗಳು ಈ ಲೆಕ್ಕಶೀರ್ಷಿಕೆಗಳಡಿಯ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಬಾಕಿಯಿರುವ ಶಿಲ್ಕುಗಳನ್ನು ಖರ್ಚು ಮತ್ತು ಜಮೆಯನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸಿ ಲೆಕ್ಕ ಮಾಡಲಾಗಿದೆ. ಈ ಲೆಕ್ಕಶೀರ್ಷಿಕೆಗಳಡಿಯ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### ❖ ವೇತನ ಮತ್ತು ಲೆಕ್ಕ ಕಛೇರಿ (ಪಿಎಒ) ಅಮಾನತ್ತು

ಈ ಲೆಕ್ಕ ಶೀರ್ಷಿಕೆಯನ್ನು ಭಾರತ ಸರ್ಕಾರದ ವಿವಿಧ ಪ್ರತ್ಯೇಕ ವೇತನ ಮತ್ತು ಲೆಕ್ಕಾಧಿಕಾರಿಗಳ (ಪಿಎಒ) ಮತ್ತು ಮಹಾಲೇಖಾಪಾಲರ ಪುಸ್ತಕಗಳಲ್ಲಿ ಉಂಟಾಗುವ ವಹಿವಾಟುಗಳನ್ನು ಇತ್ಯರ್ಥಗೊಳಿಸಲು ನಿರ್ವಹಿಸಲಾಗುತ್ತಿದೆ. ಮಹಾಲೇಖಾಪಾಲರ ಪುಸ್ತಕದಲ್ಲಿ ಮೊದಲಿಗೆ ಈ ಶೀರ್ಷಿಕೆಯಡಿ ದಾಖಲಾದ ವಹಿವಾಟಗಳನ್ನು ವೇತನ ಮತ್ತು ಲೆಕ್ಕಾಧಿಕಾರಿಯವರಿಂದ ಚೆಕ್/ಡಿಮ್ಯಾಂಡ್ ಡ್ರಾಫ್ಟ್ ಸ್ವೀಕೃತವಾದ ನಂತರ ಮತ್ತು ವೇತನ ಮತ್ತು ಲೆಕ್ಕಾಧಿಕಾರಿಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ಸ್ವೀಕರಿಸಿದ ಮೊತ್ತಗಳ ಸಂಬಂಧವಾಗಿ ಚೆಕ್/ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಜಾರಿಗೊಳಿಸಿದ ನಂತರ ತೀರುವಳಿ ಮಾಡಲಾಗುತ್ತದೆ. ಈ ಶೀರ್ಷಿಕೆಯಡಿಯ ಬಾಕಿ ಉಳಿದ ಖರ್ಚಿನ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿಯ ಪರವಾಗಿ ಮಹಾಲೇಖಾಪಾಲರು ಸಂದಾಯಗಳನ್ನು ಮಾಡಿದ್ದು, ಅವುಗಳನ್ನು ಇನ್ನೂ ವಸೂಲಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಬಾಕಿ ಉಳಿದ ಜಮೆಯ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿ ಬದಲಿಗೆ ಮಹಾಲೇಖಾಪಾಲರು ಸಂದಾಯಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಇನ್ನೂ ಪಾವತಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಈ ಶೀರ್ಷಿಕೆಯಡಿಯ ನಿವ್ವಳ ಖರ್ಚಿನ ಶಿಲ್ಕು ಏರಿಕೆ ಪ್ರವೃತ್ತಿಯನ್ನು ತೋರಿಸುತ್ತಿದೆ. ಇದರ ತೀರುವಳಿ/ಇತ್ಯರ್ಥದಿಂದ ರಾಜ್ಯಸರ್ಕಾರದ ನಗದುಶಿಲ್ಕು ಹೆಚ್ಚಾಗುತ್ತದೆ. ಈ ವಹಿವಾಟುಗಳು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಸರ್ಕಾರದಿಂದ ಪಾವತಿಸಿದ ಕೇಂದ್ರ ಸರ್ಕಾರದ ನಾಗರಿಕ ಪಿಂಚಣಿಯ ಬಾಬ್ತಿಗೆ ಸಂಬಂಧಿಸಿದ್ದಾಗಿದೆ.

### ❖ ಅಮಾನತ್ತು ಲೆಕ್ಕ (ಸಿವಿಲ್)

ಪೂರ್ಣ ವರ್ಗೀಕರಣದ ಮಾಹಿತಿಯು ಇರದಿರುವ ಅಥವಾ ಸಂಬಂಧಿಸಿದ ವೋಚರ್/ಅನುಸೂಚಿಗಳು ಇರದಿರುವ ಅಥವಾ ಖಜಾನೆಯ ಅನುಸೂಚಿಗಳಲ್ಲಿ ನಮೂದಿಸಿದ ಅಂಕಿಗಳು ಹಾಗೂ ಖಜಾನೆ ಅನುಸೂಚಿಗಳ ಪಾವತಿಗಳ/ನಗದು ಲೆಕ್ಕಗಳಲ್ಲಿ ವರದಿ ಮಾಡಿದ ಅಂಕಿಗಳು ಮತ್ತು ಸಂಬಂಧಿತ ವೋಚರ್ ಗಳು, ಅನುಸೂಚಿಗಳಲ್ಲಿ ಇರುವ ಅಂಕಿಗಳ ನಡುವೆ ವ್ಯತ್ಯಾಸವಿರುವ ವ್ಯವಹಾರಗಳು ಈ ಶೀರ್ಷಿಕೆಯಡಿ ಬಾಕಿ ಇರುವ ಜಮೆಗಳ ಹೆಚ್ಚಿನ ಭಾಗವಾಗಿರುತ್ತವೆ.

ರಾಜ್ಯ ಖಜಾನೆಗಳಲ್ಲಿ ನಡೆಯುವ ರೈಲ್ವೆ, ರಕ್ಷಣೆ, ಅಂಚೆ ಮತ್ತು ದೂರಸಂಪರ್ಕ ಲೆಕ್ಕಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಮೊದಲು ಈ ಶೀರ್ಷಿಕೆಯಲ್ಲಿ ವರ್ಗೀಕರಿಸಲಾಗುವುದು ಹಾಗೂ ಸಂಬಂಧಿಸಿದ ಅಧಿಕಾರಿಗಳಿಂದ ಕ್ಲೈಮುಗಳು ಬರುವ ತನಕ ತೀರುವಳಿಯನ್ನು ಬಾಕಿ ಇರಿಸಲಾಗುವುದು.

ಪ್ರಸಕ್ತ ಸಾಲಿನಲ್ಲಿ ಈ ಶೀರ್ಷಿಕೆಯಡಿ ನಿವ್ವಳ ಧನಾತ್ಮಕ ಶಿಲ್ಕು ₹120.29 ಕೋಟಿಗಳಷ್ಟು ಹೆಚ್ಚಾಗಿದೆ. ರೈಲ್ವೆ (₹3.15 ಕೋಟಿ) ಮತ್ತು ರಕ್ಷಣಾ (₹1.20 ಕೋಟಿ) ಲೆಕ್ಕಗಳಿಗೆ ಸಂಬಂಧಿಸಿದಂತೆ ಅಮಾನತ್ತು ತೀರುವಳಿಯ ನಂತರ ನಗದು ಶಿಲ್ಕಿನಲ್ಲಿ ಹೆಚ್ಚಳವಾಗುವುದು. ಉಳಿದ ಬಾಬ್ತುಗಳಿಗೆ ಸಂಬಂಧಿಸಿದಂತೆ ತೀರುವಳಿಯು ನಗದು ಶಿಲ್ಕಿನ ಮೇಲೆ ಪರಿಣಾಮವನ್ನು ಬೀರುವುದಿಲ್ಲ.

### ❖ ರಿಸರ್ವ್ ಬ್ಯಾಂಕ್ ಅಮಾನತ್ತು, ಕೇಂದ್ರ ಲೆಕ್ಕ ಕಛೇರಿ

ಈ ಶೀರ್ಷಿಕೆಯನ್ನು ಸರಕಾರಗಳ ನಡುವಿನ ವಹಿವಾಟುಗಳನ್ನು ದಾಖಲಿಸಲು ನಿರ್ವಹಿಸಲಾಗಿದ್ದು ಎರಡು ಸರ್ಕಾರಗಳ ನಡುವಿನ ನಗದು ಶಿಲ್ಕಿನ ಇತ್ಯರ್ಥವು ಭಾರತೀಯ ರಿಸರ್ವ್ ಬ್ಯಾಂಕಿನ (ಆರ್‌ಬಿಐ) ಕೇಂದ್ರ ಲೆಕ್ಕ ವಿಭಾಗಕ್ಕೆ ಸೂಚನೆ ಕಳುಹಿಸುವ ಮುಖಾಂತರ ಆಗುತ್ತದೆ. ಭಾರತೀಯ ರಿಜರ್ವ ಬ್ಯಾಂಕ್‌ನಿಂದ ಹಣ ಇತ್ಯರ್ಥವಾದ ಸೂಚನೆ ಬಂದ ನಂತರ ಅಂತಿಮ ಶೀರ್ಷಿಕೆಗೆ ವರ್ಗಾಯಿಸುವುದರ ಮೂಲಕ ಈ ಶೀರ್ಷಿಕೆಯನ್ನು ತೀರುವಳಿ ಮಾಡಲಾಗುವುದು. ಭಾರತ ಸರಕಾರದಿಂದ ಸ್ವೀಕರಿಸಿದ ಅನುದಾನ/ಸಾಲಗಳು ಮತ್ತು ಅವುಗಳ ಮರುಪಾವತಿ, ಆರ್‌ಬಿಐನ ಸಾರ್ವಜನಿಕ ಋಣ ಕಛೇರಿಗಳಿಂದ ಭದ್ರತಾ ತೀರುವಳಿ ಮತ್ತು ಅದಕ್ಕೆ ಪಾವತಿ ಮಾಡಿದ ಬಡ್ಡಿಗಳ ವಿಲೇವಾರಿ ಹಾಗು ಸರಕಾರದ ಇಲಾಖೆಗಳಿಗೆ ಸಾಮಗ್ರಿ ಒದಗಿಸಿದ ನಿರ್ದೇಶಕರು, ಪೂರೈಕೆ ಮತ್ತು ಹಂಚಿಕೆಗೆ ಪಾವತಿಗಳು ಈ ಶೀರ್ಷಿಕೆಯ ಪ್ರಮುಖ ಅಮಾನತ್ತು ವ್ಯವಹಾರಗಳಾಗಿರುತ್ತವೆ.

2018–19ರ ಅವಧಿಯಲ್ಲಿ ಈ ಶೀರ್ಷಿಕೆಯಡಿಯಲ್ಲಿನ ಧನಾತ್ಮಕ ಶಿಲ್ಕು ₹91.87 ಕೋಟಿಗಳಾಗಿದ್ದಿತು ಮತ್ತು ಕಳೆದ ವರ್ಷಕ್ಕೆ ಹೋಲಿಸಿದರೆ ₹14.78 ಕೋಟಿಗಳು ಕಡಿಮೆಯಾಗಿದೆ.

### (ಬಿ) ಋಣ, ಠೇವಣಿ, ಇರಸಾಲು (ಡಿಡಿಆರ್) ಶೀರ್ಷಿಕೆಗಳಡಿ ವ್ಯತಿರಿಕ್ತ ಶಿಲ್ಕುಗಳು

ವ್ಯತಿರಿಕ್ತ ಶಿಲ್ಕುಗಳೆಂದರೆ ಋಣಾತ್ಮಕ ಶಿಲ್ಕು ಇರಬಾರದಂತಹ ಲೆಕ್ಕಶೀರ್ಷಿಕೆಗಳಡಿ ಕಾಣುವ ಋಣಾತ್ಮಕ ಶಿಲ್ಕುಗಳಾಗಿವೆ. ಉದಾಹರಣೆಗೆ, ಯಾವುದೇ ಸಾಲ ಅಥವಾ ಮುಂಗಡ ಲೆಕ್ಕಶೀರ್ಷಿಕೆಯಡಿಯ ಋಣಾತ್ಮಕ ಶಿಲ್ಕು, ಮುಂಗಡ ನೀಡಿದ ಮೂಲ ಮೊತ್ತಕ್ಕೆ ಪ್ರತಿಯಾಗಿ ಹೆಚ್ಚಿನ ಮರುಪಾವತಿಯನ್ನು ಸೂಚಿಸುತ್ತದೆ. 2018–19ರ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಇ–ಸಾರ್ವಜನಿಕ ಋಣದಡಿಯ ವ್ಯತಿರಿಕ್ತ ಶಿಲ್ಕು ₹174.40 ಕೋಟಿಗಳಷ್ಟಿತ್ತು (ಪ್ರಧಾನ ಶೀರ್ಷಿಕೆ 6003–ಆಂತರಿಕ ಋಣ). ಇದು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮವು (ಎನ್‌ಸಿಡಿಸಿ) ಸಾಲ ಪಡೆಯುವ ಸಂಸ್ಥೆಗಳಿಗೆ ಈ ಸಾಲಗಳನ್ನು ರಾಜ್ಯದ ಸಂಚಿತ ನಿಧಿಯ ಮೂಲಕ ನೀಡದೆ ನೇರವಾಗಿ ಬಿಡುಗಡೆ ಮಾಡಿದ್ದು ಮರುಪಾವತಿಗಳು ಸಂಚಿತ ನಿಧಿಯ ಮೂಲಕ ಆಗಿರುವುದರಿಂದ ಉಂಟಾಗಿದೆ.

ವ್ಯತಿರಿಕ್ತ ಶಿಲ್ಕು ₹11.69 ಕೋಟಿ– ಖರ್ಚು (ಪ್ರಧಾನ ಶೀರ್ಷಿಕೆ 6004–ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು) ಇದಕ್ಕೆ ಸಂಬಂಧಿಸಿದಂತೆ, 13ನೇ ಹಣಕಾಸು ಸಮಿತಿಯ ಶಿಫಾರಸಿನ ಮೇಲೆ ಕೇಂದ್ರ ಸಾಲಗಳನ್ನು ವಜಾ ಮಾಡಿದ ಕಾರಣದಿಂದ ಉಂಟಾಗಿದೆ (31 ಮಾರ್ಚ್ 2010ರಂದು ಲೆಕ್ಕವಹಿಯಲ್ಲಿರುವ ಶಿಲ್ಕು). 2010–12ರ ಅವಧಿಯಲ್ಲಿ ವಿವಿಧ ಪಿಎಒಗಳಿಗೆ ಹೆಚ್ಚುವರಿಯಾಗಿ ಪಾವತಿಸಿದ ಮೊತ್ತದ ಬಾಕಿಯು ಭಾರತ ಸರ್ಕಾರದ ಆರ್ಥಿಕ ಸಚಿವಾಲಯದ ಮೂಲಕ ಹೊಂದಾಣಿಕೆಯಾಗಬೇಕಿದೆ. ಸಾಲ ಮತ್ತು ಮುಂಗಡಗಳ ಲೆಕ್ಕದಲ್ಲಿನ ವ್ಯತಿರಿಕ್ತ ಶಿಲ್ಕು ₹96.74 ಕೋಟಿಯ ಲೆಕ್ಕ ಹೊಂದಾಣಿಕೆ ಆಗದಿರುವುದರಿಂದ/ತಪ್ಪು ವರ್ಗೀಕರಣದ ಕಾರಣದಿಂದಾಗಿ ಉಂಟಾಗಿದೆ.

## 3.11 ನಿರ್ಣಯ

ಸರ್ಕಾರವು ಗಣನೀಯವಾಗಿ ಹಣಕಾಸು ಒದಗಿಸಿದ ಸಂಸ್ಥೆಗಳ ಬಗ್ಗೆ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಆಡಳಿತಾತ್ಮಕ ಇಲಾಖೆಗಳಿಗೆ ಆರ್ಥಿಕ ಇಲಾಖೆಯು ಸೂಚನೆಗಳನ್ನು ನೀಡಿದ್ದರೂ ಸಹ 10 ಇಲಾಖೆಗಳು ತಮ್ಮ 484 ಸಂಸ್ಥೆಗಳ ಸಂಬಂಧವಾಗಿ ಮಾಹಿತಿಯನ್ನು ಒದಗಿಸಿಲ್ಲ. ಜಾರಿಮಾಡಲಾದ 12 ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರತಿ ಸಂಸ್ಥೆಯ ಕನಿಷ್ಠ ಒಂದು ವರದಿಯು ವಿಧಾನಮಂಡಲದಲ್ಲಿ ಮಂಡಿಸಲು ಬಾಕಿ ಇತ್ತು. ಉಗ್ರಾಣ ಮತ್ತು ದಾಸ್ತಾನು ಲೆಕ್ಕಗಳ ಸಲ್ಲಿಕೆಯಲ್ಲಿನ ವಿಳಂಬವನ್ನು ಲೆಕ್ಕಪರಿಶೋಧನಾ ವರದಿಗಳಲ್ಲಿ ಸತತವಾಗಿ ಟಿಪ್ಪಣಿ ಮಾಡಲಾಗಿದ್ದರೂ ಸಹ ವಿಳಂಬಗಳು ಮುಂದುವರೆದಿತ್ತು.

ಸರ್ಕಾರವು ತೆಗೆದುಕೊಂಡ ಕ್ರಮವು ದೀರ್ಘ ಕಾಲದಿಂದ ಬಾಕಿ ಉಳಿದಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ತೀರುವಳಿಯಲ್ಲಿ ಪರಿಣಮಿಸಿದರೂ ಸಹ, 2018–19ರ ಅವಧಿಯಲ್ಲಿ ಸೆಳೆದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಶೇಕಡಾ 25ರಷ್ಟು ಎನ್‌ಡಿಸಿ ಬಿಲ್ಲುಗಳು ಬಾಕಿ ಉಳಿದಿದ್ದವು. ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು 2014–15ರಿಂದ 2018–19ರ ಅವಧಿಯಲ್ಲಿ ಏರಿಕೆಯ ಪ್ರವೃತ್ತಿಯನ್ನು ತೋರಿಸಿತು. 2018–19ರಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 49ರಷ್ಟು ಹೆಚ್ಚಾಗಿದ್ದು ₹4,085.14 ಕೋಟಿಗಳಷ್ಟಿದ್ದಿತು. ಹೀಗೆ, ಶಾಸಕಾಂಗದ ಆರ್ಥಿಕ ನಿಯಂತ್ರಣ ತತ್ವಗಳಿಗೆ ವಿರುದ್ಧವಾಗಿ ದೊಡ್ಡ ಮೊತ್ತಗಳನ್ನು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿಸಿಕೊಳ್ಳಲಾಗಿತ್ತು. ಕೆಲವು ಡಿಡಿಆರ್ ಶೀರ್ಷಿಕೆಗಳಲ್ಲಿ ವ್ಯತಿರಿಕ್ತ ಶಿಲ್ಕುಗಳಿದ್ದು ಅವುಗಳನ್ನು ಇತ್ಯರ್ಥಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದೆ.

## 3.12 ಶಿಫಾರಸುಗಳು

- ಸರ್ಕಾರವು ನಿಗದಿಪಡಿಸಿದ ಅವಧಿಯಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಹೊಂದಾಣಿಕೆಯಾಗುವುದನ್ನು ಖಚಿತಪಡಿಸಿಕೊಳ್ಳಬೇಕು;
- ತಮ್ಮ ಅಗತ್ಯತೆಯನ್ನು ಮೀರಿದ ವೈಯಕ್ತಿಕ ಠೇವಣಿ ಖಾತೆಗಳಲ್ಲಿರುವ ಶಿಲ್ಕುಗಳನ್ನು ಇತ್ಯರ್ಥಗೊಳಿಸುವುದನ್ನು ಪರಿಶೀಲಿಸುವ ಅಗತ್ಯವಿದೆ ಮತ್ತು ವೈಯಕ್ತಿಕ ಠೇವಣಿ ಖಾತೆಗಳ ಸ್ಥಿತಿಗತಿಯನ್ನು ಪರಿಶೀಲಿಸಲು ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ಆಡಳಿತಾಧಿಕಾರಿಗಳು ಹಾಗೂ ಖಜಾನೆಯೊಂದಿಗೆ ಸಮಾಲೋಚಿಸಿ ಶಿಲ್ಕುಗಳನ್ನು ಹೊಂದಾಣಿಕೆ ಮಾಡಿದ ನಂತರ ನಿಷ್ಕ್ರಿಯ ಖಾತೆಗಳನ್ನು ಮುಕ್ತಾಯಗೊಳಿಸುವ ಅಗತ್ಯವಿದೆ.
- ಲೆಕ್ಕಪತ್ರದ ವರ್ಷದಲ್ಲಿಯೇ ವಹಿವಾಟುಗಳನ್ನು ಸಂಬಂಧಪಟ್ಟ ಶೀರ್ಷಿಕೆಗಳಿಗೆ ತರಲು ಅಮಾನತ್ತು ಶೀರ್ಷಿಕೆಗಳ ಪರಿಶೀಲನೆಯನ್ನು ಕೈಗೊಳ್ಳಬೇಕು.

ನಿವೇದಿತ

ಬೆಂಗಳೂರು (ಇ ಪಿ ನಿವೇದಿತ)

ದಿನಾಂಕ ಪ್ರಧಾನ ಮಹಾಲೇಖಾಪಾಲರು

(ಲೆಕ್ಕಪರಿಶೋಧನೆ – I)

ಮೇಲು ಸಹಿ ಮಾಡಿದೆ

ನವದೆಹಲಿ (ರಾಜೀವ್ ಮೆಹ್ರಿಷಿ)

ದಿನಾಂಕ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

# ಅನುಬಂಧಗಳು

# ಅನುಬಂಧ 1.1

## (ಎ) ರಾಜ್ಯ ಚಿತ್ರಣ

(ಉಲ್ಲೇಖ: ಪುಟ 1)

| ಎ. | ಸಾಮಾನ್ಯ ದತ್ತಾಂಶ | | | |
|---|---|---|---|---|
| ಕ್ರಮ ಸಂಖ್ಯೆ | ವಿವರ | | | ಅಂಕಿಗಳು |
| 1 | ವಿಸ್ತೀರ್ಣ | | | 1,91,791 ಚ.ಕಿ.ಮೀ |
| 2 | ಜನಸಂಖ್ಯೆ | | | |
| | ಎ. | 2001ರ ಜನಗಣತಿ ಪ್ರಕಾರ | | 5.28 ಕೋಟಿ |
| | ಬಿ. | 2011ರ ಜನಗಣತಿ ಪ್ರಕಾರ. | | 6.11 ಕೋಟಿ |
| 3 | [1]ಜನಸಂಖ್ಯೆಯ ಸಾಂದ್ರತೆ (2011 ಜನಗಣತಿ).<br>(ರಾಷ್ಟ್ರೀಯ ಸಾಂದ್ರತೆ = **ಪ್ರತಿ ಚ.ಕಿ.ಮೀ.ಗೆ 382 ಜನ**) | | | ಪ್ರತಿ ಚ.ಕಿ.ಮೀ 319 ಜನ |
| 4 | [2]ಬಡತನ ರೇಖೆಯ ಕೆಳಗಿನ ಜನಸಂಖ್ಯೆ. (ರಾಷ್ಟ್ರೀಯ ಸರಾಸರಿ = **21.90** %) | | | 20.90 *ಶೇಕಡ* |
| 5 | [3]ಸಾಕ್ಷರತೆ (2011) (ರಾಷ್ಟ್ರೀಯ ಸರಾಸರಿ = **73.00** % ) | | | 75.40 *ಶೇಕಡ* |
| 6 | [4]ಶಿಶು ಮರಣದರ (ಪ್ರತಿ 1,000 ಜೀವಂತ ಜನನಗಳಿಗೆ)<br>(ರಾಷ್ಟ್ರೀಯ ಸರಾಸರಿ = **33 ಪ್ರತಿ 1,000 ಜೀವಂತ ಜನನಗಳಿಗೆ** ) | | | 25 ಪ್ರತಿ 1,000 ಜೀವಂತ ಜನನಗಳಿಗೆ |
| 7 | [5]ಜನನ ಸಮಯದ ಆಯು: ಪ್ರಮಾಣ (ರಾಷ್ಟ್ರೀಯ ಸರಾಸರಿ = **68.7 ವರ್ಷಗಳು**) | | | 69.1 ವರ್ಷಗಳು |
| 8 | ಗಿನಿ[1] ಗುಣಾಂಕ (2009–10ರ ಸಾಲಿಗೆ ಲಭ್ಯವಿದ್ದ ಇತ್ತೀಚಿನ ಅಂಕಿಗಳನ್ನು ಪರಿಗಣಿಸಿದೆ) | | | |
| | ಎ. | ಗ್ರಾಮೀಣ (ರಾಷ್ಟ್ರೀಯ = **0.29**) | | 0.24 |
| | ಬಿ. | ನಗರ (ರಾಷ್ಟ್ರೀಯ = **0.38**) | | 0.33 |
| 9 | [6] ಮಾನವ ಅಭಿವೃದ್ಧಿ ಸೂಚ್ಯಂಕವು[2] (ರಾಷ್ಟ್ರೀಯ = **0.647**) (2018) | | | 0.611 (2012) |
| 10 | [7]ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ರಾಒಆಂಉ) 2018–19 ಪ್ರಸಕ್ತ ಬೆಲೆಗಳಲ್ಲಿ (ಕೋಟಿಗಳಲ್ಲಿ) | | | 14,08,112 |
| 11 | ತಲಾ ರಾಒಆಂಉ (2018–19) (ರೂಪಾಯಿಗಳಲ್ಲಿ) | | ಕರ್ನಾಟಕ | 2,30,460 |
| | | | ರಾಷ್ಟ್ರೀಯ ಸರಾಸರಿ | 1,42,719 |
| 12 | ತಲಾ ರಾಒಆಂಉ ಸಿಎಜಿಆರ್<br>(2011–12 ರಿಂದ 2018–19) | | ಕರ್ನಾಟಕ | 12.97 |
| | | | ಸಾಮಾನ್ಯ ವರ್ಗ ರಾಜ್ಯಗಳು[3] | 10.99 |
| 13 | ರಾಒಆಂಉ ಸಿಎಜಿಆರ್<br>(2011–12 ರಿಂದ 2018–19) | | ಕರ್ನಾಟಕ | 14.20 |
| | | | [5]ಸಾಮಾನ್ಯ ವರ್ಗ ರಾಜ್ಯಗಳು | 12.23 |
| 14 | [8]ಜನಸಂಖ್ಯಾವೃದ್ಧಿ<br>(2009–2019) | | ಕರ್ನಾಟಕ | 9.70 |
| | | | [6]ಸಾಮಾನ್ಯ ವರ್ಗ ರಾಜ್ಯಗಳು | 12.46 |
| ಬಿ. | **ಆರ್ಥಿಕ ದತ್ತಾಂಶ** | | | |

| ವಿವರಗಳು | | ಅಂಕಿಗಳು (ಶೇಕಡ) | | | |
|---|---|---|---|---|---|
| ಸಿಎಜಿಆರ್‌ನ | | ಸಾಮಾನ್ಯ ವರ್ಗ ರಾಜ್ಯಗಳು | | ಕರ್ನಾಟಕ | |
| | | **2009–10 ರಿಂದ 2017–18** | **2017–18 ರಿಂದ 2018–19** | **2009–10 ರಿಂದ 2017–18** | **2017–18 ರಿಂದ 2018–19** |
| ಎ. | ರಾಜಸ್ವ ಸ್ವೀಕೃತಿಗಳು | 15.03 | 12.77 | 14.67 | 12.23 |
| ಬಿ. | ಸ್ವಂತ ತೆರಿಗೆ ಆದಾಯ | 14.84 | 12.72 | 13.98 | 11.13 |
| ಸಿ. | ತೆರಿಗೆಯೇತರ ಆದಾಯ | 9.88 | 19.78 | 8.66 | 4.57 |
| ಡಿ. | ಒಟ್ಟು ವೆಚ್ಚ | 14.20 | 12.73 | 14.42 | 14.14 |
| ಇ. | ಬಂಡವಾಳ ವೆಚ್ಚ | 13.53 | 11.93 | 13.34 | 9.47 |
| ಎಫ್. | ಶಿಕ್ಷಣದ ಮೇಲಿನ ರಾಜಸ್ವ ವೆಚ್ಚ | 13.44 | 9.38 | 12.05 | 9.94 |
| ಜಿ. | ಆರೋಗ್ಯದ ಮೇಲಿನ ರಾಜಸ್ವ ವೆಚ್ಚ | 16.50 | 11.09 | 17.47 | 19.81 |
| ಎಚ್. | ಸಂಬಳ ಮತ್ತು ಮಜೂರಿ | 11.72 | 11.03 | 10.48 | 22.52 |
| ಐ. | ಪಿಂಚಣಿ | 16.12 | 14.31 | 16.65 | 29.31 |

*ಆಕರ: ಹಣಕಾಸು ದತ್ತಾಂಶಗಳಿಗೆ ಹಣಕಾಸು ಲೆಕ್ಕಗಳು.*

[1] ಗಿನಿ ಗುಣಾಂಕವು ಜನತೆಯ ವರಮಾನದಲ್ಲಿನ ಅಸಮತೆಯ ಅಳತೆಯಾಗಿದೆ. ಇದರ ಮೌಲ್ಯದರವು ಸೊನ್ನೆಯಿಂದ ಒಂದು, ಸೊನ್ನೆಗೆ ಹತ್ತಿರವಿದ್ದರೆ ಅಸಮತೆಯು ಕಡಿಮೆ. ಒಂದಕ್ಕೆ ಹತ್ತಿರವಿದ್ದರೆ ಅಸಮತೆಯು ಹೆಚ್ಚಾಗಿದೆ.

[2] ಮಾನವ ಅಭಿವೃದ್ಧಿ ಸೂಚ್ಯಂಕವು ಜೀವಿತಾವಧಿ, ಶಿಕ್ಷಣ ಮತ್ತು ತಲಾ ಆದಾಯವನ್ನು ಒಳಗೊಂಡಿರುವ ಸಂಯೋಜಿತ ಸೂಚ್ಯಂಕವಾಗಿದೆ.

[3] ವಿಶೇಷ ಪ್ರವರ್ಗದ ರಾಜ್ಯಗಳೆಂಬುದಾಗಿ ಪರಿಗಣಿಸಲಾಗಿರುವ 11 ರಾಜ್ಯಗಳನ್ನು ಹೊರತುಪಡಿಸಿ (ಅರುಣಾಚಲ ಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರ ಹಾಗೂ ಉತ್ತರಾಖಂಡ).

**ಪ್ರಮುಖ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಸೂಚಕಗಳು**

(i) ನಯ ಮೇಲ್ಮೈ ರಸ್ತೆಗಳು (2018–19) – 100 ಚ.ಕಿ.ಮೀಗೆ **39.36 ಕಿ.ಮೀ.**
(ii) ಒರಟು ಮೇಲ್ಮೈ ರಸ್ತೆಗಳು (2018–19) – 100 ಚ.ಕಿ.ಮೀಗೆ **0.41 ಕಿ.ಮೀ.**
(iii) ವಿದ್ಯುದೀಕರಣವಾದ ಹಳ್ಳಿಗಳು ಶೇಕಡ (2017–18) – **99.97.**
(iv) ಒಟ್ಟಾರೆ ಕೃಷಿ ಪ್ರದೇಶ (2016–17) – **117.79 ಹೆಕ್ಟೇರುಗಳು.**
(v) ಪ್ರಾಥಮಿಕ ಶಾಲೆಗಳು (2018–19 ರಲ್ಲಿದ್ದಂತೆ) – **62,229.**
(vi) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ – **2,359.**
(vii) ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಇರುವ ಹಾಸಿಗೆಗಳು (2017–18) – **107.**

1. *ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ* ಅಂತರ್ಜಾಲ – ಕೋಷ್ಟಕ 2.3, ಸಂಖ್ಯಾಶಾಸ್ತ್ರೀಯ ವಾರ್ಷಿಕ ಪುಸ್ತಕ 2018.
2. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2018–19, ಸಂಪುಟ II ಪುಟ ಎ 168–169,* ಕೋಷ್ಟಕ 9.8.
3. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2018–19, ಸಂಪುಟ II ಪುಟ ಎ 164,* ಕೋಷ್ಟಕ 9.4.
4. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2018–19, ಸಂಪುಟ II ಪುಟ ಎ 160,* ಕೋಷ್ಟಕ 9.1.
5. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2018–19, ಸಂಪುಟ II ಪುಟ ಎ 160,* ಕೋಷ್ಟಕ 9.1.
6. *ಆರ್ಥಿಕ ಸಮೀಕ್ಷೆ (ಕರ್ನಾಟಕ ಸರ್ಕಾರ) 2018–19.*
7. ರಾಒಆಂಉದ ಅಂದಾಜು ಅಂಕಿಗಳನ್ನು ಭಾರತ ಸರ್ಕಾರ, ಆರ್ಥಿಕ ಮಂತ್ರಾಲಯ ತಮ್ಮ ಪತ್ರ 20 ಮಾರ್ಚ್2018ರಲ್ಲಿ ತಿಳಿಸಿದಂತೆ.
8. *ಭಾರತ ಜನಗಣತಿ 2001 (ಜನಸಂಖ್ಯಾ ಪ್ರಕ್ಷೇಪಣೆ 2001–2026, ಕೋಷ್ಟಕ 14, ಪುಟ 104* ರಿಂದ *115)*

ಟಿಪ್ಪಣಿ: ಸಾಮಾನ್ಯ ವರ್ಗದ ರಾಜ್ಯಗಳ ಅಖಿಲ ಭಾರತ ಸರಾಸರಿಯನ್ನು 16 ಸಾಮಾನ್ಯವರ್ಗದ ರಾಜ್ಯಗಳು ಒದಗಿಸಿದ ಅಂಕಿಸಂಖ್ಯೆಗಳ ಆಧಾರದ ಮೇರೆಗೆ ಲೆಕ್ಕ ಹಾಕಲಾಗಿದೆ – ತೆಲಂಗಾಣ ಸೇರಿದಂತೆ ಆಂಧ್ರ ಪ್ರದೇಶ, ಬಿಹಾರ, ಚತ್ತೀಸಗಡ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಾಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳ.

## (ಬಿ) ಪ್ರಸಕ್ತ ದರಗಳಲ್ಲಿ ಭಾರತದ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ವೃದ್ಧಿಯ ದರ

| ವರ್ಷ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಭಾರತದ ಒಆಂಉ @ (ಕೋಟಿ ರೂಪಾಯಿಗಳಲ್ಲಿ) | 1,24,67,959 | 1,37,71,874 | 1,53,62,386 | 1,70,95,005 | 1,90,10,164 |
| ಒಆಂಉದ ವೃದ್ಧಿಯ ದರ (ಶೇಕಡಾವಾರು) | 10.99 | 10.46 | 11.55 | 11.28 | 11.20 |
| ರಾಒಆಂಉ# (ಕೋಟಿ ರೂಪಾಯಿಗಳಲ್ಲಿ) | 9,13,923 | 10,45,182 | 11,55,912 | 13,25,443 | 14,08,112 |
| ರಾಒಆಂಉದ ವೃದ್ಧಿಯದರ (ಶೇಕಡವಾರು) | 11.91 | 14.36 | 10.59 | 14.67 | 6.24 |

*@ ಅಖಿಲ ಭಾರತ ಒಟ್ಟು ಆಂತರಿಕ ಉತ್ಪನ್ನದ ಅಂಕಿಗಳು ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ* ವಾರ್ಷಿಕ & ತ್ರೈಮಾಸಿಕ ಅಂದಾಜುಗಳು.

*# 2014–15 ರಿಂದ 2017–18 ರವರೆಗಿನ ರಾಒಆಂಉದ ಅಂಕಿಗಳನ್ನು ಕರ್ನಾಟಕ ಆರ್ಥಿಕ ಸಮೀಕ್ಷೆ 2018–19 ರಿಂದ ಪಡೆಯಲಾಗಿದ್ದು ಮತ್ತು 2018–19ಕ್ಕೆ ಹಣಕಾಸು ಸಚಿವಾಲಯವು,* ಭಾರತ ಸರ್ಕಾರ *ಪತ್ರ ದಿನಾಂಕ 20 ಮಾರ್ಚ್ 2018ರಲ್ಲಿ ತಿಳಿಸಿದಂತೆ.*

# ಅನುಬಂಧ 1.2

## ಸರ್ಕಾರಿ ಲೆಕ್ಕಗಳ ಸ್ವರೂಪ

(ಉಲ್ಲೇಖ: ಕಂಡಿಕೆ 1.1 ಪುಟ 1)

| ರಾಜ್ಯಸರ್ಕಾರದ ಲೆಕ್ಕಗಳನ್ನು ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕ ಎಂಬ ಮೂರು ಭಾಗಗಳಲ್ಲಿ ಇಡಲಾಗುತ್ತದೆ. | |
|---|---|
| **ಭಾಗ I: ಸಂಚಿತ ನಿಧಿ:** ರಾಜಸ್ವ ಮತ್ತು ಬಂಡವಾಳ ಲೆಕ್ಕಗಳ ಮೇಲಿನ ಸಾರ್ವಜನಿಕ ಋಣ ಮತ್ತು ಸಾಲಗಳು, ಮುಂಗಡಗಳು ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚಗಳು ಸೇರಿದಂತೆ ಒಂದು ಸಂಚಿತ ನಿಧಿ. ಇದು ಭಾರತದ ಸಂವಿಧಾನದ ಕಲಂ 266(1) ಅಡಿಯಲ್ಲಿ ಸ್ಥಾಪಿತವಾದ ಸಂಚಿತ ನಿಧಿ ಎನಿಸಿಕೊಳ್ಳುತ್ತದೆ. | |
| **ಭಾಗ II: ಸಾದಿಲ್ವಾರು ನಿಧಿ:** ಸಂವಿಧಾನದ ಕಲಂ 267(2) ರ ಅಡಿಯಲ್ಲಿ ಸ್ಥಾಪಿತವಾದ ರಾಜ್ಯದ ಸಾದಿಲ್ವಾರು ನಿಧಿಯು ರಾಜ್ಯಪಾಲರ ವಿಲೇವಾರಿಗಾಗಿ ಇಟ್ಟಿರುವ ಒಂದು ಮುಂಗಡ ಮೊತ್ತದ ರೂಪದಲ್ಲಿರುತ್ತದೆ. ಶಾಸಕಾಂಗದ ಅನುಮೋದನೆಗೆ ಒಳಪಟ್ಟು, ಅನಿರೀಕ್ಷಿತ ವೆಚ್ಚವನ್ನು ಭರಿಸಲು ಮುಂಗಡವನ್ನು ನೀಡಲು ಅವರಿಗೆ ಅವಕಾಶವನ್ನು ಒದಗಿಸುತ್ತದೆ. ನಿಧಿಯನ್ನು, ವೆಚ್ಚವನ್ನು ಸಂಬಂಧಪಟ್ಟ ಪ್ರಧಾನಕ್ರಿಯಾ ಶೀರ್ಷಿಕೆಗೆ ಖರ್ಚು ಹಾಕಿ ಪುನರ್ ಭರ್ತಿ ಮಾಡಲಾಗುತ್ತದೆ. | |
| **ಭಾಗ III: ಸಾರ್ವಜನಿಕ ಲೆಕ್ಕ:** ಸಂಚಿತ ನಿಧಿಯ ಭಾಗವಾಗದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಠೇವಣಿಗಳು, ಮೀಸಲು ನಿಧಿಗಳು, ಅಮಾನತ್ತು, ಇರಸಾಲುಗಳು ಮುಂತಾದವುಗಳ ಜಮೆಗಳು ಮತ್ತು ಖರ್ಚುಗಳನ್ನು ಸಂವಿಧಾನದ ಅನುಚ್ಛೇದ 266(2)ರ ಅನ್ವಯ ಸ್ಥಾಪಿಸಲಾದ 'ಸಾರ್ವಜನಿಕ ಲೆಕ್ಕ'ದಲ್ಲಿ ಇಡಲಾಗುತ್ತದೆ ಮತ್ತು ಇವು ರಾಜ್ಯ ವಿಧಾನ ಮಂಡಲದ ಅನುಮೋದನೆಗೆ ಒಳಪಟ್ಟಿರುವುದಿಲ್ಲ. | |
| **ಹಣಕಾಸು ಲೆಕ್ಕಗಳ ವಿನ್ಯಾಸ** | |
| ರಾಜ್ಯ ಹಣಕಾಸು ಲೆಕ್ಕಗಳನ್ನು ಎರಡು ಸಂಪುಟಗಳಲ್ಲಿ ತಯಾರಿಸಲಾಗುತ್ತದೆ. ಸಂಪುಟ–I ಸರ್ಕಾರದ ಹಣಕಾಸುಗಳ ಸಾರಾಂಶದ ವಿವರಣಾ ಪಟ್ಟಿಗಳನ್ನು ಮತ್ತು ಸಂಪುಟ–II ಸವಿವರ ವಿವರಣಾಪಟ್ಟಿಗಳನ್ನು ಸಾದರ ಪಡಿಸುತ್ತದೆ. ವಿನ್ಯಾಸದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಅಲ್ಲದೆ ಸಂಪುಟ–II ವಿವಿಧ ಅನುಬಂಧಗಳಲ್ಲಿ ನೀಡಿರುವಂತೆ ಪ್ರಧಾನ ಶೀರ್ಷಿಕೆಯಲ್ಲಿ ಸಂಬಳ ಮತ್ತು ಸಹಾಯಧನಗಳ ತುಲನಾತ್ಮಕ ವೆಚ್ಚ, ರಾಜ್ಯಸರ್ಕಾರ ನೀಡಿದ ಸಹಾಯಾನುದಾನಗಳು ಮತ್ತು ಆರ್ಥಿಕ ಸಹಾಯಗಳು, ಬಾಹ್ಯ ಬೆಂಬಲಿತ ಯೋಜನೆಗಳು, ಯೋಜನಾ ಕಾರ್ಯಕ್ರಮಗಳ ಮೇಲಿನ ವೆಚ್ಚ, ಅನುಷ್ಠಾನ ಏಜೆನ್ಸಿಗಳಿಗೆ ಕೇಂದ್ರ ಯೋಜನಾ ಮೊತ್ತಗಳ ನೇರ ಬಿಡುಗಡೆ, ಶಿಲ್ಕುಗಳ ಸಾರಾಂಶ, ನೀರಾವರಿ ಯೋಜನೆಗಳ ಆರ್ಥಿಕ ಫಲಗಳು ಅಪೂರ್ಣ ಸಾರ್ವಜನಿಕ ಕಾಮಗಾರಿಗಳ ಗುತ್ತಿಗೆಗಳ ಬದ್ಧತೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಹೊಂದಿದೆ. | |
| **ವಿವರಣಾ ಪಟ್ಟಿ ಸಂಖ್ಯೆ** | **ವಿನ್ಯಾಸ** |
| 1 | ರಾಜ್ಯದ ಆರ್ಥಿಕ ಸ್ಥಿತಿಯ ವಿವರಣಾ ಪಟ್ಟಿ. |
| 2 | ಸ್ವೀಕೃತಿಗಳು ಮತ್ತು ವಿತರಣೆಗಳ ವಿವರಣಾ ಪಟ್ಟಿ. |
| 3 | ಸಂಚಿತ ನಿಧಿಯಲ್ಲಿನ ಸ್ವೀಕೃತಿಗಳ ವಿವರಣಾ ಪಟ್ಟಿ. |
| 4 | ಸಂಚಿತ ನಿಧಿಯ ವೆಚ್ಚಗಳ ವಿವರಣಾ ಪಟ್ಟಿ. |
| 5 | ಕ್ರಮವೃದ್ಧಿಯ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ. |
| 6 | ಸರ್ಕಾರದ ಸಾಲಗಳ ಮತ್ತು ಇತರ ಜವಾಬ್ದಾರಿಗಳ ವಿವರಣಾ ಪಟ್ಟಿ. |
| 7 | ರಾಜ್ಯಸರ್ಕಾರವು ನೀಡಿದ ಸಾಲಗಳ ಮತ್ತು ಮುಂಗಡಗಳ ವಿವರಣಾ ಪಟ್ಟಿ. |
| 8 | ಸರ್ಕಾರದ ಹೂಡಿಕೆಗಳ ವಿವರಣಾ ಪಟ್ಟಿ. |
| 9 | ಸರ್ಕಾರ ನೀಡಿದ ಖಾತರಿಗಳ ವಿವರಣಾ ಪಟ್ಟಿ. |
| 10 | ಸರ್ಕಾರವು ನೀಡಿದ ಅನುದಾನಗಳ ವಿವರಣಾ ಪಟ್ಟಿ. |
| 11 | ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ವಿವರಣಾ ಪಟ್ಟಿ. |
| 12 | ರಾಜಸ್ವ ಲೆಕ್ಕವನ್ನು ಹೊರತುಪಡಿಸಿ ವೆಚ್ಚದ ಆಕರ ಮತ್ತು ಅನ್ವಯಗಳ ವಿವರಣಾ ಪಟ್ಟಿ. |
| 13 | ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಶಿಲ್ಕು ವಿವರಗಳ ಸಾರಾಂಶ. |
| 14 | ಒಳಶೀರ್ಷಿಕೆಯ ಹಂತದವರೆಗೆ ರಾಜಸ್ವ ಜಮೆಗಳು ಮತ್ತು ಬಂಡವಾಳ ಜಮೆಗಳ ಸವಿವರ ವಿವರಣಾ ಪಟ್ಟಿ. |
| 15 | ಒಳಶೀರ್ಷಿಕೆಯ ಹಂತದ ರಾಜಸ್ವ ವೆಚ್ಚಗಳ ಸವಿವರ ವಿವರಣಾ ಪಟ್ಟಿ. |
| 16 | ಒಳಶೀರ್ಷಿಕೆಯ ಮತ್ತು ಉಪಶೀರ್ಷಿಕೆಗಳ ಹಂತದ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ. |
| 17 | ಸಾಲಗಳು ಮತ್ತು ಇತರ ಜವಾಬ್ದಾರಿಗಳ ಸವಿವರ ವಿವರಣಾ ಪಟ್ಟಿ. |
| 18 | ಸರ್ಕಾರವು ನೀಡಿರುವ ಸಾಲಗಳು ಮತ್ತು ಮುಂಗಡಗಳ ಸವಿವರ ವಿವರಣಾ ಪಟ್ಟಿ. |
| 19 | ಸರ್ಕಾರದ ಹೂಡಿಕೆಗಳ ಸವಿವರ ವಿವರಣಾ ಪಟ್ಟಿ. |
| 20 | ಸರ್ಕಾರ ನೀಡಿದ ಖಾತರಿಗಳ ಸವಿವರ ವಿವರಣಾ ಪಟ್ಟಿ. |
| 21 | ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕ ವಹಿವಾಟುಗಳ ಸವಿವರ ವಿವರಣಾ ಪಟ್ಟಿ. |
| 22 | ಮೀಸಲಿಟ್ಟ ನಿಧಿಗಳಲ್ಲಿನ ಶಿಲ್ಕುಗಳ ಸವಿವರ ವಿವರಣಾ ಪಟ್ಟಿ. |

# ಅನುಬಂಧ 1.3

## ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ

(ಉಲ್ಲೇಖ: ಕಂಡಿಕೆ 1.1.1; ಪುಟ 1)

**(ಕೋಟಿ ರೂಪಾಯಿಗಳಲ್ಲಿ)**

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| **2017–18** | | **2018–19** | **2017–18** | | **2018–19** |
| **ಭಾಗ ಎ: 2017–18ನೇ ಸಾಲಿನ ಜಮೆಗಳ ಮತ್ತು ವಿತರಣೆಗಳ ಸಾರಾಂಶ** | | | | | |
| ಭಾಗ – ಎ: ರಾಜಸ್ವ | | | | | |
| **1,46,999.65** | **I. ರಾಜಸ್ವ ಜಮೆಗಳು** | **1,64,978.66** | **1,42,482.33** | **I. ರಾಜಸ್ವ ವೆಚ್ಚ ↑↑** | **1,64,299.85#** |
| **87,130.38*** | ತೆರಿಗೆ ರಾಜಸ್ವ ↑↑ | 96,829.71* | **34,484.44** | **ಸಾಮಾನ್ಯ ಸೇವೆಗಳು** | **42,655.05** |
| **6,476.53** | ತೆರಿಗೆಯೇತರ ರಾಜಸ್ವ ↑↑ | 6,772.87 | | **ಸಾಮಾಜಿಕ ಸೇವೆಗಳು** | |
| **31,751.96** | ಕೇಂದ್ರದ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 35,894.83 | 21,306.81 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 23,424.22 |
| **0.00** | ಯೋಜನೇತರ ಅನುದಾನಗಳು | 0.00 | 6,984.62 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 8,369.26 |
| **0.00** | ರಾಜ್ಯ ಯೋಜನೆ ಕಾರ್ಯಕ್ರಮಗಳಿಗಾಗಿ ಅನುದಾನಗಳು | 0.00 | 11,711.89 | ನೀರು ಪೂರೈಕೆ ನೈರ್ಮಲ್ಯ, ವಸತಿ, ಮತ್ತು ನಗರಾಭಿವೃದ್ಧಿ | 8,610.97 |
| **21,640.78** | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗಾಗಿ ಅನುದಾನಗಳು | 25,481.25 | 355.19 | ವಾರ್ತಾ ಮತ್ತು ಪ್ರಸಾರ | 181.63 |
| **11,617.25** | ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳು | 10,393.44 | 8,546.00 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 8,487.81 |
| **2,708.18** | ಹಣಕಾಸು ಆಯೋಗದ ಅನುದಾನಗಳು | 3,373.89 | 566.56 | ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ | 519.87 |
| **7,315.35** | ಇತರೆ ವರ್ಗಾವಣೆಗಳು/ ರಾಜ್ಯಗಳಿಗೆ ಅನುದಾನ | 11,713.92 | 8,789.11 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕತೆ | 18,186.34 |
| | | | 392.16 | ಇತರೆ | 154.25 |
| | | | **58,652.35** | **ಒಟ್ಟು ಸಾಮಾಜಿಕ ಸೇವೆಗಳು** | **67,934.35** |
| | | | | **ಆರ್ಥಿಕ ಸೇವೆಗಳು** | |
| | | | 14,521.28 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 20,304.58 |
| | | | 5,209.49 | ಗ್ರಾಮೀಣಾಭಿವೃದ್ಧಿ | 7,001.37 |
| | | | 506.38 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 306.16 |
| | | | 1,845.44 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 2,059.35 |
| | | | 9,402.61 | ಇಂಧನ | 10,061.40 |
| | | | 1,254.48 | ಕೈಗಾರಿಕೆ ಮತ್ತು ಖನಿಜಗಳು | 1,486.30 |
| | | | 4,969.53 | ಸಾರಿಗೆ | 3,695.73 |
| | | | 95.81 | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 84.65 |
| | | | 5,050.76 | ಸಾಮಾನ್ಯ ಆರ್ಥಿಕ ಸೇವೆಗಳು | 3,285.61 |
| | | | **42,855.78** | **ಒಟ್ಟು ಆರ್ಥಿಕ ಸೇವೆಗಳು** | **48,285.14** |
| | | | **6,489.76** | **ಸಹಾಯಾನುದಾನ ಮತ್ತು ಕೊಡುಗೆಗಳು** | **5,425.31** |
| | | | **4,517.32** | **II ರಾಜಸ್ವ ಹೆಚ್ಚಳ ಭಾಗ 'ಬಿ' ಗೆ ಮುಂದುವರೆಸಿದ್ದು** | **678.81** |
| **1,46,999.65** | **ಒಟ್ಟು** | **1,64,978.66** | **1,46,999.65** | **ಒಟ್ಟು** | **1,64,978.66** |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| **2017–18** | | **2018–19** | **2017–18** | | **2018–19** |
| | | ಭಾಗ–ಬಿ : ಬಂಡವಾಳ ಮತ್ತು ಇತರೆ | | | |
| **34,353.58** | **II. ಖಾಯಂ ಮುಂಗಡಗಳು, ನಗದು ಶಿಲ್ಕಿನ ಹೂಡಿಕೆಗಳು ಮತ್ತು ಮೀಸಲಿಟ್ಟ ನಿಧಿಗಳಿಂದ ಹೂಡಿಕೆಗಳೂ ಸೇರಿದಂತೆ ಆರಂಭಿಕ ನಗದು ಶಿಲ್ಕು** | **26,184.05** | | | |
| **3.70** | **III. ಇತರೆ ಬಂಡವಾಳ ಜಮೆಗಳು ⁺⁺** | **(-) 5.51** | **30,666.76** | **III. ಬಂಡವಾಳ ವೆಚ್ಚ ⁺⁺** | **34,659.32 $** |
| | | | **977.45** | **ಸಾಮಾನ್ಯ ಸೇವೆಗಳು** | **827.41** |
| | | | | **ಸಾಮಾಜಿಕ ಸೇವೆಗಳು** | |
| | | | 1,143.12 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 1,107.31 |
| | | | 1,132.32 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 1,107.97 |
| | | | 3,126.02 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 4,023.85 |
| | | | 33.29 | ವಾರ್ತಾ ಮತ್ತು ಪ್ರಸಾರ | 45.19 |
| | | | 2,993.40 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 3,422.37 |
| | | | 165.18 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ | 66.44 |
| | | | 83.43 | ಇತರೆ ಸಾಮಾಜಿಕ ಸೇವೆಗಳು | 20.42 |
| | | | **8,676.76** | **ಒಟ್ಟು ಸಾಮಾಜಿಕ ಸೇವೆಗಳು** | **9,793.56** |
| | | | | **ಆರ್ಥಿಕ ಸೇವೆಗಳು** | |
| | | | 225.12 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 214.52 |
| | | | 113.74 | ಗ್ರಾಮೀಣಾಭಿವೃದ್ಧಿ | 66.82 |
| | | | 920.11 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 1,162.89 |
| | | | 10,391.83 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 12,095.67 |
| | | | 827.00 | ಇಂಧನ | 627.85 |
| | | | 732.83 | ಕೈಗಾರಿಕೆ ಮತ್ತು ಖನಿಜಗಳು | 616.14 |
| | | | 7,378.51 | ಸಾರಿಗೆ | 8,858.80 |
| | | | 0.21 | ವಿಜ್ಞಾನ ತಂತ್ರಜ್ಞಾನ ಮತ್ತು ಪರಿಸರ | 0.00 |
| | | | 423.20 | ಸಾಮಾನ್ಯ ಆರ್ಥಿಕ ಸೇವೆಗಳು | 395.66 |
| | | | **21,012.55** | **ಒಟ್ಟು ಆರ್ಥಿಕ ಸೇವೆಗಳು** | **24,038.35** |
| **136.93** | **IV. ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳು ⁺⁺** | **31.23** | **5,092.22** | **IV. ಸಾಲಗಳು ಮತ್ತು ಮುಂಗಡಗಳು ⁺⁺** | **4,487.22** |
| **14.44** | ವಿದ್ಯುಚ್ಛಕ್ತಿ ಯೋಜನೆಗಳಿಂದ | 14.74 | 12.95 | ವಿದ್ಯುಚ್ಛಕ್ತಿ ಯೋಜನೆಗಳಿಗೆ | 1,500.00 |
| **4.27** | ಸರ್ಕಾರಿ ನೌಕರರಿಂದ | 3.87 | 3.60 | ಸರ್ಕಾರಿ ನೌಕರರಿಗೆ | 11.08 |
| **118.22** | ಇತರರಿಂದ | 12.62 | 5,075.67 | ಇತರರಿಗೆ | 2,976.14 |
| **25,121.86** | **V. ಸಾರ್ವಜನಿಕ ಋಣ ಜಮೆಗಳು** | **41,914.06** | **8,269.16** | **V. ಸಾರ್ವಜನಿಕ ಋಣ ಮರುಪಾವತಿ** | **11,082.62** |
| **23,178.61** | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 40,469.67 | 7,086.99 | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 9,741.03 |
| --- | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | --- | --- | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | --- |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| 2017–18 | | 2018–19 | 2017–18 | | 2018–19 |
| 1,943.25 | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 1,444.39 | 1,182.17 | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮರುಪಾವತಿ | 1,341.59 |
| --- | **VI. ಸಾದಿಲ್ವಾರು ನಿಧಿ (ಪುನರ್ಭರ್ತಿ)** | --- | --- | **VI. ಸಾದಿಲ್ವಾರು ನಿಧಿ (ವಿತರಣೆಗಳು)** | --- |
| 2,00,615.43 | **VII. ಸಾರ್ವಜನಿಕ ಲೆಕ್ಕ ಜಮೆಗಳು** | **2,37,759.98** | **1,94,536.63** | **VII. ಸಾರ್ವಜನಿಕ ಲೆಕ್ಕ ವಿತರಣೆಗಳು** | **2,34,329.59** |
| 6,262.21 | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | 7,135.54 | 3,450.71 | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | 3,843.25 |
| 5,667.50 | ಮೀಸಲು ನಿಧಿಗಳು | 4,547.07 | 2,648.98 | ಮೀಸಲು ನಿಧಿಗಳು | 1,350.22 |
| 50,969.29 | ಠೇವಣಿಗಳು ಮತ್ತು ಮುಂಗಡಗಳು | 57,756.86 | 49,135.43 | ಠೇವಣಿಗಳು ಮತ್ತು ಮುಂಗಡಗಳು | 54,689.35 |
| 1,37,679.86 | ಅಮಾನತ್ತು ಮತ್ತು ಸಂಕೀರ್ಣಗಳು | 1,68,284.37 | 1,39,189.14 | ಅಮಾನತ್ತು ಮತ್ತು ಸಂಕೀರ್ಣಗಳು | 1,74,371.32 |
| 36.57 | ಇರಸಾಲುಗಳು | 36.14 | 112.37 | ಇರಸಾಲುಗಳು | 75.45 |
| 4,517.32 | **VIII. ರಾಜಸ್ವ ಅಧಿಕ ಭಾಗ 'ಎ' ಯಿಂದ ತೆಗೆದುಕೊಂಡದ್ದು** | **678.81** | **26,184.05** | **VIII. ಅಂತಿಮ ನಗದು ಶಿಲ್ಕು (31.03.2018)** | **22,003.87** |
| | | | 0.01 | ಖಜಾನೆಗಳಲ್ಲಿನ ನಗದು ಮತ್ತು ಸ್ಥಳೀಯ ಇರಸಾಲುಗಳು | 0.01 |
| | | | 723.77 | ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳು | 989.96 |
| | | | 3.84 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | 3.96 |
| | | | 12,655.49 | ನಗದು ಶಿಲ್ಕು ಹೂಡಿಕೆ | 5,139.28 |
| | | | 12,800.94 | ಉದ್ದೇಶಿತ ನಿಧಿಗಳಿಂದ ಹೂಡಿಕೆಗಳು | 15,870.66 |
| 2,64,748.82 | ಒಟ್ಟು | **3,06,562.62** | **2,64,748.82** | ಒಟ್ಟು | **3,06,562.62** |

*# ವಿವಿಧ ಸೇವಾ ಶೀರ್ಷಿಕೆಗಳಡಿ ಆಯವ್ಯಯದ ಹೊರಗಿನ ಸಾಲ ಮುಂತಾದವುಗಳಿಗೆ ಸಂಬಂಧಿಸಿದಂತೆ ಬಡ್ಡಿ ಪಾವತಿಯನ್ನು ಒಳಗೊಂಡಿದೆ. ₹1,191.00 ಕೋಟಿಗಳನ್ನು ವಿಶೇಷ ಉದ್ದೇಶ ಸಾಧನಗಳ ಮೂಲಕ ಸಾಲವನ್ನಾಗಿ ಪಡೆಯಲಾಗಿದೆ. ಸಾಮಾನ್ಯ ಸೇವೆಗಳು ('₹1.00 ಕೋಟಿ), ಸಾಮಾಜಿಕ ಸೇವೆಗಳು (₹86.00 ಕೋಟಿ) ಮತ್ತು ಆರ್ಥಿಕ ಸೇವೆಗಳು (₹1,104.00 ಕೋಟಿ).*

*$ ಆಯವ್ಯಯದ ಹೊರಗಿನ ಸಾಲಗಳಿಂದಾದ ₹1,339.44 ಕೋಟಿಗಳ ವೆಚ್ಚವನ್ನು ಒಳಗೊಂಡಿದೆ.*

** ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಿಂದ ರಾಷ್ಟ್ರೀಯ ಪರವಾನಗಿ ಶುಲ್ಕವಾಗಿ ಸ್ವೀಕರಿಸಿದ ₹132.70 ಕೋಟಿ (2017–18) ಮತ್ತು ₹161.95 ಕೋಟಿಗಳನ್ನು (2018–19) ಒಳಗೊಂಡಿದೆ.*

↑↑ *ನಗದು ಅಲ್ಲದೆ ಸ್ವೀಕೃತಿಗಳು ಮತ್ತು ವೆಚ್ಚಗಳು ಈ ಕೆಳಕಂಡಂತಿದ್ದು ಇದನ್ನು **ಕಂಡಿಕೆ 1.11..1**ರಲ್ಲಿ ಚರ್ಚಿಸಲಾಗಿದೆ.*

| ಪುಸ್ತಕ ಹೊಂದಾಣಿಕೆಗಳು | *(ಕೋಟಿ ರೂಪಾಯಿಗಳಲ್ಲಿ)* |
|---|---|
| **ತೆರಿಗೆ ಸ್ವೀಕೃತಿಗಳು** | 1,955.25 |
| **ತೆರಿಗೆಯೇತರ ಸ್ವೀಕೃತಿಗಳು** | 119.53 |
| **ಇತರೆ ಬಂಡವಾಳ ಸ್ವೀಕೃತಿಗಳು** | - |
| **ಸಾಲ ಸ್ವೀಕೃತಿಗಳು** | 14.74 |
| **ರಾಜಸ್ವ ವೆಚ್ಚ** | 2,073.77 |
| **ಬಂಡವಾಳ ವೆಚ್ಚ** | 4.35 |
| **ಸಾಲದ ವೆಚ್ಚ** | 11.40 |

# ಅನುಬಂಧ 1.3(ಎ)

## ವಿವಿಧ ವಲಯ ಮತ್ತು ಉಪ ವಲಯದಲ್ಲಿನ ಬಂಡವಾಳ ವೆಚ್ಚ

(ಉಲ್ಲೇಖ: ಕಂಡಿಕೆ 1.9.1; ಪುಟ 40)

(ಕೋಟಿ ರೂಪಾಯಿಗಳಲ್ಲಿ)

| ವಲಯ ಮತ್ತು ಉಪ ವಲಯಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಸಾಮಾನ್ಯ ಸೇವೆಗಳು | | | | | |
| ಪೊಲೀಸ್ | 192.83 | 502.85 | 524.21 | 369.45 | 288.06 |
| ಲೋಕೋಪಯೋಗಿ | 421.70 | 483.83 | 533.05 | 605.74 | 536.12 |
| ಇತರೆ | 3.93 | 4.73 | 3.13 | 2.26 | 3.23 |
| ಒಟ್ಟು ಸಾಮಾನ್ಯ ಸೇವೆಗಳು | **618.46** | **991.41** | **1,060.39** | **977.45** | **827.41** |
| ಸಾಮಾಜಿಕ ಸೇವೆಗಳು | | | | | |
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 317.21 | 717.96 | 1,108.46 | 1,143.12 | 1,107.31 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 790.43 | 819.71 | 743.66 | 1,132.32 | 1,107.97 |
| ನೀರು ಪೂರೈಕೆ ನೈರ್ಮಲ್ಯ, ವಸತಿ, ಮತ್ತು ನಗರಾಭಿವೃದ್ಧಿ | 1,666.48 | 1,639.75 | 2,557.89 | 3,126.02 | 4,023.86 |
| ವಾರ್ತಾ ಮತ್ತು ಪ್ರಸಾರ | 4.47 | 4.57 | 18.51 | 33.29 | 45.19 |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 1,326.27 | 2,014.36 | 2,242.65 | 2,993.40 | 3,422.37 |
| ಸಮಾಜ ಕಲ್ಯಾಣ ಮತ್ತು ಪೌಷ್ಠಿಕತೆ | 67.36 | 71.80 | 130.15 | 165.18 | 66.44 |
| ಇತರೆ ಸಾಮಾಜಿಕ ಸೇವೆಗಳು | 8.67 | 45.76 | 95.52 | 83.43 | 20.42 |
| ಒಟ್ಟು ಸಾಮಾಜಿಕ ಸೇವೆಗಳು | **4,180.89** | **5,313.91** | **6,896.84** | **8,676.76** | **9,793.56** |
| ಆರ್ಥಿಕ ಸೇವೆಗಳು | | | | | |
| ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 266.4 | 182.73 | 501.42 | 225.12 | 214.52 |
| ಗ್ರಾಮೀಣಾಭಿವೃದ್ಧಿ | 14.00 | 6.63 | 49.25 | 113.74 | 66.82 |
| ವಿಶೇಷ ಪ್ರದೇಶ ಕಾರ್ಯಕ್ರಮಗಳು | 801.45 | 900.00 | 889.83 | 920.11 | 1,162.89 |
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 7,779.22 | 6,955.14 | 8,634.90 | 10,391.83 | 12,095.67 |
| ಇಂಧನ | 252.09 | 49.38 | 861.38 | 827.00 | 627.85 |
| ಕೈಗಾರಿಕೆ ಮತ್ತು ಖನಿಜಗಳು | 239.98 | 589.93 | 352.09 | 732.83 | 616.14 |
| ಸಾರಿಗೆ | 5,146.77 | 5,399.45 | 7,623.61 | 7,378.51 | 8,858.80 |
| ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 0.00 | 0.00 | 0.19 | 0.21 | 0.00 |
| ಸಾಮಾನ್ಯ ಆರ್ಥಿಕ ಸೇವೆಗಳು | 323.04 | 324.45 | 1,280.53 | 423.20 | 395.66 |
| ಒಟ್ಟು ಆರ್ಥಿಕ ಸೇವೆಗಳು | **14,822.95** | **14,407.71** | **20,193.20** | **21,012.55** | **24,038.35** |
| ಒಟ್ಟು ಬಂಡವಾಳ ವೆಚ್ಚ | **19,622.30** | **20,713.03** | **28,150.40** | **30,666.80** | **34,659.30** |

## ವಿವಿಧ ಸಾರ್ವಜನಿಕ ವಿಭಾಗದ ಉದ್ದಿಮೆಗಳಡಿ ಬಂಡವಾಳ ವೆಚ್ಚ

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಸಾರ್ವಜನಿಕ ವಿಭಾಗದ ಉದ್ದಿಮೆಗಳ ಹೆಸರು | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|
| 1 | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 93.11 | 208.24 | 201.31 | 186.49 | 176.54 |
| 2 | ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | 26.70 | 38.25 | 45.90 | 45.90 | 35.70 |
| 3 | ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ | 45.00 | 35.00 | 50.00 | 125.00 | 25.00 |
| 4 | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ | 56.00 | 75.00 | 116.22 | 190.00 | 144.40 |
| 5 | ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 2,467.29 | 2,372.59 | 2,402.29 | 2,277.03 | 3,538.74 |
| 6 | ಕರ್ನಾಟಕ ನೀರಾವರಿ ನಿಗಮ ನಿಯಮಿತ | 2,188.63 | 2,221.11 | 2,905.20 | 526.11 | 3,702.67 |
| 7 | ವಿಶ್ವೇಶ್ವರಯ್ಯ ಜಲನಿಗಮ ನಿಯಮಿತ | 0.00 | 0.00 | 0.00 | 1,355.21 | 1,703.40 |
| 8 | ಕರ್ನಾಟಕ ರಾಜ್ಯ ಹಣಕಾಸಿನ ನಿಗಮ ನಿಯಮಿತ | 75.00 | 75.00 | 75.00 | 75.00 | 68.35 |
| 9 | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 45.00 | 43.61 | 360.42 | 429.00 | 628.51 |
| 10 | ಸಾರಿಗೆ ನಿಗಮಗಳು | 44.43 | 45.00 | 221.00 | 289.50 | 393.80 |
| 11 | ರೈಲು ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ (ಕರ್ನಾಟಕ) (ಕೆ–ಆರ್‌ಐಡಿಇ) | 542.26 | 490.74 | 745.28 | 522.61 | 312.89 |
| 12 | ಮೈಸೂರು ಸಕ್ಕರೆ ಕಂಪನಿ ನಿಯಮಿತ | 7.94 | 47.07 | 6.44 | 20.00 | 37.00 |
| | **ಒಟ್ಟು** | **5,591.36** | **5,651.61** | **7,129.06** | **6,041.85** | **10,767.00** |

# ಅನುಬಂಧ 1.4

## ರಾಜ್ಯಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು

(ಉಲ್ಲೇಖ: ಕಂಡಿಕೆ 1.1.1, 1.4, 1.4.1.1, 1.4.1.3, 1.5, 1.7.1, 1.10.2, 1.10.5.1, 1.11.2 ಮತ್ತು 1.11.4;
ಪುಟ 1, 14, 16, 18, 22, 24, 25, 48, 49, 56, 58 ಮತ್ತು 61)

(ಕೋಟಿ ರೂಪಾಯಿಗಳಲ್ಲಿ)

| | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| **ಭಾಗ ಎ. ಸ್ವೀಕೃತಿಗಳು** | | | | | |
| 1. ರಾಜಸ್ವ ಸ್ವೀಕೃತಿಗಳು | **1,04,142** | **1,18,817** | **1,33,214** | **1,47,000** | **1,64,979** |
| ವೃದ್ಧಿಯ ದರ | **16.31** | **14.09** | **12.12** | **10.35** | **12.23** |
| (i) ತೆರಿಗೆ ಆದಾಯ ↑↑ | **70,180(67)** | **75,550(64)** | **82,956(62)** | **87,130(59)** | **96,830(59)** |
| ವೃದ್ಧಿಯ ದರ | **12.10** | **7.65** | **9.80** | **5.03** | **11.13** |
| ರಾಜ್ಯ ಸರಕುಗಳು ಮತ್ತು ಸೇವಾ ತೆರಿಗೆ | - | - | - | 24,182(28) | 41,956(43) |
| ಕೃಷಿ ಆದಾಯದ ಮೇಲಿನ ತೆರಿಗೆ | 20(-) | 12(-) | 1(-) | 15(-) | - |
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆ | 38,286(55) | 40,449(53) | 46,105(56) | 25,093(29) | 14,003(15) |
| ರಾಜ್ಯ ಅಬಕಾರಿ | 13,801(20) | 15,333(20) | 16,484(20) | 17,949(21) | 19,944(21) |
| ವಾಹನಗಳ ಮೇಲಿನ ತೆರಿಗೆಗಳು | 4,541(7) | 5,001(7) | 5,594(7) | 6,209(7) | 6,568(7) |
| ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳು | 7,026(10) | 8,215(11) | 7,806(9) | 9,024(10) | 10,775(11) |
| ಭೂ ಕಂದಾಯ | 186(-) | 181(-) | 209(-) | 195(-) | 144(-) |
| ಸರಕುಗಳು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 3,038(4) | 3,125(4) | 3,306(4) | 1,279(1) | 28(-) |
| ವಿದ್ಯುಚ್ಛಕ್ತಿ ಸುಂಕದ ಮೇಲಿನ ತೆರಿಗೆ | 1,041(1) | 1,170(2) | 1,451(2) | 1,485(2) | 2,334(2) |
| ಇತರೆ ತೆರಿಗೆಗಳು ಆದಾಯ ಮತ್ತು ಖರ್ಚಿನ ಮೇಲೆ | 868(1) | 840(1) | 901(1) | 964(1) | 1,057(1) |
| ಇತರೆ ತೆರಿಗೆಗಳು– ಸರಕುಗಳು ಮತ್ತು ಸೇವೆಗಳ ಮೇಲೆ | 1,373(2) | 1,224(2) | 1,099(1) | 736(1) | 21(-) |
| (ii) ತೆರಿಗೆಯೇತರ ಆದಾಯ ↑↑ | **4,688(5)** | **5,355(4)** | **5,795(4)** | **6,477(4)** | **6,773(4)** |
| ವೃದ್ಧಿಯ ದರ | **16.27** | **14.23** | **8.22** | **11.77** | **4.57** |
| ಬಡ್ಡಿ ಸ್ವೀಕೃತಿಗಳು | 875 | 1,293 | 1,200 | 1,178 | 1,112 |
| ಡಿವಿಡೆಂಡುಗಳು ಮತ್ತು ಲಾಭಾಂಶ | 75 | 69 | 83 | 79 | 38 |
| ಕಬ್ಬಿಣೇತರ ಗಣಿಗಾರಿಕೆ ಮತ್ತು ಲೋಹಗಳ ಕೈಗಾರಿಕೆಗಳು | 1,931 | 2,004 | 2,419 | 2,747 | 3,027 |
| ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ | 224 | 261 | 153 | 364 | 330 |
| ಇತರ ಆಡಳಿತಾತ್ಮಕ ಸೇವೆಗಳು | 179 | 269 | 131 | 271 | 253 |
| ಅರಣ್ಯ ಪ್ರದೇಶ ಮತ್ತು ವನ್ಯಜೀವಿಗಳು | 178 | 168 | 292 | 314 | 309 |
| ಶಿಕ್ಷಣ, ಕ್ರೀಡೆ ಮತ್ತು ಸಂಸ್ಕೃತಿ | 155 | 160 | 193 | 176 | 200 |
| ಪೊಲೀಸ್ | 152 | 172 | 176 | 253 | 241 |
| ರಸ್ತೆಗಳು ಮತ್ತು ಸೇತುವೆಗಳು | 118 | 56 | 62 | 103 | 105 |
| ಇತರೆ ತೆರಿಗೆಯೇತರ ಸ್ವೀಕೃತಿಗಳು | 801 | 903 | 1,086 | 992 | 1,158 |
| (iii) ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು | **14,654(14)** | **23,983(20)** | **28,760(22)** | **31,752(22)** | **35,895(22)** |
| ವೃದ್ಧಿಯ ದರ | **6.13** | **63.66** | **19.92** | **10.40** | **13.05** |
| (iv) ಭಾರತ ಸರ್ಕಾರದಿಂದ ಪಡೆದ ಸಹಾಯಾನುದಾನಗಳು | **14,620(14)** | **13,929(12)** | **15,703(12)** | **21,641(15)** | **25,481(15)** |
| ವೃದ್ಧಿಯ ದರ | **60.68** | **(-)4.73** | **12.74** | **37.81** | **17.74** |
| ಯೋಜನೇತರ ಅನುದಾನಗಳು | 3,635 | 5,548 | 7,045 | - | - |
| ರಾಜ್ಯ ಯೋಜನೆಗೆ ಅನುದಾನಗಳು | 9,097 | 8,105 | 8,102 | - | - |

| | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 159 | 139 | 116 | - | - |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 1,729 | 137 | 440 | 11,617 | 10,393 |
| ಇತರೆ ವರ್ಗಾವಣೆಗಳು/ ರಾಜ್ಯಗಳಿಗೆ ಅನುದಾನ | - | - | - | 7,316 | 11,714 |
| ಹಣಕಾಸು ಆಯೋಗದ ಅನುದಾನಗಳು | - | - | - | 2,708 | 3,374 |
| **2. ಬಂಡವಾಳ ಸ್ವೀಕೃತಿಗಳು** | | | | | |
| (i) ಇತರೆ ಬಂಡವಾಳ ಸ್ವೀಕೃತಿಗಳು | 10 | 352 | 27 | 4 | (-6) |
| (ii) ಸಾಲ ಮತ್ತು ಮುಂಗಡಗಳ ವಸೂಲಾತಿ ↑↑ | 84 | 60 | 100 | 137 | 31 |
| (iii) ಸಾರ್ವಜನಿಕ ಋಣ ಸ್ವೀಕೃತಿಗಳು | 21,874 | 21,072 | 31,156 | 25,122 | 41,914 |
| ವೃದ್ಧಿಯ ದರ | **26.53** | **(-)3.67** | **47.85** | **(-)19.37** | **66.84** |
| ಆಂತರಿಕ ಋಣ (ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್ ಹೊರತುಪಡಿಸಿ) | 20,509(94) | 19,801(94) | 29,238(94) | 23,179(92) | 40,470(97) |
| ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳ ನಿವ್ವಳ ವಹಿವಾಟು | --- | --- | --- | --- | --- |
| ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು | 1,365(6) | 1,271(6) | 1,918(6) | 1,943(8) | 1,444(3) |
| **3. ಒಟ್ಟು ರಾಜಸ್ವ ಮತ್ತು ಋಣೇತರ ಬಂಡವಾಳ ಜಮೆಗಳು (1+2(i)+2(ii))** | **1,04,236** | **1,19,229** | **1,33,341** | **1,47,141** | **1,65,004** |
| **4. ಸಂಚಿತ ನಿಧಿಯ ಒಟ್ಟು ಸ್ವೀಕೃತಿಗಳು (3+2(iii))** | **1,26,110** | **1,40,301** | **1,64,497** | **1,72,263** | **2,06,919** |
| **5. ಸಾದಿಲ್ವಾರು ನಿಧಿ ಸ್ವೀಕೃತಿಗಳು** | --- | --- | --- | --- | --- |
| **6. ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು** | **1,40,229** | **1,60,519** | **1,79,318** | **2,00,615** | **2,37,760** |
| **7. ರಾಜ್ಯದ ಒಟ್ಟು ಸ್ವೀಕೃತಿಗಳು (4+5+6)** | **2,66,339** | **3,00,820** | **3,43,815** | **3,72,878** | **4,44,679** |
| **ಭಾಗ ಬಿ– ವೆಚ್ಚ/ಬಟವಾಡೆ** | | | | | |
| **8. ರಾಜಸ್ವ ವೆಚ್ಚ ↑↑** | **1,03,614** | **1,17,028** | **1,31,921** | **1,42,482** | **1,64,300** |
| ವೃದ್ಧಿಯ ದರ | **16.17** | **12.95** | **12.73** | **8.01** | **15.31** |
| ಯೋಜನೆ | 33,831(33) | 40,009(34) | 47,962(36) | --- | --- |
| ಯೋಜನೇತರ | 69,783(67) | 77,019(66) | 83,959(64) | --- | --- |
| ಸಾಮಾನ್ಯ ಸೇವೆಗಳು (ಬಡ್ಡಿ ಪಾವತಿಗಳನ್ನೊಳಗೊಂಡು) | 28,265(27) | 30,799(26) | 31,265(24) | 34,484(24) | 42,655(26) |
| ಸಾಮಾಜಿಕ ಸೇವೆಗಳು | 39,366(38) | 46,307(40) | 54,549(41) | 58,652(41) | 67,935(41) |
| ಆರ್ಥಿಕ ಸೇವೆಗಳು | 29,971(29) | 33,846(29) | 40,421(31) | 42,856(30) | 48,285(29) |
| ಸಹಾಯಾನುದಾನಗಳು ಮತ್ತು ವಂತಿಗೆಗಳು | 6,012(6) | 6,076(5) | 5,686(4) | 6,490(5) | 5,425(4) |
| **9. ಬಂಡವಾಳ ವೆಚ್ಚ ↑↑** | **19,622** | **20,713** | **28,150** | **30,667** | **34,659** |
| ಯೋಜನೆ | 19,345(99) | 20,316(98) | 27,684(98) | --- | --- |
| ಯೋಜನೇತರ | 277(1) | 397(2) | 466(2) | --- | --- |
| ಸಾಮಾನ್ಯ ಸೇವೆಗಳು | 618(3) | 991(5) | 1,060(4) | 977(3) | 827(2) |
| ಸಾಮಾಜಿಕ ಸೇವೆಗಳು | 4,181(21) | 5,314(26) | 6,897(24) | 8,677(28) | 9,794(28) |
| ಆರ್ಥಿಕ ಸೇವೆಗಳು | 14,823(76) | 14,408(69) | 20,193(72) | 21,013(69) | 24,038(70) |

| | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| 10. ಸಾಲ ಮತ್ತು ಮುಂಗಡಗಳ ವಿತರಣೆ ↑↑ | **576** | **657** | **1,934** | **5,093** | **4,487** |
| ಯೋಜನೆ | 564 | 558 | 1,929 | --- | --- |
| ಯೋಜನೇತರ | 12 | 99 | 5 | --- | --- |
| ಸಾಮಾನ್ಯ ಸೇವೆಗಳು | --- | --- | --- | --- | --- |
| ಸಾಮಾಜಿಕ ಸೇವೆಗಳು | 370 | 327 | 1,674 | 1,178 | 2,441 |
| ಆರ್ಥಿಕ ಸೇವೆಗಳು | 193 | 239 | 254 | 3,910 | 2,035 |
| ಇತರೆ ಸಾಲಗಳು | 13 | 91 | 6 | 5 | 11 |
| **11. ಒಟ್ಟು ಬಂಡವಾಳ ವೆಚ್ಚ (9+10)** | **20,198** | **21,370** | **30,084** | **35,760** | **39,146** |
| **ವೃದ್ಧಿಯ ದರ** | **14.49** | **5.80** | **40.78** | **18.87** | **9.47** |
| **12. ಒಟ್ಟು ವೆಚ್ಚ (8+9+10)** | **1,23,812** | **1,38,398** | **1,62,005** | **1,78,242** | **2,03,446** |
| **ವೃದ್ಧಿಯ ದರ** | **15.90** | **11.78** | **17.06** | **10.02** | **14.14** |
| **13. ಸಾರ್ವಜನಿಕ ಋಣದ ಮರುಪಾವತಿಗಳು** | **4,812** | **4,110** | **7,420** | **8,269** | **11,083** |
| ಆಂತರಿಕ ಋಣ (ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್ ಹೊರತುಪಡಿಸಿ) | 4,033(84) | 3,161(77) | 6,294(85) | 7,087(80) | 9,741(88) |
| ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳಡಿ ನಿವ್ವಳ ವಹಿವಾಟು | --- | --- | --- | --- | --- |
| ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 779(16) | 949(23) | 1,126(15) | 1,182(14) | 1,342(12) |
| **14. ಸಾದಿಲ್ವಾರು ನಿಧಿಗೆ ವಿನಿಯೋಗ** | --- | --- | --- | --- | --- |
| **15. ಸಂಚಿತ ನಿಧಿಯಿಂದ ಒಟ್ಟು ಬಟವಾಡೆ (12+13+14)** | **1,28,624** | **1,42,508** | **1,69,425** | **1,86,511** | **2,14,528** |
| **16. ಸಾದಿಲ್ವಾರು ನಿಧಿ ಬಟವಾಡೆಗಳು** | --- | --- | --- | --- | --- |
| **17. ಸಾರ್ವಜನಿಕ ಲೆಕ್ಕ ಬಟವಾಡೆಗಳು** | **1,29,574** | **1,55,095** | **1,67,154** | **1,94,537** | **2,34,330** |
| **18. ರಾಜ್ಯದ ಒಟ್ಟು ಬಟವಾಡೆಗಳು (15+16+17)** | **2,58,198** | **2,97,603** | **3,36,579** | **3,81,048** | **4,48,858** |
| **ಭಾಗ ಸಿ–ಕೊರತೆಗಳು/ಹೆಚ್ಚಳಗಳು** | | | | | |
| **19. ರಾಜಸ್ವ ಕೊರತೆ (–)/ರಾಜಸ್ವ ಹೆಚ್ಚಳ (+) (1-8)** | **528** | **1,789** | **1,293** | **4,518** | **679** |
| **20. ವಿತ್ತೀಯ ಕೊರತೆ(–)/ವಿತ್ತೀಯ ಹೆಚ್ಚಳ (+) (3-12)** | **19,576** | **19,169** | **28,664** | **31,101** | **38,442** |
| **21. ಪ್ರಾಥಮಿಕ ಕೊರತೆ (20-22)** | **9,772** | **7,826** | **15,814** | **16,128** | **21,828** |
| **ಪ್ರಾಥಮಿಕ ಹೆಚ್ಚಳ (22-20)** | --- | --- | --- | --- | --- |
| **ಭಾಗ ಡಿ– ಇತರೆ ದತ್ತಾಂಶಗಳು** | | | | | |
| **22. ಬಡ್ಡಿ ಪಾವತಿಗಳು (ರಾಜಸ್ವ ವೆಚ್ಚದಲ್ಲಿ ಸೇರಿದೆ)** | **9,804** | **11,343** | **12,850** | **14,973** | **16,614#** |
| **23. ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ಆರ್ಥಿಕ ನೆರವು** | **38,747** | **40,021** | **44,499** | **47,096** | **50,603** |
| **24. ಅರ್ಥೋಪಾಯ ಮುಂಗಡಗಳು/ಓವರ್ ಡ್ರಾಫ್ಟ್ ಪಡೆದ ದಿನಗಳು** | | | | | |
| **ಅರ್ಥೋಪಾಯ ಮುಂಗಡಗಳು ಪಡೆದ ದಿನಗಳು** | --- | --- | --- | --- | --- |
| **ಓವರ್‌ಡ್ರಾಫ್ಟ್ ಪಡೆದ ದಿನಗಳು** | --- | --- | --- | --- | --- |
| **25. ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್ ಮೇಲಿನ ಬಡ್ಡಿ** | --- | --- | --- | --- | --- |

| | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| 26. ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ** (ರಾಒಆಉ) | **9,13,923** | **10,45,182** | **11,55,912** | **13,25,443** | **14,08,112** |
| 27. ವೃದ್ಧಿಯ ದರ | **11.91** | **14.36** | **10.59** | **14.67** | **6.24** |
| 28. ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳು (ಆಯವ್ಯಯದ ಹೊರಗಿನ ಸಾಲಗಳು ಸೇರಿದಂತೆ) | **1,64,279** | **1,83,322** | **2,21,319** | **2,46,231** | **2,85,238** |
| 29. ವೃದ್ಧಿಯ ದರ | **18.82** | **11.59** | **20.73** | **11.26** | **15.84** |
| 30. ಬಾಕಿ ಇರುವ ಖಾತರಿಗಳು (ಬಡ್ಡಿ ಸೇರಿದಂತೆ) (ವರ್ಷಾಂತ್ಯ) | **11,033** | **13,324** | **15,392** | **18,416** | **24,091** |
| 31. ಖಾತರಿ ನೀಡಿದ ಗರಿಷ್ಠ ಮೊತ್ತ (ವರ್ಷಾಂತ್ಯ) | **16,869** | **18,358** | **21,115** | **24,025** | **30,719** |
| 32. ಅಪೂರ್ಣ ಕಾಮಗಾರಿಗಳ ಸಂಖ್ಯೆ | **362** | **346** | **341** | **236** | **881** |
| 33. ಅಪೂರ್ಣ ಕಾಮಗಾರಿಗಳಲ್ಲಿ ತೊಡಗಿಸಿರುವ ಬಂಡವಾಳ | **1,144** | **1,495** | **2,027** | **967** | **3,128** |
| **ಭಾಗ ಇ–ವಿತ್ತೀಯ ಆರೋಗ್ಯ ಸೂಚಕಗಳು** | | | | | |
| **I ಸಂಪನ್ಮೂಲ ಸಂಗ್ರಹ** | | | | | |
| ರಾಜಸ್ವ ಸ್ವೀಕೃತಿಗಳು/ ರಾಒಆಉ | 11.40 | 11.37 | 11.52 | 11.09 | 11.72 |
| ಸ್ವಂತ ತೆರಿಗೆ ರಾಜಸ್ವ/ರಾಒಆಉ | 7.68 | 7.23 | 7.18 | 6.57 | 6.88 |
| ಸ್ವಂತ ತೆರಿಗೆಯೇತರ ರಾಜಸ್ವ/ರಾಒಆಉ | 0.51 | 0.51 | 0.50 | 0.49 | 0.48 |
| ಕೇಂದ್ರ ವರ್ಗಾವಣೆಗಳು/ರಾಒಆಉ | 3.20 | 3.63 | 3.85 | 4.03 | 4.36 |
| ತೆರಿಗೆಯೇತರ ರಾಜಸ್ವ/ರಾಜಸ್ವ ಸ್ವೀಕೃತಿಗಳು | 4.50 | 4.51 | 4.35 | 4.41 | 4.11 |
| ಸ್ವಂತ ತೆರಿಗೆ ರಾಜ್ಯದ ವೃದ್ಧಿಯ ದರ | 12.36 | 8.06 | 9.70 | 5.47 | 10.68 |
| **II ವೆಚ್ಚ ನಿರ್ವಹಣೆ** | | | | | |
| ಒಟ್ಟು ವೆಚ್ಚ/ರಾಒಆಉ | 13.55 | 13.24 | 14.02 | 13.45 | 14.45 |
| ರಾಜಸ್ವ ಸ್ವೀಕೃತಿಗಳು/ಒಟ್ಟು ವೆಚ್ಚ | 84.11 | 85.85 | 82.23 | 82.47 | 81.09 |
| ರಾಜಸ್ವ ವೆಚ್ಚ/ಒಟ್ಟು ವೆಚ್ಚ | 83.69 | 84.56 | 81.43 | 79.94 | 80.76 |
| ಸಾಮಾಜಿಕ ಸೇವೆಗಳ ಮೇಲಿನ ವೆಚ್ಚ/ಒಟ್ಟು ವೆಚ್ಚ | 35.47 | 37.54 | 38.96 | 38.43 | 39.41 |
| ಆರ್ಥಿಕ ಸೇವೆಗಳ ಮೇಲಿನ ವೆಚ್ಚ/ಒಟ್ಟು ವೆಚ್ಚ | 36.33 | 35.04 | 37.57 | 38.03 | 36.55 |
| ಬಂಡವಾಳ ವೆಚ್ಚ/ಒಟ್ಟು ವೆಚ್ಚ | 16.31 | 15.44 | 18.57 | 20.07 | 19.24 |
| ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚ/ಒಟ್ಟು ವೆಚ್ಚ | 15.80 | 14.66 | 17.91 | 19.51 | 18.83 |
| **III ವಿತ್ತೀಯ ಅಸಮತೆಗಳ ನಿರ್ವಹಣೆ** | | | | | |
| ರಾಜಸ್ವ ಕೊರತೆ(ಹೆಚ್ಚಳ)/ರಾಒಆಉ | 0.06 | 0.17 | 0.11 | 0.34 | 0.05 |
| ವಿತ್ತೀಯ ಕೊರತೆ/ರಾಒಆಉ | 2.14 | 1.83 | 2.48 | 2.35 | 2.73 |
| ಪ್ರಾಥಮಿಕ ಕೊರತೆ(ಹೆಚ್ಚಳ)/ರಾಒಆಉ | 1.07 | 0.75 | 1.37 | 1.22 | 1.55 |
| ರಾಜಸ್ವ ಕೊರತೆ/ವಿತ್ತೀಯ ಕೊರತೆ | --- | --- | --- | --- | --- |
| ಪ್ರಾಥಮಿಕ ರಾಜಸ್ವ ಶಿಲ್ಕು (ಕೋಟಿ ರೂ ಗಳಲ್ಲಿ) | 10,332 | 13,132 | 14,143 | 19,491 | 17,293 |
| ಪ್ರಾಥಮಿಕ ರಾಜಸ್ವ ಶಿಲ್ಕು/ರಾಒಆಉ | 1.13 | 1.26 | 1.22 | 1.47 | 1.23 |
| **IV ವಿತ್ತೀಯ ಜವಾಬ್ದಾರಿಗಳ ನಿರ್ವಹಣೆ** | | | | | |
| ವಿತ್ತೀಯ ಜವಾಬ್ದಾರಿಗಳು (ಆಯವ್ಯಯದ ಹೊರಗಿನ ಸಾಲಗಳು ಸೇರಿದಂತೆ)/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 17.98 | 17.54 | 19.15 | 18.78 | 20.26 |
| ವಿತ್ತೀಯ ಜವಾಬ್ದಾರಿಗಳು/ರಾಜಸ್ವ ಸ್ವೀಕೃತಿಗಳು | 157.75 | 154.29 | 166.14 | 167.50 | 172.89 |
| ವಿತ್ತೀಯ ಜವಾಬ್ದಾರಿಗಳು/ಸ್ವಂತ ಸಂಪನ್ಮೂಲಗಳು | 219.42 | 226.59 | 249.37 | 263.05 | 275.32 |

| | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| **V ಇತರೆ ವಿತ್ತೀಯ ಆರೋಗ್ಯ ಸೂಚಕಗಳು** | | | | | |
| ಹೂಡಿಕೆಗಳ ಮೇಲಿನ ಪ್ರತಿಫಲ (₹ ಕೋಟಿಗಳಲ್ಲಿ) | 74.84 | 69.40 | 82.50 | 78.83 | 38.30 |
| ಹಣಕಾಸು ಆಸ್ತಿಗಳು/ಜವಾಬ್ದಾರಿಗಳು | 1.09 | 1.09 | 1.08 | 1.10 | 1.00 |
| ಪ್ರಸಕ್ತ ರಾಜಸ್ವದಲ್ಲಿನ ಉಳಿಕೆ (₹ ಕೋಟಿಗಳಲ್ಲಿ) | 23,374 | 34,487 | 40,597 | --- | --- |
| ರಾಜಸ್ವ ಪ್ಲವನತೆ* ಸಂಬಂಧಿಸಿದಂತೆ | | | | | |
| ರಾಒಆಂಉ | 1.37 | 0.98 | 1.14 | 0.71 | 1.96 |
| ರಾಜ್ಯದ ಸ್ವಂತ ತೆರಿಗೆ | 1.35 | 1.84 | 1.24 | 2.06 | 1.10 |
| ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ತೆರಿಗೆಯ ಪ್ಲವನತೆ | 1.03 | 0.53 | 0.93 | 0.34 | 1.78 |
| ಒಟ್ಟು ವೆಚ್ಚದ ಪ್ಲವನತೆಗೆ ಸಂಬಂಧಿಸಿದಂತೆ | | | | | |
| ರಾಒಆಂಉ | 1.34 | 0.82 | 1.61 | 0.68 | 2.27 |
| ರಾಜಸ್ವ ಸ್ವೀಕೃತಿಗಳು | 0.97 | 0.84 | 1.41 | 0.97 | 1.16 |
| ರಾಜಸ್ವ ವೆಚ್ಚದ ಪ್ಲವನತೆಗೆ ಸಂಬಂಧಿಸಿದಂತೆ | | | | | |
| ರಾಒಆಂಉ | 1.36 | 0.90 | 1.20 | 0.55 | 2.45 |
| ರಾಜಸ್ವ ಸ್ವೀಕೃತಿಗಳು | 1.00 | 0.92 | 1.05 | 0.77 | 1.25 |
| ಬಂಡವಾಳ ವೆಚ್ಚದ ಪ್ಲವನತೆಗೆ ಸಂಬಂಧಿಸಿದಂತೆ | | | | | |
| ರಾಒಆಂಉ | 1.22 | 0.40 | 3.85 | 1.29 | 1.52 |
| ರಾಜಸ್ವ ಸ್ವೀಕೃತಿಗಳು | 0.89 | 0.41 | 3.36 | 1.82 | 0.77 |
| ವಿತ್ತೀಯ ಜವಾಬ್ದಾರಿಗಳ ಪ್ಲವನತೆಗೆ ಸಂಬಂಧಿಸಿದಂತೆ | | | | | |
| ರಾಒಆಂಉ | 1.60 | 1.06 | 1.75 | 0.71 | 2.50 |
| ರಾಜಸ್ವ ಸ್ವೀಕೃತಿಗಳು | 1.15 | 0.82 | 1.71 | 1.10 | 1.30 |
| ಸ್ವಂತ ಸಂಪನ್ಮೂಲಗಳು | 1.52 | 1.44 | 2.14 | 2.06 | 1.48 |

*ಆಕರ: ಹಣಕಾಸು ಲೆಕ್ಕಗಳು*

*ಆವರಣದಲ್ಲಿರುವ ಅಂಕಿಗಳು ಶತಾಂಶವನ್ನು (ಪೂರ್ಣಾಂಕಗೊಳಿಸಿದೆ) ಪ್ರತಿ ಉಪಶೀರ್ಷಿಕೆಗೆ ಸಂಬಂಧಿಸಿದಂತೆ ಸೂಚಿಸಿದೆ.*

*# ವಿವಿಧ ಸೇವಾ ಶೀರ್ಷಿಕೆಗಳಡಿ ಆಯವ್ಯಯದ ಹೊರಗಿನ ಸಾಲ ಮುಂತಾದವುಗಳಿಗೆ ಸಂಬಂಧಿಸಿದಂತೆ ಬಡ್ಡಿ ಪಾವತಿಯನ್ನು ಒಳಗೊಂಡಿದೆ. ₹1,191.00 ಕೋಟಿಗಳನ್ನು ವಿಶೇಷ ಸಾಧನಗಳ ಮೂಲಕ ಸಾಲವನ್ನಾಗಿ ಪಡೆಯಲಾಗಿದೆ. ಸಾಮಾನ್ಯ ಸೇವೆಗಳು (₹1.00 ಕೋಟಿ), ಸಾಮಾಜಿಕ ಸೇವೆಗಳು (₹86.00 ಕೋಟಿ) ಮತ್ತು ಆರ್ಥಿಕ ಸೇವೆಗಳು (₹1,104 ಕೋಟಿ).*

** ಪ್ಲವನತೆಯ ಅನುಪಾತವು ಮೂಲ ಅಸ್ಥಿರತೆಯ ಬದಲಾವಣೆಗೆ ಸಂಬಂಧಿಸಿದಂತೆ ವಿತ್ತೀಯ ವ್ಯತ್ಯಯದ ಸ್ಥಿತಿಸ್ಥಾಪಕತ್ವವನ್ನು ಅಥವಾ ಪ್ರತಿಕ್ರಿಯೆ ನೀಡುವ ಮಟ್ಟವನ್ನು ಸೂಚಿಸುತ್ತದೆ. ಉದಾಹರಣೆಗೆ ರಾಜಸ್ವ ಪ್ಲವನತೆಯು 0.4ರಲ್ಲಿದೆ ಎಂದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇಕಡ ಒಂದರಷ್ಟು ಹೆಚ್ಚಾದಲ್ಲಿ ರಾಜಸ್ವ ಸ್ವೀಕೃತಿಗಳು ಶೇಕಡ 0.4 ಅಂಕಗಳಷ್ಟು ಹೆಚ್ಚುತ್ತವೆ ಎಂಬುದನ್ನು ಸೂಚಿಸುತ್ತದೆ.*

** ಹಿಂದಿನ ವರದಿಗಳಲ್ಲಿ ತೋರಿಸಿರುವ ರಾಒಆಂಉದ ಅಂಕಿಗಳು, 2014-15 (₹6,85,207 ಕೋಟಿ), 2015-16 (₹7,35,975 ಕೋಟಿ), 2016-17 (₹11,17,334 ಕೋಟಿ), 2017-18 (₹13,10,879 ಕೋಟಿ)

↑↑*ನಗದು ಅಲ್ಲದ ಸ್ವೀಕೃತಿಗಳು ಮತ್ತು ವೆಚ್ಚಗಳು ಈ ಕೆಳಕಂಡಂತಿದ್ದು ಇದನ್ನು* ***ಕಂಡಿಕೆ 1.3.1.1*** *ರಲ್ಲಿ ಚರ್ಚಿಸಲಾಗಿದೆ.*

| ಪುಸ್ತಕ ಹೊಂದಾಣಿಕೆಗಳು | (ಕೋಟಿ ರೂಪಾಯಿಗಳಲ್ಲಿ) |
|---|---|
| **ತೆರಿಗೆ ಸ್ವೀಕೃತಿಗಳು** | 1,955.25 |
| **ತೆರಿಗೆಯೇತರ ಸ್ವೀಕೃತಿಗಳು** | 119.53 |
| **ಇತರೆ ಬಂಡವಾಳ ಸ್ವೀಕೃತಿಗಳು** | - |
| **ಸಾಲ ಸ್ವೀಕೃತಿಗಳು** | 14.74 |
| **ರಾಜಸ್ವ ವೆಚ್ಚ** | 2,073.77 |
| **ಬಂಡವಾಳ ವೆಚ್ಚ** | 4.35 |
| **ಸಾಲದ ವೆಚ್ಚ** | 11.40 |

# ಅನುಬಂಧ 1.5

## ಆಯವ್ಯಯ ಭರವಸೆಗಳು ಮತ್ತು ಅವುಗಳ ಮೇಲಿನ ಲೆಕ್ಕ ಪರಿಶೋಧನಾ ವಿಶ್ಲೇಷಣೆ

(ಉಲ್ಲೇಖ: ಕಂಡಿಕೆ 1.2.3; ಪುಟ 11)

| ಆಯವ್ಯಯ ಭರವಸೆ | ಕ್ರಮ ತೆಗೆದುಕೊಂಡ ವರದಿಯಂತೆ ಕೈಗೊಂಡ ಕ್ರಮ | ಲೆಕ್ಕಪರಿಶೋಧನಾ ವಿಶ್ಲೇಷಣೆ |
|---|---|---|
| **ಒಂದೇ ಸೂರಿನಡಿ ವಿದ್ಯಾಭ್ಯಾಸ ಕಲ್ಪಿಸಿ ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು ಪ್ರಸಕ್ತ ವರ್ಷದಲ್ಲಿ ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದಲ್ಲಿ 12ನೇ ತರಗತಿಯವರೆಗೆ 176 ಸಂಯೋಜಿತ ಶಾಲೆಗಳನ್ನು ಪ್ರಾರಂಭಿಸಲಾಗಿದೆ. 2018-19ನೇ ಸಾಲಿನಲ್ಲಿ ಇದನ್ನು ಮುಂದುವರೆಸುತ್ತಾ 100 ಸಂಯೋಜಿತ "ಕರ್ನಾಟಕ ಪಬ್ಲಿಕ್ ಶಾಲೆ" ಗಳನ್ನು ಪ್ರತಿ ಶಾಲೆಗೆ ₹5 ಲಕ್ಷ ಗಳಂತೆ ₹5 ಕೋಟಿಗಳ ವೆಚ್ಚದಲ್ಲಿ ಪ್ರಾರಂಭಿಸಲಾಗುವುದು. ಇದಲ್ಲದೇ, ಈ ಶಾಲೆಗಳಲ್ಲಿ ವಿದ್ಯಾರ್ಥಿಗಳಲ್ಲಿ ವಿಶ್ವ ಭ್ರಾತೃತ್ವ ಸೇವಾ ಮನೋಭಾವ, ಶಾಂತಿ, ಶಿಸ್ತು, ಸಂಯಮ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಲು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ಪ್ರಾರಂಭಿಸಲಾಗುವುದು.** | ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರಿ ಆದೇಶ ಶಂಖ್ಯೆ: ಇಡಿ/230/ಯೋಸಕ/2018, ದಿನಾಂಕ 03-08-2018ನ್ನು ಹೊರಡಿಸಲಾಗಿದೆ. | 2018-19ರಲ್ಲಿ 100 ಸಂಯೋಜಿತ 'ಕರ್ನಾಟಕ ಪಬ್ಲಿಕ್ ಶಾಲೆ'ಗಳನ್ನು ಪ್ರಾರಂಭಿಸಲಾಗಿರಲಿಲ್ಲ. ಅವುಗಳನ್ನು 2019-20ರಲ್ಲಿ ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ. ಈ 100 ಶಾಲೆಗಳಲ್ಲಿ ಭಾರತ್ ಸ್ಕೌಟ್‌ಗಳು ಮತ್ತು ಗೈಡುಗಳ ಘಟಕಗಳನ್ನು ತೆರೆಯಲು ಬಿಡುಗಡೆಗೊಳಿಸಲಾಗಿದ್ದ ₹2.6 ಕೋಟಿ ಮೊತ್ತವು ಭಾರತ್ ಸ್ಕೌಟ್ ಮತ್ತು ಗೈಡ್‌ನ ಬ್ಯಾಂಕ್ ಖಾತೆಯಲ್ಲಿ ಉಳಿದಿತ್ತು. |
| **ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯು ಸರ್ಕಾರದ ಪ್ರಥಮ ಆದ್ಯತೆಯಾಗಿದೆ. ಇದಕ್ಕಾಗಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಂತಹಂತವಾಗಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗುವುದು.** | ಸರ್ಕಾರದ ಆದೇಶ ಶಂಖ್ಯೆ: ಇಡಿ/113/ಯೋಯಕ/2018, ದಿನಾಂಕ 03-08-2018ನ್ನು ಹೊರಡಿಸಲಾಗಿದೆ. | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಿಸಿಟಿವಿಗಳ ಅಳವಡಿಕೆಗೆ ಬದಲಾಗಿ ಟ್ಯಾಬ್‌ಗಳ ಖರೀದಿಗೆ ನಿರ್ಧಾರ ಕೈಗೊಳ್ಳಲಾಗಿತ್ತು. ₹.2.55 ಕೋಟಿಯನ್ನು ಸೆಳೆಯಲಾಗಿದ್ದು, ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಯೋಜನೆಯವರ ಬ್ಯಾಂಕ್ ಖಾತೆಯಲ್ಲಿಡಲಾಗಿತ್ತು (ಆಗಸ್ಟ್ 2019). |
| **ರಾಜ್ಯ ಕೇಂದ್ರ ಗ್ರಂಥಾಲಯಗಳ ಶತಮಾನೋತ್ಸವ ಸ್ಮರಣಾರ್ಥವಾಗಿ ಜಿಲ್ಲಾ, ನಗರ ಮತ್ತು ತಾಲ್ಲೂಕು ಸಾರ್ವಜನಿಕ ಗ್ರಂಥಾಲಯಗಳನ್ನು ಡಿಜಿಟಲ್ ಗ್ರಂಥಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು. ಪ್ರಪ್ರಥಮ ಬಾರಿಗೆ ಅಂತರ್ಜಾಲದ ಕ್ಲೌಡ್ ಮೂಲಕ ರಾಜ್ಯದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳಿಗೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಂಪರ್ಕ ನೀಡಿ ಅಂದಾಜು 10 ಲಕ್ಷ ವಿದ್ಯಾರ್ಥಿಗಳಿಗೆ ಡಿಜಿಟಲ್** | ಸರ್ಕಾರಿ ಆದೇಶ ಸಂಖ್ಯೆ: ಇಡಿ/ 105 ಯೋಯೋಕ/2018, ದಿನಾಂಕ 28-08-2018ರಲ್ಲಿ ಟೆಂಡರ್‌ಗೆ ಅನುಮತಿ ನೀಡಿ ಆದೇಶಿಸಿದೆ. ಪ್ರಕ್ರಿಯೆ ಜಾರಿಯಲ್ಲಿದೆ. | ರಾಜ್ಯದಲ್ಲಿನ ಎಲ್ಲ ಗ್ರಂಥಾಲಯಗಳನ್ನು ಡಿಜಿಟಲ್ ಗ್ರಂಥಾಲಯಗಳಾಗಿ ಮೇಲ್ದರ್ಜೆಗೇರಿಸಲು ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ ಮತ್ತು ಕೆ-ನಾಮಿಕ್ಸ್ ಟೆಕ್ನೋ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ನ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ (ಆಗಸ್ಟ್ 2019). |

| ಆಯವ್ಯಯ ಭರವಸೆ | ಕ್ರಮ ತೆಗೆದುಕೊಂಡ ವರದಿಯಂತೆ ಕೈಗೊಂಡ ಕ್ರಮ | ಲೆಕ್ಕಪರಿಶೋಧನಾ ವಿಶ್ಲೇಷಣೆ |
|---|---|---|
| **ಗ್ರಂಥಾಲಯ ಸೌಲಭ್ಯ ಒದಗಿಸಲಾಗುವುದು. ಈ ಉದ್ದೇಶಕ್ಕೆ ₹5 ಕೋಟಿಗಳನ್ನು ಒದಗಿಸಿದೆ.** | | |
| **ರಾಜ್ಯದ 48 ಸಾವಿರ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಮತ್ತು ಮಕ್ಕಳ ಹಾಜರಾತಿಯ ನಿಗಾವಹಿಸಲು ಬಯೋಮೆಟ್ರಿಕ್ ಸಾಧನಗಳನ್ನು ಅಳವಡಿಸಲಾಗುವುದು. ಈ ಯೋಜನೆಯನ್ನು ಮುಂದಿನ 3 ವರ್ಷಗಳಲ್ಲಿ ಜಾರಿಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ ಪ್ರಸಕ್ತ ಸಾಲಿನಲ್ಲಿ ₹5 ಕೋಟಿ ಒದಗಿಸಲಾಗುವುದು.** | ಸರ್ಕಾರಿ ಆದೇಶ ಸಂಖ್ಯೆ ಇಡಿ 110 ಯೋಯೋಕ, 2018 ದಿನಾಂಕ 14–08–2018ನ್ನು ಹೊರಡಿಸಲಾಗಿದೆ. | ಸರ್ಕಾರಿ ಶಾಲೆಗಳಲ್ಲಿ ಬಯೋಮೆಟ್ರಿಕ್ ಸಾಧನಗಳ ಅಳವಡಿಕೆಯ ಬದಲಾಗಿ ಟ್ಯಾಬ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿತ್ತು. ಅದರ ನಿಮಿತ್ತ ಸೆಳೆಯಲಾದ ₹2.50 ಕೋಟಿ ಹಣವನ್ನು ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಯೋಜನೆ, ಅವರ ಬ್ಯಾಂಕ್ ಖಾತೆಯಲ್ಲಿ ಇಡಲಾಗಿತ್ತು (ಆಗಸ್ಟ್ 2019). |
| **ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಅಂಗನವಾಡಿ ಕೇಂದ್ರಗಳನ್ನು ಆಯ್ದ 4100 ಸರ್ಕಾರಿ ಪ್ರಾಥಮಿಕ ಶಾಲೆಗಳ ಆವರಣಕ್ಕೆ ಸ್ಥಳಾಂತರಿಸಿ 'ಬಾಲಸ್ನೇಹಿ ಕೇಂದ್ರಗಳನ್ನಾಗಿ' ಬಲವರ್ಧಿಸಲಾಗುವುದು. ಹಂತಹಂತವಾಗಿ ಕಾರ್ಯಸಾಧ್ಯತೆಯನುಸಾರ ಬೇರೆ ಸರ್ಕಾರಿ ಶಾಲೆಗಳಲ್ಲಿ ಸಹ ಎಲ್‌ಕೆಜಿ/ಯುಕೆಜಿ ತರಗತಿಗಳನ್ನು ಪ್ರಾರಂಭಿಸಲಾಗುವುದು. ಇದರಿಂದ ಸರ್ಕಾರಿ ಶಾಲೆಗಳಲ್ಲಿನ ದಾಖಲಾತಿ ಪ್ರಮಾಣವು ಹೆಚ್ಚಾಗುವುದರೊಂದಿಗೆ ಮಕ್ಕಳ ಕಲಿಕೆಯ ಗುಣಮಟ್ಟವನ್ನು ವೃದ್ಧಿಸಬಹುದಾಗಿದೆ.** | ಸರ್ಕಾರಿ ಆದೇಶ ಸಂಖ್ಯೆ: 111 ಯೋಯೋಕ 2018, ದಿನಾಂಕ 14–08–2018ನ್ನು ಹೊರಡಿಸಲಾಗಿದೆ. | 4,100 ಅಂಗನವಾಡಿಗಳಲ್ಲಿ 3,701 ಅಂಗನವಾಡಿ ಕೇಂದ್ರಗಳನ್ನು ಬಾಲಸ್ನೇಹಿ ಕೇಂದ್ರಗಳಾಗಿ ಬಲಪಡಿಸಲು ಗುರುತಿಸಲಾಗಿದೆ. |
| **ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ಹಾಗೂ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಇಲ್ಲಿ ತಲಾ ₹15 ಕೋಟಿಗಳ ಅಂದಾಜು ವೆಚ್ಚದಲ್ಲಿ ಕ್ಯಾಥಲ್ಯಾಬ್ ಸೌಲಭ್ಯದೊಂದಿಗೆ ಹೃದ್ರೋಗ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುವುದು.** | ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 242 ಎಮ್ಎಸ್ಎಫ್ 2018, ದಿನಾಂಕ 11–10–2018ನ್ನು ಹೊರಡಿಸಲಾಗಿದೆ. | ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಗದಗ್ ವೈದ್ಯಕೀಯ ವಿಜ್ಞಾನ ಸಂಸ್ಥೆ ಎರಡರಲ್ಲೂ ಕ್ಯಾಥ್‌ಲ್ಯಾಬ್ ಸೌಲಭ್ಯದ ಸ್ಥಾಪನೆಯಲ್ಲಿ ಭೌತಿಕ ಮತ್ತು ಆರ್ಥಿಕ ಪ್ರಗತಿಯಿರಲಿಲ್ಲ. |
| **ಹಾಸನ, ಮೈಸೂರು ಮತ್ತು ಕಾರವಾರ ವೈದ್ಯಕೀಯ ಕಾಲೇಜುಗಳಲ್ಲಿ ತಲಾ ₹15 ಕೋಟಿಗಳ ಅಂದಾಜು ವೆಚ್ಚದಲ್ಲಿ ಕ್ಯಾನ್ಸರ್ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುವುದು** | ಹಾಸನ ಮತ್ತು ಕಾರವಾರ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 248 ಕೆವಿಎಮ್ 2018, ದಿನಾಂಕ 17–09–2018 ಹಾಗೂ ಆಕುಕ 310 ಕೆವಿಎಮ್2018, ದಿನಾಂಕ 17–09–2018ಗಳನ್ನು ಹೊರಡಿಸಲಾಗಿದೆ. | ಕ್ಯಾನ್ಸರ್ ಚಿಕಿತ್ಸಾ ಘಟಕದ ಸ್ಥಾಪನೆಗಾಗಿ ಮೈಸೂರು ವೈದ್ಯಕೀಯ ಕಾಲೇಜಿಗೆ ಅನುದಾನವನ್ನು ಬಿಡುಗಡೆಗೊಳಿಸಿಲ್ಲ ಹಾಗೂ ಕಾರವಾಗ ಮೆಡಿಕಲ್ ಕಾಲೇಜಿನಲ್ಲಿ ಘಟಕದ ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆಯನ್ನು ಇನ್ನೂ ನೀಡಬೇಕಿದೆ. |

| ಆಯವ್ಯಯ ಭರವಸೆ | ಕ್ರಮ ತೆಗೆದುಕೊಂಡ ವರದಿಯಂತೆ ಕೈಗೊಂಡ ಕ್ರಮ | ಲೆಕ್ಕಪರಿಶೋಧನಾ ವಿಶ್ಲೇಷಣೆ |
|---|---|---|
| **ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಶುಶ್ರೂಷಾ ಶಾಲೆಗಳು ಹಾಗೂ ಕಾಲೇಜುಗಳಲ್ಲಿನ ಸೌಲಭ್ಯಗಳನ್ನು ₹30 ಕೋಟಿಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು.** | ಸರ್ಕಾರದ ಆದೇಶ ಸಂಖ್ಯೆ ಆಕುಕ 267 ಎಮ್ಎಮ್ಸಿ 2018, ದಿನಾಂಕ 17–09–2018ನ್ನು ಹೊರಡಿಸಲಾಗಿದೆ. | ₹8.5 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಮತ್ತು ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ. ಅದಕ್ಕಾಗಿ ಅನುದಾನವನ್ನು ಸರ್ಕಾರವು ಬಿಡುಗಡೆಗೊಳಿಸಿರಲಿಲ್ಲ. |
| **ಶಾಲೆ/ಕಾಲೇಜಿಗೆ ದೂರ ಪ್ರಯಾಣಿಸುವ ಅನಿವಾರ್ಯತೆ ಇರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ಸಾರಿಗೆ ವೆಚ್ಚ ತೊಡಕಾಗಬಾರದು ಎಂಬ ಕಾಳಜಿ ನಮ್ಮ ಸರ್ಕಾರದ್ದು. ಇದಕ್ಕಾಗಿ ಈಗ ನೀಡುತ್ತಿರುವ ರಿಯಾಯಿತಿ ದರದ ಬಸ್‌ಪಾಸ್‌ಗೆ ಬದಲಾಗಿ 2018–19ನೇ ಸಾಲಿನಿಂದ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸನ್ನು ನೀಡಲಾಗುವುದು. ಇದರಿಂದ 19.60 ಲಕ್ಷ ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯಲಿದ್ದಾರೆ.** | ಈ ಯೋಜನೆಯಲ್ಲಿ ಮಾರ್ಪಾಡು ಮಾಡುವ ಬಗ್ಗೆ ಪ್ರಸ್ತಾಪನೆ ಪರಿಶೀಲನೆಯಲ್ಲಿದೆ. | 2018–19ರಲ್ಲಿ ಕೇವಲ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಗಳನ್ನು ನೀಡಲಾಗಿತ್ತು. |
| **ಕೌಶಲ್ಯಾಭಿವೃದ್ಧಿ ಯೋಜನೆಯಡಿ ಸಮಾಜದ ಯುವಜನತೆಯ ಕೌಶಲ್ಯ ಮತ್ತು ಸಾಮರ್ಥ್ಯವನ್ನು ವೃದ್ಧಿಸಲು ರಾಜ್ಯ ಸಾರಿಗೆ ಸಂಸ್ಥೆಗಳ ವತಿಯಿಂದ 13,000 ಯುವಜನರಿಗೆ ಚಾಲನೆ ಮತ್ತು ಮೆಕ್ಯಾನಿಕ್ ತರಬೇತಿ ನೀಡಲಾಗುವುದು.** | ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ | 404 ಮಹಿಳೆಯರೂ ಸೇರಿದಂತೆ ಒಟ್ಟು 5,257 ವ್ಯಕ್ತಿಗಳನ್ನು ತರಬೇತಿಗೊಳಿಸಲಾಗಿದೆ. |
| **ಮಹಿಳೆಯ ಸುರಕ್ಷತೆಗಾಗಿ ನಿರ್ಭಯಾ ಯೋಜನೆಯಡಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 1,000 ಬಸ್‌ಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗುವುದು** | ಇದು ಮುಂದುವರೆದ ಯೋಜನೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಸಾರಿಇ 61 ಸಾಸಂಬಿ 2018, ದಿನಾಂಕ 31–08–2018ನ್ನು ಹೊರಡಿಸಲಾಗಿದೆ. | ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ (ಸೆಪ್ಟಂಬರ್ 2019). |

# ಅನುಬಂಧ 1.6

## ಸಂಗ್ರಹಣಾ ವೆಚ್ಚಗಳು

(ಉಲ್ಲೇಖ: ಕಂಡಿಕೆ 1.4.1.1; ಪುಟ 17)

| ಸ್ವೀಕೃತಿ | ವರ್ಷ | ಒಟ್ಟು ಸಂಗ್ರಹಣೆ | ಸಂಗ್ರಹಣೆಯ ಮೇಲಿನ ವೆಚ್ಚ@ | ಒಟ್ಟು ಸಂಗ್ರಹಣೆಗೆ ಹೋಲಿಸಿದಲ್ಲಿ ಶೇಕಡಾವಾರು ಸಂಗ್ರಹಣಾ ವೆಚ್ಚ | ಹಿಂದಿನ ವರ್ಷದಲ್ಲಿ ಅಖಿಲ ಭಾರತ ಸರಾಸರಿ ಶೇಕಡಾವಾರು |
|---|---|---|---|---|---|
| | | (ಕೋಟಿ ರೂಪಾಯಿಗಳಲ್ಲಿ) | | | |
| ಮೋಟಾರು ವಾಹನಗಳು | 2014-15 | 4,544 | 82.52 | 1.82 | 6.25 |
| | 2015-16 | 5,004 | 83.37 | 1.67 | 6.08 |
| | 2016-17 | 5,598 | 81.41 | 1.45 | 4.99 |
| | 2017-18 | 6,212 | 94.07 | 1.51 | 2.61 |
| | 2018-19 | 6,572 | 108.12 | 1.65 | 2.61 |
| ಮಾರಾಟಗಳು, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ | 2014-15 | 39,695 | 1,464.43 | 3.69 | 0.88 |
| | 2015-16 | 41,892 | 250.47 | 0.60 | 0.91 |
| | 2016-17 | 48,034 | 259.35 | 0.54 | 0.66 |
| | 2017-18 | 27,622 | 183.84 | 0.67 | 0.69 |
| | 2018-19 | 16,011 | - | - | 0.69 |
| ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ | 2014-15 | 7,063 | 68.28 | 0.96 | 3.37 |
| | 2015-16 | 8,241 | 126.03 | 1.53 | 3.59 |
| | 2016-17 | 7,884 | 92.73 | 1.18 | 2.87 |
| | 2017-18 | 9,104 | 56.03 | 0.62 | 2.99 |
| | 2018-19 | 10,891 | 86.53 | 0.79 | 2.96 |
| ರಾಜ್ಯ ಅಬಕಾರಿ | 2014-15 | 13,806 | 130.11 | 0.94 | 1.81 |
| | 2015-16 | 15,337 | 132.61 | 0.86 | 2.09 |
| | 2016-17 | 16,489 | 146.25 | 0.89 | 3.21 |
| | 2017-18 | 17,959 | 152.53 | 0.85 | 2.01 |
| | 2018-19 | 19,955 | 172.98 | 0.87 | 1.83 |
| ರಾಜ್ಯ ಸರಕುಗಳು ಮತ್ತು ಸೇವಾ ತೆರಿಗೆ | 2017-18 | 27,545 | 106.43 | 0.39 | - |
| | 2018-19 | 49,616 | 360.60 | 0.73 | - |

*@ 001–ನಿರ್ದೇಶನ ಮತ್ತು ಆಡಳಿತದಡಿ ಲೆಕ್ಕ ಮಾಡಿದ ವೆಚ್ಚ ಹಾಗೂ ಒಳಶೀರ್ಷಿಕೆ 101–ಸಂಗ್ರಹಣಾ ವೆಚ್ಚದಡಿ ತೋರಿಸಿದ ವೆಚ್ಚವನ್ನು ಪರಿಗಣಿಸಿ ಸಂಗ್ರಹಣಾ ವೆಚ್ಚವನ್ನು ಲೆಕ್ಕಮಾಡಿದೆ.*

# ಅನುಬಂಧ 1.7

## ವಿದ್ಯುತ್‌ಗೃಹ/ಠಾಣೆಗಳಲ್ಲಿ ಪ್ರತಿ ಕಿಲೋವ್ಯಾಟ್ ಅವರ್ (ಕೆಡಬ್ಲ್ಯುಎಚ್) ವಿದ್ಯುಚ್ಛಕ್ತಿ ಮಾರಾಟಕ್ಕೆ ನಿಗದಿಪಡಿಸಿರುವ ರಾಜಧನದ ದರ

(ಉಲ್ಲೇಖ: ಕಂಡಿಕೆ 1.4.1.3; ಪುಟ 19)

| ಕ್ರಮ ಸಂಖ್ಯೆ | ವಿದ್ಯುತ್‌ಗೃಹ/ಠಾಣೆ | ಪೈಸೆ/ಕೆಡಬ್ಲ್ಯುಎಚ್ | ಪೈಸೆ/ಕೆಡಬ್ಲ್ಯುಎಚ್ 01 ಏಪ್ರಿಲ್ 2019ರಿಂದ |
|---|---|---|---|
| 1 | ಶರಾವತಿ | 4 | 20 |
| 2 | ಲಿಂಗನಮಕ್ಕಿ | 4 | 20 |
| 3 | ಭದ್ರ ಬಲದಂಡೆ ಕಾಲುವೆ ಪವರ್‌ಹೌಸ್ | 4 | 20 |
| 4 | ಭದ್ರ ಎಡದಂಡೆ ಕಾಲುವೆ ಪವರ್‌ಹೌಸ್ | 4 | 20 |
| 5 | ನಾಗಝರಿ | 4 | 20 |
| 6 | ಸೂಪ | 4 | 20 |
| 7 | ಘಟಪ್ರಭ | 10 | 20 |
| 8 | ವರಾಹಿ | 4 | 20 |
| 9 | ಮಾಣಿ ಅಣೆಕಟ್ಟು ಪವರ್‌ಹೌಸ್ | 4 | 20 |
| 10 | ಕದ್ರ | 4 | 20 |
| 11 | ಕೊಡಸಳ್ಳಿ | 4 | 20 |
| 12 | ಗೇರುಸೊಪ್ಪ ಪವರ್‌ಹೌಸ್ | 4 | 20 |
| 13 | ಮೆಜಿಹೆಚ್‌ಇ, ಜೋಗ್‌ಫಾಲ್ಸ್ | 4 | 20 |
| 14 | ಶಿವನಸಮುದ್ರ | 4 | 20 |
| 15 | ಮುನಿರಾಬಾದ್ | 4 | 20 |
| 16 | ಶಿಂಶಾ ಹೈಡ್ರೋಎಲೆಕ್ಟ್ರಿಕ್ ಕೇಂದ್ರ | 4 | 20 |
| 17 | ಮಲ್ಲಾಪುರ ಕಿರು ಹೈಡಲ್ ಯೋಜನೆ | 4 | 20 |
| 18 | ಸಿರವರ ಕಿರು ಹೈಡಲ್ ಯೋಜನೆ | 4 | 20 |
| 19 | ಕಲ್ಮಲ ಕಿರು ಹೈಡಲ್ ಯೋಜನೆ | 4 | 20 |
| 20 | ಗಣೆಕಲ್ ಕಿರು ಹೈಡಲ್ ಯೋಜನೆ | 4 | 20 |
| 21 | ಆಲಮಟ್ಟಿ ಕಿರು ಹೈಡಲ್ ಯೋಜನೆ | 10 | 1.00 ಮಾರ್ಚ್ 2019ರಿಂದ |

# ಅನುಬಂಧ 1.8

## ಇಲಾಖೆವಾರು ಸಹಾಯಧನಗಳ ಪಾಲು

(ಉಲ್ಲೇಖ: ಕಂಡಿಕೆ 1.7.3; ಪುಟ 33)

(ಕೋಟಿ ರೂಪಾಯಿಗಳಲ್ಲಿ)

| ಇಲಾಖೆಗಳು | 2014-15 | 2015-16 | 2016-17 | 2017-18 | 2018-19 | ಅಭಿಪ್ರಾಯ |
|---|---|---|---|---|---|---|
| ವಿದ್ಯುಚ್ಛಕ್ತಿ | 6,700 | 8,693 | 8,647 | 7,957 | 7,593 | ಇದು ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಬಳಕೆದಾರರಿಗೆ ಐಪಿ ಸೆಟ್‌ಗಳನ್ನು ನೀಡಲು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಿಗೆ ನೀಡಿದ ಆರ್ಥಿಕ ಬೆಂಬಲವನ್ನು ಒಳಗೊಂಡಿದೆ. ಇದು ₹2,108 ಕೋಟಿಗಳ ಪುಸ್ತಕ ಹೊಂದಾಣಿಕೆಯನ್ನು ಒಳಗೊಂಡಿದ್ದು ಅದರಲ್ಲಿ ₹1,943 ಕೋಟಿಗಳು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು ಸಹಾಯಧನಕ್ಕೆ ಪ್ರತಿಯಾಗಿ ಉಳಿಸಿಕೊಂಡಿದ್ದ ತೆರಿಗೆ ಬಾಕಿಗೆ ಸಂಬಂಧಿಸಿದೆ. |
| ಆಹಾರ ಮತ್ತು ನಾಗರೀಕ ಸರಬರಾಜು | 2,533 | 2,196 | 1,854 | 1,917 | 2,404 | ಬಡತನ ರೇಖೆಗಿಂತ ಕೆಳಗಿರುವ ಮತ್ತು ಮೇಲಿರುವ ಫಲಾನುಭವಿಗಳಿಗೆ ಅನ್ನಭಾಗ್ಯದ ಸಹಾಯಧನವನ್ನೂ ಒಳಗೊಂಡಿದೆ. |
